# *Tigh Binding And Brown Book*

UNIVERSAL LIBRARY
OU_200046
UNIVERSAL LIBRARY

# ಪ್ರತಾಪಕಂಠೀರವ


ಲೇಖಕರು:

**ಎಂ. ಆರ್. ಕುಪ್ಪುಸ್ವಾಮಿಶೆಟ್ಟಿ**


1944


ಪ್ರಕಾಶಕರು:

**ಎಂ. ಕೆ. ರಾಜರತ್ನಂ ಶೆಟ್ಟಿ**

ಶ್ರೀ ವಾಮನ ಪ್ರೆಸ್ ಬುಕ್ ಡಿಪೋ,

ಬಳೇಪೇಟೆ, : : ಬೆಂಗಳೂರು.



ALL RIGHTS RESERVED


**ಬೆಲೆ 1—8—0**

ಮುದ್ರಣಕಾರರು:

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಸೌರಾಷ್ಟ್ರ ಪ್ರೆಸ್ಸಿನಲ್ಲಿ
ಎಸ್. ನರಸಿಂಹಯ್ಯನವರಿಂದ ಮುದ್ರಿಸಲ್ಪಟ್ಟಿತು.

೧೯೪೪

# ಪ್ರತಾಪಕಂಠೀರವ

ಈ ಭರತಖಂಡದಲ್ಲಿ ಐವತ್ತಾರು ದೇಶಗಳು ಪ್ರಖ್ಯಾತವಾದವು. ಅವುಗಳಲ್ಲಿ ಚೇರದೇಶವು ಪ್ರಸಿದ್ಧಿ ಪಡೆದು ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಕಂಗೊಳಿಸುತ್ತಿರುವುದು.

ಇದಕ್ಕೆ ರಾಜಧಾನಿಯಾದ ರಾಧಾಪುರವೆಂಬ ಪಟ್ಟಣವು ರಾಜವೀಧಿಗಳಿಂದಲೂ, ರಾಜಯೋಗ್ಯವಾದ ಉಪ್ಪರಿಗೆ ಮನೆಗಳಿಂದಲೂ, ಶತೃಗಳಿಗೆ ಭೇದಿಸಲಶಕ್ಯವಾದ ಕೋಟೆ ಕೊತ್ತಳಗಳಿಂದಲೂ, ವೀರ ಶೂರ ಪರಿವಾರದಿಂದ ಕೂಡಿರುವ ದಂಡುದಾಳಿಗಳಿಂದಲೂ, ಸದಾಚಾರಸಂಪನ್ನರಾಗಿ ವಿಶೇಷವಾದ ನಾಗರೀಕತೆಯನ್ನು ಪಡೆದು, ಐಕಮತ್ಯವನ್ನೆಡೆಬಿಡದೆ ಸ್ವಾಮಿಕಾರ್ಯ ಧುರಂಧರರಾಗಿ, ದೈವಪಾರಾಯಣ ನಿರತರಾಗಿರುವ ಪುರಜನಗಳಿಂದಲೂ, ಚಂದ್ರವಂಶ ತಿಲಕನಾದ ಅಸಹಾಯಶೂರನಾದ ಶತೃಗಳ ಎದೆಯನ್ನು ತಲ್ಲಣಗೊಳಿಸುವ ಬಾಹುಬಲವುಳ್ಳವನಾಗಿ ಮೆರೆವ ಪ್ರತಾಪಕಂಠೀರವನೆಂಬ ಅರಸನಿಂದಲೂ ಕೂಡಿ ರಮಣೀಯತೆಯನ್ನು ಹೊಂದಿರುವುದು.

ಈ ನಗರದ ಸುತ್ತಮುತ್ತಲು ನದೀನದ ತೊರೆಗಳಿಂದ ಹೊರಟುಬರುವ ಅಸಂಖ್ಯಾತವಾದ ಕಾಲುವೆಗಳಿಂದ ನೀರಾವರಿಸಲ್ಪಟ್ಟು ಫಲವತ್ಸಮೃದ್ಧಿಯನ್ನು ಉಂಟುಮಾಡುವ ಗದ್ದೆ ಹೊಲಗಳು, ಅಲ್ಲಲ್ಲಿ ಅಡಿಕೆ, ತೆಂಗು,ಮಾವು, ನೇರಳೆ, ದ್ರಾಕ್ಷಿ. ಮೊದಲಾದ ಹಣ್ಣು ಹಂಪಲಗಳಿಂದ ಹಸಿದು ಬಂದ ಮಾರ್ಗಸ್ಥರಿಗೆ ಆಯಾಸವನ್ನು ಪರಿಹರಿಸಿ ನೆರಳಿನಿಂದ ಆನಂದವನ್ನೀಯುವ ತೋಟಗಳು : ಜಾಜಿ, ಮಲ್ಲಿಗೆ, ಸಂಪಿಗೆ, ಸಾವಂತಿಗೆ ಮೊದಲಾದ ಸುವಾಸನೆಯನ್ನೆರಚುವ ಪೂಗಿಡಗಳಿಂದಲೂ, ಶಶಿಗಲ್ ಸೋಪಾನಗಳಿಂದ ಶೋಭಿಸುವ ತಿಳಿನೀರ್ ಕೊಳಗಳಿಂದಲೂ, ಮರದುಂಬಿಗಳ ಝೇಂಕಾರ ಧ್ವನಿಯಿಂದಲೂ ವನವಿಹಾರಾರ್ಥವಾಗಿ ಬಂದವರಿಗೆ ಉಲ್ಲಾಸವನ್ನೀಯುವ ಪೂದೋಟಗಳು,

ಭೂದೇವಿಯು ದನಕರುಗಳಿಗೆ ಮೂಕಪ್ರಾಣಿಗಳಿಂದು. ಯಾವಾಗಲೂ ಆಹಾರವನ್ನು ಸಿದ್ಧಪಡಿಸಿರುವಳೋ ಎನ್ನುವಹಾಗೆ ಸದಾಕಾಲದಲ್ಲಿಯೂ ಹಸುರಾಗಿರುವ ಬೈಲುಪ್ರದೇಶಗಳು, ಶತ್ರುಸೈನ್ಯ ಪ್ರಯಾಣಕ್ಕೆ ದುರ್ಗಮವಾದಾಗ್ಯೂ ಸಾಧಾರಣ ಪ್ರಯಾಣಸ್ಥರಿಗೆ ಸಹಕಾರಿಗಳಾದ ಕಾಲುದಾರಿಗಳಿಂದ ಕೂಡಿ ನಾನಾವಿಧವಾದ ಹಸರುಮೂಲಿಕೆಗಳಿಂದ ರಮ್ಯವಾಗಿರುವ ಕಣಿವೆಗಳು, ಎರಡು ಪಾರ್ಶ್ವದಲ್ಲಿಯೂ ಉದ್ದ ಉದ್ದವಾಗಿ ಬೆಳೆದು ಆಕಾಶವನ್ನು ಮುಟ್ಟುತ್ತಲಿರುವ ಪೇರ್ಮರಗಳ ಸಾಲುಗಳಿಂದ ಒಪ್ಪುತ್ತಿರುವ ದೊಡ್ಡ ದೊಡ್ಡ ಮಾರ್ಗಗಳು ಮೊದಲಾದುವು ಶೋಭಾಯಮಾನವಾಗಿರುವವು.

ಈ ಮಾರ್ಗಗಳಲ್ಲಿ ರಾಧಾಪುರದಿಂದ ಉತ್ತರಕ್ಕೆ ಇರುವ ಮಾರ್ಗದಲ್ಲಿ ಅಶ್ವಾರೂಢನಾದ ದುಷ್ಟಬುದ್ಧಿ ಎಂಬುವನು ಏಕಾಂಗಿಯಾಗಿ ಮನಸ್ಸಿನಲ್ಲಿ ಏನನ್ನೋ ಚಿಂತಿಸುತ್ತಾ ಹೋಗುತ್ತಿದ್ದನು. ಸೂರ್ಯಾಸ್ತಮಾನವಾಗುವದಕ್ಕೆ ಮುಂಚಿತವಾಗಿ ತಾನು ಬಂದ ದೊಡ್ಡ ಮಾರ್ಗವನ್ನು ಬಿಟ್ಟು ಪಶ್ಚಿಮ ಘಟ್ಟಗಳ ಕಡೆಗೆ ಎಡಪಾರ್ಶ್ವದಲ್ಲಿ ಒಡಯುವ ಕಾಲುದಾರಿಯನ್ನು ಹಿಡಿದು ಹೊರಟನು. ಹೊತ್ತು ಮುಳುಗುವುದಕ್ಕೆ ಸರಿಯಾಗಿ ಆ ಬೆಟ್ಟಗಳ ತಪ್ಪಲನ್ನು ಸೇರಿದನು.

ಕತ್ತಲೆಯಾದರೂ ಅವನು ಆ ಪ್ರದೇಶದ ಪರಿಚಯವುಳ್ಳವನಾಗಿದ್ದುದರಿಂದ ಮುಳ್ಳುಪೊದೆಗಳ ಮಧ್ಯದಲ್ಲಿರುವ ದಾರಿಯನ್ನು ಕಂಡುಹಿಡಿದು ಹೋಗುತ್ತಿರಲು ಸ್ವಲ್ಪ ದೂರದಲ್ಲಿ ಎಲೆಗಳ ಮಧ್ಯದಲ್ಲಿ ಬೆಳಕು ಕಾಣಿಸಿತು. ಇನ್ನೂ ಸ್ವಲ್ಪ ಮುಂದೆ ಹೋಗಲು ಕೆಲವು ಡೇರೆಗಳು ಗೋಚರವಾದವು. ಡೇರೆಗಳ ಬಳಿಯಲ್ಲಿ ಹತ್ತು–ಹನ್ನೆರಡುಮಂದಿ ಕಿರಾತರು ಬೆಂಕಿಯುಸುತ್ತಲೂ ಕುಳಿತುಕೊಂಡಿದ್ದರು. ಅವರು ಬೇಟೆಯಾಡಿ ತಂದ ಪಕ್ಷಿ ಮೃಗಾದಿಗಳ ಮಾಂಸವನ್ನು ಬೇಯಿಸುತ್ತಿದ್ದರು.

ದುಷ್ಟಬುದ್ಧಿಯು ದೂರದಿಂದಲೇ ತಾನು ಸ್ನೇಹಿತನೆಂದು ತಿಳಿಯುವ ಬಗ್ಗೆ ಒಂದು ವಿಧವಾಗಿ ಸಿಳ್ಳು ಹಾಕಿದನು. ಅದನ್ನು ಕೇಳಿದಾಕಿರಾತರಲ್ಲಿ ಮುಖಂಡನಾದ ಚಾರುವೀರನೆಂಬವನು ಮುಂದೆ ಬಂದು ದುಷ್ಟಬುದ್ಧಿಯುನ್ನೆದುರುಗೊಂಡನು. ಕುಶಲಪ್ರಶ್ನಾನಂತರ ತನ್ನ ಬಿಡಾರಕ್ಕೆ ಕರೆದೊಯ್ದನು. ದುಷ್ಟಬುದ್ಧಿಯು ಕುದುರೆಯನ್ನಿಳಿದು ಒಬ್ಬ ಕಿರಾತಭಟನಲ್ಲಿ ಒಪ್ಪಿಸಿ ಗುಡಾರ

ವನ್ನು ಹೊಕ್ಕು ಚಾರುವೀರನೊಡನೆ ಸ್ವಲ್ಪಹೊತ್ತು ಮಿತ್ರಸಂಭಾಷಣೆಯ ಲ್ಲಿದ್ದು ತಾನು ಬಂದಿರುವ ಕೆಲಸವನ್ನು ತಿಳಿಸಿದನು. ಚಾರುವೀರನು ಒಬ್ಬ ಕಿರಾತಭಟನನ್ನು ಕರೆದು "ಈತನನ್ನು ನಮ್ಮೊಡೆಯನ ಗುಹೆಯಲ್ಲಿ ಬಿಟ್ಟುಬರು ವದು" ಎಂದು ಆಜ್ಞಾಪಿಸಿ ದುಷ್ಟಬುದ್ಧಿಯ ಜೊತೆಯಲ್ಲಿ ಕಳುಹಿಸಿಕೊಟ್ಟನು.

ಇಬ್ಬರು ಅರ್ಧಘಳಿಗೆಯಲ್ಲಿ ನಡೆದು ಒಂದು ಗುಹಾದ್ವಾರವನ್ನು ಹಿಡಿದು ಹೋಗುತ್ತಿದ್ದರು. ಗುಹಾದ್ವಾರವು ಬಹು ಇಕ್ಕಟ್ಟಾಗಿತ್ತು. ಕಿರಾತಭಟನು ದಾರಿ ತೋರಿಸುತ್ತಾ ಮುಂದಾಗಿಯೂ ದುಷ್ಟಬುದ್ಧಿಯು ಅವನನ್ನು ಹಿಂಬಾಲಿ ಸುತ್ತಲೂ ಹೋಗಬೇಕಾಯಿತು. ಹೀಗೆಯೇ ನಡೆದು ಗುಹೆಯ ಕೊನೆಯನ್ನು ಸೇರಿ ಕಿರಾತಾಧಿಪತಿಯನ್ನು ಕಾಣದೆ ಬಲಗಡೆಯಲ್ಲಿದ್ದ ಮೆಟ್ಟಿಲುಗಳನ್ನು ಹತ್ತಿ ಅಲ್ಲಿದ್ದ ಕಲ್ಲುಬಾಗಲನ್ನು ತೆರೆಯಲು ಚಂದ್ರಕಾಂತಿಯು ಗುಹೆಯನ್ನು ಪ್ರವೇಶಿಸಿತು. ಮುಂದೆ ಕೆಲವಡಿ ಇಡಲು ಒಂದು ಶೃಂಗಾರವಾದ ತೋಟವು ಅದರ ನಡುವೆ ರಾಜಗೃಹಕ್ಕೆ ಸಮಾನವಾದ ಒಂದು ಭವನವು ಗೋಚರ ವಾಯಿತು. ಪಕ್ಷಿಗಳು ಮತ್ತು ಕಿರಾತಭಟರು ಹೊರತು ಮಿಕ್ಕ ಪ್ರಾಣಿಗಳಿಗೆ ಕಿರಾತಾಧಿಪತಿಯ ವಾಸಸ್ಥಾನವು ಗೋಚರವಾಗಬಾರದೆಂದು ಭೂದೇವಿಯು ಆ ತೋಟದ ಸುತ್ತಲೂ ತನ್ನ ಕೈಗಳನ್ನು ಚಾಚಿರುವಳೋ ಎನ್ನುವಂತೆ ಪರ್ವತಶಿಖರಗಳು ಆ ಪ್ರದೇಶವನ್ನು ಆವರಿಸಿದ್ದವು. ದುಷ್ಟಬುದ್ಧಿಯು ತೋಟವನ್ನು ಪ್ರವೇಶಿಸಲು ಆಯುಧಸನ್ನದ್ಧರಾದ ಕೆಲವುಮಂದಿ ಕಿರಾತರು ದೂರದಿಂದಲೇ ತಮ್ಮ ಸಂಕೇತವಾರ್ತೆಯನ್ನು ಕೇಳಿದರು. ಅದಕ್ಕೆ ಬಂದ ಪ್ರತ್ಯುತ್ತರವನ್ನು ಗ್ರಹಿಸಿ ಬರುವವರು ತಮ್ಮವರೆಂದು ತಿಳಿದು ಮುಂದೆ ಬಂದು ಅವರನ್ನು ಭವನದೆಡೆಗೆ ಕರೆದುಕೊಂಡು ಹೋದರು.

ದ್ವಾರಪಾಲಕನು ದುಷ್ಟಬುದ್ಧಿಯನ್ನು ಕಂಡು ಕಿರಾತಾಧಿಪನ ಬಳಿಗೆ ಹೋಗಿ "ಅಧಿಪನೆ! ತಮ್ಮ ಮಿತ್ರರಾದ ದುಷ್ಟಬುದ್ಧಿಯವರು ಬಂದಿರುವರು" ಎಂದು ಬಿನ್ನವಿಸಿದನು. ಕಿರಾತಾಧಿಪತಿಯು "ಆತನನ್ನು ಈ ಕ್ಷಣವೇ ನಮ್ಮೆಡೆಗೆ ಕರೆದುಕೊಂಡು ಬರುವದು" ಎಂದು ಆಜ್ಞಾಪಿಸಲು ದ್ವಾರ ಪಾಲಕನು ಬೇಗ ಬಂದು ದುಷ್ಟಬುದ್ಧಿಯನ್ನು ಪ್ರಭುವಿನೆಡೆಗೆ ಕರೆದೊಯ್ದನು. ಕಿರಾತಾಧಿಪತಿಯಾದ ಕರಾಳನು ದುಷ್ಟಬುದ್ಧಿಯನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ಕುಶಲಪ್ರಶ್ನೆಯನ್ನು ಕೇಳುತ್ತಾ "ಏನಯ್ಯಾ ಮಿತ್ರನೆ ಸುಖಾ

ಗಮನವೇ ? ನಿನ್ನ ಮುಖಕಮಲವು ಮನೋಹರ್ಷವನ್ನು ಸೂಚಿಸುವದು. ಇದರಿಂದ ಪ್ರತಾಪಕಂಠೀರವನಲ್ಲಿಯೂ, ಕೇಳದೇಶಕನ್ಯಾಡೆಯುಳ್ಳಾದ ಮನೋರಮೆಯಲ್ಲಿಯೂ ಕಾರ್ಯನಿರ್ವಾಹವನ್ನು ಮಾಡಿಕೊಂಡು ಬಂದಿರುವಂತೆ ತೋರುವದು " ಎಂದು ಕೇಳಿದನು.

ಆದಕ್ಕೆ ದುಷ್ಟಬುದ್ಧಿಯು " ನೀನು ಬಯಸಿದಂತೆಯೇ ಎಲ್ಲವೂ ನೆರವೇರಿರುವದು. ಆ ಸುಂದರಿಗೆ ಪ್ರಯಾಣಗೈಯ್ಯಲು ಯಾವ ಮಾರ್ಗವು ಪ್ರಶಸ್ತವಾದುದೆಂದು ತಿಳಿಸಿರುವೆನೋ ಅದನ್ನೇ ಆ ರಾಜಚೂಡನಿಗೂ ಯೋಗ್ಯವಾದುದೆಂದು ಹೇಳಿರುವೆನು " ಎಂದು ಹೇಳಲು,

ಕರಾಳನು " ಹಾಗಾದರೆ ಮಹತ್ಪ್ರಯತ್ನವಿಲ್ಲದೆ ನಮ್ಮ ಕೆಲಸ ಕೈಗೂಡುವುದೆನ್ನುವುದರಲ್ಲಿ ಯಾವ ಸಂದೇಹವೂ ತೋರುವುದಿಲ್ಲ " ಎಂದು ಸ್ವಲ್ಪ ಯೋಚಿಸಿ " ಆದರೂ ಇದರಿಂದ ಲಭಿಸಬಹುದಾದ ಪ್ರಯೋಜನವ ವಿಷಯದಲ್ಲಿ ನನಗೆ ಬಹಳ ಸಂಶಯವಿರುವುದು" ಎಂದು ಅನುಮಾನಪಟ್ಟನು.

ಅದನ್ನು ಕೇಳಿ ದುಷ್ಟಬುದ್ಧಿಯು " ಏನು ಸಂಶಯವೇ ? ಈ ಕಾರ್ಯವನ್ನು ನೀನು ಸಾಹಸದಿಂದ ನೆರವೇರಿಸಿದೆಯಾದರೆ ಇದರಿಂದುಂಟಾಗುವ ಐಶ್ವರ್ಯವನ್ನು ಇಷ್ಟೆಂದು ವರ್ಣಿಸಲು ಸಹಸ್ರಫಣಿಯಾದ ಆದಿಶೇಷನಿಗೂ ಸಾಧ್ಯವಲ್ಲ. ಈ ವಿಷಯದಲ್ಲಿ ನನ್ನ ಮಾತನ್ನು ದೃಢವಾಗಿ ನಂಬು ಎಂದು ಭರವಸದಿಂದ ಹೇಳಲು,

ಕರಾಳನು " ಈಗ ನನ್ನ ಮನಸ್ಸಿನಲ್ಲಿದ್ದ ಚಾಂಚಲ್ಯವು ನಿವೃತ್ತಿಯಾಗಿರುವದು " ಎಂಬೀಪ್ರಕಾರವಾಗಿ ಸ್ವಲ್ಪಹೊತ್ತು ಮಾತನಾಡುತ್ತ ಮುಂದೆ ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಹೇಳಿ " ಈ ಐಶ್ವರ್ಯ ನಿವಾಸಸ್ಥಾನವು ಎಲ್ಲಿರುವದೆಂದು ಹೇಳಿದೆ ? " ಎಂದು ಕೇಳಿದನು.

ಅದಕ್ಕೆ ದುಷ್ಟಬುದ್ಧಿಯು " ಇಲ್ಲಿಂದ ಉತ್ತರಕ್ಕೆ ೭೦ ಮೈಲಿ ದೂರದಲ್ಲಿ ಕಳಿಂಗಪಟ್ಟಣಕ್ಕೆ ಈಶಾನ್ಯದಿಕ್ಕಿನಲ್ಲಿ ಈ ಪಶ್ಚಿಮಘಟ್ಟಗಳು ಕೂಡಿಕೊಳ್ಳುತ್ತವೆ. ಈ ಘಟ್ಟಗಳಲ್ಲಿ ಪೂರ್ವದಲ್ಲಿರುವದು ಚಂದ್ರದ್ರೋಣಪರ್ವತ, ಪಶ್ಚಿಮದಲ್ಲಿರುವದು ಅರುಣಾಚಲಗಿರಿ. ಇವುಗಳ ಮಧ್ಯದಲ್ಲಿರುವ ಕಣಿವೆಯೇ ನಾನು ಹೇಳಿದ ಲಕ್ಷ್ಮೀನಿಲಯ. ಈ ಎರಡು ಬೆಟ್ಟಗಳ ಮತ್ತು ಈ ಕಣಿವೆಯ ಉತ್ತರದಕ್ಷಿಣದಲ್ಲಿರುವ ಪಶ್ಚಿಮಘಟ್ಟಗಳು ಸಿಂಹ ಶಾರ್ದೂಲಾದಿ ದುಷ್ಟ

ಮೃಗಗಳಿಂದ ಕೂಡಿವೆ. ಹಾವು ಚೇಳು ಮೊದಲಾದ ದುಷ್ಟೋಪದ್ರವ ಜಂತುಗಳು ಬಹಳ ಹೆಚ್ಚಾಗಿರುತ್ತವೆ. ಅಡಿಯಿಟ್ಟು ನಡೆದರೆ ಅಂಗಾಂಗವೆಲ್ಲ ಛಿದ್ರಛಿದ್ರವಾಗಿ ರಕ್ತ ಹರಿಯುವಂತೆ ಮಾಡುವ ಮುಳ್ಳುಪೊದೆಗಳೂ, ಸೂರ್ಯನು ಆಕಾಶಮಧ್ಯದಲ್ಲಿ ಇದ್ದರೂ ಸೂರ್ಯರಶ್ಮಿಯು ಹೊಕ್ಕು ಭೂಮಿಯನ್ನು ಮುಟ್ಟುವದಕ್ಕೆ ಅವಕಾಶವಿಲ್ಲದಂತೆ ಅಗಲವಾಗಿ ಹರಡಿಕೊಂಡಿರುವ ಹಸುರೆಲೆಯ ಕೊಂಬೆಗಳನ್ನುಳ್ಳವುಗಳಾಗಿ ಬಹಳ ಎತ್ತರವಾಗಿ ಬೆಳೆದಿರುವ ದೊಡ್ಡದೊಡ್ಡ ಮರಗಳೂ ತುಂಬಿವೆ. ಶಿಖರಪ್ರಾಂತ್ಯಗಳು ಯಾವಾಗಲೂ ಹಿಮಕ್ಕೆ ತೌರುಮನೆಯಾಗಿ ಇರುತ್ತವೆ. ದೊಡ್ಡದೊಡ್ಡ ಬಂಡೆಗಳು ಭಯಂಕರವಾಗಿವೆ. ಶಿಖರಪ್ರದೇಶದಲ್ಲಿ ಹುಟ್ಟಿ ಬಂಡೆಗಳಮೇಲೆ ಹಾರಿಹಾರಿ ಬಿದ್ದು ರಭಸವಾಗಿ ಹರಿಯುವ ತೊರೆಗಳು ನೋಡುವ ಜನಗಳಿಗೆ ಬಹು ಭೀತಿಯನ್ನುಂಟುಮಾಡುತ್ತವೆ. ಇಂಥಾ ಭಯಂಕರವಾದ ಪರ್ವತಗಳನ್ನು ಹತ್ತಿ ಲಕ್ಷ್ಮೀನಿಲಯವನ್ನು ಸೇರುವುದು ಮನುಷ್ಯಪ್ರಯತ್ನಕ್ಕೆ ಅಸಾಧ್ಯವಾಗಿರುವದು. ಹೀಗಿದ್ದಾಗ್ಯೂ ಯಾವುದೋ ಒಂದು ಗುಪ್ತಮಾರ್ಗವಾಗಿ ಆ ಕಣಿವೆಯನ್ನು ಸೇರಬಹುದು. ಈ ರಹಸ್ಯವು ಕಳಿಂಗಪಟ್ಟಣದಲ್ಲಿ ಈಗ ನನ್ನ ಯಜಮಾನನು ಒಬ್ಬನಿಗೆ ಮಾತ್ರ ತಿಳಿದಿರುವುದು" ಎಂದು ವಿಸ್ತರಿಸಿ ಹೇಳಿದನು.

ಇದನ್ನು ಕೇಳಿ ಕರಾಳನು "ಹೀಗಿರುವಲ್ಲಿ ನಾವು ಯೋಚಿಸಿರುವ ಮಹತ್ಪ್ರಯತ್ನವನ್ನು ಮಾಡದೆ ಆ ಸಾಹುಕಾರನನ್ನು ಹಿಡಿದು ಸೆರೆಯಲ್ಲಿಟ್ಟು ನಿರ್ಬಂಧಪಡಿಸಿ ಈ ರಹಸ್ಯವನ್ನು ತಿಳಿಯುವುದು ಸುಲಭವಲ್ಲವೆ?" ಎಂದು ಕೇಳಲು ;

ದುಷ್ಟಬುದ್ಧಿಯು "ಆ ಮೂರ್ಖನು ಪ್ರಾಣವನ್ನಾದರೂ ಬಿಟ್ಟಾನು. ಗುಟ್ಟನ್ನು ಮಾತ್ರ ಎಂದೆಂದಿಗೂ ಹೊರಪಡಿಸನು, ಆತನ ಗುಣದಲ್ಲಿ ನನಗೆ ಚೆನ್ನಾಗಿ ಅನುಭವವಿರುವುದು. ಆದುದರಿಂದ ಈಗ ನಾವು ಯೋಚಿಸಿರುವ ಪ್ರಯತ್ನಗಳನ್ನೇ ಮಾಡಿದರೆ ನಮ್ಮ ಅಭಿಲಾಷೆಯು ನೆರವೇರುವುದರಲ್ಲಿ ಸಂದೇಹವಿಲ್ಲ" ಎಂದು ತಿಳಿಸಿದನು.

ಬಳಿಕ ಆ ದಿನ ರಾತ್ರಿ ಬಹಳಹೊತ್ತು ಸಂಭಾಷಣೆಯಲ್ಲಿದ್ದು ಮಿತ್ರರಿಬ್ಬರೂ ಅವರವರ ಶಯನಗೃಹವಂ ಸೇರಿ ಸುಖವಾಗಿ ನಿದ್ರೆಗೈದರು.

ಮಾರನೆದಿನ ಬೆಳಿಗ್ಗೆ ಸೂರ್ಯೋದಯವಾಗುವುದಕ್ಕೆ ಮುಂಚಿತವಾಗಿ ದುಷ್ಟಬುದ್ಧಿಯು ಎದ್ದು ನಿತ್ಯಕರ್ಮಗಳನ್ನು ತೀರಿಸಿಕೊಂಡು ಅಶ್ವಾರೂಢ ನಾಗಿ ಆ ಪ್ರದೇಶವನ್ನು ಬಿಟ್ಟು ಹೊತ್ತು ಹುಟ್ಟುವುದಕ್ಕೆ ಸರಿಯಾಗಿ ದೊಡ್ಡ ಮಾರ್ಗವನ್ನು ಸೇರಿ ಕಳಿಂಗಪಟ್ಟಣವನ್ನು ಕುರಿತು ಹೋಗುತ್ತಿದ್ದನು.

ಇತ್ತ ಕರಾಳನು ಚಾರುವೀರನನ್ನು ಕರೆಸಿ ಅವನಿಗೆ ಹೇಳಬೇಕಾದು ದನ್ನೆಲ್ಲಾ ಹೇಳಿ ಐದುಮಂದಿ ಕಿರಾತರನ್ನು ಜೊತೆಯಲ್ಲಿ ಹೋಗುವಂತೆ ನೇಮಿಸಿ ಒಬ್ಬ ಭಟನೊಡನೆ ತಾನು ಬೇರೊಂದು ಮಾರ್ಗವನ್ನು ಹಿಡಿದು ಹೊರಟನು.

ಆ ಆರುಮಂದಿ ಕಿರಾತರು ತಮಗೆ ಬೇಕಾದ ಆಯುಧಗಳನ್ನು ಅಳ ವಡಿಸಿಕೊಂಡು ಅಶ್ವಾರೂಢರಾಗಿ ಬಹಳ ತ್ವರೆಯಿಂದ ರಾಧಾಪುರದ ಎಲ್ಲೆಗೆ ಈಚೆ ಒಂದು ಗಾವುದದಲ್ಲಿರುವ ಮೈಲಿಕಲ್ಲನ್ನು ಸೇರಿದರು. ಚಾರುವೀರನು ಎಲ್ಲರನ್ನು ಅಲ್ಲಿ ನಿಲ್ಲಿಸಿ ಅವರನ್ನು ಕುರಿತು "ನಮ್ಮ ಕೆಲಸಕ್ಕೆ ಈ ಸ್ಥಳವು ಸರಿಯಾಗಿರುವುದು. ಇಳಿದು ಕುದುರೆಗಳನ್ನು ಬಿಚ್ಚಿಬಿಡಿರಿ. ನಾವು ಸ್ವಲ್ಪ ಹೊತ್ತು ವಿಶ್ರಾಂತಿಗೊಳ್ಳೋಣ. ಅಷ್ಟರಲ್ಲಿ ಕುದುರೆಗಳು ಹುಲ್ಲುಮೇದು ಉಲ್ಲಾಸಗೊಂಡು ನಮ್ಮ ಕೆಲಸಕ್ಕೆ ಬಹು ಸಹಾಯಕಾರಿಗಳಾಗುವುವು" ಎಂದು ಆಜ್ಞಾಪಿಸಿದನು. ಕಿರಾತರು ಮುಖಂಡನು ನೇಮಿಸಿದಂತೆ ಮಾಡಿ ಮರಗಳ ನೆರಳಿನಲ್ಲಿ ಕುಳಿತರು.

ಕಿರಾತರು ಇಳಿದ ಆ ಪ್ರದೇಶವು ಒಂದು ದೊಡ್ಡ ಕಾಡಾಗಿತ್ತು. ಬಹಳ ಎತ್ತರವಾದ ಮರಗಳು ಇರಲಿಲ್ಲ. ನಾಲ್ಕಾರು ಗಜಗಳ ಉದ್ದಕ್ಕೆ ಬೆಳೆದು ನಾಲ್ಕಾರು ಕೊಂಬೆಗಳಿಂದ ಕೂಡಿದ ಗಿಡಗಳು ಇದ್ದವು. ಮುಳ್ಳು ಪೊದೆಗಳು ಇರಲಿಲ್ಲ. ಸಣ್ಣಸಣ್ಣ ಸಸಿಗಳೂ ಬಳ್ಳಿಗಳೂ ಇದ್ದವು. ಈ ಸಸ್ಯಾದಿಗಳು ಒಂದಕ್ಕೊಂದು ಬಹಳ ಇಕ್ಕಟ್ಟಾಗಿ ಬೆಳೆದಿರಲಿಲ್ಲ. ಮನುಷ್ಯ ಸಂಚಾರಕ್ಕೆ ಅನುಕೂಲವಾಗಿ ಒಂದಕ್ಕೊಂದಕ್ಕೆ ನಡುವೆ ಅವಕಾಶವು ಇರುವಂತೆ ಬೆಳದಿದ್ದವು. ಹುಲಿ, ಕರಡಿ, ಮೊದಲಾದ ಪ್ರಾಣಾಪಾಯ ಗೊಳಿಸುವ ಮೃಗಗಳು ಇರಲಿಲ್ಲ. ಜಿಂಕೆ, ಸಾರಂಗ, ಮೊದಲಾದ ಸಾಧು ಮೃಗಗಳು ಇದ್ದವು. ಹಾವು, ಚೇಳು ಮೊದಲಾದ ದುಷ್ಟ ಜೀವಜಂತುಗಳು ಇರಲಿಲ್ಲ. ಅವಕ್ಕೆ ವೈರಿಗಳಾದ ಮುಂಗಸಿ ಮೊದಲಾದ ಸಣ್ಣ ಪುಟ್ಟ

ಪ್ರಾಣಿಗಳು ಇದ್ದವು. ಕಾಡುಮೃಗಗಳು ವಿಶೇಷವಾಗಿರಲಿಲ್ಲ. ಅಲ್ಲಲ್ಲಿ ಮನುಷ್ಯನ ಆಹಾರಕ್ಕೆ ಯೋಗ್ಯವಾದ ಫಲಗಳಿಂದ ಕೂಡಿದ ಗಿಡಗಳು ಇದ್ದವು. ನೋಟಕ್ಕೆ ಭಯಂಕರವಾಗಿರಲಿಲ್ಲ. ಸೌಮ್ಯವಾಗಿತ್ತು. ಹಳ್ಳ ಕೊಳ್ಳಗಳು ಇರಲಿಲ್ಲ. ಮೈದಾನಪ್ರದೇಶಗಳು ಇದ್ದುವು. ದೊಡ್ಡ ನದಿಗಳು ಇರಲಿಲ್ಲ. ಕಾಲುವೆಯಂತೆ ಹರಿಯುವ ಸಣ್ಣ ಸಣ್ಣ ತೊರೆಗಳು ಇದ್ದವು. ಇಂತಹ ಪ್ರದೇಶವು ಮನುಷ್ಯನ ಸಹಾಯವಿಲ್ಲದೆ ತಾನಾಗಿಯೇ ವನಲಕ್ಷ್ಮಿಗೋಸುಗ ಭೂದೇವಿಯು ನಿರ್ಮಿಸಿರುವ ಆವಾಸಸ್ಥಾನವೋ ಎನ್ನುವ ರೀತಿಯಲ್ಲಿ ಮನೋಹರ್ಷವನ್ನು ಉಂಟುಮಾಡುತ್ತಲಿದ್ದುದು.

ಕಿರಾತರು ಇಳಿದ ಸ್ಥಳದಲ್ಲಿ ಮಾರ್ಗದ ಎರಡು ಕಡೆಯಲ್ಲಿಯೂ ಇಕ್ಕಟ್ಟಾಗಿ ಬೆಳೆದಿರುವ ಮರಗಳ ಕೊಂಬೆಗಳು ಚಾವಣಿಯಹಾಗೆ ಮಾರ್ಗದ ಮೇಲ್ಗಡೆ ಕೂಡಿಕೊಂಡಿದ್ದವು. ಸೂರ್ಯನು ಆಗತಾನೆ ಹುಟ್ಟಿ ಪ್ರಕಾಶಿಸುತ್ತಿದ್ದನು.

ಕಿರಾತರು ಅಡಗಿಕೊಳ್ಳುವುದಕ್ಕೆ ಯೋಗ್ಯವಾದ ಸ್ಥಳಗಳನ್ನು ಚಾವಣಿಯ ಎರಡು ಕಡೆಗಳಲ್ಲಿ ಸಿದ್ಧಪಡಿಸಿಕೊಂಡು ಬಂದು ಚೋರುವೀರನಲ್ಲಿ ಬಿನ್ನವಿಸಿದರು. ಅವನು ಅವರನ್ನು ಕುರಿತು "ಮುಂದೆ ನಾವು ಮಾಡ ಬೇಕಾದ ಕೆಲಸವು ಬಹು ಮುಖ್ಯವಾದ್ದು. ನಾವೆಲ್ಲರೂ ಜಾಗರೂಕರಾಗಿ ಹೊಂಚಿ ಕಾದುಕೊಂಡಿದ್ದು ಸಮಯ ಒದಗಿದ ಕ್ಷಣವೇ ಬಹು ಚಮತ್ಕಾರ ದಿಂದ ಕೆಲಸ ಮಾಡಬೇಕು" ಎಂದು ಅವರಿಗೆ ಹೇಳಬೇಕಾದುದನ್ನೆಲ್ಲಾ ಹೇಳಿ "ಇನ್ನೇನು ಅವರು ಬರುವ ಹೊತ್ತಾಯಿತು. ನೀವೆಲ್ಲರೂ ಅಶ್ವಾರೂಢರಾಗಿ ಅಡಗಿಕೊಂಡಿರಿ. ನಾನು ಸೌಂಜ್ಞೆ ಮಾಡಿದ ಕೂಡಲೇ ಕಾರ್ಯಕ್ಕೆ ಉದ್ಯುಕ್ತರಾಗಬೇಕು" ಎಂದು ಆಜ್ಞಾಪಿಸಿ ಕಳುಹಿಸಿದನು.

ಕಿರಾತರು ಅಡಗಿಕೊಂಡ ಒಂದು ನಿಮಿಷದಲ್ಲಿ ರಾಧಾಪುರದ ಕಡೆ ಯಿಂದ ಆ ಮಾರ್ಗದಲ್ಲಿ ಬರುತ್ತಿದ್ದ ಅಶ್ವಾರೂಢರಾದ ಮೂವರು ಪುರುಷರು ಕಾಣಲ್ಪಟ್ಟರು. ಮುಂಭಾಗದಲ್ಲಿ ಬರುತ್ತಿದ್ದವನ ರೂಪುರೇಖಾದಿಗಳಿಂದಲೂ, ಅಮೂಲ್ಯವಾದ ಉಡಿಗೆ ತೊಡಿಗೆಗಳಿಂದಲೂ, ಹಿಂದೆ ಬರುತ್ತಿದ್ದವರಿಗಿಂತಲೂ ಉನ್ನತ ಪದವಿಯುಳ್ಳವನೆಂದು ಊಹಿಸಬಹುದು. ಉಳಿದಿಬ್ಬರಲ್ಲಿ ಒಬ್ಬನು ಮತ್ತೊಬ್ಬನಿಗಿಂತಲೂ ಹೆಚ್ಚಾದ ಅಧಿಕಾರಸ್ಥನೆಂದು ತಿಳಿಯಬಹುದು.

ಅವರು ಉಲ್ಲಾಸಕರವಾದ ಮಾತುಗಳನ್ನಾಡುತ್ತ ಆ ಪ್ರದೇಶದ ನಾಡಿ ನೈಶ್ವರ್ಯವನ್ನೂ ಸೂರ್ಯಕಿರಣಗಳು ಎಲೆಗಳ ಮಧ್ಯದಲ್ಲಿ ಹೊಕ್ಕು ಗಾಳಿ ಬೀಸುವುದರಿಂದ ಉಂಟಾಗುವ ಆ ಎಲೆಗಳ ಚಲನೆಯನ್ನು ಅನುಸರಿಸಿ ಮಾರ್ಗದಲ್ಲಿ ಆಡುತ್ತಿರುವುದನ್ನು ಬಣ್ಣಿಸುತ್ತಾ ಸಮೀಪವರ್ತಿಗಳಾಗುತ್ತಿದ್ದರು. ಮರೆಯಲ್ಲಿ ಅಡಗಿದ್ದ ಕಿರಾತರು ಸಿದ್ಧರಾಗಿ ಚಾರುವೀರನ ಸೌಂಜ್ಞೆಯನ್ನು ಎದುರುನೋಡುತ್ತಿದ್ದರು.

ಆ ಮೂವರು ಹತ್ತಿರಕ್ಕೆ ಬರಲು ಮುಂದುಗಡೆಯಲ್ಲಿದ್ದವನು ಪ್ರತಾಪ ಕಂಠೀರವನೆಂದೂ ಮತ್ತಿಬ್ಬರು ಅವನ ಸೈನ್ಯಾಧಿಪತಿಗಳೆಂದೂ ತಿಳಿದು ಚಾರುವೀರನು ಸೌಂಜ್ಞೆ ಮಾಡಲು ಕಿರಾತರು ತಮ್ಮ ತಮ್ಮ ಸಂಕೇತ ಸ್ಥಾನಗಳನ್ನು ಬಿಟ್ಟು ಏಕಕಾಲದಲ್ಲಿ ಅವರಮೇಲೆ ಬಿದ್ದು ಜಗಳವನ್ನಾರಂಭಿಸಿದರು. ಆ ಕ್ಷಣವೇ ಕಣ್ಣು ಮುಚ್ಚಿ ಕಣ್ಣು ಬಿಡುವ ಹೊತ್ತಿನಲ್ಲಿ ಆ ಮೂವರು ಒರೆಯಿಂದ ಕತ್ತಿಯನ್ನೆಳೆದು ಝಳಪಿಸಿ ಯುದ್ಧಸನ್ನದ್ಧರಾದರು. ಪ್ರತಾಪಕಂಠೀರವನನ್ನು ಚಾರುವೀರನು ಒಬ್ಬ ಕಿರಾತನು, ಮೊದಲನೇ ಸೈನ್ಯಾಧಿಪತಿಯನ್ನು ಇಬ್ಬರು ಕಿರಾತರು, ಎರಡನೇ ಸೈನ್ಯಾಧಿಪತಿಯನ್ನು ಉಳಿದಿಬ್ಬರು ಕಿರಾತರೂ ಸೇರಿ ಮುತ್ತಿಕೊಂಡು ಬಹಳ ಕಠಿಣವಾಗಿ ಸ್ವಲ್ಪ ಹೊತ್ತು ಯುದ್ಧಮಾಡಿದರು. ಕೊನೆಯಲ್ಲಿ ಕಿರಾತರು ಸೋತರು. ಚಾರುವೀರನು, ಇಬ್ಬರು ಕಿರಾತರು ಮಾತ್ರ ತಪ್ಪಿಸಿಕೊಂಡು ಓಡಿದರು. ಉಳಿದ ಮೂರುಮಂದಿ ಕಿರಾತರು ಹತರಾಗಿ ಕುದುರೆಗಳಿಂದ ಉರುಳಿಬಿದ್ದರು. ಅವರ ತುರಗಗಳು ಜಯಶಾಲಿಗಳಿಗೆ ಸಿಕ್ಕದಂತೆ ಓಡಿಹೋದವು.

ಅನಂತರ ಆ ವಿಜಯಶಾಲಿಗಳು ಮಾರ್ಗಮಧ್ಯದಲ್ಲಿ ಬಿದ್ದ ಹೆಣಗಳನ್ನು ಪಕ್ಕದಲ್ಲಿರುವ ಚರಂಡಿಗೆ ಒತ್ತರಿಸಿ ಇದೇರೀತಿ ಮುಂದಕ್ಕೆ ಕಿರಾತರ ಕಾಟವು ಸಂಭವಿಸಬಹುದೆಂದು ಜಾಗರೂಕರಾಗಿ ಪ್ರಯಾಣವನ್ನು ಬೆಳೆಸಿ ಹೋಗುತ್ತಾ ಒಂದು ಹಳ್ಳಿಯನ್ನು ಕಂಡು. ಅಲ್ಲಿನ ಪಟೇಲನಿಗೆ ತಮಗೆ ಒದಗಿದ ಕಿರಾತ ಕಾಟವನ್ನು ಹೇಳಿ ಹಿಂದೆ ಮೂರು ಹೆಣಗಳು ಬಿದ್ದಿರುವವೆಂದು ತಿಳಿಸಿ ತಮ್ಮ ದಾರಿಯನ್ನಿಡಿದು ಹೊರಟರು.

ಅಷ್ಟರಲ್ಲಿ ಚಾರುವೀರನು ಕುರುಬನ ವೇಷವನ್ನು ಧರಿಸಿ ನಾಲ್ಕುದಾರಿಗಳು ಕೂಡುವ ಸ್ಥಳಕ್ಕೆ ಸಮೀಪದಲ್ಲಿ ಕುರಿಗಳನ್ನು ಮೇಯಿಸುತ್ತಾ ಪ್ರತಾಪ ಕಂಠೀರವನ ಬರುವನ್ನೆದುರು ನೋಡುತ್ತಿದ್ದನು.

ಸ್ವಲ್ಪ ಹೊತ್ತಿನಲ್ಲಿ ಪ್ರತಾಪಕಂಠೀರವನು ಅವನ ಸೈನ್ಯಾಧಿಪತಿಗಳು ಅಲ್ಲಿಗೆ ಬಂದು ಕಳಿಂಗಪಟ್ಟಣಕ್ಕೆ ಹೋಗುವ ದಾರಿಯನ್ನು ತಿಳಿಯದೆ ಸುತ್ತು ಮುತ್ತಲೂ ನೋಡಿ ಕುರುಬನನ್ನು ಕಂಡು ದಾರಿಯನ್ನು ಕೇಳಿದರು. ಅವನು ಸರಿಯಾದ ದಾರಿಯನ್ನು ತೋರಿಸದೆ ಬೇರೊಂದು ಮಾರ್ಗದ ಕಡೆಗೆ ಕೈನೀಡಿ "ಇದೇ ಬುದ್ಧಿ ಕಲಿಂಗ್‌ಪಟ್ಟಕ್ಕೆ ಹೋಗೋದು, ಸಂಜಾನೆಗೆ ಸರೀಗೆ ಪೂರ್ ಸೇರ್ಬ್ಯೋದು ಬುದ್ಧಿ" ಎಂದು ಹೇಳಿದನು. ರಾಜನು ಅವನಿಗೆ ಬಹುಮಾನ ವಾಗಿ ಒಂದು ವರಹವನ್ನು ಕೊಟ್ಟು ಕಳಿಂಗಪಟ್ಟಣವನ್ನು ಶೀಘ್ರವಾಗಿ ಸೇರಬೇಕೆಂದು ಆತುರದಿಂದ ಕುದುರೆಯನ್ನು ಚಮಕಾಯಿಸಿ ಸೈನ್ಯಾಧಿಪತಿ ಗಳಿಗೆ ಮುಂದಾಗಿ ಹೋಗುತ್ತಿದ್ದನು.

ಹೀಗೆ ಹೋಗುತ್ತಿರಲು ಸುಮಾರು ಹತ್ತು ಘಂಟೆ ಸಮಯಕ್ಕೆ ಒಂದು ತೋಟವು ಕಾಣಿಸಿತು. ಆ ತೋಟದ ಮಧ್ಯದಲ್ಲಿ ಅವರು ಬಂದ ಮಾರ್ಗವು ಹೋಗುತ್ತಿತ್ತು. ಆ ತೋಟದ ಯಜಮಾನನು ಬಹಳ ಧಾತೃವಾದ್ದರಿಂದ ಕಲ್ಲಿನ ಮಾರ್ಗದ ಉಭಯ ಪಾರ್ಶ್ವಗಳಲ್ಲಿಯೂ ಇರುವ ಉನ್ನತವಾದ ಮರಗಳ ನಡುವೆ ದಣಿದುಬಂದ ಮಾರ್ಗಸ್ಥರು ಕುಳಿತು ಬಾಯಾರಿಕೆಯನ್ನು ತೀರಿಸಿಕೊಂಡು ವಿಶ್ರಮಿಸಿಕೊಳ್ಳುವದಕ್ಕೆ ಹಾಸುಕಲ್ಲುಗಳನ್ನು ಹಾಕಿಸಿ ಅವುಗಳ ಮೇಲ್ಗಡೆ ಸುಲಭವಾಗಿ ಕೈಗೆ ಸಿಕ್ಕುವಂತೆ ದ್ರಾಕ್ಷೀಬಳ್ಳಿಗಳನ್ನು ಬೆಳಸಿದ್ದನು. ಆ ತೋಟದಲ್ಲಿ ಬೀಳುವ ಸೂರ್ಯಕಿರಣಗಳ ಜ್ವಾಲೆಯು ಅಲ್ಲಿ ರುವ ಸಸ್ಯಾದಿಗಳಿಂದ ತಕ್ಕಮಟ್ಟಿಗೂ ಕಡಿಮೆಯಾಗಿ ಸೂರ್ಯಕಾಂತಿಯು ಚಂದ್ರಕಾಂತಿಯೋಪಾದಿಯಲ್ಲಿ ಸುಖವನ್ನೀವುದಾಗಿ ಇತ್ತು.

ಇಂತಹ ತೋಟವನ್ನು ಪ್ರತಾಪಕಂಠೀರವನು ಪ್ರವೇಶಿಸಿದನು. ಆ ವೇಳೆಯಲ್ಲಿ ವಾಯುವು ಆ ತೋಟದಲ್ಲಿರುವ ಕೊಳಗಳಲ್ಲಿ ಮುಳುಗಿ ಎದ್ದು ತುಂತುರು ಹನಿಗಳನ್ನುಳ್ಳವನಾಗಿ ಆ ಕೊಳಗಳ ಸುತ್ತಲೂ ಅರಳಿರುವ ಪುಷ್ಪ ಗಳ ಪರಿಮಳದ ಭಾರವನ್ನು ಹೊತ್ತುಕೊಂಡು ನಿಧಾನವಾಗಿ ನಡೆಯುತ್ತಾ ಮಂದಮಾರುತನೆನಿಸಿ ಮಿತ್ರನಾದ ಮನ್ಮಥನಿಗೆ ಸಹಾಯಕಾರಿಯಾಗಿ ತನ್ನ ಸ್ಪರ್ಶದಿಂದ ಪ್ರತಾಪಕಂಠೀರವನನ್ನು ಕೆಣಕುತ್ತಲೇ ಇದ್ದನು.

ಇದೇ ಸಮಯವೆಂದು ತಿಳಿದು ಇಪ್ಪತ್ತುವರುಷ ವಯಸ್ಸುಳ್ಳವನಾ ಗಿಯೂ, ನವಯವ್ವನ ಪುರುಷನಾಗಿಯೂ, ರೂಪಿನಲ್ಲಿ ತನ್ನನ್ನೂ ಮೀರಿಸು

ತ್ತಲಿರುವನಾಗಿಯೂ ಶೋಭಿಸುವ ಆ ರಣವೀರನನ್ನು ಮನ್ಮಥನು ತನ್ನ ಪುಷ್ಪ ಬಾಣಗಳಿಂದ ಹೊಡೆಯುತ್ತಲೇ ಇದ್ದನು. ರಾಜನು ಧೀರನಾದ್ದರಿಂದ ಮನ್ಮಥನ ಬಾಣದೇಟುಗಳನ್ನು ಲಕ್ಷಿಸದೆ ಹೊರಟು ಮುಂದಿರುವ ಮೈದಾನ ವನ್ನು ಪ್ರವೇಶಿಸಿದನು. ಅಷ್ಟರಲ್ಲಿ ಮನ್ಮಥನು ಶತ್ರುವು ತಪ್ಪಿಸಿಕೊಳ್ಳುವ ನಲ್ಲಾ ಎಂದು ತನ್ನ ಸಾಮರ್ಥ್ಯವನ್ನೆಲ್ಲಾ ತೋರಿಸಿ ರಾಜನ ಬಲದ ಕೆನ್ನೆಗೆ ಗುರಿಯಿಟ್ಟು ಪಂಚಬಾಣವನ್ನೂ ಏಕಕಾಲದಲ್ಲಿ ಪ್ರಯೋಗಿಸಿದನು. ಪುಷ್ಪ ಬಾಣದೇಟು ರಾಜನನ್ನು ಎಡಗಡೆಗೆ ತಿರುಗಿಸಿತು. ಕೂಡಲೆ ಸ್ವಲ್ಪ ದೂರ ದಲ್ಲಿ ಒಬ್ಬ ನಾರೀರತ್ನವು ಗೋಚರವಾಯಿತು. ರಾಜನು ಹರ್ಷಪೂರಿತ ಹೃದಯನಾಗಿ ಕುದುರೆಯನ್ನು ಆ ಕಡೆಗೆ ತಿರುಗಿಸಲೆತ್ನಿಸಿದನು. ಕುದುರೆಯು ಒಂದು ಸಣ್ಣ ಕಲ್ಲುತಾಕಿ ಎಡವಿ ಮುಗ್ಗರಿಸಿತು. ರಾಜನು ಕುದುರೆಯಿಂದ ಕೆಳಗೆ ಬಿದ್ದು ಮೂರ್ಛಿತನಾದನು. ರಾಜನ ಮೇಲೆ ಕುದುರೆಯು ತಲೆ ಯನ್ನು ಅಲ್ಲಾಡಿಸುತ್ತಾ ಗಾಳಿಯನ್ನು ಬೀಸುತ್ತಿತ್ತು. ಆ ತೋಟದಲ್ಲಿನ ಮಾರ್ಗವು ವಕ್ರಾವಕ್ರವಾಗಿದ್ದುದರಿಂದ ನೂರಾರು ಗಜಗಳ ಹಿಂದೆ ತೋಟ ದಲ್ಲಿ ಬರುತ್ತಿದ್ದ ಸೈನ್ಯಾಧಿಪತಿಗಳಿಗೆ ರಾಜನು ಮೂರ್ಛಿತನಾದ ವಿಚಾರವು ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ರಾಜನು ಮೂರ್ಛೆಯಿಂದ ಎಚ್ಚೆತ್ತು ಆ ದೊಡ್ಡ ಮಾರ್ಗವನ್ನು ಬಿಟ್ಟು ಆ ಸ್ತ್ರೀ ಶಿರೋಮಣಿಯಳ ಬಳಿಗೆ ಹೋಗುತ್ತಿದ್ದನು.

ಆ ಸುಂದರಿಯು ಒಂದು ಸಣ್ಣ ತೊರೆಯ ದಡದಲ್ಲಿ ಬೆಳೆದಿದ್ದ ಮರದ ನೆರಳಿನಲ್ಲಿ ಕುಳಿತು ಪಕ್ಕದಲ್ಲಿ ಹರಿಯುವ ನೀರಿನಲ್ಲಿ ಪಾದಗಳನ್ನು ಇಟ್ಟು ಕೊಂಡಿದ್ದಳು. ಅವಳಿಗೆ ಸುಮಾರು ಹತ್ತೊಂಬತ್ತು ವರುಷ ವಯಸ್ಸು. ಅವಳು ಕಣ್ಣು ಮುಚ್ಚಿಕೊಂಡು ಏನನ್ನೋ ಚಿಂತಿಸುತ್ತಾ ಯೋಚನೆ ಯಲ್ಲಿಯೇ ಮಗ್ನಳಾಗಿದ್ದಳು. ಆ ಕೋಮಲಾಂಗಿಯ ಬಲಪಾರ್ಶ್ವದಲ್ಲಿ ಒಂದು ವೀಣೆಯು ಶೋಭಿಸುತ್ತಿತ್ತು. ಅಲ್ಲಿಗೆ ಸ್ವಲ್ಪ ದೂರದಲ್ಲಿದ್ದ ಎರಡು ವೃಕ್ಷಗಳ ಮಧ್ಯದಲ್ಲಿ ಒಂದು ಡೇರೆಯು ಹಾಕಲ್ಪಟ್ಟಿತ್ತು. ಆ ವೃಕ್ಷಗಳ ನೆರಳಿನಲ್ಲಿ ಇಬ್ಬರು ದಾದಿಯರು ವಿಶ್ರಮಿಸಿಕೊಳ್ಳುತ್ತಾ ತಂಗಾಳಿಯು ಬೀಸಲು ಹಾಗೆಯೇ ನಿದ್ರಾಸಕ್ತರಾಗಿದ್ದರು. ಅವರ ಸಮೀಪದಲ್ಲಿ ಮೂರು ಕುದುರೆಗಳು ಹುಲ್ಲು ಮೇಯುತ್ತಿದ್ದವು.

ರಾಜನು ಸವಿಾಪವರ್ತಿಯಾಗುತ್ತಿದ್ದನು. ಕುದುರೆಯ ಖುರಪುಟ ಧ್ವನಿಯು ಕೇಳಿಸುತ್ತಿತ್ತು. ಆದರೂ ಆ ವನಜಮುಖಿಯು ಎಚ್ಚರವಾಗದೆ ಯೋಚನಾಸಕ್ತಳಾಗಿಯೇ ಇದ್ದಳು. ಈಚೆ ಕಡೆಯಲ್ಲಿರುವ ದಡದಲ್ಲಿಯೇ ಕುದುರೆಯನ್ನು ನಿಲ್ಲಿಸಿ ರಾಜನು ಎವೆಯಿಕ್ಕದೆ ಆ ಮೋಹನಾಂಗಿಯನ್ನು ಈಕ್ಷಿಸುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ತೊರೆಯ ಮಧ್ಯದಲ್ಲಿರುವ ಬಂಡೆಯ ಮೇಲೆ ಕುಳಿತಿದ್ದ ಪಾರಿವಾಳವನ್ನು ಹಿಡಿಯುವುದಕ್ಕಾಗಿ ಒಂದು ರಣಹದ್ದು ಬಂಡೆಯಮೇಲೆ ರಭಸವಾಗಿ ಹೊಡೆಯಿತು. ಆ ಶಬ್ದಕ್ಕೆ ಆ ಸ್ತ್ರೀರತ್ನವು ಕಣ್ದೆರದು ರಾಜನನ್ನು ನೋಡಿ ನಾಣ್ಗೊಂಡು ಎದ್ದು ತಲೆಬಾಗಿ ಉಂಗುಷ್ಠದಿಂದ ನೆಲವನ್ನು ಕೊರೆಯುತ್ತಾ ನಿಂತುಕೊಂಡಳು.

ಅಷ್ಟರಲ್ಲಿ ಸೈನ್ಯಾಧಿಪತಿಗಳು ಅಲ್ಲಿಗೆ ಬಂದರು. ಮೂವರೂ ತೊರೆಯನ್ನು ದಾಟಿ ಅವಳ ಸವಿಾಪದಲ್ಲಿ ಮರದ ನೆರಳಿನಲ್ಲಿ ಕುಳಿತುಕೊಂಡರು. ಅವಳೂ ಕುಳಿತುಕೊಂಡಳು. ಬಳಿಕ ಪ್ರತಾಪಕಂಠೀರವನು ಆ ಅಬಲಾರತ್ನವಂ ಕುರಿತು, "ಎಲೈ ನಾರೀಮಣಿಯೇ ಈ ಕಾಂತಾರಮಧ್ಯದಲ್ಲಿ ನೀನು ಏಕಾಂಗಿಯಾಗಿರಲು ಕಾರಣವೇನು ? ನಿನ್ನ ವಿಚಾರವನ್ನು ತಿಳಿಸುವಳಾಗು" ಎಂದು ಕೇಳಿದನು.

ಅದಕ್ಕೆ ಶುಕವಾಣಿಯು ನಾಣಭಿನಯಿಸಿ ಡೇರೆಯ ಕಡೆಗೆ ಕೈನೀಡಿ "ಅದು ನನ್ನ ಬಿಡಾರವು, ಅಲ್ಲಿ ನಿದ್ರಿಸುವ ಸ್ತ್ರೀಯರು ದಾದಿಯರು" ಎಂದು ತಿಳಿಸಿ–" ಪರಪುರುಷರಿಗೆ ತಮ್ಮ ಪರಿಚಯವನ್ನು ತಿಳಿಸಲು ಸ್ತ್ರೀಯರು ಅಂಜುವರಲ್ಲವೇ ! " ಎಂದು ಅರ್ಥೋಕ್ತಿಯಿಂದ ಹೇಳಲು,

ರಾಜನು "ಅಬಲಾಜನಗಳ ಕಷ್ಟವನ್ನು ಹೋಗಲಾಡಿಸಿ ಅವರ ಸುಖಕ್ಕೆ ಕಾರಣಭೂತರಾದ ಧೀರರಲ್ಲಿ ಅಂಜಿಕೆಯೆಂದರೇನು ?" ಎಂದು ಬರವಸೆಯನ್ನು ಕೊಟ್ಟನು. ಅದಕ್ಕೆ ಶುಕವಾಣಿಯು "ಹಾಗಾದರೆ ತಮ್ಮಿಂದ ಯಾವ ತೊಂದರೆಯೂ ಸಂಭವಿಸುವುದಿಲ್ಲವೆಂದು ನಂಬಲೊ ?" ಎಂದು ಕೇಳಲು, ರಾಜನು "ಸಂದೇಹವೇನು" ಎಂದು ಪ್ರತ್ಯುತ್ತರವನ್ನು ಕೊಟ್ಟನು. ಆಮೇಲೆ ಶುಕವಾಣಿಯು ರಾಜನನ್ನು ಅಡಿಗಡಿಗೆ ಓರೆಗಣ್ಣಿನಿಂದ ನೋಡುತ್ತ ತನ್ನ ವೃತ್ತಾಂತವನ್ನು ಹೇಳತೊಡಗಿ ಇಂತೆಂದಳು :—

ಇಲ್ಲಿಗೆ ನಲವತ್ತು ಮೈಲಿ ದೂರದಲ್ಲಿ ಕಳಿಂಗ ಪಟ್ಟಣವು ಇರುವದು.

ಅಲ್ಲಿ ಒಬ್ಬ ಸಾಹುಕಾರನಿದ್ದನು. ಆತನಿಗೆ ಬಹುಕಾಲದಿಂದ ಸಂತಾನವಿಲ್ಲದೆ ವೃದ್ಧಾಪ್ಯದಲ್ಲಿ ನಿರ್ಭಾಗ್ಯಳಾದ ನಾನು ಹುಟ್ಟಿದೆನು. ನನ್ನನ್ನು ಹಡದ ಮೂರನೇ ದಿನ ತಾಯಿ ಕಾಲಾಧೀನಳಾದಳು. ತಂದೆಯಾದರೋ ನನ್ನ ಆಟಪಾಟಗಳನ್ನು ನೋಡಿಕೊಂಡು ಪತ್ನೀವಿಯೋಗ ದುಃಖವನ್ನು ಮರೆತು ಈವರಿವಿಗೂ ನನ್ನನ್ನು ಬಹಳ ಪ್ರೀತಿಯಿಂದ ಸಾಕಿದನು. ಈಗ್ಯೆ ನಾಲ್ಕು ತಿಂಗಳಲ್ಲಿ ಆತನು ದೈವಾಧೀನನಾದನು. ತಂದೆಯ ಆಸ್ತಿಗೆ ಬಾಧ್ಯಸ್ಥಳಾದುದರಿಂದ ಆತನ ಕೆಲಸಕಾರ್ಯಗಳನ್ನೆಲ್ಲಾ ನಾನೇ ನೋಡಬೇಕಾಗಿ ಬಂದಿತು. ಆದುದರಿಂದ ಇಲ್ಲಿಗೆ ಸುಮಾರು ಹದಿನಾರು ಮೈಲಿ ದೂರದಲ್ಲಿರುವ ಒಂದು ಗ್ರಾಮಕ್ಕೆ ಮುಖ್ಯವಾದ ಒಂದು ಕೆಲಸಕ್ಕಾಗಿ ಹೋಗಿದ್ದೆನು. ಅಲ್ಲಿ ನನ್ನ ಸ್ನೇಹಿತರ ಮನೆಯಲ್ಲಿ ಇಳಿದು ಕೆಲಸವನ್ನು ತೀರಿಸಿಕೊಂಡು ಈ ದಿನ ಪ್ರಾತಃಕಾಲದಲ್ಲಿಯೇ ಹಿಂತಿರುಗಬೇಕೆಂದು ತಿಳಿಸಿದೆನು. ಈ ಪ್ರಾಂತ್ಯದಲ್ಲಿ ಕಿರಾತರ ಕಾಟವು ಹೆಚ್ಚಾಗಿರುವುದರಿಂದ ಪುರುಷರ ಸ್ಹೈಗಾವಲಿಲ್ಲದೆ ಸ್ತ್ರೀಯರು ಪ್ರಯಾಣಿಸುವದು ಬಹು ಅಪಾಯಕರವೆಂದು ನನ್ನ ಸ್ನೇಹಿತರು ಹೇಳಿದರು ಎಂದು ಹೇಳುವಷ್ಟರಲ್ಲಿ ರಾಜನು "ಅಹುದಹುದು! ಈ ಪ್ರಾಂತ್ಯದಲ್ಲಿ ಆ ಕರಾಳನ ಹಾವಳಿಯೇ ಮೊದಲಾದ್ದನ್ನು ಕೇಳಿರುವೆನು. ಅಡುಗೂಲಜ್ಜಿಯರೂ ಮುದುಕಿಯರೂ, ಅಳುವ ಮಕ್ಕಳನ್ನು ಸಮಾಧಾನಪಡಿಸುವುದಕ್ಕಾಗಿ ಹೇಳುತ್ತಿದ್ದ ಕಟ್ಟುಕಥೆಗಳೆಂದು ತಿಳಿದಿದ್ದೆನು. ಆದರೆ ಹಿಂದೆ ಮಾರ್ಗದಲ್ಲಿ ನಮಗೆ ಸಂಭವಿಸಿದ ಕಿರಾತರ ಕಾಟದಿಂದ ಅವನ ಇರವು ನಿಶ್ಚಯವೆಂದು ತಿಳಿಯಬಂದಿತು" ಎಂದು ತನಗೂ ಕಿರಾತರಿಗೂ ನಡೆದ ಜಗಳವನ್ನು ವಿಸ್ತರಿಸಿ ಹೇಳಿದನು.

ಶುಕವಾಣಿಯು ಕರಾಳನ ವಿಷಯವನ್ನು ಹೇಳುತ್ತಿರುವಾಗ ಸ್ವಭಾವಜನ್ಯವಲ್ಲದ ಭೀತಿಯನ್ನೂ ರಾಜನ ಜಯವನ್ನೂ ವಿಸ್ತರಿಸುತ್ತಿರುವಲ್ಲಿ ರಾಜನನ್ನು ಓರೆಗಣ್ಣಿನಿಂದ ನೋಡಿ, ಸಂತೋಷಾಶ್ಚರ್ಯ ಸೂಚಕಗಳಾದ ಮುಖಚಿನ್ಹೆಗಳನ್ನು ಅಭಿನಯಿಸಿದಳು. ಇವೇ ಮೊದಲಾದ ಶೃಂಗಾರ ಚೇಷ್ಟೆಗಳಿಂದ ರಾಜನಲ್ಲಿ ಅಂಕುರಿಸಿದ್ದ ಆಶೆಯು ಅಭಿವೃದ್ಧಿಯಾಗುತ್ತಾ ಬಂದಿತು. ಶುಕವಾಣಿಯೊಡನೆ ಮಾತು ಬೆಳೆಸಲು ರಾಜನು ಅವಳನ್ನು ಕುರಿತು "ಎಲೈ ಮೋಹನಾಂಗಿಯೇ, ನೀನು ಹಿಂತಿರುಗುವಲ್ಲಿ ಈ ಪ್ರಾಂತ್ಯವು

ಅಪಾಯಕರವೆಂದು ತಿಳಿದಿದ್ದರೂ ವೈಗಾವಲಿಲ್ಲದೆ ಬರುವದಕ್ಕೆ ಕಾರಣವೇನು? ಅಶ್ವಾರೂಢರ್ಯಾರೂ ದೊರಕಲಿಲ್ಲವೊ ?" ಎಂದು ಕೇಳಲು ಶುಕವಾಣಿಯು "ದೊರಕಿದರು. ಕೆಲವು ಮಂದಿ ಅಶ್ವಾರೂಢರನ್ನು ವೈಗಾವಲಿಗಾಗಿ ನೇಮಿಸಿದೆನು. ಅವರು ತಮಗೆ ಬೇಕಾದ ಸಾಮುಗ್ರಿಯಗಳನ್ನು ಸಿದ್ಧಪಡಿಸಿ ಕೊಳ್ಳುತ್ತಿದ್ದರು. ಈ ದಿನ ಪ್ರಾತಃಕಾಲದಲ್ಲಿ ಬೀಸುತ್ತಿದ್ದ ಘಾಳಿಯು ಬಹು ಸುಖಕರವಾಗಿತ್ತು. ಈ ಪ್ರಾಂತ್ಯದಲ್ಲಿನ ನಾಡಿನೈಶ್ವರ್ಯವನ್ನು ನೋಡಬೇಕೆಂಬ ಲವಲವಿಕೆಯು ಒಂದು ಇತ್ತು. ಆದುದರಿಂದ ದಾದಿಯರೊಡಗೂಡಿ, ಅಶ್ವಾರೂಢಳಾಗಿ ಮುಂದಾಗಿಯೇ ಹೊರಟು ವೈಗಾವಲಿನವರನ್ನು ಹಿಂದೆ ಬರುವಂತೆ ನೇಮಿಸಿ, ಅವರಿಗಾಗಿ ಈ ತೊರೆಯ ಸಮೀಪದಲ್ಲಿ ಕಾದುಕೊಂಡಿರುವೆನೆಂದು ಹೇಳಿಬಂದೆನು. ಮಧ್ಯಾಹ್ನವಾದರೂ ಅವರು ಬರಲಿಲ್ಲವಲ್ಲಾ! ಮುಂದೇನು ಅಪಾಯ ಸಂಭವಿಸುವದೋ ಎಂದು ಹಲವು ತೆರನಾಗಿ ಯೋಚಿಸುತ್ತಿದ್ದೆನು. ಅಷ್ಟರಲ್ಲಿಯೇ ತಮ್ಮ ಆಗಮನವಾಯಿತು" ಎಂದು ಹೇಳಿದಳು. ಅದಕ್ಕೆ ರಾಜನು "ನಾವು ಕಳಿಂಗಪಟ್ಟಣಕ್ಕೇ ಹೋಗುವವರು. ಅಶ್ವಾರೂಢರಾದ ವೈಗಾವಲಿನವರಂತೆ ಅಂಗರಕ್ಷಕರಾಗಿರುವೆವು. ನಿನಗೆ ಒಪ್ಪಿತವಾದರೆ ನಮ್ಮ ಸಂಗಡಲೇ ನೀನು ಬರಬಹುದು" ಎಂದು ತಿಳಿಸಲು ಶುಕವಾಣಿಯು "ಮಹನೀಯರಾದ ನಿಮ್ಮ ಮಾತುಗಳನ್ನು ಉಲ್ಲಂಘಿಸುವಳಲ್ಲ. ನೀವು ಅಪೇಕ್ಷಿಸಿದಂತೆ ನಿಮ್ಮ ಸಂಗಡಲೇ ಬರುವೆನು. ಮಾರ್ಗಾಯಾಸದಿಂದ ಬಹು ಬಳಲಿಕೆಗೊಂಡಿರುವಂತೆ ಕಾಣುವದು. ನಾನು ಮಾಡುವ ಆತಿಥಿ ಸತ್ಕಾರವನ್ನು ಕೈಕೊಳ್ಳಬೇಕು" ಎಂದು ಅವರನ್ನು ಡೇರೆಗೆ ಕರೆದುಕೊಂಡು ಹೋಗಿ ದಾದಿಯರನ್ನೆಬ್ಬಿಸಿ ತಾನೇ ನಿಂತುಕೊಂಡು ರಾಜನಿಗೂ ಸೈನ್ಯಾಧಿಪತಿಗಳಿಗೂ ಊಟಉಪಚಾರಗಳನ್ನು ಮಾಡಿಸಿ ಪಚ್ಚಕರ್ಪೂರ ವೀಳ್ಯವನ್ನಿತ್ತು ತಾನು ಭೋಜನಮಾಡಿ ತಾಂಬೂಲವನ್ನು ಕೈಕೊಂಡು ರಾಜನೊಡನೆ ವಿನೋದವಾಗಿ ಸ್ವಲ್ಪಹೊತ್ತು ಮಾತನಾಡುತ್ತಿದ್ದಳು.

ದಾದಿಯರು ಡೇರೆಯನ್ನು ಕಿತ್ತು ಸಾಮುಗ್ರಿಯಗಳನ್ನೆಲ್ಲಾ ಗಂಟುಕಟ್ಟಿ ಕುದುರೆಗಳ ಮೇಲೆ ಹೊರಿಸಿ ಕುದುರೆಗಳನ್ನು ಹತ್ತಿ ಸಿದ್ಧರಾಗಿ ಒಡತಿಯ ಅಪ್ಪಣೆಯನ್ನು ಕಾಯುತ್ತಿದ್ದರು.

ಶುಕವಾಣಿಯು ಆ ಮೂವರು ಪುರುಷರು ಅಶ್ವಾರೂಢರಾಗಿ

ಪ್ರಯಾಣವನ್ನು ಬೆಳಸಿ ದೊಡ್ಡ ಮಾರ್ಗವನ್ನು ಸೇರಿ ಹೋಗುತ್ತಿದ್ದರು. ಸುಮಾರು ಅರ್ಧಮೈಲಿ ದೂರ ಹೋಗಲು ಶುಕವಾಣಿಯು ಮಾರ್ಗದ ಬಲಪಾರ್ಶ್ವದಲ್ಲಿರುವ ಮೈಲಿ ಕಲ್ಲಿನ ಪಕ್ಕದಲ್ಲಿ ಒಡೆಯುವ ಸಣ್ಣ ಮಾರ್ಗವನ್ನು ಕಂಡು ಆ ಕಡೆಗೆ ಎಲ್ಲರನ್ನು ತಿರುಗುವಂತೆ ಹೇಳಲು ರಾಜನು "ಇದೇನು? ಅಂತಹ ದೊಡ್ಡ ಪಟ್ಟಣಕ್ಕೆ ಈ ಸಣ್ಣ ಮಾರ್ಗವು ಹೋಗುವದೇ? ಹಾಗಿರಲಾರದು" ಎಂದು ಹೇಳಿದನು. ಅದಕ್ಕೆ ಶುಕವಾಣಿಯು "ಹಾಗಲ್ಲ, ಈ ಸಣ್ಣ ಮಾರ್ಗವನ್ನೇ ಅನುಸರಿಸಿ ಹೋದರೆ ಮೂರು ಮೈಲಿ ದೂರದಲ್ಲಿ ಕಳಿಂಗಪಟ್ಟಣಕ್ಕೆ ಹೋಗುವ ದೊಡ್ಡ ಮಾರ್ಗವು ಕಾಣಿಸುವುದು" ಎಂದು ತಿಳಿಸಲು ರಾಜನು "ಹಾಗಾದರೆ, ಈ ದೊಡ್ಡ ಮಾರ್ಗವು ಎಲ್ಲಿಗೆ ಹೋಗುವುದು?" ಎಂದು ಕೇಳಿದನು. ಅದಕ್ಕೆ ಶುಕವಾಣಿಯು "ಚಂದ್ರ ದ್ರೋಣ ಪರ್ವತದ ತಪ್ಪಲನ್ನು ಅನುಸರಿಸಿ ಮಹಬಲಿಪುರಕ್ಕೆ ಹೋಗುವದು" ಎಂದು ಉತ್ತರವನ್ನು ಕೊಟ್ಟಳು.

ಬಳಿಕ ಎಲ್ಲರು ಸಣ್ಣ ಮಾರ್ಗವನ್ನು ಹಿಡಿದು ಹೊರಟರು. ಆ ಮಾರ್ಗವು ಬಹಳ ಇಕ್ಕಟ್ಟಾಗಿತ್ತು. ಆದುದರಿಂದ ಇಬ್ಬಿಬ್ಬರು ಏಕವಾಗಿ ಹೋಗಬೇಕಾಯಿತು. ಮುಂಗಡೆಯಲ್ಲಿ ಪ್ರತಾಪಕಂಠೀರವನು ಶುಕವಾಣಿಯು ಮಧ್ಯದಲ್ಲಿ ಎರಡನೇ ಸೈನ್ಯಾಧಿಪತಿಯು ದಾದಿಯರಲೊಬ್ಬಳು, ಹಿಂಭಾಗ ದಲ್ಲಿ ಮೊದಲನೇ ಸೈನ್ಯಾಧಿಪತಿಯು ಮತ್ತೊಬ್ಬ ದಾದಿಯು, ಈ ಪ್ರಕಾರ ವಾಗಿ ಹೋಗುತ್ತಿದ್ದರು. ರಾಜನು ಒಂದು ಹೆಣ್ಣು ಜಿಂಕೆಯನ್ನು ನೋಡಿ ಪಕ್ಕದಲ್ಲಿ ಬರುತ್ತಿದ್ದ ಶುಕವಾಣಿಯನ್ನು ಕುರಿತು "ಅದೋ ನೋಡು ಆ ಪೊದರಿನಲ್ಲಿದ್ದ ಹೆಣ್ಣು ಜಿಂಕೆಯು ನಮ್ಮ ಕುದುರೆಗಳ ಖುರಪುಟಧ್ವನಿಯಿಂದ ಭಯಪಟ್ಟು ಓಡಿಹೋಗುವದು" ಎಂದು ತೋರಿಸಲು ಶುಕವಾಣಿಯು 'ಆಕಡೆ ಪೊದರಿಂದ ಬರುತ್ತಿರುವ ತನ್ನ ಪ್ರಿಯನನ್ನು ನೋಡಿ ಅದನ್ನು ಶೀಘ್ರವಾಗಿ ಸೇರಬೇಕೆಂಬ ಆತುರದಿಂದ ಓಡಿಹೋಗುತ್ತಿರುವದಲ್ಲದೆ ನಮ್ಮ ಕುದುರೆಗಳ ಖುರಪುಟಧ್ವನಿಯಿಂದ ಆ ಹೆಣ್ಣು ಜಿಂಕೆಯು ಭಯಪಟ್ಟು ಆ ರೀತಿ ಓಡುವದಿಲ್ಲ' ಎಂದು ತೋರಿಸಿ ಹೇಳಿದಳು. ಮುಂದೆ ಸ್ವಲ್ಪದೂರ ಹೋಗಲು ರಾಜನು "ಈ ಕಡೆ ನೋಡು! ಆ ಸಾರಂಗದಂಪತಿಗಳು ಹೆಣ್ಣು ಯಾವ ಕಡೆ ತಿರುಗುವದೊ ಗಂಡು ಆ ಕಡೆಗೆ ತಿರುಗುವುದು ನೋಡಿದೆಯಾ!

ಅವು ಎಷ್ಟು ಉಲ್ಲಾಸವಾಗಿ ವಿನೋದಚೇಷ್ಟೆಗಳಿಂದ ಅಭಿನಂದಿಸುತ್ತಿರುವವು" ಎಂದು ತಿಳಿಸಲು ಶುಕವಾಣಿಯು 'ಇಂಥಾ ಪ್ರಾಣಿಗಳೇ ಇಷ್ಟು ಸಂತೋಷವನ್ನು ಪಡೆದಿರುವಲ್ಲಿ' ಎಂದು ಸ್ವಲ್ಪ ನಿಟ್ಟುಸುರನ್ನು ಬಿಟ್ಟು ಅರ್ಥೋಕ್ತಿಯಿಂದ "ಪ್ರಾಣಿಗಳಲ್ಲೆಲ್ಲಾ ಶ್ರೇಷ್ಠತೆಯನ್ನು ಹೊಂದಿರುವ ಮನುಷ್ಯರು ತಮ್ಮ ಪ್ರಿಯಜನರನ್ನು ಸೇರಿ ಇನ್ನೆಷ್ಟು ಸುಖಸಾಮ್ರಾಜ್ಯವನ್ನನುಭವಿಸುವರೋ" ಎಂದು ಹೇಳಿದಳು.

ಇದೇ ಪ್ರಕಾರವಾಗಿ ಶೃಂಗಾರವಾದ ಮಾತು ಕಥೆಗಳನ್ನಾಡುತ್ತ ಅವರಿಬ್ಬರೂ ಹೋಗುತ್ತಿದ್ದರು.

ಮಧ್ಯದಲ್ಲಿ ಬರುತ್ತಿದ್ದ ಎರಡನೇ ಸೈನ್ಯಾಧಿಪತಿಗೆ ವೀರಬಾಹುವೆಂದು ಹೆಸರು. ಅವನಿಗೆ ೩೦ ವರುಷ ವಯಸ್ಸು. ಸಂಭಾಷಣೆಯಲ್ಲಿ ಬಹು ಚತುರನು ತನ್ನ ಪದವಿಗೆ ತಕ್ಕ ಗುಣಾತಿಶಯಗಳುಳ್ಳವನಾಗಿದ್ದನು. ಅವನು ಜೊತೆಯಲ್ಲಿ ಬರುತ್ತಿರುವ ದಾದಿಯೊಡನೆ ವಿನೋದವಾಗಿ ಮಾತನಾಡಿಕೊಂಡು ನಾಡಿನೈಶ್ವರ್ಯವನ್ನು ವರ್ಣಿಸಿ ಹೇಳುತ್ತಾ ಹೋಗುತ್ತಿದ್ದನು.

ಹಿಂಭಾಗದಲ್ಲಾದರೋ ೪೫ ವರುಷ ವಯಸ್ಸುಳ್ಳವನಾಗಿಯೂ, ಧೈರ್ಯ ಸ್ಥೈರ್ಯ, ಗಾಂಭೀರ್ಯ ಮೊದಲಾದ ಗುಣಾತಿಶಯಗಳನ್ನುಳ್ಳವನಾಗಿಯೂ, ಯುದ್ಧಶಾಸ್ತ್ರ ಪ್ರವೀಣನಾಗಿಯೂ, ಅಸಹಾಯಶೂರನಾಗಿಯೂ, ಯುದ್ಧ ಮಾಡುತ್ತಿರುವಲ್ಲಿ ಕ್ಷಣೇಕ್ಷಣೇ ಹೆಚ್ಚುತ್ತಿರುವ ಬಾಹುಬಲವುಳ್ಳವನಾಗಿಯೂ, ಶತ್ರುಗಳ ಹುಳುಕನ್ನು ಕಂಡುಹಿಡಿಯುವುದರಲ್ಲಿ ನಿಸ್ಸೀಮನಾಗಿಯೂ, ಪರರ ಇಂಗಿತವನ್ನು ತಿಳಿಯುವುದರಲ್ಲಿ ಅತಿ ವಿಚಕ್ಷಣನಾಗಿಯೂ ಹೆಸರುಪಡೆದ ಮೊದಲನೇ ಸೈನ್ಯಾಧಿಪತಿಯಾದ ಸಿಂಹಬಲನು ಪಕ್ಕದಲ್ಲಿ ಬರುತ್ತಿರುವ ದಾದಿಯೊಡನೆ ಮಾತನಾಡದೆ ಮನಸ್ಸಿನಲ್ಲಿ "ನಾವು ಪಟ್ಟಣದಿಂದ ಹೊರಟು ಬಂದ ಲಾಗಾಯಿತು ಈವರಿವಿಗೂ ಸಂಭವಿಸಿರುವ ವಿಷಯಗಳನ್ನು ಯೋಚಿಸಿದರೆ ನಮ್ಮಮೇಲೆ ಏನೋ ಕೃತ್ರಿಮವು ನಡೆಯುತ್ತಿರುವುದೆಂದು ತೋರುವುದು. ಕಿರಾತರ ಜಗಳವಾದಮೇಲೆ ಅವರ ವಿಷಯವಾಗಿ ನಾವು ಯೋಚಿಸಿದೆವು. ಅವರು ನಮ್ಮ ವಸ್ತುಗಳನ್ನು ಅಪಹರಿಸುವುದಕ್ಕೆ ಬಂದವರಾಗಿದ್ದರೆ ತಮ್ಮತಮ್ಮ ಸಂಕೇತಸ್ಥಾನಗಳಿಂದಲೇ ಬಾಣಗಳನ್ನು ಪ್ರಯೋಗಿಸಿ ನಮ್ಮನ್ನು ಸಂಹರಿಸುತ್ತಿದ್ದರು. ಆರೀತಿ ಆಚರಿಸದೆ ನಮ್ಮೆಲ್ಲರನ್ನು ಮುತ್ತಿಕೊಂಡು

ಜಗಳ ಮಾಡಿದರು. ಆದುದರಿಂದ ಅವರು ನಮ್ಮನ್ನು ಸೆರೆಯಾಗಿ ಹಿಡಿದು ಕೊಂಡು ಹೋಗಬೇಕೆಂಬ ಉದ್ದಿಶ್ಯವಾಗಿ ಹಾಗೆ ಮಾಡಿದರೆಂದು ತಿಳಿಯು ಬಂತು. ದಾರಿ ತೋರಿಸಿದ ಕುರುಬನ ಮುಖಚೇಷ್ಟೆಗಳಿಂದ ಅವನು ಕೃತ್ರಿಮವನ್ನು ಯೋಚಿಸಿರಬೇಕೆಂದು ರಾಜನಿಗೆ ನಾನು ಹೇಳಿದೆನು. ಆ ಬಡಪಾಯಿಯು ನಮ್ಮಮೇಲೆ ಕೃತ್ರಿಮವನ್ನು ಯೋಚಿಸಿ ಯಾವ ಪ್ರಯೋಜನ ವನ್ನು ಹೊಂದುವನು ಎಂದು ರಾಜನು ಗಮನಿಸಲಿಲ್ಲ. ಎಂದಿಗೂ ಹಾಗಿರ ಲಾರದು ಎಂದು ನಾನು ಹೇಳಿದ ಕಾರಣಗಳನ್ನು ಉದಾಸೀನಮಾಡಿಬಿಟ್ಟನು. ತೊರೆಯ ದಡದಲ್ಲಿ ಈ ಸ್ತ್ರೀಯಳು ಅಭಿನಯಿಸಿದ ಹಾವಭಾವ ವಿಲಾಸಾದಿ ಗಳು ಕಪಟ ನಟನೆಗಳಾಗಿರುವವು. ಯಾವುದೊಂದೂ ಅಭ್ಯಂತರವಿಲ್ಲದೆ ನಮ್ಮ ಸಂಗಡಲೇ ಕಳಿಂಗಪಟ್ಟಣಕ್ಕೆ ಬರಲು ಒಪ್ಪಿಕೊಂಡಳು. ಇವಳು ನನುಗೆ ಕೃತ್ರಿಮವನ್ನು ಮಾಡುವಳೆಂದು ತೋರುವುದು. ಈ ಸಮಯದಲ್ಲಿ ಇದನ್ನೆಲ್ಲಾ ರಾಜನಿಗೆ ತಿಳಿಸೋಣವೆಂದರೆ ಆಲಿಸಿ ಕೇಳಲಾರನು. ನನ್ನ ಮಾತುಗಳೆಲ್ಲಾ ಎಮ್ಮೆಯಮೇಲೆ ಮಳೆ ಬಿದ್ದಂತೆ ಪರಿಣಮಿಸುವವು. ಇದಲ್ಲದೆ ಇವಳು ಬಹು ಚಮತ್ಕಾರಿಯಾಗಿರುವಳು. ಒಂದುವೇಳೆ ರಾಜನನ್ನು ನನ್ನ ಮೇಲೆಯೆ ತಿರುಗಿಬೀಳುವಂತೆ ಮಾಡಿಯಾಳು. ತಿಳಿಸಿದರೆ ಈ ಅನರ್ಥಗಳೆಲ್ಲ ಸಂಭವಿಸುವವು. ತಿಳಿಸದಿದ್ದರೆ ಮೋಸ ಸಂಭವಿಸಬಹುದು. ಉಭಯ ಸಂಕಟ ಪ್ರಾಪ್ತವಾಯಿತಲ್ಲಾ! ಇರಲಿ ರಾಜನ ಉಪ್ಪು ತಿಂದು ಬದುಕಿರು ವುದರಿಂದ ಮುಂದೆ ಬರಬಹುದಾದ ಅಪಾಯಗಳಿಗೆಲ್ಲಾ ಕೈಲಾದಮಟ್ಟಿಗೂ ಪ್ರತಿಕ್ರಿಯೆಯನ್ನು ಮಾಡುವೆನು' ಎಂದು ಮನಸ್ಸಿನಲ್ಲೇ ಚಿಂತಿಸುತ್ತಾ ಹೋಗುತ್ತಿದ್ದನು.

ಸುಮಾರು ನಾಲ್ಕು ಘಂಟೆ ಸಮಯಕ್ಕೆ ಸರಿಯಾಗಿ ಅವರೆಲ್ಲರೂ ನಾಲ್ಕು ಮಾರ್ಗಗಳು ಕೂಡುವ ಸ್ಥಳವನ್ನು ಸೇರಿದರು. ಅಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಒಂದು ಅಂಗಡಿಮನೆಯು ಅದರ ಪಕ್ಕದಲ್ಲಿ ಬೆಂದ ಹುರುಳಿ ಯನ್ನು ಮಾರುವ ಒಂದು ಕುದುರೆಲಾಯವು ಇದ್ದವು. ಶುಕವಾಣಿಯೇ ಮೊದಲಾದವರು ತಮ್ಮ ತಮ್ಮ ಕುದುರೆಗಳಿಂದ ಇಳಿದು ಅವುಗಳಿಗೆ ಹುರುಳಿ ತಿನ್ನಿಸುವಂತೆ ಅಲ್ಲಿರುವ ಲಾಯದ ಅಧಿಕಾರಿಗೆ ಹೇಳಿ ಅಂಗಡಿ ಮನೆಯನ್ನು ಹೊಕ್ಕು ಫಲಾಹಾರಮಾಡುತ್ತಿದ್ದರು. ಸಿಂಹಬಲನು ಒಂದೆರಡು ರಸಬಾಳೆ

ಹಣ್ಣುಗಳನ್ನು ತೆಗೆದುಕೊಂಡು ತಿನ್ನುತ್ತಾ ಹೊರಗೆ ಬಂದು ಕುದುರೆಗಳಿಗೆ ಸರಿಯಾಗಿ ಹುರುಳಿ ತಿನ್ನಿಸುವರೋ ಇಲ್ಲವೋ ನೋಡೋಣವೆಂದು ಅಶ್ವ ಶಾಲೆಯನ್ನು ಹೊಕ್ಕು ಒಂದು ಮೂಲೆಯಲ್ಲಿ ನಿಂತು ನೋಡುತ್ತಿದ್ದನು. ಆ ಸಮಯದಲ್ಲಿ ಶುಕವಾಣಿಯ ಕುದುರೆಗೆ ಹುರುಳಿಯನ್ನು ತಿನ್ನಿಸುತ್ತಿದ್ದ ಸೇವಕನು ಅದರ ಮೈಯನ್ನು ಸವರಿನೋಡುತ್ತಾ ಅದರ ತೊಡೆಯ ಮೇಲ್ಭಾಗ ದಲ್ಲಿದ್ದ ಬರೆಯನ್ನು ನೋಡಿ ಭಯಪಟ್ಟು ನಿಂತಲ್ಲಿಯೇ ನಿಂತನು. ಇದನ್ನೆಲ್ಲಾ ನೋಡುತ್ತಿದ್ದ ಸಿಂಹಬಲನು ಅವನನ್ನು ಹೊರಗೆ ಕರೆದುಕೊಂಡು ಹೋಗಿ "ಸಮಾಚಾರವೇನು?" ಎಂದು ಕೇಳಲು, ಆ ಸೇವಕನು ಮೌನವನ್ನು ಧರಿಸಿ ಸುಮ್ಮನಿದ್ದನು. "ಇದಕ್ಕೆ ಈ ರೀತಿಯಾಗಿ ಮಾಡಬೇಕು" ಎಂದು ಸಿಂಹಬಲನು ೫ ವರಹಗಳನ್ನು ಆ ಸೇವಕನಿಗೆ ಕೊಟ್ಟು ನಯವಾದ ಮಾತು ಗಳನ್ನಾಡಿ ಸಂಗತಿಯನ್ನೆಲ್ಲಾ ತಿಳಿದುಕೊಂಡನು. ಅಷ್ಟರಲ್ಲಿ ಪ್ರತಾಪಕಂಠೀ ರವನು ಫಲಾಹಾರದ ಕ್ರಿಯವನ್ನು ಕೊಟ್ಟನಂತರ ಎಲ್ಲರೂ ಸಿದ್ಧರಾಗಿ ತಮ್ಮ ಕುದುರೆಗಳನ್ನೇರಿ ಕಳಿಂಗಪಟ್ಟಣದ ಮಾರ್ಗವನ್ನು ಹಿಡಿದು ಹೊರಟರು.

ರಾಜನು ಶುಕವಾಣಿಯು ವಿನೋದವಾಗಿ ಮಾತನಾಡುತ್ತಾ ನೂರಾರು ಗಜಗಳ ಮುಂದಾಗಿಯೇ ಹೋಗುತ್ತಿದ್ದರು. ಆಗ ಶುಕವಾಣಿಯು ರಾಜ ನನ್ನು ಕುರಿತು 'ಈ ಯವ್ವನಕಾಲದಲ್ಲಿಯೂ ನನ್ನನ್ನು ಈ ಕಷ್ಟಕ್ಕೆ ಗುರಿ ಮಾಡಿರುವ ದೈವವನ್ನು ಎಷ್ಟು ನಿಂದಿಸಿದರೂ ಸಾಲದಿರುವದು' ಎಂದು ಹೇಳಲು ರಾಜನು "ಅಂಥಾ ಕಷ್ಟವೇನು ನಿನಗೆ ಸಂಭವಿಸಿರುವುದು?" ಎಂದು ಕೇಳಿದನು. ಅದಕ್ಕೆ ಶುಕವಾಣಿಯು "ಹೇಳುವುದರಿಂದ ಏನು ಪ್ರಯೋಜನವು! ಈ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ನಿಮ್ಮಿಂದ ಲಾಗುವುದೇ? ಇದರಿಂದ ಕೊರಗಿ ಕೊರಗಿ ನಾನೇ ಪ್ರಾಣವನ್ನು ಬಿಡಬೇ ಕಾಗಿರುವುದು" ಎಂದು ನಿಟ್ಟುಸಿರು ಬಿಟ್ಟು ಉತ್ತರಕೊಡಲು, ರಾಜನು 'ನನ್ನಿಂದಾಗತಕ್ಕ ಸಹಾಯವನ್ನು ಕೈಲಾದಮಟ್ಟಿಗೂ ಮಾಡುವೆನು. ಲೋಕದಲ್ಲಿ ಜನರು ತಮ್ಮ ಕಷ್ಟವನ್ನು ಪರರಿಗೆ ತಿಳಿಸಿದರೆ ಒಂದು ವೇಳೆ ಅವರಿಂದ ಯಾವುದೊಂದು ಸಹಾಯವೂ ದೊರೆಯದಿದ್ದರೂ ಕುಂದಕವೇನೂ ಉಂಟಾಗಲಾರದು. ಆದ್ದರಿಂದ ನಿನ್ನ ಸಂಕಟವನ್ನು ನನ್ನಲ್ಲಿ ತಿಳಿಸುವುದ ರಿಂದ ಯಾವ ಕೆಡಕೂ ಉಂಟಾಗಲಾರದು". ಎಂದು ಭರವಸೆಯನ್ನು ಕೊಟ್ಟು

ಹೇಳಿದನು. ನನ್ನ ತಂದೆಯು ನಾನು ಯುವತಿಯಾದುದನ್ನು ತಿಳಿದು ತಕ್ಕ ವರನನ್ನು ಹುಡುಕುತ್ತಲೇ ಇದ್ದನು. ಆತನು ಬದುಕಿರುವವರಿಗೂ ಅನುರೂಪನಾದ ವರನು ದೊರಿಯಲಿಲ್ಲ. ಆತನು ಗತಿಸಿದನಂತರ ಅದಕ್ಕೆ ಶುಕವಾಣಿಯು "ಹಾಗಾದರೆ ಹೇಳುವೆನು. ನನಗೆ ತಕ್ಕ ವರನನ್ನು ನಾನೇ ಹುಡುಕುತ್ತಲಿರುವೆನು" ಎಂದು ಮೃದುಮಧುರ ವಾಕ್ಕಿನಿಂದ ಅರ್ಧೋಕ್ತಿಯಲ್ಲಿ ಹೇಳಿದಳು.

ಅಷ್ಟರಲ್ಲಿಯೇ ಅವರಿಬ್ಬರು ಒಂದು ಮೈಲಿ ಕಲ್ಲನ್ನು ಸೇರಿದರು. ರಾಜನು ಆ ಕಲ್ಲಿನಲ್ಲಿರುವ ಸಂಖ್ಯೆಯನ್ನು ನೋಡಿ, "ಈ ದಿವಸ ಬಹಳ ದೂರ ಪ್ರಯಾಣ ಮಾಡಿರುವಂತೆ ತೋರುವುದು. ನಮ್ಮ ಕುದುರೆಗಳು ವಿಶೇಷವಾಗಿ ದಣಿದಿರುವುವು. ಸಾಯಂಕಾಲವಾಗುತ್ತಾ ಬಂದಿತು. ಈ ರಾತ್ರಿ ಇಳಿದುಕೊಳ್ಳುವುದಕ್ಕೆ ಹತ್ತಿರದಲ್ಲಿ ಯಾವುದಾದರೂ ಗ್ರಾಮವಿರುವುದೆ?" ಎಂದು ಶುಕವಾಣಿಯನ್ನು ಕೇಳಲು ಅವಳು "ಯಾವುದೂ ಇಲ್ಲ. ಆದರೆ ಅರ್ಧ ಮೈಲಿ ದೂರದಲ್ಲಿ ನಮ್ಮ ತಂದೆಗೆ ಪರಮ ಮಿತ್ರನಾಗಿದ್ದ ಒಬ್ಬ ಸಾಹುಕಾರನ ಭವನವು ಇರುವುದು. ಆತನು ನನ್ನನ್ನು ತನ್ನ ಮಕ್ಕಳಿಗಿಂತಲೂ ಹೆಚ್ಚಾದ ವಿಶ್ವಾಸದಿಂದ ಕಾಣುವನು. ಈಗ ಬೇಸಿಗೆಯಾದ್ದರಿಂದ ಕಳಿಂಗ ಪಟ್ಟಣದಲ್ಲಿಯೇ ಇರಬಹುದು. ಆದಾಗ್ಯೂ ಈ ಭವನದ ಉಸ್ತುವಾರಿಯಲ್ಲಿ ರಕ್ಷಕ ಆಳುಗಳು ನನ್ನ ಪರಿಚಯವನ್ನುಳ್ಳವರು. ನಾನು ಹೋದರೆ ಮನೆಯ ಯಜಮಾನಿಯಂತೆ ಕಾಣುವರು. ಆದ್ದರಿಂದ ಈ ರಾತ್ರಿ ಭವನದಲ್ಲಿ ಇಳಿದು ನಾಳೆ ಮುಂದಕ್ಕೆ ಪ್ರಯಾಣ ಮಾಡುವುದು ಚೆನ್ನಾಗಿರುವುದು" ಎಂದು ಹೇಳಲು; ರಾಜನು 'ನಿನ್ನ ಇಷ್ಟದಂತೆ ಆಗಲಿ. ನಿನಗೆ ತಕ್ಕ ವರನನ್ನು ನೀನೆ ಹುಡುಕುತ್ತಿರುವೆಯೆಂದು ಹೇಳಿದೆಯಲ್ಲಾ! ಇದರಲ್ಲಿ ನೀನು ಜಯಪ್ರದಳಾಗಿರಬಹುದು' ಎಂದು ಸೂಚಿಸಿದನು. ಅದಕ್ಕೆ ಶುಕವಾಣಿಯು 'ಅನೇಕ ಪಟ್ಟಣಗಳನ್ನು ಸುತ್ತಿ ಸುತ್ತಿ ಇದುವರಿವಿಗೂ ಶ್ರಮಪಟ್ಟರೂ ನಾನು ಬಯಸುವ ಗುಣಾತಿಶಯಗಳನ್ನುಳ್ಳ ಪುರುಷನು ದೊರಕದೆ ನನ್ನ ಯವ್ವನವು ನನ್ನನ್ನು ದಹಿಸುತ್ತಲೇ ಇರುವುದು. ಇನ್ನು ಸ್ವಲ್ಪಕಾಲದಲ್ಲಿ ವಿರಹಾಗ್ನಿಯು ನನ್ನನ್ನು ಸಂಪೂರ್ಣವಾಗಿ ಸುಟ್ಟುಬಿಡುವಂತೆ ತೋರುವುದು' ಎಂದು ನಿಟ್ಟುಸುರು ಬಿಟ್ಟು ಹೇಳಿದಳು. ನಂತರ ಶುಕವಾಣಿಯು ಗೂಢಾರ್ಥದಿಂದ ರಾಜನ ಗುಣಗಳನ್ನೇ ವರ್ಣಿಸಿ ಹೇಳುತ್ತಿದ್ದಳು.

ಅಷ್ಟು ಹೊತ್ತಿಗೆ ಸೂರ್ಯಬಿಂಬವು ಪಶ್ಚಿಮ ಘಟ್ಟಗಳ ಶಿಖರಗಳನ್ನು ಸಮೀಪಿಸುತ್ತಿತ್ತು. ಶುಕವಾಣಿಯು ರಾಜನ ವರ್ಣನೆಯನ್ನು ಮುಗಿಸುವುದಕ್ಕೆ ಸರಿಯಾಗಿ ಭವನವು ಗೋಚರವಾಯಿತು. ಭವನಪಾಲಕರು ಶುಕವಾಣಿಯನ್ನು ನೋಡಿದ ಕೂಡಲೇ ಎದುರುಗೊಳ್ಳಲು ಬರುತ್ತಿದ್ದರು. ಆ ವೇಳೆಯಲ್ಲಿ ರವಿಯ ಅರ್ಧಬಿಂಬವು ಮಾತ್ರ ಕಾಣಿಸುತ್ತಿತ್ತು. ರವಿಕಿರಣಗಳು ಮನೋಲ್ಲಾಸಕರಗಳಾಗಿದ್ದವು. ಇದೇ ಸಮಯವೆಂದು ತಿಳಿದು ಶುಕವಾಣಿಯು ರವಿಯರ್ಧಬಿಂಬವು ನೋಡುವ ನೆಪದಿಂದ ರಾಜನನ್ನೀಕ್ಷಿಸಿ ಹಸನ್ಮುಖಿಯಾದಳು. ಆ ಸಂಜೆಯ ಸೂರ್ಯಕಾಂತಿಯು ಆ ಸುಂದರಿಯ ಮುಖದಮೇಲೆ ಬಿದ್ದಿತು. ಶೃಂಗಾರರಸವು ಮೂರ್ತೀಭವಿಸಿ ಶುಕವಾಣಿಯ ರೂಪವನ್ನು ಧರಿಸಿರುವುದೋ ಎನ್ನುವಂತೆ ಅವಳ ವದನವು ಆಮಂದಾನಂದವನ್ನು ಈಯುತಿತ್ತು. ಅವಳನ್ನು ಆಗ ನೋಡಿ ರಾಜನು ತನುಪುಳಕಾಂಗಿತನಾಗಿ ಆನಂದಭರಿತನಾದನು. ಶುಕವಾಣಿಯು ತನ್ನ ಬಲೆಗೆ ರಾಜನು ಸಿಕ್ಕಿದನೆಂದು ಹಸನ್ಮುಖಿಯಾಗಿ "ಪ್ರಿಯನೇ! ಇಗೋ ಭವನಪಾಲಕರು ಬಂದರು. ನಿನ್ನ ಸೇವೆಗೈಯ್ಯಲು ಸಿದ್ಧರಾಗಿರುವರು" ಎಂದು ತನ್ನ ಭಾವವನ್ನು ಹೊರಪಡಿಸಿದಳು.

ಅಷ್ಟರಲ್ಲಿ ಭವನಪಾಲಕರು ಅಲ್ಲಿಗೆ ಬಂದರು. ಹಿಂದೆ ಬರುತ್ತಿದ್ದ ಶುಕವಾಣಿಯ ದಾದಿಯರು ಮತ್ತು ಸೈನ್ಯಾಧಿಪತಿಗಳು ಅಲ್ಲಿಗೆ ಬಂದು ಸೇರಿದರು. ಎಲ್ಲರೂ ಭವನವನ್ನು ಸೇರಿ ಕುದುರೆಯನ್ನಿಳಿದು ಒಳಗಡೆ ಹೋದರು. ಅವರವರ ಯೋಗ್ಯತಾನುಸಾರ ಬಂದವರಿಗೆ ಬಿಡಾರಗಳು ಕೊಡಿಸಿ, ಶುಕವಾಣಿಯು ರಾಜನೊಡನೆ ಆ ಭವನದ ಎರಡನೇ ಅಂತಸ್ತಿನಲ್ಲಿ ವಿಶಾಲವಾದ ಒಂದು ಕೇಳೀಗೃಹವಂ ಪೊಕ್ಕು ಅಲ್ಲಿದ್ದ ಹಂಸತೂಲಿಕಾತಲ್ಪದಮೇಲೆ ಕುಳಿತು ವಿನೋದವಾಗಿ ಮಾತನಾಡುತ್ತ ಇದ್ದರು. ಭವನಸೇವಕರು ಭಕ್ಷ್ಯಭೋಜ್ಯಾದಿಗಳೆಲ್ಲಾ ಅಣಿಮಾಡುತ್ತಿದ್ದರು. ಸಿಂಹಬಲನು ತನ್ನ ಬಿಡಾರದಲ್ಲಿ ಕುಳಿತುಕೊಂಡು ಏನನ್ನೋ ಚಿಂತಿಸುತ್ತಿದ್ದವನು ತಟಕ್ಕನೆ ಎದ್ದು ಹೊರಗೆ ಬಂದು ಎಲ್ಲಿಯೋ ಮಾಯವಾದನು. ಸ್ವಲ್ಪ ಹೊತ್ತಿನಲ್ಲಿ ಹಿಂತಿರುಗಿ ಪುನಃ ತನ್ನ ಬಿಡಾರವನ್ನು ಸೇರಿ ಯೋಚಿಸುತ್ತಿದ್ದನು.

ವೀರಬಾಹುವು ಶುಕವಾಣಿಯ ದಾದಿಯರೊಡನೆ ಮಾತನಾಡುತ್ತಿ

ದ್ದನು. ಸುಮಾರು ರಾತ್ರಿ ಒಂಭತ್ತು ಘಂಟೆಗೆ ಸರಿಯಾಗಿ ಎಲ್ಲವೂ ಸಿದ್ಧವಾಯಿತು. ಶುಕವಾಣಿಯ ಆಜ್ಞೆಯಂತೆ ರಾಜಯೋಗ್ಯವಾದ ಭಕ್ಷ್ಯಭೋಜ್ಯಾದಿಗಳು, ವಿಧವಿಧವಾದ ಸೋಮಪಾನ ದ್ರವ್ಯಗಳು, ಇಸಿದಾದ ದ್ರಾಕ್ಷಾರಸವು ಮೊದಲಾದವನ್ನು ಪರಿಚಾರಕರು ಕೇಳೀಗೃಹಕ್ಕೆ ತಂದಿರಿಸಿ, ಬಡಿಸುವುದಕ್ಕೆ ಹೋಗಲು, ಶುಕವಾಣಿಯು ಅವರನ್ನು ತಡೆದು “ ನನ್ನ ಮನೋವಲ್ಲಭನಿಗೆ ನಾನೇ ಬಡಿಸುವೆನು. ನಮ್ಮ ಊಟವು ಮುಗಿದನಂತರ ನಿಮ್ಮನ್ನು ಕರೆಯುವವರಿಗೆ ಯಾರೂ ಬರಕೂಡದು ” ಎಂದು ನೇಮಿಸಲು, ಪರಿಚಾರಕರು ಅಪ್ಪಣೆ ಎಂದು ಹೊರಟುಹೋದರು.

ಉಳಿದ ಅತಿಥಿಗಳು ಭವನದ ಹಜಾರದಲ್ಲಿ ಊಟಮಾಡಲು ಕುಳಿತುಕೊಂಡರು.

ಶುಕವಾಣಿಯು ಎರಡು ಪತ್ರಗಳಲ್ಲಿ ಭಕ್ಷ್ಯಭೋಜ್ಯಾದಿಗಳನ್ನು ಬಡಿಸಿದಳು. ಅವಳೂ ರಾಜನೂ ಕುಳಿತು ಊಟಮಾಡಿದರು. ಆಮೇಲೆ ಒಂದು ಗಿಂಡಿಯಲ್ಲಿದ್ದ ಸೋಮಪಾನವನ್ನು ಶುಕವಾಣಿಯು ಬಟ್ಟಲಿನಲ್ಲಿ ಹುಯಿದು, “ ಪ್ರಿಯನೇ ! ಈ ಪಾನವನ್ನು ಭವನಾಧಿಕಾರಿಯು ಬಹು ಶ್ರಮದಿಂದ ಮಾಡಿರುವನು. ಇದು ಆರೋಗ್ಯಕರವಾದದ್ದು. ಇದನ್ನು ಸ್ವೀಕರಿಸು ’ ಎಂದು ರಾಜನಿಗೆ ಕೊಟ್ಟು ತಾನೊಂದು ಪಾತ್ರೆಯಲ್ಲಿ ಸ್ವಲ್ಪ ಹುಯಿದುಕೊಂಡು ಪಾನಮಾಡಿದಳು.

ಇದೇ ರೀತಿಯಾಗಿ ಅಲ್ಲಿ ತಂದಿರಿಸಿದ್ದ ಪಾನೀಯಗಳನ್ನೆಲ್ಲಾ ರಾಜನಿಗೆ ಕುಡಿಸಿ, ತಾನು ಮಾತ್ರ ಒಂದೊಂದು ಪಾತ್ರೆಯಲ್ಲಿ ಸ್ವಲ್ಪಸ್ವಲ್ಪವಾಗಿ ಪಾನ ಮಾಡಿದಳು. ರಾಜನಿಗೆ ಬುದ್ಧಿಶೂನ್ಯವಾಗಿ ಪ್ರಜ್ಞೆಯು ತಪ್ಪುತ್ತಾಬಂದಿತು. ಆ ವೇಳೆಯಲ್ಲಿ ರಾಜನ ಬಲಪಾರ್ಶ್ವದಲ್ಲಿ ನಡುವಿಗೆ ಸಿಕ್ಕಿಸಿದ್ದ ಖಡ್ಗವನ್ನು ನೋಡಿ ಶುಕವಾಣಿಯು ಅವನ ಹತ್ತಿರಕ್ಕೆ ಹೋಗಿ ‘ ಈ ಖಡ್ಗವು ನನ್ನ ರಮಣನ ಪಾರ್ಶ್ವದಲ್ಲಿ ಚೆನ್ನಾಗಿ ಶೋಭಿಸುವುದು. ಇದಲ್ಲವೇ ನನ್ನ ಪತಿಯ ಕಷ್ಟನಿವಾರಣೆಗೊಳಿಸುವಂಥಾದ್ದು ! ಇದಲ್ಲವೇ ನನ್ನ ವಲ್ಲಭನ ಶೌರ್ಯವನ್ನು ತೋರಿಸುವಂಥಾದ್ದು ! ’ ಎಂದು ಖಡ್ಗವನ್ನು ವರ್ಣಿಸುತ್ತಾ ಎಳೆಮಕ್ಕಳು ಗೊಂಬೆಯಾಟವಾಡುವಂತೆ ಅದರೊಡನೆ ಸ್ವಲ್ಪಹೊತ್ತು ಆಟ ವಾಡುತ್ತಿರುವಂತೆ ಇದ್ದು, ಎದ್ದುಬಂದು ರಾಜನ ಎದುರಿನಲ್ಲಿದ್ದ ಸುಖಾಸನದ

ಮೇಲೆ ಕುಳಿತು ಹತ್ತಿರದಲ್ಲಿದ್ದ ದ್ರಾಕ್ಷಾರಸದ ಬಟ್ಟಲನ್ನು ಕೈಯಲ್ಲಿ ತೆಗೆದು ಕೊಂಡು 'ಕಾಂತನೇ, ಇದು ಮನೋಲ್ಲಾಸಗೊಳಿಸುವಂಥಾದ್ದು. ಇದನ್ನು ತೆಗೆದುಕೋ' ಎಂದು ಬಟ್ಟಲನ್ನು ಕೊಟ್ಟಳು. ರಾಜನು ಅದರಲ್ಲಿದ್ದ ದ್ರಾಕ್ಷಾರಸವನ್ನು ಕುಡಿದು, ಬಟ್ಟಲನ್ನು ಕೆಳಗಿಡುವುದಕ್ಕೆ ಸರಿಯಾಗಿ ಆ ಕೇಳೀಗೃಹದ ಬಾಗಿಲು ತೆರೆಯಲ್ಪಟ್ಟು ಓರ್ವ ಪುರುಷನು ಪ್ರವೇಶಿಸಿದನು.

ಶುಕವಾಣಿಯು ಘಾಬರಿಯಾಗಿ ಸುಖಾಸನದ ಒಕ್ಕಡೆಗೆ ಒರಗಿದಳು. ಆ ಕಾಂತಾಮಣಿಯೂ ರಾಜನೂ ವಿನೋದವಾಗಿದ್ದ ಕಾಲದಲ್ಲಿ ಅಪ್ಪಣೆ ಯಿಲ್ಲದೆ ಪ್ರವೇಶಿಸಿದನೆಂದು ಅವನನ್ನು ಆಕ್ಷೇಪಿಸುವುದಕ್ಕೋ, ಅಥವಾ ಹೊಡೆಯಲೋಸುಗವೊ, ತನಗೇನಾದರೂ ಕ್ಷೇಮವನ್ನೊಸಗುವುದಕ್ಕೆ ಬಂದ ನೆಂದು ಅವನನ್ನು ಎದುರುಗೊಳ್ಳುವುದಕ್ಕೊ, ಮತ್ತೆ ಯಾವ ಕಾರಣ ದಿಂದಲೋ ರಾಜನು ಎದ್ದುನಿಂತು ತಡವರಿಸಿ ಬೀಳುವಂತಿದ್ದನು.

ಕೂಡಲೇ ಬಂದ ಮನುಷ್ಯನು ಹಸ್ತಲಾಘವವನ್ನಿತ್ತು ಏನೊಂದನ್ನೂ ಮಾತನಾಡದೆ ರಾಜನನ್ನು ಹೊರಗೆ ಕರೆದುಕೊಂಡು ಹೋಗಿ ಮೆಟ್ಟಿಲುಗಳನ್ನು ಹತ್ತಿಸಿ ಆ ಭವನದ ಮೇಲ್ಗಡೆ ಅಂತಸ್ತಿನಲ್ಲಿದ್ದ ಶಯನಗೃಹದಲ್ಲಿ ಮಲಗಿಸಿ, ತನ್ನ ವಸ್ತ್ರವನ್ನು ನೀರಿನಲ್ಲಿ ನೆನೆಸಿಕೊಂಡು ಬಂದು ರಾಜನ ತಲೆಯಮೇಲೆ ಒತ್ತುತ್ತಾ "ಮಹಾರಾಜನೇ ಏಳು! ಅಪಾಯ ಸಂಭವಿಸಿರುವದು ಏಳು!" ಎಂದು ಉಪಚರಿಸುತ್ತಿದ್ದನು. ರಾಜನಿಗೆ ಸ್ವಲ್ಪ ಹೊತ್ತಿನಲ್ಲಿ ಪ್ರಜ್ಞಾಬಲವು ಸ್ವಲ್ಪಸ್ವಲ್ಪವಾಗಿ ಬರುತ್ತಿರಲು ಕಣ್ಣುಬಿಟ್ಟು ನೋಡಿ 'ಇದೇನು? ಈತನು ಸಿಂಹಬಲನೇ, ಇದು ಯಾವ ಗೃಹವು? ಶುಕವಾಣಿಯು ಎಲ್ಲಿರುವಳು?" ಎಂದು ಕೇಳುತ್ತಾ ಏಳಲಾರದೆ ಮಲಗಿಕೊಂಡೇ ತಡವರಿಸಿ ಮಾತನಾಡಿದನು. ಮತ್ತೂ ಒಂದುಸಲ ಸಿಂಹಬಲನು ವಸ್ತ್ರವನ್ನು ನೀರಿನಲ್ಲಿ ನೆನಸಿಕೊಂಡು ಬಂದು ರಾಜನ ತಲೆಯಮೇಲೆ ಒತ್ತಿ "ಮಹಾರಾಜನೆ ಏಳು ಏಳು! ಕೃತ್ರಿಮವು ನಡೆದಿರುವುದು, ಅಪಾಯ ಸಂಭವಿಸುವುದು ಏಳು!" ಎನ್ನಲು ರಾಜನು ತಟಕ್ಕನೆದ್ದು "ಅಪಾಯವೆ! ಹಾಗಂದರೇನು? ವೀರಬಾಹುವೆಲ್ಲಿ?" ಎಂದು ಕೇಳಿದನು.

ಅಷ್ಟರಲ್ಲಿಯೇ ವೀರಬಾಹುವು ಕೈಯಲ್ಲಿ ಲಾಂದ್ರವನ್ನು ಹಿಡಿದು

ಕೊಂಡು ಪ್ರವೇಶಿಸಿದನು. ಈ ಮಧ್ಯದಲ್ಲಿ ರಾಜನ ಕೈಯು ಅಕಸ್ಮಾತಾಗಿ ಅವನ ಖಡ್ಗದ ಹಿಡಿಯನ್ನು ತಗಲಿ ಕೈಯನ್ನು ಯಾವುದೋ ಚುಚ್ಚಿದಂತಾಯಿತು. ಅದೇನೆಂದು ನೋಡಲು ಖಡ್ಗವನ್ನು ಎಷ್ಟು ಬಲವಾಗಿ ಎಳೆದಾಗ್ಯೂ ಒರೆಯಿಂದ ಬರದಂತೆ ಇರುವುದಕ್ಕೆ ತಂತಿಯಿಂದ ಅದರ ಹಿಡಿಯು ಬಿಗಿಯಲ್ಪಟ್ಟಿತ್ತು. ಸಿಂಹಬಲನು ಆ ಗಂಟನ್ನು ಬಿಡಿಸುತ್ತಿದ್ದನು.

ಆಗ ರಾಜನು 'ಸಿಂಹಬಲನೇ ಯಾರಿಂದ ಅಪಾಯ ಸಂಭವಿಸಿರುವುದು ?' ಎಂದು ಕೇಳಲು, ಸಿಂಹಬಲನು 'ಇದನ್ನು ಹೇಳುವುದಕ್ಕೆ ಈಗ ಸಮಯವಿಲ್ಲ. ಮೊದಲು ಶೀಘ್ರವಾಗಿ ಈ ಭವನವನ್ನು ಬಿಟ್ಟು ಹೋಗಬೇಕು. ಇದೊ ಗಂಟನ್ನು ಬಿಚ್ಚಿರುವೆನು. ಒಂದುವೇಳೆ ಭವನವನ್ನು ಬಿಟ್ಟು ಹೋಗುವುದಕ್ಕೆ ಮುಂಚಿತವಾಗಿಯೇ ನಮ್ಮ ಖಡ್ಗಗಳನ್ನು ಉಪಯೋಗಿಸಬೇಕಾದ ಸಂದರ್ಭವು ಉಂಟಾಗಬಹುದು ನಡೆಯಿರಿ ಹೊರಡೋಣ' ಎಂದು ಹೇಳಿ ರಾಜನನ್ನು ಕರೆದುಕೊಂಡು ಹೊರಟನು. ವೀರಬಾಹುವು ಲಾಂದ್ರವನ್ನು ಹಿಡಿದುಕೊಂಡು ದಾರಿ ತೋರಿಸುತ್ತಾ ಮುಂದಾಗಿಯೂ, ರಾಜನೂ, ಸಿಂಹಬಲನೂ ಹಿಂದಾಗಿಯೂ ಮೆಟ್ಲುಗಳನ್ನಿಳಿಯುತ್ತಿದ್ದರು. ಕೈಕಾಲು ಕಟ್ಟಲ್ಪಟ್ಟು ಶುಕವಾಣಿಯು ಸುಖಾಸನದಮೇಲೆ ಕೆಡಹಲ್ಪಟ್ಟಿದ್ದಳು. ರಾಜನನ್ನು ನೋಡಿದಕೂಡಲೇ ಅವಳು "ಮಹಾರಾಜನೆ! ಪ್ರತಾಪಕಂಠೀರವನೆ! ಮನದನ್ನನೇ! ಈ ರೀತಿಯಾಗಿ ನನ್ನನ್ನು ಬಿಟ್ಟು ಹೋಗುವುದಕ್ಕೆ ನಿನಗೆ ಮನಸ್ಸು ಬರುವುದೇ ?" ಎಂದು ಮೊರೆಯಿಟ್ಟಳು. ಅದನ್ನು ಕೇಳಿ ರಾಜನು ಸಿಂಹಬಲನ ಕಡೆಗೆ ತಿರುಗಿ, 'ಒಂದುವೇಳೆ ನೀವು ನಡೆದಿರಬಹುದಾದ ಸಂದರ್ಭಗಳನ್ನು ಸರಿಯಾಗಿ ಪರ್ಯಾಲೋಚಿಸಿ ಯಥಾರ್ಥವನ್ನು ತಿಳಿಯದೆ ಈ ರೀತಿ ಮಾಡಿರಬಹುದಲ್ಲವೇ ?' ಎಂದು ಸಂಶಯಾನ್ವಿತನಾಗಿ ಕೇಳಲು ಸಿಂಹಬಲನು 'ಪ್ರಭುವೇ ನಾವು ಮಾಡುವ ಕೆಲಸದಲ್ಲಿ ನಮಗೆ ಚನ್ನಾಗಿ ಪರ್ಯಾಲೋಚನೆ ಇರುವುದು' ಎಂದು ರಾಜನನ್ನು ತಳ್ಳಿಕೊಂಡು ಹೋದನು.

ಅವರು ಮೆಟ್ಲುಗಳನ್ನು ಇಳಿದು ಕುದುರೆಯ ಲಾಯವನ್ನು ಹೊಕ್ಕರು. ಅಲ್ಲಿ ಒಂದು ಕೊಠಡಿಯೊಳಗೆ ಮಲಗಿ ಗಾಢನಿದ್ರೆಯಲ್ಲಿದ್ದ ಆ ಭವನದ ಕುದುರೆಯವನನ್ನು ಸಿಂಹಬಲನು ನೋಡಿ 'ಇವನನ್ನು ಈ ಸ್ಥಿತಿಯಲ್ಲಿಯೇ

ಬಿಡುವುದು ಸರಿಯಾಗಿರುವುದು ' ಎಂದು ಆ ಕೊಠಡಿಯ ಬಾಗಿಲನ್ನು ಎಳೆದು ಭದ್ರವಾಗಿ ಚಿಲುಕ ಹಾಕಿಕೊಂಡನು.

ನಂತರ ಸಿಂಹಬಲನು ತಮ್ಮ ಮೂರು ಕುದುರೆಗಳನ್ನು ನಡೆಸಿಕೊಂಡು ಹೊರಟನು. ಮೂವರು ಭವನದ ಹೊರಬಾಗಲನ್ನು ಸೇರಿದರು. ಸಿಂಹ ಬಲನು ಕವಚದಲ್ಲಿದ್ದ ಬೀಗದಕೈಗಳ ಗೊಂಚಲನ್ನು ತೆಗೆದು ಹೊರಬಾಗಲಿನ ಬೀಗವನ್ನು ತೆಗೆದನು. ಮೂವರು ಹೊರಗೆ ಬಂದು ಕುದುರೆಗಳನ್ನೇರಿ ಚಮಕಾಯಿಸಿ ವೇಗವಾಗಿ ಹೊರಟು ಮಾರ್ಗದ ಕಡೆಗೆ ಹೋಗದೆ ಕಾಡಿನಲ್ಲಿ ಬಿದ್ದು ಹೋಗುತ್ತಿದ್ದರು.

ಅವರು ಭವನವನ್ನು ಬಿಡುವುದಕ್ಕೆ ಮುಂಚಿತವಾಗಿಯೇ ಶುಕ್ಲಪಕ್ಷದ ನವಮಿಾ ಚಂದ್ರನು ಉದಯಿಸಿ ಆ ಪ್ರದೇಶವನ್ನು ಪ್ರಕಾಶಗೊಳಿಸುತ್ತಿದ್ದನು. ಆ ವೀರರು ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಯಾವದೊಂದು ಆಡಚಣೆಯಿಲ್ಲದಂತೆ ಒಂದಾನೊಂದು ಗ್ರಾಮವನ್ನು ಸೇರಿದರು.

ಆಗ ಅರ್ಧರಾತ್ರಿಯಾಗಿತ್ತು. ಗ್ರಾಮವಾಸಿಗಳೆಲ್ಲಾ ಗಾಢನಿದ್ರೆಯಲ್ಲಿ ದ್ದರು. ಹೀಗಿದ್ದರೂ ಸಿಂಹಬಲನು ಒಂದು ಗೃಹವನ್ನು ನೋಡಿ " ಈ ಮನೆಯು ಇತರ ಮನೆಗಳಿಗಿಂತಲೂ ಬಹು ಸೊಗಸಾಗಿರುವುದರಿಂದ ಇದೇ ಪಟೇಲನ ಮನೆಯಾಗಿರಬೇಕು " ಎಂದು ಊಹಿಸಿ ಬಾಗಿಲನ್ನು ನಾಲ್ಕಾರು ಸಲ ತಟ್ಟಿದನು. ಗೃಹವಾಸಿಗಳಲ್ಲಿ ಯಾರೂ ಮಾತನಾಡದೆ ನಿದ್ರೆಯಲ್ಲಿದ್ದರು. ಪುನಃ ತಟ್ಟಿ ಬಾಗಿಲನ್ನು ಜೋರಾಗಿ ಒದೆಯಲು ಆ ಶಬ್ದಕ್ಕೆ ಪಟೇಲನು ಎಚ್ಚತ್ತು " ಯಾರ್ಲಾ ಅವಾ ಈಟ್ಹೊತ್ತಿನಲ್ ಬಂದ್ ಕದಾ ತಟ್ಟೋದು ! ನಿಗೇನಾದ್ರು ಗಾಚಾರ ಗೀಚಾರ ಜಡಿಸ್ಕೋಕೇನ್ಲಾ ? ' ಎಂದು ಒಳಗಿನಿಂದಲೇ ಗದರಿಸಿ ಮಾತನಾಡಿದನು. ಅದನ್ನು ಕೇಳಿ ಸಿಂಹಬಲನು ' ಎಲೋ ಪಟೇಲ, ಸುಬೇದಾರರು ನಮ್ಮನ್ನು ಕಳುಹಿಸಿರುವರು. ಬೇಗ ಬಾಗಿಲು ತೆಗೆ ' ಎನಲು ಪಟೇಲನು ತಕ್ಷಣವೇ ಓಡಿಬಂದು ಬಾಗಿಲು ತೆಗೆದು ' ಬುದ್ದೀ ಮಾಪ್ ಮಾಡಬೇಕು. ಯಾರೋ ನಮ್ಮೂರವಾ ಎಂತ ಹಂಗೇ ಗದರ್ಸ್‌ಕೊಂಡೆ ಬುದ್ಧಿ ! ನೀವು ಅಂತ ತಿಳಿನಿಲ್ಲ ಕಾಣ್ ಬುದ್ಧಿ ತಂ ಪಾದ ! ಎನ್ ಹೇಳದ್ರು ಮಾಡ್ತೀವ್ನಿ ಬುದ್ಧಿ ' ಎಂದು ಗಾಬರಿಪಡುತ್ತಿದ್ದನು.

ಆಗ ಸಿಂಹಬಲನು ' ನಾವು ಹಿಂದಿರುವ ಗ್ರಾಮಕ್ಕೆ ಮುಖ್ಯವಾದ

ಒಂದು ಕೆಲಸಕ್ಕಾಗಿ ಸುಬೇದಾರರಿಂದ ಕಳುಹಿಸಲ್ಪಟ್ಟು ಅದನ್ನು ಪೂರೈಸಿ ಬಂದಿರುತ್ತೇವೆ. ಈ ರಾತ್ರಿ ಇಳಿದುಕೊಳ್ಳುವುದಕ್ಕೆ ಸ್ಥಳ ಬೇಕಾಗಿರುವುದು' ಎಂದು ಹೇಳಿದನು.

ಆದಕ್ಕೆ ಪಟೇಲನು "ನನ್‌ಮನೇಲಿ ಬೇಕಾದಂಗೆ ಜಾಗೈತೆ ಬುದ್ಧಿ ತಂಪಾದ ಬೆಳಸ್‌ಬೇಕು ಬುದ್ಧಿ!" ಎಂದು ಅವರನ್ನು ಒಳಗಡೆ ಕರೆದು ಕೊಂಡುಹೋಗಿ ಒಬ್ಬೊಬ್ಬರನ್ನು ಒಂದೊಂದು ಕೊಠಡಿಯಲ್ಲಿಳಿಸಿ, ದನದ ಕೊಟ್ಟಿಗೆಯನ್ನು ಬರಿದುಮಾಡಿ ಅಲ್ಲಿ ಕುದುರೆಗಳನ್ನು ಕಟ್ಟಿಸಿ ಅವುಗಳಿಗೆ ಹುಲ್ಲು ಹಾಕಿಸಿ, ಸಿಹ್ಮಬಲನ ಅಪ್ಪಣೆಯನ್ನು ಪಡೆದು ಮಲಗುವದಕ್ಕೆ ಹೋದನು.

ರಾಜನು ತನ್ನ ಕೊಠಡಿಯಲ್ಲಿದ್ದ ಮಂಚದ ಮೇಲೆ ಮಲಗಿಕೊಳ್ಳಲು ಹಿಂದಿನ ವೃತ್ತಾಂತಗಳೆಲ್ಲಾ ನೆನಪಿಗೆ ಬರುತ್ತಿದ್ದವು. ಆಗ ಮನಸ್ಸಿನಲ್ಲಿ "ಅಸ್ವಸ್ಥನಾಗಿ ರಾಜನು ಅಂತಃಪುರದಲ್ಲಿರುವನೆಂದು ಹೊರಗೆ ಪ್ರಚುರಪಡಿಸಿ ನಾನು ಹಿಂತಿರುಗಿ ಬರುವವರಿವಿಗೂ ರಾಜಕಾರ್ಯವನ್ನು ನೋಡಿಕೊಳ್ಳುವಂತೆ ಮಂತ್ರಿಗೆ ತಿಳಿಸಿ ವೃದ್ಧನಾದ ತಂದೆಯ ಅಪ್ಪಣೆಯಂ ಪಡೆದು ಮಿತಪರಿವಾರ ವಿಲ್ಲದೆ ಸೈನ್ಯಾಧಿಪತಿಗಳನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ರಹಸ್ಯವಾಗಿ ಪ್ರಯಾಣಿಸಿರುವೆನು. ಇದಲ್ಲದೆ ನಮ್ಮ ಪ್ರಯಾಣದಲ್ಲಿ ಯಾರನ್ನಾದರೂ ಸಂಧಿಸುವಾಗ ನನ್ನನ್ನು ಒಬ್ಬ ಸಾಹುಕಾರನಂತೆ ಭಾವಿಸಿ ಪರರಿಗೆ ರಾಜನೆಂದು ತಿಳಿಯಪಡಿಸದಂತೆ ಮಾತನಾಡಬೇಕೆಂದು ಸೈನಾಧಿಪತಿಗೆ ಆಜ್ಞಾಪಿಸಿರುವೆನು. ಹೀಗಿರುವಲ್ಲಿ ಶುಕವಾಣಿಯು ನನ್ನ ಹೆಸರಿಡಿದು ಕರೆದು ಬಂಧನದಿಂದ ಬಿಡಿಸೆಂದು ಮೊರೆಯಿಡಲು ಅವಳಿಗೆ ನನ್ನ ಹೆಸರು ತಿಳಿಯಬಂದ ಬಗೆ ಎಂತು? ಅವಳು ಸೋಮಪಾನಾದಿಗಳನ್ನು ಕೊಟ್ಟು ಬುದ್ಧಿ ಶೂನ್ಯನನ್ನಾಗಿ ಮಾಡಿ ನನ್ನ ಖಡ್ಗವನ್ನು ಬಂಧಿಸಲು ಕಾರಣವೇನಿರಬಹುದು. ಇದನ್ನೆಲ್ಲ ಪರಿಭಾವಿಸಲು ಅವಳು ಕೃತ್ರಿಮವನ್ನು ನಡೆಸಿಯೇ ಇರಬೇಕೆಂದು ಚೆನ್ನಾಗಿ ಗೊತ್ತಾಗುವುದು. ಇರಲಿ ಸೈನ್ಯಾಧಿಪತಿಗಳನ್ನು ಕೇಳಿ ಎಲ್ಲವನ್ನೂ ವಿಶದವಾಗಿ ತಿಳಿಯುವೆನು" ಎಂದು ಎದ್ದು ಹೊರಟು ಸಿಹ್ಮಬಲನ ಶಯನ ಗೃಹವನ್ನು ಹೊಕ್ಕನು.

ಆ ಗೃಹದಲ್ಲಿ ಸೈನ್ಯಾಧಿಪತಿಗಳಿಬ್ಬರೂ ನಿದ್ರೆಗೈಯ್ಯದೆ, ಚದುರಂಗ ವನ್ನಾಡುತ್ತಿದ್ದರು. ರಾಜನನ್ನು ನೋಡಿದ ಕೂಡಲೆ ಎದುರ್ಗೊಂಡು ಅಲ್ಲಿದ್ದ

ಮಂಚದ ಮೇಲೆ ಕುಳ್ಳಿರಿಸಿ ಇಬ್ಬರೂ ಚಾಪೆಯ ಮೇಲೆ ಕುಳಿತುಕೊಂಡರು. ಆಮೇಲೆ ಸಿಹ್ಮಬಲನು "ಮಹಾರಾಜನೇ, ನಿದ್ರೆಗೈಯ್ಯದೆ ಇಲ್ಲಿಗೆ ಚಿತ್ತೈಸಿಧ ಕಾರಣವನ್ನು ತಿಳಿಯಲು ಕುತೂಹಲವಾಗಿರುವದು" ಎಂದು ಕೇಳಲು ರಾಜನು "ಶುಕವಾಣಿಯು ಎಣಿಸಿದ್ದ ಕೃತ್ರಿಮವು ನಿಮಗೆ ತಿಳಿಯಬಂದ ಬಗೆ ಹೇಗೆ ಎಂಬುದನ್ನು ತಿಳಿಯಲೋಸುಗವೇ!" ಎಂದು ಉತ್ತರವಿತ್ತನು.

ಅದನ್ನು ಕೇಳಿ ಸಿಂಹಬಲನು "ಮಹಾರಾಜನೆ, ಈ ವಿಷಯದಲ್ಲಿ ಮೊದಲಿನಿಂದಲೂ ನನಗೆ ಅನುಮಾನವೇ ಇತ್ತು. ನಮಗೆ ದಾರಿ ತೋರಿಸಿದ ಆ ಕುರುಬನ ಅಂಗಚರ್ಯದಿಂದ ಅವನು ಸರಿಯಾದ ಮಾರ್ಗವನ್ನು ತೋರಿಸದೆ ಇರಬಹುದೆಂದು ನಿಮಗೆ ತಿಳಿಸಿದೆನು. ನೀವಾದರೋ ನನ್ನ ಮಾತನ್ನು ಉದಾಸೀನಮಾಡಿಬಿಟ್ಟಿರಿ. ಶುಕವಾಣಿಯು ತೊರೆಯ ದಡದಲ್ಲಿ ಆಚರಿಸಿದುದು ಕಪಟವಾದ ನಟನೆಗಳೆಂದು ವೂಹಿಸಿದೆನು. ಮತ್ತು ಅವಳು ನಮ್ಮ ಸಂಗಡ ಕಳಿಂಗ ಪಟ್ಟಣಕ್ಕೆ ಪ್ರಯಾಣ ಮಾಡಲು ಯಾವದೊಂದು ಅಭ್ಯಂತರವಿಲ್ಲದೆ ಒಪ್ಪಿಕೊಂಡಳು. ಇದನ್ನು ಯೋಚಿಸಲು ಯಾವುದೋ ಒಂದು ಕೃತ್ರಿಮ ಸೂಚಕವಾದುದೆಂದು ನನಗೆ ತೋರಿತು. ಈದಿನ ಸಾಯಂಕಾಲ ಕುದುರೆಗಳಿಗೆ ಬೆಂದ ಹುರುಳಿ ಮಾರುವ ಸ್ಥಳದಲ್ಲಿ ಒಬ್ಬ ಸೇವಕನಿಂದ ಶುಕವಾಣಿಯ ಕುದುರೆಯು ಕರಾಳನದೆಂದು ತಿಳಿದೆನು" ಎಂದು ಹೇಳುತ್ತಿರುವುದಕ್ಕೆ ಮಧ್ಯದಲ್ಲಿ ರಾಜನು ವಿಸ್ಮಯಾನ್ವಿತನಾಗಿ "ಅವಳು ಯಾರು? ಅವಳು ಕರಾಳನಿಗೆ ಏನಾಗಬೇಕು?" ಎಂದು ಆತುರದಿಂದ ಕೇಳಲು ಸಿಂಹಬಲನು ಈ ವಿಷಯವಾಗಿ ಆ ಸೇವಕನನ್ನು ಕೇಳಿದೆನು ಅವನು ಯಾವುದೊಂದು ಸೂಚನೆಯನ್ನೂ ಕೊಡದಹೋದನು ಅದನ್ನು ತಿಳಿಯಲು ನಾನು ಬಲಾತ್ಕಾರಪಡಿಸಲೂ ಇಲ್ಲ. ಅವನು ಕರಾಳನಿಗೆ ಬೇಕಾದವನೆಂದು ನನಗೆ ತೋರುವದು" ಎಂದು ಹೇಳಿದನು.

ಅದನ್ನು ಕೇಳಿ ರಾಜನು "ಇದೆಲ್ಲವನ್ನು ತಿಳಿದರೂ ಯಾತಕ್ಕೆ ನನಗೆ ತಿಳುಹಿಸಲಿಲ್ಲ?" ಎಂದು ಕೇಳಲು ಸಿಂಹಬಲನು ನೀವು ಶುಕವಾಣಿಯ ಸಂಗಡ ವಿನೋದವಾಗಿ ಇರುತ್ತಿದ್ದುದರಿಂದ ನನಗೆ ಅವಕಾಶವೇ ದೊರೆಯಲಿಲ್ಲ ವೆಂದು ಹೇಳಲು ರಾಜನು ಆಮೇಲೇನಾಯ್ತು ಎಂದು ಕೇಳಿದನು.

ಸಿಂಹ—ಭವನವನ್ನು ಸೇರಿದ ನಂತರ ನನ್ನ ಕೊಠಡಿಯಲ್ಲಿ

ಯೋಚಿಸುತ್ತಿದ್ದು ಕಪಟಕೃತ್ಯಗಳ ಏರ್ಪಾಡೇನಾದರೂ ನಡೆಯುವುದೇನೊ ಎಂದು ಕೊಠಡಿಯಿಂದ ಹೊರಟು ಅಂಗಳವನ್ನು ಸೇರುವುದಕ್ಕಾಗಿ ಬರುತ್ತಿರಲು ಭವನಾಧಿಕಾರಿಯು ನನ್ನೆದುರಾಗಿ ಬರುತ್ತಿದ್ದನು. ನನ್ನನ್ನು ನೋಡಿದ ಕೂಡಲೇ ಎಲ್ಲಿಗೆ ಹೋಗುವಿರಿ ಎಂದು ಕೇಳಿದನು. ಅವನಿಗೇನೂ ಸಂಶಯ ತೋರದ ರೀತಿ ಬಹಿರ್ದೇಶಕ್ಕೆ ಹೋಗಲು ನೀರು ತೆಗೆದುಕೊಂಡು ಹೋಗುವುದಕ್ಕಾಗಿ ಚೊಂಬನ್ನು ಕೇಳಲು ಕೋಣೆಮನೆಗೆ ಹೋಗುವೆನು— ಎಂದು ಹಾಗೆ ಮಾಡಿ, ಸುಮ್ಮನೆ ಹೊರಗೆ ಹೋಗಿ, ಬಹಿರ್ದೇಶಕ್ಕೆ ಹೋದವನಂತೆ ನಟಿಸಿ ನನ್ನ ಕೊಠಡಿಯನ್ನು ಸೇರಿ ಯೋಚಿಸುತ್ತಿದ್ದೆನು. ಭೋಜನ ಪದಾರ್ಥಗಳೆಲ್ಲಾ ಸಿದ್ಧವಾಗಲು ನಾವಿಬ್ಬರೂ, ಶುಕವಾಣಿಯ ದಾದಿಯರೂ ಹಜಾರದಲ್ಲಿ ಕುಳಿತು ಊಟಮಾಡಿದೆವು. ಸೋಮಪಾನಗಳೆಲ್ಲ ತಂದಿರಿಸಲ್ಪಟ್ಟವು. ದಾದಿಯರು ನಮಗೆ ಸೋಮಪಾನವನ್ನು ಕೊಡುವುದಕ್ಕೆ ಬರಲು ಅವರಿಗೆ ತಿಳಿಯದಂತೆ ವೀರಬಾಹುವಿಗೆ ತೆಗೆದುಕೊಳ್ಳಬೇಡವೆಂದು ಕಣ್ಣು ಸನ್ನೆಮಾಡಿ ನಾನು ತೆಗೆದುಕೊಳ್ಳದೆ ಹೋದೆನು. ದಾದಿಯರು ಅನುಮಾನಪಟ್ಟು ಒಬ್ಬಳ ಮುಖವನ್ನು ಮತ್ತೊಬ್ಬಳು ನೋಡಿದಳು. ತರುವಾಯ ನಮ್ಮ ಕೊಠಡಿಗಳಿಗೆ ಹೊರಟುಬರುವಲ್ಲಿ ವೀರಬಾಹುವನ್ನು ನನ್ನ ಬಿಡಾರಕ್ಕೆ ಕರೆದುಕೊಂಡುಹೋಗಿ ನನ್ನ ಸಂಶಯಗಳನ್ನೆಲ್ಲಾ ತಿಳುಹಿಸಿದೆನು. ನಾವಿಬ್ಬರೂ ಜಾಗರೂಕರಾಗಿಯೇ ಇದ್ದೆವು. ಭವನದಲ್ಲಿ ಏನಾದರೂ ಕಪಟಕೃತ್ಯವು ನಡಿಯುವುದೇನೋ ಎಂದು ವೀರಬಾಹುವನ್ನಲ್ಲಿಯೆ ಇರುವಂತೆ ಹೇಳಿ ನಾನು ಮಾತ್ರ ಕುದುರೆಗಳನ್ನು ನೋಡುವ ನೆವದಿಂದ ಲಾಯಕ್ಕೆ ಹೋಗುತ್ತಿದ್ದೆನು. ಅಲ್ಲಿ ಒಂದು ದೀಪವು ಉರಿಯುತ್ತಿತ್ತು. ಹತ್ತಿರಕ್ಕೆ ಬರಲು ಕೆಲವು ಪಿಸುಮಾತುಗಳು ಕೇಳಿಸಲ್ಪಟ್ಟವು. ಗೋಡೆಯ ಪಕ್ಕದಲ್ಲಿ ಹೊಂಚಿ ಕಿವಿಕೊಟ್ಟು ಕೇಳುತ್ತಿರುವಲ್ಲಿ ಭವನಾಧಿಕಾರಿಯು, ಕುದುರೆ ಆಳು, ಪರಿಚಾರಕನು ಇವರು ಮೂರು ಜನವೂ ಮಾತನಾಡುತ್ತಿದ್ದರು. ಅವರ ಸಂಭಾಷಣೆಯನ್ನೆಲ್ಲಾ ಗ್ರಹಿಸಿಕೊಂಡೆನು. ನಾವುಗಳು ಬಲೆಯಲ್ಲಿ ಸಿಕ್ಕಿದ ಹಾಗೂ, ಚಾರುವೀರನೆಂಬೋರ್ವನು ಅಶ್ವಾರೂಢನಾಗಿ ಕರಾಳನ ಒಂದಾನೊಂದು ಸಂಕೇತಸ್ಥಾನಕ್ಕೆ ವೇಗವಾಗಿ ಹೋದಹಾಗೂ, ಸ್ವಲ್ಪ ಹೊತ್ತಿನಲ್ಲಿಯೇ ಕಿರಾತಪಡೆಯು ಭವನವನ್ನು ಸೇರುವ ಹಾಗೂ ತಿಳಿಯ

ಬಂದಿತು. ತಕ್ಷಣವೇ ವೀರಬಾಹುವನ್ನು ಸೇರಿ ನಾವಿಬ್ಬರೂ ಮಾಡ ಬೇಕಾದ್ದನ್ನೆಲ್ಲಾ ನಿರ್ಧರಿಸಿಕೊಂಡೆವು. ಈ ಕೃತ್ರಿಮವನ್ನು ನಿಮಗೆ ತಿಳಿಸಲು ಕೇಳೀಗೃಹಕ್ಕೆ ಬಂದೆನು. ಅಲ್ಲಿ ನೀವು ಬುದ್ಧಿಶೂನ್ಯರಾಗಿರುವುದನ್ನು ಕಂಡೆನು. ನನ್ನ ನಡೆನುಡಿಗಳಿಂದ ಏನಾದರೂ ಸಂಶಯವನ್ನು ತೋರ್ಪಡಿ ಸಿದರೆ ಬರುತ್ತಿರುವ ಕಿರಾತ ಪಡೆಗೆ ಶೀಘ್ರವಾಗಿ ಬರುವಂತೆ ಭವನದ ಮೇಲಿನಿಂದ ಒಂದು ದೊಡ್ಡ ದೀಪವನ್ನು ಉರಿಸಿ ಸಂಜ್ಞೆ ಮಾಡಿದರೆ ಅನರ್ಥ ಸಂಭವಿಸುವದೆಂದು ಮನಸ್ಸಿನಲ್ಲಿ ಯೋಚಿಸಿ, ಶುಕವಾಣಿಯನ್ನು ಮರ್ಯ್ಯಾದಾ ಪೂರ್ವಕವಾಗಿ ಕಂಡು, ರಾಜನನ್ನು ಶಯನಗೃಹಕ್ಕೆ ಹಸ್ತಲಾಭವನಿತ್ತು ಕರೆದುಕೊಂಡು ಹೋಗುವುದಕ್ಕೆ ಬಂದೆನೆಂದು ಹೇಳಿ, ನಿಮ್ಮನ್ನು ಶಯನ ಗೃಹಕ್ಕೆ ಕರೆದುಕೊಂಡುಹೋಗಿ ಮಲಗಿಸಿದೆನು. ಅನಂತರ ವೀರಬಾಹುವಿಗೆ ನಡಿಸಬೇಕಾದ್ದನ್ನೆಲ್ಲಾ ಹೇಳಿಕಳುಹಿದೆನು.

ವೀರ—ನಾನಾದರೋ ಭವನಾಧಿಕಾರಿಯನ್ನು ಹುಡುಕಿ ಅವನು ತನ್ನ ಕೊಠಡಿಯಲ್ಲಿ ಏಕಾಂಗಿಯಾಗಿದ್ದದನ್ನು ಕಂಡು ಮೇಲೆಬಿದ್ದು ಕೈಕಾಲು ಕಟ್ಟಿಹಾಕಿ ಅವನ ನಡುವಿನಲ್ಲಿದ್ದ ಬೀಗದ ಕೈಗಳ ಗೊಂಚಲನ್ನು ತೆಗೆದು ಕೊಂಡು ನಿಮ್ಮ ಶಯನಗೃಹಕ್ಕೆ ಬರುತ್ತಿದ್ದೆನು

ಸಿಂಹ—ವೀರಬಾಹುವನ್ನು ಕಳುಹಿಸಿದ ಕೂಡಲೆ ನನ್ನ ವಸ್ತ್ರವನ್ನು ನೆನಸಿಕೊಂಡು ನಿಮ್ಮ ಶಯನಗೃಹಕ್ಕೆ ಹೋಗಲು ಮೆಟ್ಲುಗಳನ್ನು ಹತ್ತುತ್ತಿದ್ದೆನು. ಕೇಳೀಗೃಹದ ಸಮೀಪದಲ್ಲಿ ಶುಕವಾಣಿಯನ್ನು ಕಂಡೆನು. ಆಕೆಯು ನಿಮ್ಮ ಶಯನಗೃಹಕ್ಕಾಗಿಯೇ ಬರುತ್ತಿದ್ದಳು. ಇಷ್ಟುಹೊತ್ತಿಗೆ ವೀರಬಾಹುವು ಬೀಗದಕೈ ಗೊಂಚಲನ್ನು ಪಡೆದಿರಬಹುದೆಂದು "ನೀನು ಬಂಧನಕ್ಕೆ ಒಳಪಟ್ಟಿರುವೆ" ಎಂದು ಶುಕವಾಣಿಗೆ ಹೇಳಿದೆನು. ಆಕೆಯು ಜೋರಾಗಿ ಕೂಗುಹಾಕುವುದಕ್ಕೆ ಪ್ರಯತ್ನಿಸುವುದನ್ನು ನೋಡಿ, ಆಕೆಯ ಮುಖದಲ್ಲಿ ಕೈಯಿಟ್ಟು ಅಮುಕಿದೆನು. ಅಷ್ಟರಲ್ಲಿಯೇ ವೀರಬಾಹುವು ಅಲ್ಲಿಗೆ ಬರಲು, ಶುಕವಾಣಿಯನ್ನು ಕೈಕಾಲು ಬಂಧಿಸುವಂತೆ ಒಪ್ಪಿಸಿ ನಿಮ್ಮ ಶಯನಗೃಹಕ್ಕೆ ಬಂದೆನು. ಮಿಕ್ಕ ಸಂಗತಿಗಳೆಲ್ಲಾ ನಿಮಗೆ ತಿಳಿದಿರುವುದು.

ಅನಂತರ ರಾಜನು ಸೈನಾಧಿಪತಿಗಳನ್ನು ಬಹಳ ಕೊಂಡಾಡಿ ಅವರ

ಅನುಮತಿಯನ್ನು ಹೊಂದಿ ತನ್ನ ಕೊಠಡಿಯನ್ನು ಸೇರಿ ಮಂಚವನ್ನೇರಿ ಪವಡಿಸಿದನು.

ಪ್ರತಾಪಕಂಠೀರವವಾದಿಗಳು ಆ ದಿವಸ ರಾತ್ರೆ ಗಾಬರಿಯಿಂದ ಕಳಿಂಗ ಪಟ್ಟಣದ ಕಡೆಗೆ ಹೋಗದೆ ಪೂರ್ವ ದಿಕ್ಕಿನಲ್ಲಿ ಬಹಳ ದೂರ ಹೋದರು. ಆದ್ದರಿಂದ ಕಳಿಂಗ ಪಟ್ಟಣವು ೩, ೪ ದಿವಸ ಪ್ರಯಾಣದಲ್ಲಿತ್ತು. ಮಾರನೇ ದಿವಸ ಎಲ್ಲರೂ ಉಪ್ಪವಡಿಸಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಅಶ್ವಾರೂಢ ರಾಗಿ ಪ್ರಯಾಣ ಬೆಳೆಸಿದರು.

ಇತ್ತಲಾದಿನ ಮಧ್ಯಾಹ್ನದ ವೇಳೆಯಲ್ಲಿ ಒಂದಾನೊಂದು ತೋಪಿನಲ್ಲಿ ಕರಾಳನು ಮತ್ತು ಚಾರುವೀರನು ಕುಳಿತುಕೊಂಡಿದ್ದರು. ಹತ್ತಿರದಲ್ಲಿಯೇ ಅವರಿಬ್ಬರ ಕುದುರೆಗಳು ಹುಲ್ಲುಮೇಯುತ್ತಿದ್ದವು. ಆ ತೋಪಿನಲ್ಲಿ ಯಾವ ಡೇರೆಯೂ ಇರಲಿಲ್ಲವಾದುದರಿಂದ ಅವರಿಬ್ಬರು ಆಗತಾನೆ ಆ ಸ್ಥಳವನ್ನು ಸೇರಿದ್ದರೆಂದು ತೋರುವುದು.

ಕರಾಳನು ತಾನು ಬಯಸಿದ ಕಾರ್ಯವೆಲ್ಲಾ ಅನುಕೂಲವಾಗಿ ನಡೆಯ ಲಿಲ್ಲವೆಂದು ಮುಖಕಾಂತಿಹೀನನಾಗಿದ್ದನು. ಚಾರುವೀರನಾದರೋ ಬಹು ಖಿನ್ನನಾಗಿ ತಲೆಯನ್ನು ಬಗ್ಗಿಸಿಕೊಂಡು ಚಿಂತಾಕ್ರಾಂತನಾಗಿ ಕರಾಳನೆದುರಿಗೆ ಕೆಲವಡಿ ದೂರದಲ್ಲಿ ಕುಳಿತುಕೊಂಡಿದ್ದನು. ಹೀಗೆಯೇ ಸ್ವಲ್ಪಹೊತ್ತಿನವರಿಗೂ ಯಾವುದೊಂದು ಮಾತನಾಡದೆ ಇಬ್ಬರೂ ಮೌನವಾಗಿ ಕುಳಿತ್ತಿದ್ದರು. ತದನಂತರ ಕರಾಳನು ಕೋಪಗೊಂಡು ನೀವು ಆರು ಮಂದಿ ಕಿರಾತರು ಆ ಮೂವರಿಂದ ಅಪಜಯವನ್ನು ಹೊಂದಿರುವುದಂದರೇನು ? ಎಷ್ಟಾವರ್ತಿ ಯೋಚಿಸಿದಾಗ್ಯೂ ನನಗೆ ಇದು ಸ್ವಪ್ನದಂತೆ ತೋರುವುದಲ್ಲಾ !

ಚಾರು—ಅವರನ್ನು ಸಂಹರಿಸದೆ ಶೆರೆಹಿಡಿದು ತರಬೇಕೆಂಬ ನಿಮ್ಮ ಆಜ್ಞೆಯೇ ಈ ಅಪಜಯಕ್ಕೆ ಕಾರಣವಾಗಿ ಪರಿಣಮಿಸಿತು.

ಕರಾಳ—ಪ್ರತಾಪಕಂಠೀರವನನ್ನು ಸಂಹರಿಸಿಯೇ ಆಗಲಿ, ಅಥವಾ ಸೆರೆಹಿಡಿದಾಗಲಿ ತರಬೇಕೆಂದು ಆಜ್ಞಾಪಿಸಿರಲಿಲ್ಲವೆ ? ಆತನನ್ನು ಸೆರೆಯಾಗಿ ಹಿಡಿದುತಂದರೆ ಬಹಳ ಉತ್ತಮವೆಂದು ಹೇಳಿದ್ದೆನು. ಯಾತಕೆನ್ನುವಿಯೊ ? ಆತನು ನನಗೇನೂ ಕೆಡಕು ಮಾಡಿಲ್ಲ. ಆತನ ಪರಿಚಿತಿಯು ನನಗೆ ಮೊದಲೇ ಇಲ್ಲ. ಸರಿಯಾದ ಕಾರಣವಿಲ್ಲದೆ ಒಬ್ಬ ಮನುಷ್ಯನನ್ನು ಕೊಲ್ಲೆಂದು

ಹೇಳುವುದಕ್ಕೆ ನಾನೇನು ಕೊಲೆಘಾತಕನೇ? ಆದಾಗ್ಯೂ ಅಂಥಾ ಬಹು ಕಷ್ಟವಾದ ಸಂದರ್ಭಗಳಲ್ಲಿ ಕಣ್ಣು ಮೋರೆ ನೋಡದೆ ಹೊಡೆದು ಸಂಹರಿಸ ಬೇಕಾಗಿತ್ತು.

ಚಾರು—ಪ್ರಭುವೇ ಹಾಗೆಯೇಮಾಡಿ ಅವರನ್ನು ಸಂಹರಿಸಬೇಕೆಂದು ನಾನು ಪ್ರಯತ್ನಪಡುವುದರೊಳಗಾಗಿ ನಮ್ಮಲ್ಲಿ ಮೂರು ಮಂದಿ ಗತಪ್ರಾಣ ರಾದರು. ಇಬ್ಬರು ಕಿರಾತರು ಘಾಯವನ್ನು ಹೊಂದಿ ಓಡಿಹೋದರು. ನಾನು ತಪ್ಪಿಸಿಕೊಂಡು ಬರುವುದೇ ಬಹಳ ಪ್ರಯಾಸವಾಗಿತ್ತು. ಆದರೂ ಕಷ್ಟಪಟ್ಟು ತಪ್ಪಿಸಿಕೊಂಡು ಒಂದನೂರು ಗಜಗಳ ಪ್ರಮಾಣದಲ್ಲಿ ಪ್ರತಾಪ ಕಂಠೀರವನನ್ನು ಸಂಹರಿಸಲು ಗುರಿಕಟ್ಟಿ ಹೊಡೆದೆನು. ಅದನ್ನು ಆತನು ಹ್ಯಾಗೋ ತಪ್ಪಿಸಿಕೊಂಡನು. ಆ ಬಳಿಕ ಅಲ್ಲಿಗೆ ಸಮೀಪದಲ್ಲಿದ್ದ ಗುಹೆಯಲ್ಲಿ ಘಾಯಪಡೆದವರಿಬ್ಬರನ್ನೂ ಇರುವಂತೆ ಹೇಳಿ, ಅವರಿಗೆ ಬೇಕಾದ ಔಷಧಿ ಯನ್ನೂ ಆಹಾರಾದಿಗಳನ್ನೂ ಕೊಟ್ಟು ಕಳುಹಿಸಿದೆನು. ನನ್ನ ಜೀವಮಾನ ಕಾಲದಲ್ಲಿ ಇಂಥಾ ಅಪಜಯವನ್ನು ಹಿಂದೆ ಯಾವಾಗ್ಯೂ ಅನುಭವಿಸಿಲ್ಲ!

ಕರಾಳನು ಏನೂ ಹೇಳದೆ ಯೋಚನಾಶಕ್ತನಾಗಿರಲು ಮತ್ತೆ ಪ್ರನ: ಚಾರುವೀರನು—ಮಹಾರಾಜನೆ, ನಿಮ್ಮ ಕಾರ್ಯವೆಲ್ಲಾ ಕೈಗೂಡಿ ಪ್ರತಾಪ ಕಂಠೀರವನು ನಿಮ್ಮಲ್ಲಿ ಸೆರೆಯಾಗಿರುವ ಕಾಲದಲ್ಲಿ ಆತನೊಡನೆ ಪರಸ್ಪರ ಯುದ್ಧವನ್ನು ಮಾಡಿ ಈಗ ಪ್ರಾಪ್ತವಾಗಿರುವ ಅಪಯಶಸ್ಸನ್ನು ಹೋಗ ಲಾಡಿಸಿಕೊಳ್ಳಬೇಕೆಂದು ನಿರ್ಧರಿಸಿರುವೆನು.

ಕರಾಳ—ಇಲ್ಲಿಂದ ಹೋದ ಕಿರಾತರು ಪ್ರತಾಪಕಂಠೀರವನನ್ನು ಸೆರೆಯಾಗಿ ಹಿಡಿದರೆಂಬ ವರ್ತಮಾನವು ಇದುವರಿಗೂ ಬರದೇ ಇರುವುದರಿಂದ ಇದರಲ್ಲಿಯೂ ನನಗೆ ನಂಬಿಕೆಯಿಲ್ಲ. ಶುಕವಾಣಿಯು ಶುಭಸಂಗತಿಗಳನ್ನು ತಿಳಿಸುವಲ್ಲಿ ಆಲಸ್ಯಮಾಡುವಂಥಾವಳಲ್ಲವಲ್ಲ! ನೀನು ಮಾಡುವದೆಲ್ಲಾ ಹೀಗೆ ವ್ಯರ್ಥವಾದರೇನು ಮಾಡಬೇಕು?

ಚಾರು—ರಾಜನೇ ನೀನು ಎಸಗಿರುವ ತಂತ್ರದ ಎಲ್ಲಾ ಭಾಗಗಳನ್ನೂ ಚೆನ್ನಾಗಿ ಯೋಚಿಸಿರುವೆನು. ಇವುಗಳನ್ನೆಲ್ಲಾ ರಾತ್ರೆ ನಿಮಗೆ ತಿಳಿಸುತ್ತಿರುವಲ್ಲಿ ನೀವು ತಾಳ್ಮೆಯಿಂದ ಕೇಳಲಿಲ್ಲವಾದ್ದರಿಂದ ನಿಮಗೇನೋ ಈ ರೀತಿಯಾಗಿ ನಿರಾಶೆಯಾಗಿರುವುದು.

ಕರಾಳ--- ಈಗಲಾದರೂ ಬೊಗಳು !

ಚಾರು--- ಪ್ರತಾಪಕಂಠೀರವನಿಂದ ತಪ್ಪಿಸಿಕೊಂಡು ಘಾಯಪಡೆದಿದ್ದ ಕಿರಾತರನ್ನು ಗುಹೆಯಲ್ಲಿರಿಸಿದೆನೆಂದು ಹೇಳಿದೆನಷ್ಟೆ. ಆ ಬಳಿಕ ಶುಕವಾಣಿ ದೇವಿಯು ಬಂಧುಗಳನ್ನು ನೋಡಿಕೊಂಡು ಹಿಂತಿರುಗಿ ತಮ್ಮ ತಂದೆಯ ಮಿತ್ರಭವನದಲ್ಲಿ ಇಳಿಯಲು ಆ ಪ್ರಾಂತ್ಯವಾಗಿ ಪ್ರಯಾಣಿಸುತ್ತಿರುವರೆಂದು ನನಗೆ ಮೊದಲೇ ಗೊತ್ತಾಗಿದ್ದರಿಂದ ದೇವಿಯು ಈ ಕಾರ್ಯದಲ್ಲಿ ಸಹಾಯ ಮಾಡಲು ಒಪ್ಪುವರೆಂದು ಭವನದ ಕಡೆಗೆ ಕಾಲುದಾರಿಯನ್ನನುಸರಿಸಿ ವೇಗವಾಗಿ ಹೋಗುತ್ತಿದ್ದೆನು. ಮಹಬಲಿಪುರಕ್ಕೆ ಹೋಗುವ ಮಾರ್ಗದ ಸಮೀಪದಲ್ಲಿ ದೇವಿಯನ್ನು ಕಂಡು ಹಿಂದೆಬರುವ ಪ್ರತಾಪಕಂಠೀರವಾದಿಗಳನ್ನು ಕೃತ್ರಿಮವಾಗಿ ಈ ಕಡೆಗೆ ಬರಮಾಡಿಸುವೆನು. ನೀವು ಚಮತ್ಕಾರವಾಗಿ ಅವರನ್ನು ಭವನಕ್ಕೆ ಎಳೆದುಕೊಂಡು ಹೋಗಿ ಈರಾತ್ರಿ ಅಲ್ಲೇ ನಿಲ್ಲಿಸಿದರೆ ಅವರನ್ನು ಸುಲಭವಾಗಿ ಸೆರೆಹಿಡಿಯಬಹುದೆಂದು ಹೇಳಿ ಅವರಪ್ಪಣೆಯನ್ನು ಪಡೆದು ಹಿಂತಿರಿಗಿ ಅತಿ ಜಾಗ್ರತೆಯಾಗಿ ಬಂದು ನಾಲ್ಕು ದಾರಿಗಳು ಕೂಡುವ ಸ್ಥಳಕ್ಕೆ ಸಮೀಪದಲ್ಲಿ ಕುರುಬನ ವೇಷವಂ ಹಾಕಿಕೊಂಡು ಪ್ರತಾಪಕಂಠೀರವಾದಿಗಳಿಗೆ ಈ ಪ್ರಾಂತ್ಯವು ಹೊಸದಾಗಿರುವುದರಿಂದ ದಾರಿಕೇಳುವರೆಂದು ಕುರಿಗಳನ್ನು ಸಮೀಪದಲ್ಲಿಯೇ ಕಾದುಕೊಂಡಿದ್ದೆನು, ನಾನೆಣಿಸಿದಂತೆ ಅವರು ನನ್ನ ಬಲೆಗೆ ಸಿಕ್ಕಲು ಅವರಿಗೆ ಸರಿಯಾದ ದಾರಿಯನ್ನು ತೋರದೆ ಕೃತ್ರಿಮವನ್ನೆಸಗಿದೆನು. ಅವರು ಕಣ್ಣು ಮರೆಯಾಗುವವರಿವಿಗೂ ಅಲ್ಲಿಯೇ ಇದ್ದು ಕುರುಬನ ವೇಷವನ್ನು ತೆಗೆದುಹಾಕಿ ಭವನವನ್ನು ಸೇರಿ, ಅಲ್ಲಿ ಗೋಪ್ಯವಾಗಿಯೇ ಕಾದುಕೊಂಡಿದ್ದೆನು. ಶುಕವಾಣಿದೇವಿಯು ಅವರನ್ನು ಅಲ್ಲಿಗೆ ಕರೆತಂದು ಪ್ರತಾಪಕಂಠೀರವನನ್ನು ತಾನಿಳಿದಿದ್ದ ಕೇಳೀಗೃಹದಲ್ಲಿಯೇ ಇಳಿಯುವಂತೆ ಪ್ರೇರೇಪಿಸಿ ದೇವಿಯು ಭೋಜನಾನಂತರ ಸೋಮಪಾನಾದಿಗಳನ್ನು ಕುಡಿಸುತ್ತಿರುವ ಸಮಯವನ್ನರಿತು ಆತನ ಸೈನ್ಯಾಧಿಪತಿಗಳಿಗೆ ತಿಳಿಯದಂತೆ ವೇಗವಾಗಿ ಇಲ್ಲಿಗೆ ಬಂದೆನು.

ಕರಾಳನು---ನಾನು ಜೊತೆಯಲ್ಲಿ ತಂದಿದ್ದ ಕಿರಾತರನ್ನೆಲ್ಲಾ ಈ ನಿನ್ನ ಅವರಸರಕ್ಕಾಗಿ ಭವನದಲ್ಲಿರುವರನ್ನು ಸೆರೆಹಿಡಿಯಲು ಕಳುಹಿಸಿಬಿಟ್ಟಿರುವೆನು. ಕೇರಳ ದೇಶಕ್ಕೊಡೆಯಳಾದ ಮನೋರಮೆಯು ಅದೋ ಅಲ್ಲಿರುವ

ಮಾರ್ಗದಲ್ಲಿ ಹೋಗುತ್ತಿರುವಳೆಂಬ ಸಮಾಚಾರವನ್ನು ಪ್ರತಿ ಕ್ಷಣದಲ್ಲಿಯೂ ನಿರೀಕ್ಷಿಸುತ್ತಿರುವೆನು. ಈಗ ಭವನಕ್ಕೆ ಹೋಗಿರುವ ಕಿರಾತರು ಸಮಯಕ್ಕೆ ಸರಿಯಾಗಿ ಬಂದರಾಯಿತು. ಇಲ್ಲಧಿದ್ದರೆ ಆಕೆಯನ್ನು ನಾನು ಹ್ಯಾಗೆ ಸೆರೆಹಿಡಿಯಲಿ ?

ಚಾರು—ಮನೋರಮೆಯು ತನ್ನ ದಾದಿಯರೊಡಗೂಡಿ ಪ್ರಯಾಣಿಸುತ್ತಿದ್ದರೆ ಅವರು ಮೂವರನ್ನು ಹಿಡಿದು ನಮ್ಮ ನಿವಾಸಸ್ಥಾನಕ್ಕೆಳದೊಯ್ಯಲು ನಮ್ಮಿಬ್ಬರಿಂದಾಗಲಾರದೆ ?

ಕರಾಳ—ದುಷ್ಟಬುದ್ಧಿಯ ಹೇಳಿಕೆಯನ್ನು ಲಕ್ಷಿಸದೆ ಆಕೆಯು ರಾಹುತರ ಮೈಗಾವಲಿನಿಂದೊಡಗೂಡಿ ಬಂದಪಕ್ಷದಲ್ಲಿ ?

ಚಾರು—ಅದೇನೋ ನಿಶ್ಚಯವು. ಆಕೆಯನ್ನು ಹಿಡಿಯುವ ವಿಷಯದಲ್ಲಿ ಮತ್ತೇನಾದರೂ ಉಪಾಯವಿರುವಲ್ಲಿ ಅಪ್ಪಣೆ ಕೊಡಿಸಿದರೆ. ಶಿರಸಾವಹಿಸಿ ನಡೆಯುವುದಕ್ಕೆ ಸಿದ್ಧನಾಗಿದ್ದೇನೆ. ಆ ಮಾರ್ಗದಲ್ಲಿ ಕಾದು ಕೊಂಡಿರಲೆ ?

ಕರಾಳ—ಆ ಮಾರ್ಗದಲ್ಲಿ ಕಾವಲು ನಿಲ್ಲಿಸದೆ ಇರುವುದಕ್ಕೆ ನಾನೇನು ಮೂಢನೆಂದು ತಿಳಿಯುವಿಯೊ ? ಇದೋ ಆ ಕಾವಲಿನವನೇ ಬರುತ್ತಿರುವನು

ಕರಾಳನು ಮತ್ತು ಚಾರುವೀರನು ಸಂತೋಷಭರಿತರಾಗಿ ಎದ್ದು ಮುಂದುವರಿಯುವಷ್ಟರಲ್ಲಿ ಕಳಿಂಗ ಪಟ್ಟಣ ನಿವಾಸಿಯಂತೆ ಉಡುಪನ್ನು ಧರಿಸಿಕೊಂಡಿರುವ ಅಶ್ವಾರೂಢನಾದೋರ್ವ ಮನುಷ್ಯನು ಅವರೆಡೆಗೆ ಬರಲು ಕರಾಳನು ಅತ್ಯಾತರದಿಂದ—ದುರ್ಜನವಿದಾರಿಯೇ ವರ್ತಮಾನವೇನು ?

ದುರ್ಜನವಿದಾರಿಯು ಕುದುರೆಯನ್ನಿಳಿದು ಮಹಾರಾಜನೇ ನೀವು ವರ್ಣಿಸಿ ಹೇಳಿದ ಅವಯವಗಳನ್ನುಳ್ಳ ಓರ್ವ ನಾರೀಮಣಿಯು ಅಶ್ವಾರೂಢಳಾಗಿ ಇಲ್ಲಿಗೆ ಮೂರು ಮೈಲಿ ದೂರದಲ್ಲಿ ಬರುತ್ತಿದ್ದಳು. ಆಕೆಯ ಜೊತೆಯಲ್ಲಿ ಅಶ್ವಾರೂಢರಾದ ಸುಂದರ ಸ್ತ್ರೀಯರಿಬ್ಬರಿದ್ದರು. ನಾನು ಮರೆಯಲ್ಲೇ ನಿಂತು ಕಾಲು ಘಳಿಗೆವರಿವಿಗೆ ನೋಡುತ್ತಿದ್ದೆನು. ಅವರು ತಾವು ಬಂದ ಮಾರ್ಗವನ್ನೇ ಅನುಸರಿಸದೆ ಎಡಗಡೆಗೆ ಒಡೆಯುವ ಮಾರ್ಗವನ್ನು ಹಿಡಿದು ಹೊರಟುಹೋದರು.

ಕರಾಳ—ಅಯ್ಯೋ ದುರದುಷ್ಟವೇ ! ಇನ್ನೇನು ಸ್ವಲ್ಪಹೊತ್ತಿನಲ್ಲಿಯೇ

ಅವರೆಲ್ಲರೂ ಮುಂದಿರುವ ಪಟ್ಟಣವನ್ನು ಸೇರುವರು. ಅಲ್ಲಿರುವ ಭೋಜನ ಶಾಲೆಯ ಅಧಿಕಾರಿಯಾದರೋ ಕರಾಳನ ಹಾವಳಿಯನ್ನು ಹೇಳಿ, ಅವರಿಗಿಲ್ಲದ್ದ ಭೀತಿಯನ್ನುಂಟುಮಾಡಿ, ನಾಳೆ ಪ್ರಯಾಣಿಸುವಲ್ಲಿ ತನ್ನ ಮನೆಯಲ್ಲಿರುವ ನೆಂಟರನ್ನು ನೈಗಾವಲಿಗಾಗಿ ಕಳುಹಿಸುವನು. ಅವನ ಯೋಚನೆಯಲ್ಲಾ ಆ ಸ್ತ್ರೀಯರಿಂದ ಹಣ ಸಂಪಾದಿಸಬೇಕೆಂಬುದೆ.

ಕರಾಳನು ಸ್ವಲ್ಪ ಹೊತ್ತಿನವರಿಪಿಗೂ ಹಾಗೆಯೇ ನಿಂತು ಯೋಚನೆ ಮಾಡುತ್ತಾ ತನ್ನ ಮನಸ್ಸಿನಲ್ಲಿ – ಯಾವದೊಂದೂ ನಿರ್ವಿಘ್ನವಾಗಿ ನಡಿಯು ವುದಿಲ್ಲವಲ್ಲಾ! ದುಷ್ಟಬುದ್ಧಿಯು ಈ ಅಗಾಧವಾದ ತಂತ್ರವನ್ನು ಹೇಳಿದಾಗ ಇವರಲ್ಲಿ ನನಗಿರುವ ಅಭಿರುಚಿಯು ಕಡಿಮೆಯಾಗಿಯೇ ಇತ್ತು. ಆಹಾ! ನನಗೊಂದು ಯೋಚನೆಯು ಹೊಳಿಯುವುದು. ಹೌದು, ಹ್ಯಾಗಾದರೂ ಮನೋರಮೆಯಲ್ಲಿರುವ ಐಶ್ವರ್ಯ ಪ್ರದಾಯಕವಾದ ಆ ವಿದ್ಯಾ ಮುದ್ರಿಕೆ ಯನ್ನು ಹೊಂದುವೆನು. ಅನಂತರ ಆಕೆಯ ವಿಷಯವಾಗಿ ಮಾಡಬೇಕಾ ದ್ದನ್ನೆಲ್ಲಾ ಮಾಡುವೆನು, ಎಂದು ಏನನ್ನೋ ಮನಸ್ಸಿನಲ್ಲಿ ನಿರ್ಧರಿಸಿಕೊಂಡು ದುರ್ಜನವಿದಾರಿಯನ್ನು ಕುರಿತು, ಎಲೈ ಭಟನೆ ನೀನು ಧರಿಸಿರುವ ಉಡುಪು ಗಳನ್ನು ತೆಗೆದುಕೊಡು ಎಂದಾಜ್ಞಾಪಿಸಿದನು. ಚಾರುವೀರನು ಮತ್ತು ಕಿರಾತ ಭಟನು ಕರಾಳನಿಗೆ ಕಳಿಂಗ ಪಟ್ಟಣ ನಿವಾಸಿಯ ವೇಷವನ್ನು ಹಾಕಿದರು. ಕರಾಳನು ಎರಡು ಕಠಾರಿಯನ್ನು ಹೊರಗೆ ಕಾಣಿಸದಂತೆ ತನ್ನ ಕವಚದಲ್ಲಿರಿ ಸಿಕೊಂಡು ದುರ್ಜನವಿದಾರಿಯ ಕುದುರೆಯು ತನ್ನ ಉಡುಪಿನ ಯೋಗ್ಯತೆಗೆ ತಕ್ಕದ್ದಾಗಿರುವುದರಿಂದ ಅದನ್ನು ಹತ್ತಿ, ಭವನದಿಂದ ಬರುವವರ ವಿಷಯ ವಾಗಿ ಚಾರುವೀರನಿಗೆ ತಿಳಿಸಬೇಕಾದ್ದನ್ನೆಲ್ಲಾ ತಿಳಿಸಿ ಮನೋರಮೆಯು ಇಳಿದಿರುವ ಪಟ್ಟಣವನ್ನು ಕುರಿತು ಹೊರಟನು.

ಹೊತ್ತು ಮುಳುಗುವುದಕ್ಕೆ ಸರಿಯಾಗಿ ಪಟ್ಟಣವನ್ನು ಸೇರಿ, ಸುಮಾರು ರಾತ್ರಿ ೮ ಘಂಟೆಗೆ ಸರಿಯಾಗಿ ಆ ಪಟ್ಟಣದಲ್ಲಿ ಹೆಸರುವಾಸಿಯಾದದೊಂದು ಭೋಜನಶಾಲೆಯ ಅಧಿಕಾರಿಯನ್ನು ಕಂಡು ಅವನ ಅನುಮತಿಯನ್ನು ಪಡೆದು ಆ ಶಾಲೆಯಲ್ಲಿರುವ ಒಂದಾನೊಂದು ಕೊಠಡಿಯಲ್ಲಿ ಇಳಿದು ಕುದುರೆ ಲಾಯದಲ್ಲಿ ತನ್ನ ಕುದುರೆಯನ್ನು ಕಟ್ಟಿಸಿ, ಅಲ್ಲಿರುವ ಮೂರು ಕುದುರೆಗ ಳನ್ನು ನೋಡಿ, ಇವೇ ದುರ್ಜನವಿದಾರಿಯು ವರ್ಣಿಸಿ ಹೇಳಿದ ಕುದುರೆಗಳು

ಎಂದು ಮನಸ್ಸಿನಲ್ಲಿ ಆಲೋಚಿಸಿ ಮನೋರಮೆಯು ಆ ಶಾಲೆಯಲ್ಲೇ ಇಳಿದಿರುವಳೆಂದು ನಿರ್ಧರಿಸಿಕೊಂಡನು. ೯ ಘಂಟೆಯಾಗಲು ಭೋಜನ ಪದಾರ್ಥಗಳೆಲ್ಲವೂ ಅವನ ಕೊಠಡಿಯಲ್ಲೇ ತಂದು ಇರಿಸಲ್ಪಟ್ಟವು. ಊಟ ಮಾಡಿದನಂತರ ಅಲ್ಲಿದ್ದ ಪರಿಚಾರಕರೊಡನೆ ಏನೋ ವಿನೋದವಾಗಿ ಮಾತನಾಡುವಂತೆ ಅಭಿನಯಿಸಿ, ಸ್ವಲ್ಪ ಹೊತ್ತು ಮಾತನಾಡುತ್ತಿದ್ದನು. ಈ ಸಂಭಾಷಣೆಯಲ್ಲಿ ಮನೋರಮೆಯು ತನ್ನ ನಿಜಪದವಿಯನ್ನು ಹೊರಪಡಿಸದಂತೆ ರಹಸ್ಯವಾಗಿ ಪ್ರಯಾಣಿಸುತ್ತಿರುವಳೆಂದು, ತಿಳಿದುಕೊಂಡನಲ್ಲದೆ ಭೋಜನಶಾಲೆಯಲ್ಲಿ ಆಕೆಯು ಇಳಿದಿರುವ ಕೊಠಡಿಯನ್ನೂ ಗೊತ್ತುಮಾಡಿಕೊಂಡನು.

ಸುಮಾರು ಅರ್ಧರಾತ್ರಿಯವರಿವಿಗೂ ಕರಾಳನು ಎಚ್ಚರವಾಗಿದ್ದು, ತನ್ನ ಕವಚದಲ್ಲಿ ಒಂದು ಭಾಗವನ್ನು ಹರಿದು ವಸ್ತ್ರವನ್ನು ಮಾಡಿಕೊಂಡು ಅದರಲ್ಲಿ ಎರಡು ತೂತುಗಳನ್ನು ಕೊರೆದು, ತನ್ನ ಎರಡು ಕಣ್ಣುಗಳಿಗೆ ಸರಿಯಾಗಿ ಆ ತೂತುಗಳು ಬರುವಂತೆ ಮಾಡಿ, ಆ ವಸ್ತ್ರವನ್ನು ಮುಖಕೆ ಕಟ್ಟಿಕೊಂಡು ತನ್ನ ಕೊಠಡಿಯನ್ನು ಬಿಟ್ಟು ಹೊರಟನು. ಅಲ್ಲಿದ್ದವರೆಲ್ಲರೂ ಗಾಢನಿದ್ರೆಯಲ್ಲಿದ್ದರು. ಭೋಜನಶಾಲೆಯೆಲ್ಲವೂ ನಿಶ್ಶಬ್ದವಾಗಿತ್ತು. ಅಂಥಾ ನಿಶಿರಾತ್ರಿಯಲ್ಲಿ ಕರಾಳನು ಮನೋರಮೆಯ ಬಿಡಾರವನ್ನು ಸೇರಿದನು. ಮನೋರಮೆಯು ಮಂಚದಮೇಲೆ ಮಲಗಿದ್ದಳು. ಅದರ ಉತ್ತರ ದಕ್ಷಿಣ ಪಾರ್ಶ್ವಗಳಲ್ಲಿದ್ದ ಎರಡು ಸಣ್ಣ ಸಣ್ಣ ಮಂಚಗಳ ಮೇಲೆ ದಾದಿಯರಿಬ್ಬರು ಮಲಗಿದ್ದರು. ಮನೋರಮೆಯು ಕಂಠದವರಿಗೂ ಶಕಲಾತಿಯನ್ನು ಹೊದ್ದುಕೊಂಡಿದ್ದಳು. ಆಕೆಯು । ಬಲಗೈಯನ್ನು ಮಂಚದ ಬಲಗಡೆ ನೀಡಿಕೊಂಡಿದ್ದಳು. ಆಕೆಯ ದಾದಿಯರಿಬ್ಬರೂ ಗಾಢನಿದ್ರೆಯಲ್ಲಿದ್ದರು. ಆಕೆಗೆ ಮಾತ್ರ ನಿದ್ರೆ ಆಗತಾನೆ ಹತ್ತುತ್ತಿತ್ತು. ಕರಾಳನು ಬಾಗಲಿನ ಹತ್ತಿರ ಸ್ವಲ್ಪ ಹೊತ್ತು ನಿಂತು ಕಿವಿ ಕೊಟ್ಟು ಕೊಟ್ಟು ಕೇಳುತ್ತಿದ್ದು ಒಳಭಾಗದಲ್ಲಿ ಹಾಕಿದ್ದ ಚಿಲುಕವನ್ನು ಏನೊಂದೂ ಶಬ್ದವಾಗದಂತೆ ಉಪಾಯವಾಗಿ ತೆಗೆದು ಬಾಗಿಲನ್ನು ಮೆಲ್ಲನೆ ತಳ್ಳಿ ಒಳಹೊಕ್ಕು ಬಾಗಿಲಿನ ಹತ್ತಿರದಲ್ಲಿಯೇ ನಿಂತು ನೋಡುತ್ತಿದ್ದನು. ಕೋಮಲಾಂಗಿಯಾದ ಮನೋರಮೆಯು ಕರಾಳನು ಪ್ರವೇಶಿಸುವಾಗ ಉಂಟಾದ ಕಿಂಚಿತ್ ಶಬ್ದಕ್ಕೆ ಎಚ್ಚರವಾದರೂ ಯಾವನೋ ಕಳ್ಳನು ಪ್ರವೇಶಿಸಿರುವನೆಂದು ಊಹಿಸಿ ಕಣ್ಣು ಬಿಡದೆ ಗಾಢನಿದ್ರೆಯಲ್ಲಿರುವಳಂತೆ

ನಟಿಸಿದಳು. ಕರಾಳನು ನಡುವಿನಲ್ಲಿದ್ದ ಕಠಾರಿಯನ್ನೆಳದು ಕೈಯಲ್ಲಿ ಹಿಡಿದು ಯಾರೂ ಎಚ್ಚರವಾಗಿಲ್ಲವೆಂದು ತಿಳಿದು, ಹೆಜ್ಜೆಗಳನ್ನು ಮೆಲ್ಲಮೆಲ್ಲನೆ ಇಡುತ್ತಾ ಮನೋರಮೆಯು ಪವಡಿಸಿದ್ದ ಮಂಚವನ್ನು ಸಮೀಪಿಸಿ, ನಿಂತು, ಯಾರಾದರೂ ಅಡಗಿರುವರೇನೋಯೆಂದು ಸುತ್ತಲೂ ನೋಡಿ, ಯಾರೂ ಇಲ್ಲವೆಂದು ನಿರ್ಧರಿಸಿಕೊಂಡು ಮನೋರಮೆಯನ್ನು ಈಕ್ಷಿಸಿ, ಬೆರಗಾಗಿ ನಿಶ್ಚೇಷ್ಟಿತನಾಗಿ ತನ್ನ ಮನಸ್ಸಿನಲ್ಲಿ ಆಕೆಯ ರೂಪವನ್ನು ವರ್ಣಿಸತೊಡಗಿದನು.

ದುಷ್ಟಬುದ್ಧಿಯು ಈಕೆಯ ರೂಪಾತಿಶಯಗಳನ್ನು ಬಣ್ಣಿಸಿ ಹೇಳುವುದರಲ್ಲಿ ಅವನು ವರ್ಣಿಸಿದುದೆಲ್ಲವೂ ಸರಲೋಕದ ಸ್ತ್ರೀಯರಿಗೆ ಎಲ್ಲಿಯದು ಎಂದು ತಿರಸ್ಕರಿಸಿದನು. ದೇವಲೋಕದಲ್ಲಿರುವ ಸ್ತ್ರೀಯರು – ಈ ಜಗತ್ತಿನಲ್ಲೆಲ್ಲಾ ನಾವೇ ರೂಪವತಿಯರು ನಮಗೆ ಸಮಾನರಾದ ಸುಂದರಿಯರು ಇತರ ಲೋಕಗಳಲ್ಲಿರುವರೇ? ಎಂದು ಹರಟುವ ಅವರ ಗರ್ವವನ್ನು ಮುರಿಯಬೇಕೆಂದು ಬ್ರಹ್ಮನೇನಾದರೂ ಅವರಲ್ಲೆಲ್ಲಾ ರೂಪ ಶ್ರೇಷ್ಠಳಾಗಿರುವ ಸುಂದರಿಗಿಂತಲೂ ಇಮ್ಮಡಿಯಾಗಿ ಈಕೆಯನ್ನು ಸೃಷ್ಟಿಸಿರುವನೊ ಏನೀ ಮುಖಚಂದ್ರನು, ಏನೀ ಅಳಕಂಗಳ ಸಮೂಹವು, ಏನೀ ಎಳೆ ಗುಲಾಬಿಯನ್ನೇಳಿಪ ಕದಪು, ಏನೀ ಕೊಂಕಿದ ಪುರ್ಬು, ಏನೀ ಪವಳಕಾಂತಿಯನ್ನಣಗಿಸುವ ತುಟಿಗಳು ; ಏನೀ ಕರ್ಣಗಳು, (ಬಲಗೈಯನ್ನು ನೋಡಿ) ಆಹಾ ಎಷ್ಟು ಕೋಮಲವಾಗಿರುವುದು. ಮೇಲೆ ಮೇಲೆ ತೋರುವ ಹಸುರಾದ ರಕ್ತನಾಳಗಳು ಹ್ಯಾಗೆ ಶೋಭಿಸುವುವು. ಆಹಾ? ಈಕೆಯ ರೂಪವನ್ನು ವರ್ಣಿಸಲಶಕ್ಯವಾಗಿರುವುದಲ್ಲವೆ?

ಕರಾಳನು ಕಳ್ಳರ ರಾಜನಾದರೂ ಧೈರ್ಯಸ್ಥೈರ್ಯ ಗಾಂಭೀರ್ಯ ಮೊದಲಾದ ಗುಣಾತಿಶಯಗಳನ್ನುಳ್ಳವನಾಗಿದ್ದನು. ಶುಕವಾಣಿಯು ಆತನ ಪ್ರೀತಿ ಪಾತ್ರಳಾದ ಮನೋವಲ್ಲಭೆಯೆಂದು ತಿಳಿದಿರುವುದಷ್ಟೆ. ಶುಕವಾಣಿಗಿಂತಲೂ ರೂಪವತಿಯಾದ ಮನೋರಮೆಯನ್ನು ನೋಡಿ, ಅವನಿಗೆ ಮೋಹವುಂಟಾಗಬಹುದೆಂದು ಊಹಿಸಬಹುದಲ್ಲವೆ? ಆದರೆ ಕರಾಳನು ಮನೋರಮೆಯ ರೂಪವನ್ನು ನೋಡಿ, ಆಶ್ಚರ್ಯಪಟ್ಟನೇ ಹೊರತು ಮೋಹಗೊಳ್ಳಲಿಲ್ಲ. ಕಳ್ಳನಾದರೂ ಸತ್ಯವಂತನಾಗಿಯೇ ಇದ್ದನು. ತನ್ನ ಕಾಂತೆಗೆ ಎರಡು ಬಗೆಯಲು

ಅವನಿಗೆ ಕಿಂಚಿತ್ತಾದರೂ ಮನಸ್ಸುಂಟಾಗಲಿಲ್ಲ. ಮನೋರಮೆಯನ್ನು ನೋಡಿ ಮೋಹಿಸುವಷ್ಟು ಚಂಚಲ ಮನಸ್ಕನಾಗಿದ್ದ ಪಕ್ಷದಲ್ಲಿ ಅವನು ಕಿರಾತರಿಗೆಲ್ಲಾ ರಾಜನೆನಿಸಿಕೊಳ್ಳುವುದಕ್ಕೆ ಯೋಗ್ಯನಾಗುವನೆ ? ಪಟ್ಟಣ ವಾಸದಲ್ಲಿರುವ ಜನಗಳಲ್ಲಿ ಸತ್ಯವಂತರೂ ದುರ್ಜನರೂ ಇರುವರು. ಇಂಥಾ ಜನ ಮಿಶ್ರಿತ ಸಮುದಾಯವನ್ನು ತಹಬಂದಿಗೆ ತಂದು ಅವರೆಲ್ಲರಲ್ಲಿಯೂ ಸ್ವಾಮಿ ಭಕ್ತಿಯನ್ನುಂಟುಮಾಡಿ ರಾಜ್ಯಭಾರಮಾಡುವ ರಾಜನು ಸಕಲ ಗುಣಾತಿಶಯಗಳನ್ನುಳ್ಳವನಾಗಿರಬೇಕು. ಹೀಗಿರುವಲ್ಲಿ ದುಷ್ಟ ಕಿರಾತರನ್ನು ಆಳಬೇಕಾದರೆ ಕಿರಾತಾಧಿಪತಿಯಾದ ಕರಾಳನಿಗೂ ಸಕಲ ಗುಣಾತಿಶಯಗಳೂ ಇರಬೇಕು. ಕರಾಳನು ಐಶ್ವರ್ಯವಂತರನ್ನು ಕೊಳ್ಳೆಹೊಡೆಯುವನೇ ಹೊರತು ಬಡವರನ್ನು ಕರುಣದಿಂದ ಕಂಡು ಅವರಿಗೆ ದಾನವನಿತ್ತು ಕಳುಹಿಸುವನು. ಕರಾಳನು ಕರ್ಣಾಟಕದೇಶದ ಎಲ್ಲೆಯಲ್ಲಿದ್ದುಕೊಂಡು ತನ್ನ ಹಾವಳಿಯನ್ನು ನಡೆಸುತ್ತಾ ಅವನನ್ನು ಹಿಡಿಯಲು ಬಂದ ಕರ್ಣಾಟಕ ಸೈನ್ಯಕ್ಕೆ ಸಿಕ್ಕದಂತೆ ಅವರನ್ನು ನಾಡಿನಲ್ಲೆಲ್ಲಾ ಸುತ್ತಾಡಿಸಿ ಬಹಳ ತೊಂದರೆಯನ್ನುಂಟುಮಾಡುತ್ತಿದ್ದನು. ಆ ಅಸಲ್ಚೋರನನ್ನು ಹಿಡಿಯಲಸಾಧ್ಯವೆಂದು ತಿಳಿದು ಅವನನ್ನು ಹಿಡಿದುಕೊಂಡು ಬಂದು ಒಪ್ಪಿಸಿದವರಿಗೆ ೧೦ ಸಾವಿರ ವರಹಗಳನ್ನು ಬಹುಮಾನ ನೀಯುವಂತೆ ಕರ್ಣಾಟಕದ ದೇಶಾಧಿಪನು ಡಂಗುರ ಹೊಡಿಸಿದ್ದನು. ಅನೇಕ ರಾಜಪುತ್ರರು ಪ್ರಯತ್ನಪಟ್ಟು ಸೋತುಹೋಗಿದ್ದರು. ಇಂಥಾ ಕಿರಾತನು ಮನೋರಮೆಯನ್ನು ನೋಡಿ, ಹರ್ಷಹೃದಯನಾದನೇ ಹೊರತು ಮನ್ಮಥನ ಬಾಣಕ್ಕೆ ಗುರಿಯಾಗಲಿಲ್ಲ.

ಮನೋರಮೆಯಾದರೋ ಕಣ್ಣು ಬಿಟ್ಟರೆ ಪ್ರಾಣಾಪಾಯ ಸಂಭವಿಸುವುದೇನೊ, ಎಂದು ಕಣ್ಣು ಮುಚ್ಚಿಕೊಂಡು ಮನಸ್ಸಿನಲ್ಲಿ ಯೋಚಿಸತೊಡಗಿದಳು :– ಈ ಸಮಯದಲ್ಲಿ ನಾನು ಕೂಗು ಹಾಕಿದರೆ ನನ್ನ ಧ್ವನಿಯು ಭೋಜನ ಶಾಲಾಧಿಕಾರಿಯು ಮತ್ತು ಅವನ ಸೇವಕರು ಇರುವ ಸ್ಥಳವನ್ನು ಸೇರಲಾರದು. ನಾನೀಗ ಇರುವ ಕೊಠಡಿಯು ದೊಡ್ಡ ಮನುಷ್ಯರು ಇಳಿದುಕೊಳ್ಳುವುದಕ್ಕಾಗಿ ಶಾಲೆಯ ಒಂದು ಮೂಲೆಯಲ್ಲಿರುವುದು. ಹಾಗೆ ಕೂಗು ಹಾಕಲು ಬಾಯಿಬಿಟ್ಟ ಒಡನೆಯೇ ಆಹುತಿಯಾಗುವೆನು. ಇವನು ದ್ರವ್ಯಾಪೇಕ್ಷೆಯಿಂದ ತಾನೆ ಬಂದಿರುವನು. ಮೇಜಿನ ಮೇಲೆ ನಾನು ಕಳಚಿಟ್ಟಿರುವ

ವಸ್ತ್ರಾಭರಣಗಳು ಹೋದರೆ ನನಗೇನು ಲಕ್ಷ್ಯವೇ! ನನ್ನ ಪ್ರಾಣ ಉಳಿದರೆ ಸಾಕು.

ಎಂದೆಣಿಸಿ ಮನೋರಮೆಯು ಗಾಢನಿದ್ರೆಯಲ್ಲಿರುವಳಂತೆಯೇ ನಟಿಸಿ, ಕೈಕಾಲುಗಳು ಯಾವುದೂ ಅಲುಗಿಸದೆ ಮಲಗಿದ್ದಳು.

ಕರಾಳನು ಎಡಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ವಸ್ತ್ರಾಭರಣಗಳನ್ನು ಮುಟ್ಟದೆ ಮಂಚದ ಪಕ್ಕವನ್ನೈದಿ ಕಠಾರಿಯನ್ನು ಮನೋರಮೆಯ ಎದೆಗೆ ಗುರಿಯಿಟ್ಟು ಹಿಡಿದುಕೊಂಡು ತನ್ನ ಬಲಗೈ ಬೆರಳುಗಳಿಂದ ಆ ಸುಂದರೀಮಣಿಯ ಬಲಗೈ ಬೆರಳಿನಲ್ಲಿದ್ದ ಉಂಗುರವನ್ನು ಎಳೆಯಲಾರಂಭಿಸಿದನು.

ಈಗಲೀಗ ಮನೋರಮೆಯ ಧೈರ್ಯವನ್ನು ಪರೀಕ್ಷೆ ಮಾಡುವ ಸಮಯವು ಆಕೆಯು ಎದೆಯ ಮೇಲೆ ಸುಮಾರು ಎರಡು ಅಂಗುಲದಲ್ಲಿರುವ ಕಠಾರಿಯನ್ನು ಪ್ರಾಣಾಪಾಯಗೊಳಿಸುವ ಯಾವುದೋ ಒಂದು ಆಯುಧವೆಂದು ತಿಳಿದುಕೊಂಡಳು. ಅಲ್ಲದೆ ಆ ಉಂಗುರವು ಮೇಜಿನ ಮೇಲಿದ್ದ ವಸ್ತ್ರಾಭರಣಗಳಿಗಿಂತಲೂ ಬಹು ಕಮ್ಮಿಬೆಲೆಯುಳ್ಳದ್ದಾಗಿದ್ದರೂ ಅದನ್ನು ಕಳೆದುಕೊಳ್ಳುವುದು ಆಕೆಗೆ ತನ್ನ ಪ್ರಾಣವನ್ನು ಹೋಗಲಾಡಿಸಿಕೊಳ್ಳುವಂತೆಯೇ ಇತ್ತು. ಆಗಲಾದರೂ ಕೂಗುಹಾಕಿದಳೆ? ಇಲ್ಲ. ಆಕೆಯ ಸ್ಥೈರ್ಯವನ್ನು ವರ್ಣಿಸಲಸಾಧ್ಯವಲ್ಲವೆ?

ಕರಾಳನು ಉಂಗುರವನ್ನು ಕಳಚಿಕೊಂಡು ಮತ್ತ್ಯಾವದೊಂದನೂ ತೆಗೆದುಕೊಳ್ಳದೆ ಜಾಗ್ರತೆಯಾಗಿ ಹೆಜ್ಜೆಗಳನ್ನಿಡುತ್ತಿದ್ದನು. ಮನೋರಮೆಯು ಕಣ್ಣು ಬಿಟ್ಟು ಹಿಂತಿರುಗುತ್ತಿರುವ ಕರಾಳನನ್ನೋಡುತ್ತಿದ್ದನು. ಕರಾಳನು ಬಾಗಲನ್ನು ಸೇರಿ, ಯಾರಾದರೂ ಎಚ್ಚರವಾದರೇನೋಯೆಂದು ಹಿಂತಿರುಗಿ ನೋಡುವಷ್ಟರಲ್ಲಿಯೆ ಆ ಮೀನಾಕ್ಷಿಯ ಕಣ್ರೆಪ್ಪೆಗಳು ಮುಚ್ಚಲ್ಪಟ್ಟವು. ಕರಾಳನು ಯಾರೂ ಎಚ್ಚರವಾಗಿಲ್ಲವೆಂದು ನಿರ್ಧರಿಸಿ ಬಾಗಲನ್ನು ಮೆಲ್ಲನೆ ತಳ್ಳಿ, ಹೊರಟುಬಂದು ಒಬ್ಬ ಸೇವಕನನ್ನೆಬ್ಬಿಸಿ ಅಶ್ವಶಾಲೆಯನ್ನು ಸೇರಿ ತನ್ನ ಕುದುರೆಯನ್ನೇರುತ್ತಿದ್ದನು. ಅಷ್ಟರಲ್ಲಿಯೆ ಆ ನಿಶಿರಾತ್ರಿಯಲ್ಲಿ ಒಬ್ಬ ವರ್ತಕನು ಬಂದು ಆ ಶಾಲೆಯಲ್ಲಿಳಿದುಕೊಳ್ಳಲು ಆ ಸೇವಕನನ್ನು ಕೇಳಿದನು. ಅವನು ಕೈಯಲ್ಲಿ ಹಿಡಿದಿದ್ದ ಲಾಂದ್ರದೊಡನೆ, ಬಾಗಲಿಗೆ ಬಂದು

ಆ ವರ್ತಕನನ್ನು ಒಳಗೆ ಕರೆದುಕೊಂಡು ಹೋಗುತ್ತಿದ್ದನು. ಆ ಸಮಯ ದಲ್ಲಿ ಅಶ್ವಾರೂಢನಾದ ಕರಾಳನು ಅವರೆದುರಿನಲ್ಲಿ ಬರುತ್ತಿದ್ದನು. ಲಾಂದ್ರದ ಬೆಳಕು ಕರಾಳನ ಮುಖದ ಮೇಲೆ ಬೀಳಲು, ಆ ವರ್ತಕನು ಕರಾಳನನ್ನು ಕಂಡಕೂಡಲೆ ದಿಗ್ಭ್ರಾಂತನಾಗಿ ನಿಂತಲ್ಲಿಯೇ ನಿಂತು ಗಡಗಡನೆ ನಡಗುತ್ತಿದ್ದನು. ಕರಾಳನು ತನ್ನ ಕುದುರೆಯನ್ನು ಚಮಕಾಯಿಸಿ ವೇಗವಾಗಿ ಹೋಗುತ್ತಿದ್ದನು.

ವರ್ತಕನು ಸ್ವಲ್ಪಹೊತ್ತಿನವರಿವಿಗೂ ಪ್ರಜ್ಞೆಯಿಲ್ಲದೆ ನಿಂತಿದ್ದು, ಆಮೇಲೆ ಅಶ್ವಾರೂಢನಾಗಿ ಹೋದವನು ಕರಾಳನೆಂದು ತಿಳುಹಿಸಿದನು. ಭೋಜನಶಾಲಾಧಿಕಾರಿಯು ಇದನ್ನು ತಿಳಿದು, ಆ ದುಷ್ಟನು ಹೋಗಿ ಬಹಳ ಹೊತ್ತಾದುದರಿಂದ ಅವನನ್ನು ಹಿಂಬಾಲಿಸಿ ಹೋಗಿ ಹಿಡಿಯುವುದು ಕಷ್ಟವೆಂದು ಹೇಳಿ, ಕರಾಳನು ಇಳಿದಿದ್ದ ಕೊಠಡಿಯನ್ನು ಪ್ರವೇಶಿಸಿ, ಮೇಜಿನ ಮೇಲೆ ಕರಾಳನ ಭೋಜನ ಕ್ರಯಕ್ಕಿಂತಲೂ ಹೆಚ್ಚಾಗಿ ಇರಿಸಿದ್ದ ಹಣವನ್ನು ತೆಗೆದುಕೊಂಡು ನಿದ್ರೆಗೈಯಲು ಹೋದನು.

ಇತ್ತ ಮನೋರಮೆಯು ಕರಾಳನು ಹೋದ ಓಡನೆಯೇ ಕಣ್ಣು ಬಿಟ್ಟು ನೋಡಿದಳು. ಕೋಮಲಾಂಗಿಯಾದುದರಿಂದಲೂ, ಅಲ್ಲಿಯವರಿಗೂ ಕೈ ಕಾಲು ಅಲುಗಿಸದೆ ಬಹಳ ಕಷ್ಟಪಟ್ಟವಳಾದ್ದರಿಂದಲೂ, ತಕ್ಷಣವೆ ಮೂರ್ಛಿತೆಯಾಗಿ ಕಣ್ಣು ಮುಚ್ಚಿಕೊಂಡಳು. ಮೂರ್ಛೆಯಿಂದೆಚ್ಚತ್ತು ಕಣ್ಣು ಬಿಡಲು ಬೆಳಗಾಗಿತ್ತು. ದಾದಿಯರಿಬ್ಬರೂ ತಮ್ಮ ಮಂಚದ ಮೇಲೆ ಮಲಗಿದ್ದರು.

ಬಳಿಕ ಲತಾಂಗಿಯು ಮಂಚದಿಂದೆದ್ದು ತನ್ನ ದಾದಿಯರನ್ನೆಬ್ಬಿಸಿ ರಾತ್ರಿ ನಡೆದುದನ್ನೆಲ್ಲಾ ಹೇಳಿದಳು. ಅವರು ಇಬ್ಬರು ಬಹುವಿಷಾದಪಟ್ಟು ಹ್ಯಾಗಾದರೂ ದೈವಾನುಗ್ರಹದಿಂದ ನಮ್ಮ ಒಡತಿಯು ಬದುಕಿದಳಲ್ಲಾ! ಎಂದು ಸಂತೋಷಹೃದಯರಾದರು.

ದಾದಿಯರಲ್ಲಿ ಮೊದಲನೇಯವಳಾಗಿಯೂ, ಸುಮಾರು ೨೦ ವರುಷ ವಯಸ್ಕಳಾಗಿಯೂ, ಚತುರಿಯಾಗಿಯೂ, ಇರುವ ಚೂತಲತಿಕೆಯು ಆ ಕಾಮಾಕ್ಷಿಯನ್ನು ಕುರಿತು—ಮಹಾರಾಣಿಯೇ ರಾತ್ರಿ ನಡೆದ ಸಮಾಚಾರವನ್ನೆಲ್ಲಾ ಭೋಜನಶಾಲಾಧಿಕಾರಿಗೆ ತಿಳಿಸೋಣ?

ಎರಡನೇಯವಳಾಗಿಯೂ, ಸುಮಾರು ೧೭ ವರುಷ ವಯಸ್ಕಳಾ

ಗಿಯೂ ಬಹು ಸುಂದರಿಯಾಗಿಯೂ, ಇರುವ ಮದನಿಕೆಯು—ಆ ಕಳ್ಳನು ಶಾಲೆಯಲ್ಲಿ ಇರಬಹುದಲ್ಲವೆ ?

ಮನೋ—ಬೆಳಗಾಗಿ ಬಹಳ ಹೊತ್ತಾಯಿತು. ಈವರಿವಿಗೆ ಇಲ್ಲಿರುವನೆ ? ಈ ಕಳುವನ್ನು ಶಾಲಾಧಿಕಾರಿಗೆ ತಿಳಿಸಿದರೆ ತನ್ನ ಶಾಲೆಗೆ ಒಂದು ಕೆಟ್ಟ ಹೆಸರು ಬರುವುದೆಂದು ಶೀಘ್ರದಲ್ಲಿಯೇ ಈ ಪಟ್ಟಣದ ಅಧಿಕಾರಿಗಳಿಗೆ ತಿಳಿಸುವನು. ಅವರಲ್ಲಿಗೆ ಬಂದು, ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ಕೆಲಸವೇನು ? ಎಂದು ಅನೇಕ ಪ್ರಶ್ನೆಗಳನ್ನು ಕೇಳುವರು. ಈ ಕಠಿಣ ಪ್ರಶ್ನೆಗಳನ್ನೆಲ್ಲಾ ಕೇಳಿಸಿಕೊಳ್ಳಲು ನನ್ನಿಂದಾಗುವುದಿಲ್ಲ. ಅದೂ ಅಲ್ಲದೆ ನಮ್ಮ ಪ್ರಯಾಣವು ಬಹಳ ರಹಸ್ಯವಾಗಿರುವಂಥಾದ್ದು.

ಚೂತ—ಆ ಕಳ್ಳನು ಮತ್ಯಾವ ಪದಾರ್ಥವನ್ನೂ ಮುಟ್ಟದೆ ನಿಮ್ಮ ಕೊನೆ ಬೆರಳಿನಲ್ಲಿದ್ದ ಉಂಗುರವನ್ನು ತೆಗೆದುಕೊಂಡು ಹೋದುದನ್ನು ನೋಡಿದರೆ ಅವನು ಯಾವುದೋ ಒಂದು ಕಾರಣಾಂತರವಾಗಿಯೇ ಹೀಗೆ ಮಾಡಿರುವನೆಂದು ತೋರುವುದು.

ಮನೋ—ಅವನು ನನ್ನ ಉಂಗುರವನ್ನು ಕದ್ದುಕೊಂಡುಹೋಗುವಾಗ ಆಚರಿಸಿದ್ದನ್ನೆಲ್ಲಾ ನೋಡಿದರೆ ನೀನು ಹೇಳಿದಂತೆಯೇ ಇರಬೇಕೆಂದು ಚೆನ್ನಾಗಿ ತಿಳಿಯುವುದು.

ಮದ—ಈ ವಿಷಯದಲ್ಲಿ ಇನ್ನೇನು ಮಾಡುವುದಕ್ಕೂ ಆಗುವುದಿಲ್ಲವೆ?

ಮನೋ—ಹ್ಯಾಗೆ ಯೋಚಿಸಿದರೂ ಯಾವುದೂ ತೋರುವುದಿಲ್ಲ. ಆದ್ದರಿಂದ ಈ ವಿಷಯವನ್ನು ಮತ್ಯಾರಿಗೂ ತಿಳಿಸಬಾರದು. ಎಲ್ಲಿ ! ವಸ್ತ್ರಾಭರಣಗಳನ್ನು ತೆಗೆದುಕೊಂಡು ಬನ್ನಿರಿ.

ದಾದಿಯರಿಬ್ಬರೂ ಮನೋರಮೆಯನ್ನು ಅಲಂಕರಿಸುವುದಕ್ಕೆ ಬೇಕಾದ ವಸ್ತ್ರಾಭರಣಾದಿಗಳನ್ನೆಲ್ಲಾ ತೆಗೆದುಕೊಂಡು ಬರುವುದಕ್ಕೆ ಹೋಗಲು ಆ ವನಜಮುಖಿಯು ತನ್ನ ಮನಸ್ಸಿನಲ್ಲಿ, ಆ ಉಂಗುರವು ಕಳುವಾಗಿ ಹೋಗಿರುವುದರಿಂದ ಈ ನನ್ನ ರಹಸ್ಯಪ್ರಯಾಣದ ಉದ್ದೇಶವು ಹಾಳಾಗುವಂತಾಗುವುದಲ್ಲ ! ಆ ಉಂಗುರವನ್ನು ಯಾರಿಗೆ ಒಪ್ಪಿಸಬೇಕೋ ಅವನಿಗೆ ನಾನೇನೆಂದು ಹೇಳಲಿ ! ಆ ಉಂಗುರವನ್ನು ಹೋಗಲಾಡಿಸಿಕೊಂಡ ಈ ನನ್ನ ದುರದೃಷ್ಟವನ್ನು ಹೇಳಿಕೊಳ್ಳಲಿ ? ಆಹಾ ! ಎಂಥಾ ಸಂಕಟ ಪ್ರಾಪ್ತ

ವಾಯಿತು. ಇದೋ ದಾದಿಯರು ಬರುತ್ತಿರುವರು. ಅವರಿಗೆ ನನ್ನ ಮುಖ ವಿವರ್ಣವನ್ನು ತೋರಿಸಬಾರದು. ಧೈರ್ಯಗೊಂಡೇ ಇರಬೇಕು, ಎಂದು ಬಲವಂತವಾಗಿ ವಿಷಾದರಹಿತಳಂತಿದ್ದಳು.

ದಾದಿಯರು ಬಂದು ಆ ಲತಾಂಗಿಗೆ ವಸ್ತ್ರಾಭರಣಗಳನ್ನು ಉಡಿಸಿ ಹಣೆಯಲ್ಲಿ ಕುಂಕುಮವನ್ನಿಟ್ಟು ಶೃಂಗರಿಸಿದರು, ಆ ಜಗನ್ಮೋಹಿನಿಯು ತನ್ನ ದಾದಿಯರನ್ನು ಮುಂದೆ ಪ್ರಯಾಣಮಾಡುವುದಕ್ಕೆ ಎಲ್ಲವನ್ನೂ ಸಿದ್ಧ ಪಡಿಸುವಂತೆ ನೇಮಿಸಿ ಕಳುಹಿ, ಮಂಚದ ಮೇಲೆ ಕುಳಿತುಕೊಂಡು ಯೋಚಿಸುತ್ತಿರಲು, ಶಾಲಾಧಿಕಾರಿಯು ಪ್ರವೇಶಿಸಿ, ಮನೋರಮೆಯ ಸಮೀಪಕ್ಕೆ ಬಂದು, ನೀವು ದಾದಿಯರೊಡಗೂಡಿ ಮುಂದೆ ಪ್ರಯಾಣ ಬೆಳಸುವಂತೆ ತೋರುವುದು. ಹಾಗೆ ಮಾಡುವುದು ನಿಜವಾಗಿಯೂ ಬಹು ಅಪಾಯಕರವಾದದ್ದು.

ಮನೋ—ಹಾಗಂದರೇನು ?

ಶಾ. ಅ.—ಕರ್ಣಾಟಕ ದೇಶಾಧಿಪತಿಗೆ ಇಲ್ಲದಿದ್ದ ತೊಂದರೆಯನ್ನು ಕೊಟ್ಟ ಆ ಚೋರಶಿಖಾಮಣಿಯ ಹಾವಳಿಯನ್ನು ನೀವೆಂದೂ ಕೇಳಲಿಲ್ಲವೆ ?

ಮನೋ—ಕರಾಳನೆಂಬುವನೋ !

ಶಾ. ಅ.—ಅವನೇ ! ಆಗಾಗ್ಯೆ ತನ್ನ ಪರಿವಾರದೊಡಗೂಡಿ ಈ ಪ್ರಾಂತ್ಯದಲ್ಲಿ ಬಹಳ ತೊಂದರೆಯನ್ನುಂಟುಮಾಡುತ್ತಿರುವನು.

ಮನೋ—ಈಗಲೇನಾದರೂ ಈ ಪ್ರಾಂತ್ಯದಲ್ಲಿರುವನೆ ?

ಶಾ. ಅ.—ಅಹುದು. ಎರಡು ಮೂರು ದಿವಸಗಳಿಂದ ಈ ಪ್ರಾಂತ್ಯದಲ್ಲಿ ಹಾವಳಿ ಮಾಡುತ್ತಿದ್ದಾನೆಂದು ಸಮಾಚಾರವು ಬಂದಿರುವುದು, ನಾನೀಗ ಒಂದು ವರ್ತಮಾನವನ್ನು ಹೇಳುವೆನು. ನೀವು ಬೆಚ್ಚಿಬೀಳಬೇಡಿ ? ನಿನ್ನೇ ರಾತ್ರೆ ಕರಾಳನು ಈ ಶಾಲೆಯಲ್ಲಿಯೇ ಇಳಿದುಕೊಂಡಿದ್ದನು. ಎಂದು ರಾತ್ರೆ ನಡೆದ ವಿಷಯವನ್ನೆಲ್ಲಾ ಹೇಳಿದನು.

ಮನೋರಮೆಯು ಸ್ವಲ್ಪ ಘಾಬರಿಪಟ್ಟು ಧೈರ್ಯವನ್ನವಲಂಬಿಸಿ ರಾತ್ರೆ ಬಂದಿದ್ದವನು ಕರಾಳನೇ, ಎಂದು ಮನಸ್ಸಿನಲ್ಲೆಣಿಸಿ, ಶಾಲಾಧಿಕಾರಿಯನ್ನು ಕುರಿತು—ಅವನ ಅವಯುವಗಳನ್ನೆಲ್ಲಾ ವರ್ಣಿಸಿ ಹೇಳು. ಮುಂದೆ ಪ್ರಯಾಣದಲ್ಲಿ ನಾನು ಜಾಗರೂಕಳಾಗಿರಬೇಕಲ್ಲವೆ ?

ಶಾ.ಅ.—ನಾನು ಅವನನ್ನು ನೋಡಿಲ್ಲ. ಆದರೆ ಸುಮಾರು ೩೨ ವಯಸ್ಸುಳ್ಳವನೆಂದೂ, ಮುಖದಲ್ಲಿ ಮೀಸೆ ಇರುವುದೆಂದೂ, ಜನರು ಹೇಳುವರು.

ಮನೋ—ಅವನ ಉಡುಪು ಹ್ಯಾಗಿರುವುದು ?

ಶಾ. ಅ.—ಅವನು ಒಂದು ಉಡುಪನ್ನು ಧರಿಸುವನೇ? ಬೇಕಾದ ವೇಷಗಳನ್ನೆಲ್ಲಾ ಹಾಕಿಕೊಳ್ಳಬಲ್ಲನು. ಅವನ ಉಡುಪು ಇಂಥಾದ್ದೆಂದು ತಿಳಿಯುವುದಕ್ಕೆ ಆಗುವುದಿಲ್ಲ.

ಮನೋ—ಯಾವ ಉದ್ದಿಶ್ಯವಾಗಿ ಅವನು ನಿನ್ನೇ ರಾತ್ರಿ ಇಲ್ಲಿ ಇಳಿದುಕೊಂಡಿರಬಹುದು ?

ಶಾ. ಅ.—ಹೀಗೆಯೇ ಎಂದು ನಿರ್ಧರಿಸಲಾಗುವುದಿಲ್ಲ, ವಿಶ್ರಾಂತಿಯನ್ನು ಹೊಂದಲೋಸುಗವೊ, ಏನನ್ನಾದರೂ ತಿಳಿದುಕೊಂಡು ಹೋಗುವುದಕ್ಕೋ ಅಥವಾ ಇಲ್ಲಿ ಇಳಿದಿರುವವರು ಯಾವಯಾವ ಕಡೆಗೆ ಪ್ರಯಾಣ ಮಾಡುವರೋ ಎಂದು ತಿಳಿದುಕೊಂಡು ಹೋಗಿ ಅವರುಗಳನ್ನು ಹಿಡಿಯಬೇಕಾದ ಪ್ರಯತ್ನಗಳನ್ನು ಮಾಡಿಕೊಳ್ಳಲೋಸುಗವೋ, ಅವನು ರಾತ್ರೆ ಬಂದಿರಬೇಕು. ಹೀಗಿರುವಲ್ಲಿ ನೀವು ಪುರುಷರ ಮೈಗಾವಲಿಲ್ಲದೆ ಪ್ರಯಾಣವನ್ನು ಬೆಳಸುವುದು ಬಹಳ ಅಪಾಯಕರವಾದದ್ದು.

ಮನೋರಮೆಯು ಶಾಲೆಯಲ್ಲಿಳಿದುಕೊಂಡದ್ದಕ್ಕೂ, ಪುರುಷರ ಮೈಗಾವಲನ್ನು ಏರ್ಪಡಿಸುವುದಕ್ಕೂ, ಆತನಿಗೆ ಕೆಲವು ವರಹಗಳನ್ನಿತ್ತು ಕಳುಹಿಸಿದಳು. ದಾದಿಯರು ಈ ಸಂಭಾಷಣೆಯ ವಿಷಯವು ತಿಳಿಯಲು ಅವಕಾಶವಾಗಲಿಲ್ಲ.

ಅನಂತರ ಎಲ್ಲವೂ ಸಿದ್ಧವಾಗಲು ೧೨ ಮಂದಿ ಅಶ್ವಾರೂಢರಾದ ಮೈಗಾವಲಿನವರೊಡಗೂಡಿ, ಆ ಸ್ತ್ರೀಯರು ಕುದುರೆಗಳನ್ನೇರಿ ಸುಮಾರು ಎಂಟು ಘಂಟೆ ಸಮಯಕ್ಕೆ ಸರಿಯಾಗಿ ಭೋಜನಶಾಲೆಯನ್ನು ಬಿಟ್ಟು ಕಳಿಂಗ ಪಟ್ಟಣದ ಮಾರ್ಗವನ್ನಿಡಿದು ಪ್ರಯಾಣಿಸಿದರು.

ಸುಮಾರು ೧೦ ಘಂಟೆಗೆ ಸರಿಯಾಗಿ ಒಂದು ಗ್ರಾಮವನ್ನು ಸೇರಿ, ಅಲ್ಲಿರುವ ಪಟೇಲನ ಮನೆಯಲ್ಲಿಳಿದುಕೊಂಡು ಊಟ ಉಪಚಾರಗಳನ್ನು ತೀರಿಸಿಕೊಂಡು ವಿಶ್ರಮಿಸಿಕೊಳ್ಳುತ್ತಿದ್ದರು. ಮನೋರಮೆಯು ತನ್ನ ಮನಸ್ಸಿನಲ್ಲಿ—ನಾನಾದರೋ ರಹಸ್ಯವಾಗಿ ಪ್ರಯಾಣಿಸುತ್ತಿರುವೆನು. ಈಗ

ಹನ್ನೆರಡು ಮಂದಿ ಪುರುಷರಿದ್ದರೆ ನೋಡಿದವರಿಗೆ ಬಹಳ ಸಂಶಯ ತೋರುವುದು, ಆದ್ದರಿಂದ ಇವರನ್ನು ಇಲ್ಲಿಂದಲೆ ಹಿಂತಿರುಗುವಂತೆ ಹೇಳುವೆನು. ಆದರೆ ಇಲ್ಲಿಗೆ ೧ ಮೈಲಿಯಲ್ಲಿ ಹುಲಿಕಾಟವಿರುವುದೆಂದು ಈ ಗ್ರಾಮವಾಸಿಗಳು ಹೇಳುವರು. ಒಳ್ಳೇದು, ಈ ಗ್ರಾಮದಿಂದ ಇಬ್ಬರು ಮೃಗಾವಲಿನವರನ್ನು ಕರೆದುಕೊಂಡು ಹೋಗುವೆನು. ಎಂದು ಯೋಚಿಸಿ ಹಾಗೆಯೇ ಮಾಡಿ ಪ್ರಯಾಣ ಬೆಳೆಸಿ ಹೋಗುತ್ತಿದ್ದಳು.

ಮನೋರಮೆಯೂ ದಾದಿಯರೂ ಮಧ್ಯದಲ್ಲಿಯೂ ಉಭಯಪಾರ್ಶ್ವದಲ್ಲಿಯೂ ಇಬ್ಬರು ಮೃಗಾವಲಿನವರೂ ಹೋಗುತ್ತಿದ್ದರು. ಸುಮಾರು ೩ ಘಂಟೆ ಸಮಯಕ್ಕೆ ಸರಿಯಾಗಿ ಒಂದು ಘರ್ಜನಾಧ್ವನಿಯು ಕೇಳಿಸಿತು. ಮೃಗಾವಲಿನವರಿಬ್ಬರೂ ದನುರ್ಧಾರಿಗಳಾಗಿ ಸನ್ನದ್ಧರಾದ ಸ್ವಲ್ಪ ಹೊತ್ತಿನಲ್ಲೇ ಮತ್ತೊಂದು ಘರ್ಜನಾಧ್ವನಿಯುಂಟಾಗಲು ಆ ಮೂವರು ಸ್ತ್ರೀಯರ ಕುದುರೆಗಳು ಬೆದರಿ, ದಿಕ್ಕೆಟ್ಟು ಓಡಲಾರಂಭಿಸಿದವು. ಕೂಡಲೇ ಮಾರ್ಗ ಸಮೀಪದ ಪೊದರನ್ನು ಹಾರಿಬಂದ ಒಂದು ಹುಲಿಯು ಗೋಚರವಾಯಿತು. ಮೃಗಾವಲಿನವರಿಬ್ಬರು ಬಾಣಗಳನ್ನು ಗುರಿಯಿಟ್ಟು ಪ್ರಯೋಗಿಸುವಷ್ಟರಲ್ಲಿಯೇ ಹುಲಿಯು ಒಬ್ಬನ ಮೇಲೆ ಹಾರಿ, ಅವನನ್ನು ಕೆಡಹಿತು. ಎರಡನೆಯವನು ಪ್ರಯೋಗಿಸಿದ ಬಾಣವು, ಹುಲಿಯನ್ನು ಘಾಯಪಡಿಸಿತೇ ಹೊರತು ಅದನ್ನು ಸಂಹರಿಸಲಿಲ್ಲ. ಹುಲಿಯಾದರೊ ಘಾಯಪಡೆದ ಕೋಪದಿಂದ ಕೆರಳಿ, ಎರಡನೆಯವನ ಮೇಲೆ ಹಾರಿಬಿದ್ದು ಅವನನ್ನೂ ಕೆಳಗೆ ಕೆಡವಿತು. ಅವರಿಬ್ಬರ ಕುದುರೆಗಳೆರಡು ಘಾಯಪಡೆದು, ಘಾಬರಿಪಟ್ಟು ಪಲಾಯನವಾದವು. ಎರಡನೆಯವನು ಕೆಳಗೆಬಿದ್ದ ಸಮಯಕ್ಕೆ ಸರಿಯಾಗಿ ಎಲ್ಲಿಂದಲೋ ಒಂದು ಬಾಣವು ಬಂದು ಹುಲಿಯನ್ನು ಹೊಡೆಯಲು ಆ ಹುಲಿಯು ಕೆಳಗೆ ಬಿದ್ದು ಹೊರಳಾಡುತ್ತಿತ್ತು. ಇನ್ನೊಂದು ಬಾಣವು ಬಂದು ಹುಲಿಯನ್ನು ಸಂಪೂರ್ಣವಾಗಿ ಸಂಹರಿಸಿತು. ಮೂವರು ಅಶ್ವಾರೂಢರು ಆ ಸ್ಥಳವನ್ನು ಸೇರಿದರು.

ಇಷ್ಟು ಅನಾಹುತಗಳು ನಡೆಯುತ್ತಿರಲು ಆ ಸ್ತ್ರೀಯರು ದಿಕ್ಕೆಟ್ಟು ಓಡಿದ ತಮ್ಮ ಕುದುರೆಗಳಿಂದ ಕೆಳಗೆ ಬೀಳದಂತೆ ಲಗಾಮನ್ನು ಸರಿಯಾಗಿ ಹಿಡಿದು ಮಾರ್ಗದಲ್ಲಿಯೇ ನಿಂತುಕೊಂಡಿದ್ದರು.

ಇಂಥಾ ಆಪತ್ಕಾಲದಲ್ಲಿ ಬಂದೊದಗಿದ ಆ ಮೂವರು ಯಾರಾಗಿರಬಹುದು ? ಪ್ರತಾಪಕಂಠೀರವಾದಿಗಳಲ್ಲದೆ ಮತ್ಯಾರು ಆ ಹುಲಿಯನ್ನು ಸಂಹರಿಸಲು ಶಕ್ತರು ?

ಪ್ರತಾಪಕಂಠೀರವನು ಘಾಯಪಡೆದು ಬಿದ್ದಿರುವ ಮನೋರಮೆಯ ಮೈಗಾವಲಿನವರನ್ನು ನೋಡಿಕೊಳ್ಳುವಂತೆ ಸೈನ್ಯಾಧಿಪತಿಗಳಿಗೆ ಹೇಳಿ, ತನ್ನ ಕುದುರೆಯನ್ನು ಚಮುಕಾಯಿಸಿ ಮನೋರಮೆಯೂ ಆಕೆಯ ದಾದಿಯರು ನಿಂತಿದ್ದ ಸ್ಥಳವನ್ನು ಸೇರಿ—ನಾರೀಮಣಿಗಳೇ ಭಯಪಡಬೇಡಿರಿ. ಹುಲಿಯು ಸತ್ತುಬಿದ್ದಿರುವುದು. ಎಂದು ಹೇಳಲು, ಮನೋರಮೆಯು ಆತುರದಿಂದ, ಮಹಾನುಭಾವನೇ ನಮ್ಮ ಕಷ್ಟ ನಿವಾರಣೆಗೊಳಿಸಲು ಬಂದ ಆಪದ್ಬಂಧುವೆ ! ನಿನಗೆ ಮನಃಪೂರ್ವಕವಾದ ವಂದನೆಗಳನ್ನು ಸಮರ್ಪಿಸುವೆನು. ನನ್ನ ಮೈಗಾವಲಿನವರಿಗೇನಾದರೂ ಪ್ರಾಣಾಪಾಯವುಂಟಾಗಿರುವುದೆ ? ದಯವಿಟ್ಟು ಹೇಳಬೇಕು. ಎಂದು ಬೆಸಗೊಂಡಳು.

ರಾಜ—ಪ್ರಾಣಹಾನಿಗೊಳಿಸುವ ವ್ರಣವ್ಯಾವುದೂ ಅವರಿಗುಂಟಾಗಿಲ್ಲ ಆದರೆ ಅವರಿಬ್ಬರೂ ಪೂರಾ ಘಾಯ ಪಡೆದಿರುವರು. ನಾವುಗಳು ಈ ಮಾರ್ಗವನ್ನು ಸೇರಲು ಒಂದು ಸಣ್ಣ ದಾರಿಯನ್ನನುಸರಿಸಿ ಬರುತ್ತಿದ್ದೆವು. ಹುಲಿಯ ಘರ್ಜನಾಧ್ವನಿಯನ್ನು ಕೇಳಿ, ಆ ಶಬ್ದವನ್ನೇ ಹಿಡಿದು ಬಂದು ಹುಲಿಯು ಎರಡನೆಯ ಮೈಗಾವಲಿನವನನ್ನು ಉರುಳಿಸುವ ಸಮಯಕ್ಕೆ ಸರಿಯಾಗಿ ಬಾಣಪ್ರಯೋಗ ಮಾಡಿ ಹುಲಿಯನ್ನು ಕೆಡವಿದನು. ಮತ್ತೊಂದು ಬಾಣವು ಪ್ರಯೋಗಿಸಿ ಅದನ್ನು ಸಂಪೂರ್ಣವಾಗಿ ಸಂಹರಿಸಿದೆನು.

ಮನೋ—ನಾನು ನಿಮಗೆ ಸಮರ್ಪಿಸುವ ವಂದನೆಗಳು ಸೂರ್ಯನಿಗೆಮಂಗಳಾರತಿಯನ್ನೆತ್ತಿದಂತಿರುವುದು. ನೀವು ನಮ್ಮನ್ನು ಸಲಹಿಸಿದ ದೇವರೇ ಸರಿ !

ರಾಜ—ನೀವುಗಳೆಲ್ಲರೂ ಕಳಿಂಗಪಟ್ಟಣಕ್ಕೆ ಹೋಗುವಂತಿರುವುದು !

ಮನೋ—ಅಹುದು. ಮೈಗಾವಲಿನವರಿಬ್ಬರನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು ನನ್ನ ಮನಸ್ಸು ಬಹಳ ಸಂಕಟಪಡುವುದು.

ರಾಜ—ನಾರೀಮಣಿಯೆ ! ಹಾಗೆ ಮನೋವ್ಯಥೆ ಪಡಬೇಡ. ಇಲ್ಲಿಗೆಅರ್ಧಮೈಲಿ ದೂರದಲ್ಲಿ ಒಂದು ಗ್ರಾಮವಿರುವುದು, ಅಲ್ಲಿಗೆ ಅವರಿಬ್ಬರನ್ನು ಸಾಗಕಳುಹಿಸಿ ಅವರ ಉಪಚಾರಾದಿಗಳಿಗೆ ಕೆಲವು ವರಹಗಳನ್ನಿತ್ತು ಬರುವೆನು.

ಮನೋ—ವೈಗಾವಲಿನವರಿಬ್ಬರೂ ನನಗಾಗಿಯೇ ಈ ಸಂಕಟವನ್ನು ಅನುಭವಿಸಿರುವರಾದ್ದರಿಂದ ನಾನೇ ಅವರ ಪೋಷಣಾಕರ್ತಳಾಗಬೇಕಾಗಿರುವುದು. ಎಂದು ಐದು ವರಹಗಳನ್ನು ಕೊಡಲು ಬಂದಳು. ತಾನು ರಾಜನಾಗಿದ್ದು ಮತ್ತೊಬ್ಬರಿಂದ ಧನವನ್ನು ತೆಗೆದುಕೊಂಡು ಕೊಡಲು ಮನಸ್ಸು ಬಾರದಿದ್ದರೂ ತೆಗೆದುಕೊಳ್ಳದಿದ್ದರೆ ಆ ಸ್ತ್ರೀರತ್ನವು ಏನಾದರೂ ಸಂಶಯ ಪಡುವಳೆಂದೆಣಿಸಿ ಪ್ರತಾಪಕಂಠೀರವನು ಆಕೆ ಕೊಟ್ಟ ವರಹಗಳನ್ನು ತೆಗೆದುಕೊಂಡು, ನಾನೂ ಅವರಿಗೆ ಬಹುಮಾನವೀಯುವೆನು. ನಾವುಗಳು ಕಳಿಂಗ ಪಟ್ಟಣಕ್ಕೆ ಹೋಗುವೆವು. ನಮ್ಮ ಸಂಗಡಲೇ ಬರುವಿರಾದರೆ ನಿಮಗೆ ವೈಗಾವಲಿನಂತಿರುವೆವು ಎಂದು ಹೇಳಿದನು.

ಮನೋರಮೆಯು ರಹಸ್ಯವಾಗಿ ಪ್ರಯಾಣ ಮಾಡಬೇಕಾದ್ದರಿಂದ ರಾಜನು ಹೇಳಿದ ಸಹಾಯದಲ್ಲಿ ಇಷ್ಟವಿಲ್ಲದಿದ್ದರೂ ತನ್ನ ದಾದಿಯರನ್ನು ನೋಡಿ ಅವರ ಮುಖಚಿಹ್ನೆಗಳಿಂದ ಅವರು ರಾಜನ ವೈಗಾವಲನ್ನು ಅತ್ಯಾತುರದಿಂದ ಬಯಸುವರೆಂದು ತಿಳಿದು ರಾಜನನ್ನು ಕುರಿತು—ಎಲೈ ಮಹಾನುಭಾವನೇ ನನ್ನ ದಾದಿಯರಿಗಾಗಿ ನೀವು ಹೇಳಿದಂತೆ ಒಪ್ಪಿಕೊಳ್ಳುವೆನು.

ರಾಜ—ಹಾಗಾದರೆ, ಸ್ವಲ್ಪಹೊತ್ತಿನವರಿವಿಗೂ ಇಲ್ಲಿ ವಿಶ್ರಮಿಸಿಕೊಂಡಿರಿ, ವೈಗಾವಲಿನವರಿಬ್ಬರನ್ನೂ ಸಾಗಿಸಿ ಬರುವೆನು. ಎಂದು ಹೇಳಿ, ಅಲ್ಲಿಂದ ಹಿಂತಿರುಗಿ ಸೈನ್ಯಾಧಿಪತಿಗಳಿದ್ದ ಸ್ಥಳವನ್ನು ಸೇರಿದನು.

ಮನೋರಮೆಯು ದಾದಿಯರು ತಮ್ಮ ಕುದುರೆಗಳನ್ನು ಇಳಿದು, ವಿಶ್ರಮಿಸಿಕೊಳ್ಳುತ್ತಾ ಪ್ರತಾಪಕಂಠೀರವನ ವಿಷಯವಾಗಿ ಮಾತನಾಡುತ್ತಿದ್ದರು.

ಮನೋ—ಸಮಯಕ್ಕೆ ಸರಿಯಾಗಿ ಆ ಮಹಾನುಭಾವರು ಬಂದು ಕಷ್ಟನಿವಾರಣೆಗೊಳಿಸಿದುದು ನಮ್ಮ ಅದೃಷ್ಟಪರಿಪಾಕವಲ್ಲವೆ?

ಮದ—ಆಹಾ! ಎಷ್ಟು ಸುಂದರನಾಗಿರುವನು?

ಚೂತ—ಇನ್ನೂ ಯವ್ವನಸ್ಥನಾಗಿಯೇ ಇರುವನು.

ಮನೋ—ಛೆ! ಅವನ ರೂಪು ರೇಖಾದಿಗಳು ಹಾಗಿರಲಿ, ಅವನ ಶೌರ್ಯವು ಎಂತಿರುವುದು? ನಾವು ಆತನಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದಂತಿರುವುದಲ್ಲಾ!

ವೈಗಾವಲಿನವರನ್ನು ಸಮೀಪದಲ್ಲಿ ಗ್ರಾಮಕ್ಕೆ ಸಾಗಿಸಿ ಅವರ ಉಪಚಾರಾದಿಗಳಿಗೆ ಹಣವಿತ್ತು ಪ್ರತಾಪಕಂಠೀರವನು ಸೈನ್ಯಾಧಿಪತಿಗಳನ್ನೊಡ ವೆರಸಿ ಮನೋರಮೆಯು ಇದ್ದ ಸ್ಥಳವನ್ನು ಸೇರುವುದಕ್ಕೆ ಮುಂಚಿತವಾಗಿಯೇ ಆ ಅಬಲೆಯರ ಜೊತೆಯಲ್ಲಿ ಕಳಿಂಗಪಟ್ಟಣಕ್ಕೆ ಹೋಗಲು ಒಪ್ಪಿಕೊಂಡು ಬಂದಿರುವುದನ್ನು ಸೈನ್ಯಾಧಿಪತಿಗಳಿಗೆ ತಿಳುಹಿಸಿದನು. ವೀರಬಾಹುವು ಸ್ತ್ರೀಯರ ಜೊತೆಯಲ್ಲಿರಲು ಬಹಳ ಸಂತೋಷಪಟ್ಟನು. ಸಿಂಹಬಲನಾ ದರೋ ಆಕೆಯೂ ಮತ್ತೋರ್ವ ಶುಕವಾಣಿಯಾಗುವಳೇನೋ? ಎಂದು ಮುಖಖಿನ್ನನಾದರೂ ಅಂಥಾ ಕಷ್ಟಕಾಲದಲ್ಲಿ ಅಡ್ಡಿ ಮಾಡುವುದು ಸರಿಯಾ ದುದಲ್ಲವೆಂದು ಸುಮ್ಮನಾದನು.

ಆ ಮೂವರು ಪುರುಷರೂ ಆ ಸ್ತ್ರೀಯರಿದ್ದ ಸ್ಥಳವನ್ನು ಸೇರಲು ಸಿಂಹಬಲನು ಅವರನ್ನು ನೋಡಿ ತನ್ನ ಮನಸ್ಸಿನಲ್ಲಿ—ಈಕೆಯು ಒಬ್ಬ ಸಾಹುಕಾರನ ಮಗಳಾಗಿರಬಹುದು. ಇವರಿಬ್ಬರೂ ಈಕೆಯ ದಾದಿಯರಾಗಿರಬಹುದು. ಈಕೆಯ ದಿವ್ಯ ವದನವು ವರ್ಣಿಸಲಶಕ್ಯ ಮಾದ ಮಾಧುರ್ಯವನ್ನುಳ್ಳದ್ದಾಗಿಯೂ, ಕಪಟಶೂನ್ಯವಾದ ಹೃದಯವನ್ನು ಹೊರಪಡಿಸುವುದಾಗಿಯೂ, ಅತಿ ಮನೋಹರವಾಗಿಯೂ, ಸರಸ ರಸಯುಕ್ತವಾಗಿಯೂ, ಬಹಳ ನೇತ್ರಾನಂದಕರವಾಗಿ ಶೋಭಿಸುತ್ತಿರು ವುದು. ಆ ಮೋಸಗಾರಳಾದ ಶುಕವಾಣಿಯ ಕಪಟ ನಟನೆಗಳ್ಯಾವುದೂ ಈಕೆಯಲ್ಲಿ ತೋರಿಬರುವುದಿಲ್ಲ. ಈಕೆಯು ನಿರ್ಮಲ ಹೃದಯುಳಾಗಿಯೂ, ಮರ್ಯಾದಾದಿ ಗುಣಸಂಪತ್ತುಗಳನ್ನುಳ್ಳವಳಾಗಿಯೂ, ಇರುವಂತೆ ಈಕೆಯ ಮುಖಲಕ್ಷಣಗಳಿಂದಲೇ ತೋರಿಬರುವುದು. ಇಂಥಾ ಜಗನ್ಮೋಹಿನಿಯು ಕಪಟಕೃತ್ಯಗಳೇನಾದರೂ ಎಸಗುವಳೆಂದರೆ ಈ ಲೋಕದಲ್ಲಿ ಬದುಕುವುದೇ ಕಷ್ಟವು, ಮತ್ತೀಕೆಯ ದಾದಿಯರಾದರೊ ಸುಹೃದಯರಾಗಿಯೂ ಯಥಾರ್ಥ ವಾದಿಗಳಾಗಿಯೂ, ಸಜ್ಜನಸ್ವಭಾವವನ್ನುಳ್ಳವರಾಗಿಯೂ, ವಿನಯಾದಿ ಗುಣಗಳಿಂದೊಪ್ಪುತ್ತಿರುವರು. ಇವರ ರಕ್ಷಣೆಗಾಗಿ ನಾವುಗಳು ಜೊತೆಯಲ್ಲಿ ಹೋಗದಿದ್ದರೆ ನಮ್ಮಂಥಾ ಕ್ರೂರಕರ್ಮಿಗಳು ಈ ಜಗತ್ತಿನಲ್ಲೇ ಇರು ವಂತಿಲ್ಲ. ಎಂದು ಯೋಚಿಸಿ ಸಂತೋಷಭರಿತನಾದನು.

ಪ್ರತಾಪಕಂಠೀರವನಾದರೋ ಹಿಂದೆ ಶುಕವಾಣಿಯಲ್ಲಿ ಮೋಹಗೊಂಡು ಭಗ್ನಮನೋರಥನಾದುದರಿಂದ ಮನೋರಮೆಯಲ್ಲಿ ಮೋಹಗೊಳ್ಳದಿದ್ದರೂ

ಆಕೆಯ ರೂಪಾತಿಶಯಗಳನ್ನು ವರ್ಣಿಸಿ ವರ್ಣಿಸಿ ಮನದಲ್ಲಿ ಇಂಥಾ ಸ್ತ್ರೀರತ್ನವು ಈ ಭುವನದಲ್ಲಿಯೂ ಇರುವಳೇ ಎಂದು ಆಶ್ಚರ್ಯಪಡುತ್ತಲೂ, ಹರ್ಷಗೊಳ್ಳುತ್ತಲೂ, ಮನ್ಮಥನ ಬಾಣಕ್ಕೊಳಗಾಗದಿದ್ದರೂ ರಾಜನಾದ್ದರಿಂದ ಪರರ ಕಷ್ಟನಿವಾರಣೆಗೊಳಿಸಲು ಆ ಅಬಲೆಯರಿಗೆ ರಕ್ಷಕನಾದನು.

ಮನೋರಮೆಯಾದರೊ ರಾಜನ ರೂಪಾತಿಶಯಗಳನ್ನೂ, ಆತನ ಶೌರ್ಯವನ್ನೂ ತನ್ನ ಮನಸ್ಸಿನಲ್ಲಿಯೇ ಕೊಂಡಾಡುತ್ತಾ ರಾಜನು ಆಕೆಯನ್ನು ನೋಡಿ ಹ್ಯಾಗೆ ಎಣಿಸಿದನೋ ಹಾಗೇ ತಾನು ಸಂತೋಷ ಭರಿತಳಾದಳು. ತನ್ನ ಮನಸ್ಸು ರಾಜನಲ್ಲಿ ಮೋಹಗೊಳ್ಳಲು ಹೋಗುತ್ತಿದ್ದರೂ, ಮಹಾರಾಣಿಯಾದ್ದರಿಂದ ಆಕಸ್ಮಿಕವಾಗಿ ಪರಿಚಯನಾದ ಪುರುಷನನ್ನು ಮೋಹಿಸುವುದು ತನ್ನ ಯೋಗ್ಯತೆಗೆ ಕುಂದಕವಾದುದೆಂದು ತನ್ನ ಮನಸ್ಸನ್ನು ಹಿಂದೆಳೆಯುತ್ತಲೇ ಇದ್ದಳು.

ಕಷ್ಟಕಾಲಕ್ಕೆ ಸಂರಕ್ಷಕರು ಬಂದೊದಗಿದರೆಂದು ದಾದಿಯರಿಬ್ಬರೂ ಸಂತೋಷಭರಿತರಾದರು.

ಉಲ್ಲಾಸ ಸಂಬಂಧವಾದ ಸಂಭಾಷಣೆಗೇ ಸ್ತ್ರೀಯರು ದೊರಕಿದರೆಂದ ವೀರಬಾಹುವು ಹೃದಯಕಮಲವಿಕಸಿತನಾದನು.

ಒಬ್ಬೊಬ್ಬರು ತಮ್ಮ ತಮ್ಮ ಮನಸ್ಸಿನಲ್ಲಿ ಈ ವಿಧವಾಗಿ ಯೋಚಿಸುತ್ತಾ ಕುದುರೆಗಳನ್ನೇರಿ ಪ್ರಯಾಣವನ್ನು ಬೆಳಸಿದರು.

ಮುಂಭಾಗದಲ್ಲಿ ಪ್ರತಾಪ ಕಂಠೀರವನು ಮನೋರಮೆಗೂ, ಮಧ್ಯದಲ್ಲಿ ವೀರಬಾಹುವು ಮದನಿಕೆಗೂ, ಹಿಂಭಾಗದಲ್ಲಿ ಸಿಂಹಬಲನು ಚೂತಲತಿಕೆಗೂ, ಮುಂದೇನಾದರೂ ದುಷ್ಟಮೃಗಗಳ ಕಾಟ ಸಂಭವಿಸಬಹುದೆಂದು ಬಹು ಎಚ್ಚರಿಕೆಯಿಂದ ಅಂಗರಕ್ಷಕರಾಗಿ ಪ್ರಯಾಣಿಸುತ್ತಿದ್ದರು. ಎಲ್ಲರೂ ವಿನೋದವಾಗಿ ಮಾತನಾಡುತ್ತ ಹೋಗುತ್ತಿದ್ದರು.

ಮುಂಭಾಗದಲ್ಲಿ ಮನೋರಮೆಯು ವಿನೋದವಾಗಿ ಮಾತನಾಡುತ್ತಾ ಪ್ರತಾಪ ಕಂಠೀರವನನ್ನು ಕುರಿತು–ಎಲೈ ಮಹಾನುಭಾವನೇ! ಈ ಪ್ರಾಂತ್ಯದಲ್ಲಿ ಹುಲಿಕಾಟ ಒಂದೇ ಅಲ್ಲವೆಂದು ಕೇಳಿದನು.

ರಾಜ—ನಾರೀಮಣಿಯೇ! ಮತ್ಯಾವ ಕಾಟವಿರುವುದೆಂದು ನೀನು ಭಯಪಡುತ್ತಿರುವೆ?

ಮನೋ—ಕಿರಾತಾಧಿಪತಿಯಾದ ಕರಾಳನು—

ರಾಜ—ಅಹುದಹುದು! ನಾನು ಈ ವಿಷಯವಾಗಿ ಕೇಳಿದ್ದೆನು. ಕಿಂಚಿತ್ತಾದರೂ ಇದರಲ್ಲಿ ಭಯಪಡಬೇಡ.

ಮನೋ—ನಾನು ಭಯಪಟ್ಟಿಲ್ಲ - ಅಲ್ಲದೆ ಈ ವಿಷಯವನ್ನು ನನ್ನ ದಾದಿಯರು ತಿಳಿದರೆ ಭಯಪಡುವರೆಂದು ಇದನ್ನು ಅವರಿಗೆ ತಿಳಿಸಲಿಲ್ಲ.

ರಾಜ—ನೀನು ತಕ್ಕದ್ದನ್ನು ಮಾಡಿರುವೆ, ನಾಳೆ ಸಾಯಂಕಾಲಕ್ಕೆ ಸರಿಯಾಗಿ ಕಳಿಂಗಪಟ್ಟಣವನ್ನು ಸುಖವಾಗಿ ಸೇರಬಹುದೆಂದು ನನಗೆ ತೋರುವುದು.

ಅವರಿಬ್ಬರೂ ರಹಸ್ಯವಾಗಿ ಪ್ರಯಾಣ ಮಾಡುತ್ತಿರುವರೆಂದು ತಿಳಿದಿದೆಯಷ್ಟೆ. ಆದ್ದರಿಂದ ಪ್ರತಾಪ ಕಂಠೀರವನೇ ಆಗಲಿ ಅಥವಾ ಮನೋರಮೆಯೇ ಆಗಲಿ ತಮಗೆ ಕಳಿಂಗಪಟ್ಟಣದಲ್ಲಿರುವ ಕಾರ್ಯಗೌರವವನ್ನೂ, ತನ್ನ ನಿಜವಾದ ಪದವಿಯನ್ನೂ, ನಿಜವಾದ ನಾಮಧೇಯವನ್ನೂ ತಿಳಿಸಲಿಲ್ಲ.

ಹೀಗೆಯೇ ಹೋಗುತ್ತಿರಲು ಸೂರ್ಯನು ಮುಳುಗುವುದಕ್ಕೆ ಒಂದು ಘಳಿಗೆ ಮುಂಚಿತವಾಗಿ ಒಂದಾನೊಂದು ಗ್ರಾಮವು ಗೋಚರವಾಯಿತು. ಆ ಸಮಯದಲ್ಲಿ ಮಾರ್ಗದ ಬಲಪಾರ್ಶ್ವದಲ್ಲಿ ಬಿಕ್ಷುಕ ದಂಪತಿಗಳಿಬ್ಬರು ಕುಳಿತುಕೊಂಡಿದ್ದರು. ಮನೋರಮೆಯು ಪ್ರತಾಪಕಂಠೀರವನು ಅವರ ಸಮೀಪಕ್ಕೆ ಬರುತ್ತಿರಲು ಭಿಕ್ಷುಕರಿಬ್ಬರು ಎದ್ದೋಡಿಬಂದು 'ದೇಹಿ' ಎಂದು ಮೊರೆಯಿಡಲು ಮನೋರಮೆಯು ಬಿಕ್ಷುಕಗಳಿಗೆ ದಾನವನ್ನಿತ್ತಳು. ಪ್ರತಾಪ ಕಂಠೀರವನು ಕೈಯಲ್ಲಿದ್ದ ಚೀಲವನ್ನು ಬಿಚ್ಚಿ ಒಂದು ವರಹವನ್ನು ಬಿಕ್ಷುಕನಿಗೆ ಕೊಡುವ ಸಮಯಕ್ಕೆ ಸರಿಯಾಗಿ ಪ್ರತಾಪಕಂಠೀರವನ ಕುದುರೆಯು ಆಕಸ್ಮಿಕವಾಗಿ ಭಯಪಟ್ಟು ನೆಗೆಯಿತು. ಕೂಡಲೇ ಪ್ರತಾಪಕಂಠೀರವನ ಕೈಯಲ್ಲಿದ್ದ ಚೀಲದಲ್ಲಿನ ವರಹಗಳು ಕೆಳಗೆ ಚಲ್ಲಿಬಿದ್ದವು. ಭಿಕ್ಷುಕನು ಅವುಗಳನ್ನಾರಿಸಿ ರಾಜನಿಗೆ ಕೊಡುತ್ತಿದ್ದನು. ಮನೋರಮೆಯು ಕೆಳಗೆ ಬಿದ್ದ ನಾಣ್ಯಗಳನ್ನು ಆಕಸ್ಮಿಕವಾಗಿ ನೋಡಲು, ಅವುಗಳ ಮಧ್ಯದಲ್ಲಿ ಯಾವುದೋ ಒಂದು ಪದಾರ್ಥವನ್ನು ನೋಡಿ ಕಳೆಗುಂದಿದವಳಾಗಿ ಮುಳುಗುತ್ತಿರುವ ಸೂರ್ಯಬಿಂಬವನ್ನು ನೋಡುವ ನೆವದಿಂದ ತನಗುಂಟಾದ ಸ್ಥಿತಿಯನ್ನು ಯಾರಿಗೂ ತೋರ

ದಂತಿದ್ದಳು. ಅಷ್ಟರಲ್ಲಿಯೆ ಪ್ರತಾಪಕಂಠೀರವನು ನಾಣ್ಯಗಳನ್ನು ಚೀಲದಲ್ಲಿ ಹಾಕಿಕೊಳ್ಳಲು ಎಲ್ಲರೂ ಪ್ರಯಾಣ ಬೆಳಸಿದರು.

ಮನೋರಮೆಯು ಸೂರ್ಯಬಿಂಬವನ್ನು ನೋಡುತ್ತಲೇ ಹೋಗುತ್ತಾ ತನ್ನ ಮನಸ್ಸಿನಲ್ಲಿ—ಏನಾಶ್ಚರ್ಯವು ! ಭೋಜನಶಾಲೆಯಲ್ಲಿ ನೆನ್ನೆ ೯ ರಾತ್ರೆ ಕಳೆದುಹೋದ ಉಂಗುರವು ಈತನಲ್ಲಿ ಹ್ಯಾಗೆ ಬಂದಿತು ? ಆಹಾ ! ಈಗ ಗೊತ್ತಾಯಿತು. ಕರಾಳನು ಯಾವ ವಿಧವಾದ ವೇಷವನ್ನೂ ಧರಿಸಬಲ್ಲ ನೆಂದೂ, ಸುಮಾರು ೨೦ ಅಥವಾ ೨೨ ವಯಸ್ಸುಳ್ಳವನೆಂದೂ, ಮುಖದಲ್ಲಿ ಮೀಸ ಹುಟ್ಟಿರುವುದೆಂದೂ, ಶಾಲಾಧಿಕಾರಿಯು ನನಗೆ ಹೇಳಿದ್ದನು. ಆದ್ದ ರಿಂದ ಇವನೇ ಕರಾಳನು. ಇಂಥಾ ರೂಪು, ಧೈರ್ಯ-ಸ್ಥೈರ್ಯ ಗಾಂಭೀರ್ಯ, ಶೌರ್ಯಾದಿಗಳನ್ನುಳ್ಳವನನ್ನು ಕಿರಾತಾಧಿಪನಾಗಿ ಮಾಡಿದ ದೈವವನ್ನು ಎಷ್ಟು ದೂಷಿಸಿದರೂ ಸಾಲದಿರುವುದು. ಈಗ ಯಾವ ಕೆಡಕನ್ನೂ ಮಾಡಲಾರನು. ಹ್ಯಾಗಾದರೂ ಪ್ರಯತ್ನಪಟ್ಟು ಇವನಿಂದ ತಪ್ಪಿಸಿಕೊಂಡು ಹೋಗುವೆನು ಎಂದು ಯೋಚಿಸಿ, ತನ್ನ ವಿವರ್ಣವನ್ನು ಹೊರಪಡಿಸದಂತೆ ಧೈರ್ಯವನ್ನು ತಂದುಕೊಂಡು ಪ್ರತಾಪಕಂಠೀರವನನ್ನು ಕುರಿತು, ಎಲೈ ಮಹಾನುಭಾವನೇ ! ಸಾಯಂಕಾಲವಾಗುತ್ತ ಬಂದಿತು. ಬೇಗನೆ ನಡಿಯಿರಿ. ಜಾಗ್ರತೆಯಾಗಿ ಗ್ರಾಮವನ್ನು ಸೇರೋಣ ಎಂದು ಹೇಳಿದಳು.

ರಾಜನು ಮನೋರಮೆಯ ಅಭಿಲಾಷೆಯನ್ನು ಮೇಯಿಸಲು, ಎಲ್ಲರೂ ಜಾಗ್ರತೆಯಾಗಿ ಗ್ರಾಮವನ್ನು ಸೇರಿದರು. ಮನೋರಮೆಯು ಅಲ್ಲಿ ನಿಂತಿದ್ದ ಒಬ್ಬ ಮನುಷ್ಯನನ್ನು ನೋಡಿ, ಅಗೋ ಅಲ್ಲಿರುವ ಮಹಡಿಮನೆ ಯಾಜ ಮಾನರು ಎಲ್ಲಿರುವನೆಂದು ಕೇಳಿದಳು. ಅವನು ನಾನೆ ? ಎಂದುತ್ತರವನ್ನಿ ತ್ತನು. ನಾವು ಮೂವರು ಸ್ತ್ರೀಯರು ಈ ರಾತ್ರೆ ಇಳಿದುಕೊಳ್ಳಲು ನಿನ್ನ ಮನೆಯಲ್ಲಿ ಸ್ಥಳ ಕೊಡುವಿಯಾ ? ಎಂದು ಕೇಳಿದ ಮನೋರಮೆಯ ಬಯಕೆ ಯನ್ನು ಸಲ್ಲಿಸಲು ಆ ಗೃಹಸ್ಥನು ಹಿಂತೆಗೆಯುತ್ತಿದ್ದುದನ್ನು ನೋಡಿದ ಪ್ರತಾಪಕಂಠೀರವನು, ಈ ಸುಂದರಿಯ ಕೋರಿಕೆಯನ್ನು ನೆರವೇರಿಸು, ನಿನ್ನ ಕೈ ಬೆಚ್ಚಗೆ ಮಾಡಿಸುತ್ತೇನೆ. ಎಂದು ಆವನನ್ನು ಒಪ್ಪಿಸಿ, ಸೈನ್ಯಾಧಿಪತಿಗ ಳೊಡನೆರಸಿ ತಾನು ಇಳಿದುಕೊಳ್ಳಲು ಸ್ಥಳವನ್ನು ವಿಚಾರಿಸುವುದಕ್ಕೆ ಆ ಗ್ರಾಮದ ದಕ್ಷಿಣಭಾಗದ ಕಡೆಗೆ ಹೊರಟನು.

ಆ ಗೃಹಸ್ಥನು ಚಟುಲಾಕ್ಷಿಯರನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಿದ್ದನು. ಸಮಯ ಸಿಕ್ಕಿತೆ ಎಂದು ನಿರೀಕ್ಷಿಸುತ್ತಿದ್ದ ಮನೋರಮೆಯು ಪ್ರತಾಪಕಂಠೀರವಾದಿಗಳು ಕಣ್ಮರೆಯಾದ ಕೂಡಲೇ ತನ್ನ ದಾದಿಯರನ್ನು ನೋಡಿ, ಎಲೆ, ಮದನಿಕೆ! ಎಲೆ, ಚೂತಲತಿಕೆ! ಪ್ರಾಣದ ಮೇಲೆ ನಿಮಗೆ ಆಶೆಯಿದ್ದರೆ ನನ್ನನ್ನು ಹಿಂಬಾಲಿಸಿರಿ, ಎಂದು ಕೂಗಿ ಹೇಳಿ ತನ್ನ ಕುದುರೆಯನ್ನು ವೇಗವಾಗಿ ಓಡಿಸಲಾರಂಭಿಸಿದಳು. ದಾದಿಯರು ವಿಸ್ಮಯಗೊಂಡರೂ ತಮ್ಮೊಡತಿಯ ಅಪ್ಪಣೆಯನ್ನನುಸರಿಸಿ ಆಕೆಯನ್ನು ಹಿಂಬಾಲಿಸಿದರು. ಆ ಗೃಹಸ್ಥನಾದರೋ ವಾಯುವೇಗವನ್ನತಿಕ್ರಮಿಸಿ ಹೋಗುತ್ತಿರುವ ಆ ಮೃಗಾಕ್ಷಿಯರನ್ನು ಕಣ್ರೆಪ್ಪೆ ಮುಚ್ಚದೆ ನೋಡುತ್ತಾ ಸ್ತಂಭೀಭೂತನಾಗಿ ನಿಂತಲ್ಲಿಯೇ ನಿಂತನು.

ಕಳಿಜಪ್ಪನೆಯರಾದಾ ಮೀನಾಕ್ಷಿಯರು ರಾಜಭಾಟಿ ಮಾರ್ಗವನ್ನು ಬಿಟ್ಟು ಕಾಡುಬಿದ್ದು ರಾತ್ರೆ ಎಂಟು ಘಂಟೆ ಸಮಯಕ್ಕೆ ಸರಿಯಾಗಿ ನಾಲ್ಕಾರು ಮನೆಗಳನ್ನುಳ್ಳ ಒಂದಾನೊಂದು ಸಣ್ಣ ಹಳ್ಳಿಯನ್ನು ಸೇರಿದರು. ಅಲ್ಲಿ ಓರ್ವ ವಿಧವೆಯ ಮನೆಯಲ್ಲಿಳಿದುಕೊಂಡರು.

ಮನೆಯ ಯಜಮಾನಿಯಾದಾ ವಿಧವೆಯ ಗಂಡನು ೪, ೫. ವರುಷಗಳ ಹಿಂದೆ ಹಾವು ಕಡಿದು ಮೃತಪಟ್ಟನು. ಮನೋರಮೆಗೆ ಭೋಜನ ಪದಾರ್ಥಗಳನ್ನು ತಂದು ಬಡಿಸಿದ ಇಬ್ಬರು ಯುವತಿಯರು ಯಜಮಾನಿಯ ಪುತ್ರಿಯರಾಗಿದ್ದರು, ಆಕೆಗೆ ಗಂಡುಮಕ್ಕಳ್ಯಾರೂ ಇರಲಿಲ್ಲ. ಗಂಡನ ಅವಸಾನಾನಂತರ ಕೂಲಿ ಆಳುಗಳಿಂದ ತನ್ನ ಗದ್ದೇ ಹೊಲಗಳನ್ನು ಉಳಿಸಿ ಅವುಗಳಲ್ಲಿ ಬೆಳೆದ ದವಸಧಾನ್ಯಗಳಿಂದ ಆ ಯಜಮಾನಿಯು ತನ್ನ ಮಕ್ಕಳೊಡಗೂಡಿ ಜೀವನ ಮಾಡುತ್ತಿದ್ದಳು.

ಈ ಸಮಾಚಾರಗಳನ್ನೆಲ್ಲಾ ಆಕೆಯಿಂದ ತಿಳಿದುಕೊಂಡು ಮನೋರಮೆಯು ತಾನು ಕಳಿಂಗಪಟ್ಟಣಕ್ಕೆ ಪ್ರಯಾಣಮಾಡುತ್ತಿರುವಳೆಂದು ದಾರಿ ತಪ್ಪಿದ್ದರಿಂದ ಆರಾತ್ರೆ ಅಲ್ಲಿಳಿದಳೆಂದು ಹೇಳಿದಳು,ಕರಾಳನಿಂದ ತನಗೆ ಸಂಭವಿಸಿದ ಆಪತ್ತುಗಳನ್ನು ಹೇಳಿದರೆ ತನ್ನನ್ನು ಕರಾಳನು ಹುಡುಕಿಕೊಂಡು ಬರುವನೆಂದು ಮನೇ ಯಜಮಾನಿಯು ಭಯಪಟ್ಟು ತನ್ನನ್ನು ಹೊರಡಿಸಿ ಬಿಡುವಳೆಂದು ತಿಳಿದಾಭೀರುವು ಅವನ ಸಮಾಚಾರವನ್ನೇ ಎತ್ತದಿದ್ದಳು.

ಅನಂತರ ಊಟ ಉಪಚಾರಗಳನ್ನೆಲ್ಲಾ ತೀರಿಸಿಕೊಂಡು ಎಲ್ಲರೂ ಸ್ವಲ್ಪಹೊತ್ತು ವಿಶ್ರಾಂತಿಗೊಳ್ಳಲು ಕುಳಿತು ಮಾತನಾಡುತ್ತಿದ್ದರು. ಮನೋರಮೆಗೂ ಆಕೆಯ ದಾದಿಯರಿಗೂ ಶಯನಿಸುವುದಕ್ಕೆ ಒಂದು ಕೊಠಡಿಯಲ್ಲಿದ್ದ ಸಾಮಾನುಗಳನ್ನೆಲ್ಲಾ ತೆಗೆದು ಶುದ್ಧಿಮಾಡಿ ಹಾಸಿಗೆ ಹಾಕುವಂತೆ ಯಜಮಾನಿಯು ತನ್ನ ಪುತ್ರಿಯರಿಬ್ಬರಿಗೂ ಹೇಳಿ ಕಳುಹಿಸಿ ಮನೋರಮೆಯನ್ನು ಕುರಿತು, ಅಮ್ಮಾ ನನಗೆ ಪುತ್ರಿಯರು ಇವರಿಬ್ಬರೇ ಅಲ್ಲ. ಇನ್ನೊಬ್ಬಳಿದ್ದಳು ಎಂದು ನಿಟ್ಟುಸುರನ್ನು ಬಿಟ್ಟಳು.

ಮನೋರಮೆಯು ಕನಿಕರನಿಂದ—ಆಕೆಯು ದೈವಾಧೀನಳಾಗಿ ಎಷ್ಟು ವರ್ಷಗಳಾಗಿರಬಹುದು ?

ಯಜಮಾನಿ—ಮೃತ್ಯುದೇವತೆಯಲ್ಲಮ್ಮಾ ನನ್ನ ಕಮಲಿನಿಯನ್ನು ಕೊಂಡುಹೋದದ್ದು. ಕಮಲಿನಿಯು ನನ್ನ ಮೊದಲನೆ ಮಗಳು. ಇವರಿಬ್ಬರೂ ಅವಳ ತಂಗಿಯರು. ಇವರಿಬ್ಬರಿಗೂ ೧೭–೧೮ ವರ್ಷಗಳಾಗಿರುವುದು. ನನ್ನ ಕಮಲಿನಿಯು ಈವರಿವಿಗೂ ಜೀವಸಹಿತಳಾಗಿದ್ದರೆ ಅವಳಿಗೆ ೨೧ ವರ್ಷ ವಯಸ್ಸಾಗಿರುವುದು. ನಿನ್ನ ಹೊರತು ಆಕೆಯ ಸಮಾನ ರೂಪಿಷ್ಟಳನ್ನು ಇದುವರಿವಿಗೂ ನಾನು ನೋಡಿಲ್ಲ. ಆಕೆಯು ವಿನಯಾದಿಗುಣಸಂಪನ್ನಳಾಗಿದ್ದಳು. ಆಕೆಯನ್ನು ಪಾಣಿಗ್ರಹಣ ಮಾಡಿಕೊಳ್ಳಲು ಎಲ್ಲೆಲ್ಲಿಂದಲೋ ಬಂದು ಕೇಳುತ್ತಿದ್ದರು. ನನ್ನ ಗಂಡನ ಅವಸಾನಾನಂತರ ಆಕೆಗೆ ಅನುರೂಪನಾದ ನನ್ನ ಅಣ್ಣನ ಮಗನಿಗೆ ಕೊಡಬೇಕೆಂದಿದ್ದೆನು. ಅವಳಿಗೆ ಅವನಲ್ಲಿಯೂ, ಅವನಿಗೆ ಅವಳಲ್ಲಿಯೂ ಪ್ರೇಮಾತಿಶಯವು ಹೆಚ್ಚಾಗಿತ್ತು. ಮದುವೆ ಮಾಡುವುದಕ್ಕೆ ಬೇಕಾದ ಸಾಮಾಗ್ರಿಯುಗಳನ್ನೂ ಎರಡು ತಿಂಗಳು ಮುಂಚಿತವಾಗಿಯೇ ಸಿದ್ಧಪಡಿಸಿಕೊಳ್ಳುತ್ತಿರುವ ಕಾಲಕ್ಕೆ ಸರಿಯಾಗಿ— ಎಂದು ಅಳತೊಡಗಿದಳು.

ಮನೋರಮೆಯು—ದುಃಖಿಸಬೇಡೌ ! ದುಃಖಿಸಬೇಡೌ ! (ಎಂದು ಸಮಾಧಾನಪಡಿಸಿ) ಮುಂದೇನಾಯಿತು ?

ಯಜಮಾನಿಯು ಕಣ್ಣೀರನ್ನೊರಸಿಕೊಂಡು—ಸಿಂಹಳದ್ವೀಪ ನಿವಾಸಿಗಳು ಒಂದು ತಿಂಗಳವರಿವಿಗೂ ಪ್ರತಿದಿನ ಸಾಯಂಕಾಲದವರಿಗೂ ಉಪವಾಸವಿದ್ದು ದೇವತಾರಾಧನೆಗಳನ್ನು ತೀರಿಸಿಕೊಂಡು ಊಟಮಾಡುವರೆಂಬುವದನ್ನು

ಕೇಳಿರುವಿಯಷ್ಟೆ. ಆ ಹಬ್ಬದ ಕೊನೇ ದಿವಸದಲ್ಲಿ ಸಿಂಹಳ ರಾಜನಿಗೆ ಅತಿ ಸೌಂದರ್ಯವತಿಯಾದ ಕನ್ಯೆಯನ್ನು ಒಪ್ಪಿಸುವ ಒಂದು ಕೆಟ್ಟ ಪದ್ಧತಿ ಇರುವುದು. ಈ ಹಬ್ಬಕ್ಕೆ ೨-೩ ತಿಂಗಳ ಮುಂಚಿತವಾಗಿಯೇ ಗುಲಾಮ (ಜೀತಗಾರರು) ವ್ಯಾಪಾರಸ್ಥರು ಅತಿ ಸೌಂದರ್ಯವತಿಯನ್ನು ಒಪ್ಪಿಸುವುದರಿಂದ ಲಭಿಸುವ ಬಹುಮಾನವನ್ನು ಪಡೆಯಬೇಕೆಂಬ ಆಶೆಯಿಂದ ಕನ್ಯೆಯರನ್ನು ಹುಡುಕಲು ಹೊರಡುವರು. ಈಗ ಆಳುವ ಕಳಿಂಗರಾಜನು ತನಗೆ ಸೇರಿದ ರಾಜ್ಯಗಳಲ್ಲೆಲ್ಲಿಯೂ ಗುಲಾಮ ವ್ಯಾಪಾರ ನಡೆಸಕೂಡದೆಂದು ವಿಧಿಸಿದ್ದರೂ ಆ ಹಾಳು ಕುಲಗೇಡಿ ವರ್ತಕರು ಕಳ್ಳತನವಾಗಿ ಗುಲಾಮ ವ್ಯಾಪಾರ ಮಾಡುತ್ತಿರುವರು.

ಮನೋ—ಈ ವಿಷಯಗಳನ್ನು ನಾನೂ ಕೇಳಿದ್ದೇನೆ. ಈ ಪಶ್ಚಿಮ ಘಟ್ಟಗಳ ಸರಹದ್ದಿನಲ್ಲಿರುವ ಪ್ರದೇಶಗಳಲ್ಲಿ ಅನೇಕ ಸುಂದರಿಯರು ಸಿಂಹಳ ದ್ವೀಪದಲ್ಲಿನ ಐಶ್ವರ್ಯವಂತರನ್ನೂ ಅಧಿಕಾರಸ್ಥರನ್ನೂ ಕೂಡಿ ಬಾಳಬೇಕೆಂಬ ಆಶೆಯಿಂದ ತಾವಾಗಿಯೇ ಆ ವರ್ತಕರ ಸಂಗಡ ಹೋಗುವರು. ಅಲ್ಲದೆ ಕೊಂಕಣ, ಕೇರಳ, ಚೇರ ದೇಶಗಳಲ್ಲಿ ತಾಯಿ ತಂದೇಗಳೇ (ಅಂದರೆ ಕೆಲವು ಮಂದಿ) ತಮ್ಮ ಮಕ್ಕಳನ್ನು ಆ ಕೇಡುಗ ವರ್ತಕರಿಗೆ ಮಾರುವರು. ಇವುಗಳೆಲ್ಲಾ ಬಹು ವ್ಯಸನಕರನವಾದವುಗಳವೆ ?

ಯಜ—ನೀನು ಹೇಳಿದ್ದೆಲ್ಲವೂ ನಿಶ್ಚಯವಮ್ಮಾ! ಇದೂ ಅಲ್ಲದೆ ಆ ಗುಲಾಮ ವರ್ತಕರು ಕೆಲವುವೇಳೆಗಳಲ್ಲಿ ಬಲಾತ್ಕಾರದಿಂದ ಕನ್ನೆಯರನ್ನು ಕದ್ದುಹೋಗಿ ಅವಳ ಮನೆಯವರಿಗೆಲ್ಲಾ ಇಲ್ಲದಿದ್ದ ವ್ಯಸನವನ್ನು ಉಂಟು ಮಾಡುವರು. ಇದೇ ಗತಿಯು ನನಗೆ ಪ್ರಾಪ್ತವಾಗಿರುವುದು.

ಮನೋ—ನಿನ್ನ ಮಗಳು ಕದ್ದೊಯ್ಯಲ್ಪಟ್ಟಳೇ ?

ಯಜ—ಅಹುದಮ್ಮಾ! ಆ ನೀಚರು ಕದ್ದೊಯ್ದರು! ಈಗ್ಯೆ ಎರಡು ವರ್ಷಗಳ ಕೆಳಗೆ ಒಂದಾನೊಂದು ದಿವಸ ಬೆಳಿಗ್ಯೆ ಒಬ್ಬ ಗುಲಾಮ ವರ್ತಕನು ಅನೇಕ ಮಂದಿ ರಾಹುತರಿಂದೊಡಗೂಡಿ ಈ ಹಳ್ಳಿಯಲ್ಲಿಳಿದನು. ಅವನ ಸೇವಕರು ಅಡಿಗೆ ಮಾಡುತ್ತಿರಲು ಆ ವರ್ತಕನು ಈ ಹಳ್ಳಿಯನ್ನು ನಾಲ್ಕಾರು ಸಲ ಸುತ್ತುತ್ತಿದ್ದನು. ನೀರಿಗೆ ಹೋಗಿದ್ದ ಕಮಲಿನಿಯು ಬರುತ್ತಿರಲು ಅವಳನ್ನು ನೋಡಿ ಅವಳ ಹಿಂದೆಯೇ ಬಂದು ಈ ಮನೆಯನ್ನು ಪ್ರವೇಶಿಸಿ-

ನಿನ್ನ ಮಗಳು ಬಹಳ ರೂಪಿಷ್ಟೆಯಾಗಿರುವಳು. ಇವಳನ್ನು ಖರೀದಿಗೆ ಕೊಡು. ಈ ಸಲ ಬರುವ ಕನ್ನೆಯರಲ್ಲೆಲ್ಲಾ ಇವಳೇ ಅತಿ ಸೌಂದರ್ಯವತಿ ಯೆಂದು ಆರಿಸಲ್ಪಡುವಳು. ನಿನಗೆ ಬೇಕಾದಷ್ಟು ಬಹುಮಾನ ಕೊಡಿಸುತ್ತೇನೆ ಎಂದು ಕೇಳಿದನು. ನಾನದಕ್ಕೆ ಬಹಳ ಸಿಟ್ಟುಗೊಂಡು ಅವನ ಕೇಳ್ವಿಕೆಗೆ ಒಪ್ಪಲಿಲ್ಲ. ಅವನು ಎಷ್ಟೋ ವಿಧವಾಗಿ ನಯವಾದ ಮಾತುಗಳಿಂದ ಬೇಡಿಕೊಂಡಾಗ್ಯೂ ಒಪ್ಪದಿರಲು ನನ್ನ ಮನೆಯನ್ನು ಬಿಟ್ಟು ಹೊರಟು ಹೋದನು. ಕಾಲು ಘಳಿಗೆಯಲ್ಲೇ ರಾಹುತ ಪಡೆಯೆಲ್ಲಾ ನನ್ನ ಮನೆಯನ್ನು ಮುತ್ತಿ ಒಳಗೆ ಪ್ರವೇಶಿಸಿ ನನ್ನನ್ನು ನನ್ನಿಬ್ಬರು ಪುತ್ರಿಯರನ್ನು ಕೈಕಾಲು ಕಟ್ಟಿಹಾಕಿ ಕಮಲಿನಿಯನ್ನು ಬಲಾತ್ಕಾರದಿಂದ ಕೊಂಡುಹೋದರು. ಆ ಸಮಯದಲ್ಲಿ ಈ ಹಳ್ಳಿಯ ಗೌಡರೆಲ್ಲಾ ಹೊಲಗದ್ದೆಗಳಿಗೆ ಹೋಗಿ ಕೆಲಸ ಮಾಡುತ್ತಿದ್ದರು. ಆ ನೀಚರನ್ನು ತಡಿಯಲು ಯಾರೂ ಇರಲಿಲ್ಲ.

ಮನೋರಮೆಯು ಪಶ್ಚಾತ್ತಾಪಪಟ್ಟು—ಈ ವಿಷಯವನ್ನು ಕೇಳಲು ಬಹಳ ಕಠಿಣವಾಗಿರುವುದು.

ಯಜಮಾನಿ—ಅಯ್ಯೋ, ಅವಳ ವರನ ದುಃಖವನ್ನು ಏನೆಂದು ಹೇಳಲಿ! ತನ್ನ ಪ್ರೀತಿಪಾತ್ರಳು ಕದ್ದೊಯ್ಯಲ್ಪಟ್ಟಳೆಂಬ ಸಮಾಚಾರವನ್ನು ಕೇಳಿದ ಕೂಡಲೇ ತನ್ನ ಸ್ನೇಹಿತರನ್ನೆಲ್ಲಾ ಕೂಡಿಕೊಂಡು ಎಲ್ಲರೂ ಆಯುಧ ಸಮೇತರಾಗಿ, ಆ ನೀಚಕಳ್ಳರನ್ನು ಹಿಂಬಾಲಿಸಿ ಹಿಡಿಯಬೇಕೆಂದು ಹೊರಟನು. ಅವರ ಸಮಾಚಾರವೇ ತಿಳಿಯದಿರಲು ಮುಂದಕ್ಕೆ ಪ್ರಯಾಣಿಸಿ ಸಿಂಹಳದ್ವೀಪದ ರಾಜಸ್ಥಾನಿಯನ್ನು ಸೇರಿದನು. ಅಷ್ಟರೊಳಗಾಗಿಯೇ ಅಲ್ಲಿನ ಹಬ್ಬವು ಮುಗಿದು ಕಮಲಿನಿಯು ಕುಳಿಂದಪತ್ನಿಯಾಗಿದ್ದಳು. ಇದನ್ನು ಕೇಳಿ ಎದೆವಡೆದು ಹಿಂತಿರುಗಿ ಇಲ್ಲಿಗೆ ಒಂದು ಮೈಲಿಯಲ್ಲಿರುವ ತನ್ನ ಊರನ್ನು ಸೇರಿದನು. ಈಚೆಗೆ ಅವನು ನಗುಮುಖನಾಗಿದ್ದುದನ್ನೇ ನಾನು ಕಾಣೆನು. ನನ್ನ ಮಗಳು ಕುಳಿಂದ ಪತ್ನಿಯಾಗಿದ್ದರೂ ಅವಳು ಸಂತೋಷ ರಹಿತಳಾಗಿಯೇ ಇರುವಳೆನ್ನುವುದರಲ್ಲಿ ಸಂದೇಹವಿಲ್ಲ.

ಮನೋ—ಆಕೆಯಿಂದ ಯಾವ ವರ್ತಮಾನವೂ ಬರುವುದಿಲ್ಲವೆ?

ಯಜ—ಅಯ್ಯೋ! ನಾನಷ್ಟು ಅದೃಷ್ಟವಂತಳೇ? ಯಾವ ಸ್ತ್ರೀರತ್ನವೇ ಆಗಲಿ ಯಾವಾಗ ರಾಣೀವಾಸವನ್ನು ಸೇರಿ, ಅಂತಃಪುರನಿವಾಸಿನಿ

ಎನ್ನಿಸಿಕೊಳ್ಳುವಳೋ ಆಗಿನಿಂದಲೂ ಹೊರಗಿನವರಿಗೂ ಅವಳಿಗೂ ಯಾವ ವಿಧವಾದ ಸಂಬಂಧವೂ ಬಿಟ್ಟುಹೋಗುವುದು. ಸಮಾಚಾರವನ್ನು ಅವಳು ಹೇಳಿ ಕಳುಹಿಸುವುದಕ್ಕೇ ಆಗಲಿ ಅವಳಿಗೆ ಸಮಾಚಾರವನ್ನು ಬಂಧುಗಳು ಹೇಳಿ ಕಳುಹಿಸುವುದಕ್ಕೇ ಆಗಲಿ ಸಾಧ್ಯವಾಗುವುದೇ ? ತಾಯಿತಂದೆಗಳು ಬಂಧು ಜನರು, ಮಿತ್ರರು, ಇವರನ್ನು ತ್ಯಜಿಸುವುದಲ್ಲದೆ ತನ್ನ ಮತವನ್ನು ತ್ಯಜಿಸಿ ಬೌದ್ಧಮತಾವಲಂಬಿಯಾಗಬೇಕು.

ಮನೋರಮೆಯು ಆಕೆಯ ದಾದಿಯರು ಬಹಳ ಪಾಶ್ಚಾತ್ತಾಪಪಟ್ಟು ಮನೆ ಯಜಮಾನಿಯ ದುಃಖಶಮನ ಮಾಡಲುದ್ಯೋಗಿಸಿದರೆ ತಾವು ಸಮಾಧಾನಪಡಿಸಲಾರರೆಂದು ಸುಮ್ಮನಾದರು.

ಯಜ—ನನ್ನ ಪುತ್ರಿಯರಿಬ್ಬರು ಬರುತ್ತಿರುವರು. ಅವರಿಗೆ ಈ ಸಮಾಚಾರವನ್ನು ತಿಳಿಸಬೇಡಿರಿ. ಇದುವರೆಗೂ ಅವಳ ಒಡಹುಟ್ಟಿದವಳ ವಿಷಯವಾಗಿ ಅವರೊಡನೆ ಮಾತನಾಡಿ ಅವರ ದುಃಖವನ್ನಭಿವೃದ್ಧಿಗೊಳಿಸಲಿಲ್ಲ.

ಅನಂತರ ಆ ಹುಡುಗಿಯರಿಬ್ಬರೂ ಬಂದು ಶಯನಗೃಹದಲ್ಲಿ ಎಲ್ಲವೂ ಸಿದ್ಧವಾಗಿರುವುದೆಂದು ಮನೋರಮೆಗೆ ತಿಳಿಸಿದರು. ಮನೋರಮೆಯು ದಾದಿಯರೊಡನೆ ಶಯನಗೃಹವನ್ನು ಸೇರಿ ಆ ರಾತ್ರಿ ಮಲಗಿದ್ದು ಮಾರನೇ ದಿವಸ ಬೆಳಿಗ್ಗೆ ಮುಂದೆ ಪ್ರಯಾಣಮಾಡಿದಳು.

ಮಾರ್ಗದಲ್ಲಿ ಹೋಗುತ್ತಿರುವಾಗ ಮನೋರಮೆಯು ದಾದಿಯರನ್ನು ಕುರಿತು—ನೆನ್ನೇದಿವಸ ಸಾಯಂಕಾಲದಲ್ಲಿ ಆಕಸ್ಮಿಕವಾಗಿ ನಾನೆಸಗಿದ ಕಾರ್ಯದ ವಿಷಯದಲ್ಲಿ ನೀವಿಬ್ಬರು ಭಯಾಶ್ಚರ್ಯಯುಕ್ತರಾಗಿರುವಿರಲ್ಲವೆ ? ಯಾರನ್ನು ಧೈರ್ಯ ಶೌರ್ಯಾದಿ ಗುಣಯುಕ್ತನೆಂದು ನೀವು ಮೆಚ್ಚಿದಿರೋ, ಯಾರ ನಡೆನುಡಿಗಳನ್ನು ನೋಡಿ ಅವನಲ್ಲಿ ನೀವು ನಂಬಿಕೆಯಿಟ್ಟಿರೋ ಮತ್ತು ಯಾರು ಚೀರದೇಶದ ದೊಡ್ಡಮನುಷ್ಯನಂತೆ ಉಡುಪನ್ನು ಧರಿಸಿದ್ದನೊ ಅಂಥಾ ಆ ಯೌವ್ವನಪುರುಷನೇ ಕಿರಾತಾಧಿಪತಿಯಾದ ಕರಾಳನಲ್ಲದೆ ಮತ್ಯಾರೆಂದು ತಿಳಿಯುವಿರಿ ?

ಈ ಮಾತುಗಳನ್ನು ಕೇಳಿ ವಿಸ್ಮಿಯುಪಟ್ಟು ಭ್ರಾಂತಿಗೊಂಡು ದಾದಿಯರಿಬ್ಬರಿಗೂ ಮಾತನಾಡಲು ತೋರಲಿಲ್ಲ.

ಮನೋ—ನಿನ್ನೇದಿನ ಮಧ್ಯಾಹ್ನದಲ್ಲಿ ಅಷ್ಟು ಹೊತ್ತಿನವರೆಗೂ ನಮಗೆ ಮೈಗಾವಲಿನಂತಿದ್ದಂಥಾ ಆ ಯೌವನಪುರುಷನೇ ಮೊನ್ನೇದಿವಸ ರಾತ್ರಿ ನನ್ನ ಉಂಗುರವನ್ನು ಕದ್ದುಕೊಂಡು ಹೋದವನು.

ದಾದಿಯರಿಬ್ಬರು ಧೈರ್ಯವನ್ನವಲಂಬಿಸಿಕೊಳ್ಳಲು ಚೂತಲತಿಕೆ—ಮಹಾರಾಣಿಯೇ, ಆ ಯೌವನಸ್ಥನೇ ಕರಾಳನೆಂದು ಹ್ಯಾಗೆ ತಿಳಿದೆ?

ಮನೋರಮೆಯು ಭಿಕ್ಷುಕರಿಗೆ ದಾನ ಕೊಡುವಾಗ ನಡೆದುದನ್ನು ಹೇಳಿ ಏನೂ ತಿಳಿಯದವಳಂತೆ ಮುಖವಿಕಾರವನ್ನು ಪಡೆಯದಿದ್ದ ನನ್ನನ್ನವ ಲೋಕಿಸಿದಾ ಕರಾಳನು ಉಂಗುರವು ನನ್ನ ಕಣ್ಣಿಗೆ ಬೀಳಲಿಲ್ಲವೆಂದು ತನ್ನ ಮನಸ್ಸಿನಲ್ಲಿಯೇ ಸಂತೋಷಪಟ್ಟುಕೊಂಡನು. ಇದಕ್ಕೆ ಮೊದಲೇ ಆತ ನೊಡನೆ ನಾನು ಮಾತನಾಡುತ್ತಾ ಬರುತ್ತಿರುವಲ್ಲಿ ಕರಾಳನ ವಿಷಯವಾಗಿ ಮಾತನಾಡಿದೆನು. ಆದನ್ನು ಕೇಳಿ ಬಹಳ ಆಶ್ಚರ್ಯಗೊಂಡವನಂತಭಿ ನಯಿಸಿ ಹೆದರಬೇಡವೆಂದು ನನಗೆ ಅಭಯವನ್ನಿತ್ತನು. ಅಲ್ಲದೆ ಕರಾಳನ ಹಾವಳಿಯ ವಿಷಯವಾಗಿ ನಿಮ್ಮಗಳಿಗೆ ಹೇಳಿದರೆ ನೀವು ಭಯಪಡುವಿರೆಂದು ನಿಮಗೆ ತಿಳಿಸಲಿಲ್ಲವೆಂಬುದಾಗಿ ಅವನಿಗೆ ಹೇಳಲು, ನೀನು ತಕ್ಕುದನ್ನು ಮಾಡಿದೆ ಎಂದು ಪ್ರತ್ಯುತ್ತರವನ್ನಿತ್ತನು.

ಚೂತ—ಮಹಾರಾಣಿಯೇ, ಕರಾಳನೆಂದು ಗೊತ್ತಾದನಂತರ ಆ ಮಹಡಿಮನೆಯ ಯಜಮಾನನಿಗೆ ಯಾತಕ್ಕೆ ನೀವು ತಿಳಿಸಲಿಲ್ಲ. ಅವನು ಗ್ರಾಮವಾಸಿಗಳನ್ನು ಸೇರಿಸಿ, ಕರಾಳನನ್ನು ಹಿಡಿದು ಬಂಧಿಸಿ, ಅವನ ಕೃತ್ಯ ಗಳಿಗೆ ತಕ್ಕ ಶಿಕ್ಷೆಯನ್ನು ಮಾಡಿಸುತ್ತಿದ್ದನು.

ಮನೋ—ಆ ಮಹಡಿಮನೆ ಯಜಮಾನನು ಯಾರೆಂದು ತಿಳಿದಿರುವಿರಿ? ಅವನು ಕರಾಳನಿಗೆ ಬೇಕಾದವನೇ! ನಾನು ಮಹಡಿಯಮನೆಯಲ್ಲಿಳಿಯ ಬೇಕೆಂದು ಮನೆಯವನನ್ನು ಕೇಳಲು, ಅವನು ಅಬಲೆಯರಿಗೆಂತು ಕೇಡೆಸಗು ವುದು ಎಂಬ ಶಂಕೆಯಿಂದ ನಾನು ಕೇಳಿದ್ದಕ್ಕೆ ಹಿಂತೆಗೆಯುತ್ತಿರಲಿಲ್ಲ. ಆಗ ಕರಾಳನು ಆವನ ಕಿವಿಯಲ್ಲಿ ಏನನ್ನೋ ಹೇಳಿ ಅವನನ್ನು ನನ್ನ ಮಾತಿಗೆ ಒಪ್ಪಿಕೊಳ್ಳುವಂತೆ ಮಾಡಲಿಲ್ಲವೆ?

ಮದ—ಆಹುದು, ಇದೆಲ್ಲವನ್ನು ನಾನು ನೋಡಿದೆನು.

ಚೂತ—ಇದನ್ನು ನೋಡಿದ್ದರೂ ನನಗೆ ಕಿಂಚಿತ್ಸಂಶಯವೂ ತೋರ ಲಿಲ್ಲವಲ್ಲಾ !

ಮನೋ—ಯಾವೆಡೆಯಲ್ಲಿ ನಾವು ಸುರಕ್ಷಿತವಾಗಿರುವೆವೆಂದು ಯೋಚಿ ಸುವೆವೊ ಅಲ್ಲಿಯೇ ಇಲ್ಲದಿದ್ದ ಅನರ್ಥಗಳೆಲ್ಲಾ ಕಾದುಕೊಂಡಿರುವವು.

ಇದೇ ರೀತಿಯಾಗಿ ಆ ಮೂವರು ಅಬಲೆಯರು ಮಾತನಾಡುತ್ತಾ ಹೋಗುತ್ತಿದ್ದರು.

ಇತ್ತಲಾ ಪ್ರತಾಪಕಂಠೀರವಾದಿಗಳು ಭೋಜನಾನಂತರ ಸ್ವಲ್ಪಹೊತ್ತು ವಿಶ್ರಾಂತಿಗೊಳ್ಳಲು ಕುಳಿತುಕೊಂಡಿದ್ದರು. ರಾಜನು ಮನೋರಮೆಯ ಅಸಮಾನ ರೂಪು ಲಾವಣ್ಯವನ್ನು ತನ್ನ ಮನಸ್ಸಿನಲ್ಲಿಯೇ ವರ್ಣಿಸುತ್ತ ಲಿದ್ದನು. ಈವರಿವಿಗೂ ಮನ್ಮಥಬಾಣಕ್ಕೆ ಗುರಿಯಾಗದಿದ್ದರೂ ಆಕೆಯ ಮುಖವೆಂಬ ಚಂದ್ರನು ಮರೆಯಾಗಲು ಪ್ರತಾಪಕಂಠೀರವನು ಆಕೆಯಲ್ಲಿ ಮೋಹಗೊಂಡು ನೈದಿಲೆಯಂತೆ ಕಾಂತಿಹೀನನಾಗಿ ಮನದಲ್ಲಿಯೇ ಮರು ಗುತ್ತಾ ಎಷ್ಟುಹೊತ್ತಿಗೆ ಬೆಳಗಾಗುವುದೋ, ಆ ಮೋಹನಾಂಗಿಯನ್ನು ಎಷ್ಟು ಹೊತ್ತಿಗೆ ನೋಡುವೆನೋ ಎಂದು ಚಿಂತಿಸುತ್ತಿದ್ದನು. ಸೈನ್ಯಾಧಿಪತಿಗ ಳಿಬ್ಬರೂ ಪ್ರಾತಃಕಾಲದಲ್ಲಿ ಆ ಸ್ತ್ರೀಯರೊಡನೆ ಪ್ರಯಾಣಮಾಡುವೆವೆಂದು ಉಲ್ಲಾಸಭರಿತರಾಗಿದ್ದರು. ಸಿಂಹಬಲನು ರಾಜನ ಮನೋಸ್ಥಿತಿಯನ್ನು ತಿಳಿದಿದ್ದರೂ ಸಮಾಧಾನಗೊಳಿಸಲಾಗುವುದಿಲ್ಲವೆಂದು ಸುಮ್ಮನಿದ್ದನು. ಈ ರೀತಿಯಾಗಿ ಅವರು ಕುಳಿತಿರುವಲ್ಲಿ ಬಾಗಿಲು ತೆರೆಯಲ್ಪಟ್ಟು ಮಹಡಿಮನೆ ಯವನು ಪ್ರವೇಶಿಸಿ ಹುಬ್ಬುಗಂಟು ಹಾಕಿಕೊಂಡು ರಾಜನನ್ನು ಕುರಿತು— ಏನಯ್ಯಾ ಈಗ ನನಗುಂಟಾಗಿರುವ ಅವಮಾನಕ್ಕೆ ನಿನ್ನನ್ನೇನುಮಾಡಬೇಕು?

ರಾಜ—ಹಾಗಂದರೇನು ?

ಮ. ಯ.—ನೀವೆಲ್ಲರೂ ಮಹಾ ಅಯೋಗ್ಯರು. ಅಲ್ಲದಿದ್ದರೆ ಆ ಸ್ತ್ರೀಯರು ಹಾಗೆ ಓಡಿಹೋಗುವರೆ ?

ರಾಜ—ಏನು, ಓಡಿಹೋದರೆ ?

ಮ. ಯ.—ಹೌದು ; ಅವರು ಓಡಿಹೋಗಲು ಕಾರಣವೇನೋ ಇರಬೇಕು.

ರಾಜ—ಅವರನ್ನು ಸರಿಯಾಗಿ ವಿಚಾರಿಸದ ನಿನ್ನ ಅವಿವೇಕದಿಂದಲೆ ಅವರು ಓಡಿಹೋಗಿರಬೇಕು.

ಮನೆ ಯಜಮಾನ--ನೀನೇನಾದರೂ ಹೇಳಿಕೋ ? ನಾನು ಅವರನ್ನು ಮನೆಗೆ ಕರೆದುಕೊಂಡು ಹೋಗುತ್ತಿರುವಾಗ ಆ ಸ್ಫುರದ್ರೂಪಿಯು : ನಿಮಗೆ ಪ್ರಾಣದ ಮೇಲೆ ಆಸೆಯಿದ್ದರೆ ನನ್ನ ಸಂಗಡ ಬನ್ನಿರಿ ಎಂದು ಪಾದಿಯಭೊಡ ಗೂಡಿ ಓಡಿಹೋದಳು. ಅವರು ಕಣ್ಣುಮರೆಯಾಗುವವರೆಗೂ ಸ್ತಂಭೀ ಭೂತನಾಗಿ ನಿಂತಲ್ಲಿಯೇ ನಿಂತು ನೋಡುತ್ತಿದ್ದೆನು.

ಅನಂತರ ರಾಜನು ಅವನನ್ನು ಸಮಾಧಾನಪಡಿಸಿ ಕಳುಹಿ ಎದೆಪಡೆದು ದುಃಖಿತನಾಗಿ ಶಯನವನ್ನು ಸೇರಿದನು. ಸೈನ್ಯಾಧಿಪತಿಗಳು ಮಲಗಿ ನಿದ್ರೆ ಗೈದರು. ರಾಜನು ಬಹಳ ಹೊತ್ತಿನವರಿವಿಗೂ ನಿದ್ರೆಯಿಲ್ಲದೆ ಹೊರಳಾ ಡುತ್ತಾ ಬಾರಿಬಾರಿಗೂ ಆ ನವಮೋಹನಾಂಗಿಯ ಧ್ಯಾನದಲ್ಲಿಯೇ ಹಂಬಲಿ ಸುತ್ತಿದ್ದನು.

ಇತ್ತಲಾ ದಿನರಾತ್ರೆ ಕರಾಳನು ಶೀಘ್ರವಾಗಿಯೇ ಭೋಜನಶಾಲೆ ಯಿಂದ ಹೊರಟು ಎರಡುಮೂರು ಘಳಿಗೆಯಲ್ಲಿಯೇ ಚಾರುವೀರನನ್ನು ದುರ್ಜನವಿದಾರಿಯನ್ನು ಬಿಟ್ಟುಬಂದ ಸ್ಥಳವನ್ನು ಸೇರಿದನು. ಕಾಲು ಚಾಚಿಕೊಂಡು ಹುಲ್ಲಿನಮೇಲೆ ಎಚ್ಚರವಾಗಿಯೇ ಮಲಗಿದ್ದ ಅವರಿಬ್ಬರೂ ಕರಾಳನನ್ನು ನೋಡಿದಕೂಡಲೇ ಎದ್ದುನಿಂತು ಪ್ರಣಾಮವಂ ಗೈಯುತ್ತಿರಲು ಕರಾಳನು ಬಹಳ ಆತುರದಿಂದ ವರ್ತಮಾನವೇನು ? ಎಂದು ಕೇಳಿದನು.

ಚಾರುವೀರನು ದುಃಖಿತನಾಗಿ—ಅಶುಭವಾರ್ತೆಯನ್ನು ತಿಳಿಸಲು ಮರುಗುವೆನು.

ಕರಾಳನು ಕೋಪೋದ್ದೀಪಿತನಾಗಿ—ಇದು ಯಾವ ಅಶುಭವೊ ಬೊಗಳು. ನಮ್ಮ ಕಿರಾತಪಡೆ ಎಲ್ಲಿರುವುದು? ಕಿರಾತರು ಈವರಿವಿಗೂ ಹಿಂತಿರುಗಲಿಲ್ಲವೊ ? ಶುಕವಾಣಿ ಎಲ್ಲಿರುವಳು ?

ಚಾರುವೀರ—ಶುಕವಾಣಿದೇವಿಯು ಸುರಕ್ಷಿತವಾಗಿ ಒಂದು ಡೇರೆ ಯಲ್ಲಿರುವರು (ಎಂದು ಶುಕವಾಣಿ ಬಂದನಂತರ ಆಕೆಗಾಗಿ ಹಾಕಿದ ಡೇರೆ ಯನ್ನು ತೋರಿಸಿ) ಪ್ರತಾಪಕಂಠೀರವಾದಿಗಳು ಪುನಃ ತಪ್ಪಿಸಿಕೊಂಡರು.

ಕರಾಳ—ಪುನಃ ತಪ್ಪಿಸಿಕೊಂಡರೇ ? ನೀವುಗಳು ಮಾಡುವುದೆಲ್ಲ ಹಾಳಾಗಿಯೇಹೋಗುವುದು. ನಾನಾದರೋ ಕೈಕೊಂಡ ಕೆಲಸಗಳನ್ನು ಮಾಡಿಕೊಂಡೇ ಬಂದಿರುವೆನು. ನಮ್ಮ ಕಿರಾತರೆಲ್ಲಿ ? ೩-೪ ಘಳಿಗೆಯಲ್ಲಿಯೆ

ಮನೋರಮೆಯು ಆಕೆಯ ದಾದಿಯರು ಹೋಗುವ ಮಾರ್ಗವನ್ನಡ್ಡಗಟ್ಟಿ ಆ ಸ್ತ್ರೀಯರನ್ನು ಹಿಡಿಯಲು ನಮ್ಮ ಕಿರಾತಪಡೆಯು ಬೇಕಾಗಿರುವುದು.

ಅಷ್ಟರಲ್ಲಿಯೇ ಡೇರೆಯ ಒಳಗಿನಿಂದ ಶುಕವಾಣಿಯು ಪ್ರವೇಶಿಸಿ ಪ್ರಾಣಕಾಂತನೇ ಎಂದು ಕರಾಳನನ್ನು ಆಲಂಗಿಸಲು ಓಡಿಬಂದಳು. ಕರಾಳನು, ಪ್ರೇಯಸಿ, ಪ್ರಾಣಪ್ರೇಯಸಿ! ಎಂದು ಮುಂದುವರಿಯಲು ಒಬ್ಬರನ್ನೊಬ್ಬರು ಅಪ್ಪಿಕೊಂಡು ಗಾಢಾಲಿಂಗನಂಗೈದರು.

ಅನಂತರ ಶುಕವಾಣಿಯು—ಮನದನ್ನನೇ, ಚಾರುವೀರನನ್ನು ದೂಷಿಸಬೇಡ. ನನ್ನಂತೆಯೆ ಅವನೂ ತನ್ನ ಕೈಲಾದುದನ್ನೆಲ್ಲಾ ಮಾಡಿದನು. ಆದರೆ ಪ್ರತಾಪಕಂಠೀರವನ ಸೈನ್ಯಾಧಿಪತಿಗಳು ಕಿಂಚಿತ್ಸಂಶಯಗೊಂಡದ್ದರಿಂದ ನಮ್ಮಿಬ್ಬರ ಪ್ರಯಾಸವು ನಿರರ್ಥಕವಾಯಿತು.

ಕಿರಾತಪಡೆಯು ಬಂದಮೇಲೆ ನಮ್ಮ ಭಟರು ಬಂಧನವಂ ಬಿಚ್ಚಿದರು. ಭವನಾಧಿಕಾರಿಯು ಎಲ್ಲಿರುವನೆಂದು ಹುಡುಕುವಲ್ಲಿ ನನ್ನಂತೆಯೇ ಅವನೂ ಬಂಧಿಸಲ್ಪಟ್ಟಿದ್ದನು. ಕುದುರೆಯವನು ತನ್ನ ಕೊಠಡಿಯಿಂದ ಹೊರಗೆ ಬಾರದಂತೆ ಕೊಠಡಿಯ ಬಾಗಿಲು ಚಿಲುಕ ಹಾಕಲ್ಪಟ್ಟಿತ್ತು. ಭವನದ ಹೊರಬಾಗಲು ತೆರೆಯಲ್ಪಟ್ಟಿತ್ತು. ಪ್ರತಾಪಕಂಠೀರವಾದಿಗಳನ್ನು ಹಿಡಿಯುವುದು ಮುಖ್ಯವಾದ ಕೆಲಸವೆಂದು ತಿಳಿದು ಅವರನ್ನು ಹಿಡಿದೇತರಬೇಕೆಂದು ಕಿರಾತರಿಗೆ ಆಜ್ಞಾಪಿಸಿ ಅವರನ್ನು ನಾಲ್ಕು ಕಡೆಯಲ್ಲಿಯೂ ಅಟ್ಟಿದನು. ಆದ್ದರಿಂದಲೇ ಅವರು ಈವರಿವಿಗೂ ಬರಲಿಲ್ಲ. ಎರಡು ಮೂರು ಘಳಿಗೆ ಪರ್ಯಂತರವೂ ಬಂಧನದಲ್ಲಿದ್ದು ಬಹಳ ಆಯಾಸಗೊಂಡದ್ದರಿಂದ ಮಾರನೇ ದಿನ ಮಧ್ಯಾಹ್ನದವರಿವಿಗೂ ಭವನದಲ್ಲಿಯೇ ವಿಶ್ರಮಿಸಿಕೊಂಡು ಮಧ್ಯಾಹ್ನದ ಮೇಲೆ ಅಲ್ಲಿಂದ ಹೊರಟು ನೀವು ಈ ಸ್ಥಳದಿಂದ ಹೋದ ತರುವಾಯ ಸ್ವಲ್ಪ ಹೊತ್ತಿನಲ್ಲಿಯೇ ಇಲ್ಲಿಗೆ ಬಂದು ಸೇರಿದೆನು.

ಕರಾಳನು ಈ ಕಾರ್ಯವು ನಿರರ್ಥಕವಾಯಿತಲ್ಲಾ ಎಂದು ಮನಸ್ಸಿನಲ್ಲಿ ತೊಂದರೆಗೊಂಡರೂ, ಪ್ರತಾಪಕಂಠೀರವಾದಿಗಳನ್ನು ಕಿರಾತರು ಹಿಡಿತರಬಹುದೆಂಬ ಭರವಸೆಯಲ್ಲಿದ್ದರು.

ಕರಾಳ—ಮತ್ತೇನು ಪ್ರೇಮಸೀಮಣಿಯೇ? ನಾನು ಕೈಕೊಂಡ ತಂತ್ರದ ವಿವರವನ್ನೂ, ಈ ತಂತ್ರದಲ್ಲಿ ನೀನು ನಡೆಸಬೇಕಾದ ಕಾರ್ಯವನ್ನೂ,

ಇದಕ್ಕಾಗಿಯೇ ಬಂಧುಗಳನ್ನು ನೋಡಲು ಹೋಗಿದ್ದ ನಿನ್ನನ್ನು ಇಷ್ಟು ಶೀಘ್ರವಾಗಿ ಕರೇಕಳುಹಿಸಿದ್ದನ್ನೂ, ನನ್ನ ಕಾಗದದಿಂದ ತಿಳಿದಿರುವಿಯಲ್ಲವೆ?

ಶುಕ—ಎಲ್ಲವೂ ತಿಳಿದಿರುವುದು. ಆದರೆ ಮನೋರಮೆಯ ವಿಷಯದಲ್ಲಿ ...........

ಕರಾ—ಇಗೋ! ಆಕೆಯ ಉಂಗುರವು. ನಾನು ಕೈಕೊಂಡ ಕಾರ್ಯದಲ್ಲೆಲ್ಲಾ ಜಯಶೀಲನಾಗಿಯೇ ಬರುವೆನು. (ಎಂದು ಉಂಗುರವನ್ನು ಆಕೆಯ ಕೈಗೆ ಕೊಟ್ಟನು.)

ಕರಾಳನು ತಾನು ಆ ಸ್ಥಳವನ್ನು ಬಿಟ್ಟು ಹೋದಲಾಗಾಯ್ತು ಪುನಃ ಅಲ್ಲಿಗೆ ಬರುವವರಿಗೂ ನಡೆದ ಸಂಗತಿಯನ್ನೆಲ್ಲಾ ಹೇಳಲು ಶುಕವಾಣಿಯು ಪಟ್ಟಣದ ಮಧ್ಯಭಾಗವನ್ನು ಹೊಕ್ಕ ನಿನ್ನ ದುಡುಕು ಎಂಥಾದ್ದು! ನಿನ್ನ ಗುರುತೇನಾದರೂ ಅಲ್ಪಸ್ವಲ್ಪ ತಿಳಿದಿದ್ದ ಪಕ್ಷದಲ್ಲಿ ಏನಾಗಬೇಕು?

ಕರಾಳ—ಪ್ರಾಣಕಾಂತೆಯೇ, ಈ ರೀತಿಯಾಗಿ ಅಂಜಿಕೊಳ್ಳಬೇಡ! ನಾನು ಜಾಗರೂಕನಾಗಿದ್ದುಕೊಂಡು ಈ ಕಾರ್ಯವನ್ನು ಮಾಡಿರುವೆನು. ಈಗಲೀಗ ನಾನು ಹೇಳುವುದನ್ನು ಚನ್ನಾಗಿ ಲಾಲಿಸು. ಮನೋರಮೆಯ ಉಂಗುರವು ನಿನ್ನಲ್ಲಿರುವುದರಿಂದ ಈ ನಮ್ಮ ಸಾಹಸ ಕಾರ್ಯಸನ್ನಾಹದಲ್ಲಿ ಅರ್ಧ ಕೆಲಸ ಮುಗಿದಂತಾಯಿತು. ಬೆಳಗಿನ ಝಾವದಲ್ಲಿ ಕಳಿಂಗಪಟ್ಟಣಕ್ಕೆ ಹೊರಡು. ಅಲ್ಲಿ ನಮ್ಮ ಬರವನ್ನು ನಿರೀಕ್ಷಿಸುತ್ತಲಿರುವ ದುಷ್ಟಬುದ್ಧಿಯು ನಿನ್ನನ್ನು ಕಾಣುವನು. ಪ್ರತಾಪಕಂಠೀರವನು ಅಲ್ಲಿಗೆ ಬಂದಿರುವನೇ ಇಲ್ಲವೇ ಎಂಬ ಸಂಗತಿಯನ್ನು ಹೇಳುವನು. ಬಂದಿರುವ ಪಕ್ಷದಲ್ಲಿ ಏನೊಂದನ್ನೂ ಮಾಡದೆ ಪಶ್ಚಿಮ ಘಟ್ಟಗಳಲ್ಲಿರುವ ನಮ್ಮ ಭವನಕ್ಕೆ ಹಿಂತಿರುಗುವಳಾಗು. ಪ್ರತಾಪಕಂಠೀರವನು ಆ ಪಟ್ಟಣದಲ್ಲಿದ್ದ ಪಕ್ಷದಲ್ಲಿ ನಮ್ಮ ಕಾರ್ಯವು ಸಮರ್ಪಕವಾಗಿ ನಡೆಯುವುದೆಂದೂ, ಪ್ರತಾಪಕಂಠೀರವನು ಸೆರೆಹಿಡಿಯಲ್ಪಟ್ಟನೆಂದೂ ನಾನು ಶೀಘ್ರವಾಗಿ ನಿನ್ನಲ್ಲಿ ಬಂದುಸೇರಿ ಮುಂದಾಗಬೇಕಾದುದನ್ನೆಲ್ಲಾ ಮಾಡುವೆನೆಂದು ತಿಳಿದುಕೊಳ್ಳೋಣ.

ಶುಕ—ಮನೋರಮೆಯ ವಿಷಯದಲ್ಲಿ ಏನು ಮಾಡುವಿರಿ?

ಕರಾಳ—ಪ್ರತಾಪಕಂಠೀರವನನ್ನು ಹಿಡಿಯಲು ಹೋಗಿರುವ ಕಿರಾತರು ಎರಡು ಮೂರು ಘಳಿಗೆ ಒಳಗಾಗಿ ಬಂದರಾಯಿತು. ಇಲ್ಲವೆ, ದುರ್ಜನ

ವಿದಾರಿ ಚಾರುವೀರರಿಂದೊಡಗೂಡಿ ನಾನೇ ಹೋಗಿ ಆಕೆಯನ್ನೂ ಆಕೆಯ ದಾದಿಯರನ್ನೂ ಸೆರೆಹಿಡಿದು ತರುವೆನು. ಒಂದುವೇಳೆ ಆಕೆಯು ತನ್ನ ಉಂಗುರವನ್ನು ಕಳೆದುಕೊಂಡಿರುವುದರಿಂದ ಕಳಿಂಗಪಟ್ಟಣಕ್ಕೆ ಹೋಗುವುದು ನಿಷ್ಪ್ರಯೋಜನವೆಂದು ಹಿಂತಿರುಗಬಹುದು. ಹಾಗಾದ ಪಕ್ಷದಲ್ಲಿ ನಮಗೆ ಮೇಲೇ ಆಗುವುದು.

ಶುಕ—ನನಗೂ ಆಕೆಯು ಹಿಂತಿರುಗಬಹುದೆಂದೇ ತೋರುವುದು.

ಅನಂತರದಲ್ಲಿ ಆ ದಂಪತಿಗಳು ತಮ್ಮ ಸಾಹಸ ಕಾರ್ಯಗಳೆಲ್ಲಾ ಕೈಗೂಡಿದರೆ ಅದರಿಂದುಂಟಾಗುವ ಐಶ್ವರ್ಯಾದಿಗಳನ್ನು ಕುರಿತು, ಅತಿ ಉಲ್ಲಾಸವಾಗಿ ಮಾತನಾಡುತ್ತಾ ಅತಿ ವಿನೋದವಾಗಿರುತ್ತಿರಲು ಸೂರ್ಯನು ಪೂರ್ವಾದ್ರಿಯನ್ನು ಸಮೀಪಿಸಿದನು.

ಶುಕವಾಣಿಯು ನಿತ್ಯಕರ್ಮಗಳನ್ನು ತೀರಿಸಿಕೊಂಡು ತನ್ನ ಪ್ರಿಯನಿಂದ ಅಪ್ಪಣೆಯನ್ನು ಪಡೆದು ತನ್ನ ದಾದಿಯರನ್ನೊಡಗೂಡಿ ಕಳಿಂಗಪಟ್ಟಣಕ್ಕೆ ಹೊರಟಳು. ಶುಕವಾಣಿಯು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಕರಾಳನು ತನ್ನ ಕಿರಾತರು ಇದುವರಿಗೂ ಬಾರದಿರುವುದನ್ನು ನೋಡಿ ದುರ್ಜನವಿದಾರಿ ಚಾರುವೀರರೊಡಗೂಡಿ ಅಶ್ವಾರೂಢನಾಗಿ ರಾಜಭಾಟೆ ಮಾರ್ಗವನ್ನು ಬಿಟ್ಟು ಕಾಲುದಾರಿಯನ್ನನುಸರಿಸಿ ಮನೋರಮೆಯು ರಾತ್ರಿ ಇಳಿದಿದ್ದ ಪಟ್ಟಣದಿಂದ ಎರಡು ಮೂರು ಮೈಲಿಯಲ್ಲಿ ಮಾರ್ಗದ ಪಕ್ಕದಲ್ಲಿರುವ ತೋಪಿನಲ್ಲಿಳಿದು ಮನೋರಮೆಯ ಬರವನ್ನು ಹೊಂಚು ಕಾಯುತ್ತಾ ನಿರೀಕ್ಷಿಸುತ್ತಿದ್ದನು. ಒಂದು ಘಳಿಗೆಯೊಳಗಾಗಿಯೇ ೧೨ ಮಂದಿ ಮೈಗಾವಲಿನವರಿಂದಲೂ ತನ್ನ ದಾದಿಯರಿಂದಲೂ ಒಡಗೂಡಿ ಬರುತ್ತಿದ್ದ ಮನೋರಮೆಯನ್ನು ಕಂಡು ಕರಾಳನು ತನ್ನ ಮನಸ್ಸಿನಲ್ಲಿ—ನಾನು ಆ ಶಾಲೆಗೆ ಬಂದಿದ್ದೆನೆಂದು ತಿಳಿದ ಮೇಲೆ ಈಕೆಯು ಮೈಗಾವಲಿನಿಂದೊಡಗೂಡಿ ಬರುವಳೆಂದು ಯೋಚಿಸಿದ್ದೆನು. ಆದರೆ ಇಷ್ಟು ದೊಡ್ಡ ಮೈಗಾವಲಿನಿಂದ ಬರುವಳೆಂದು ನಾನು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ನಾವು ಮೂವರು. ನಮ್ಮ ಮೂವರಲ್ಲಿ ದುರ್ಜನ ವಿದಾರಿಯು ಗೂಢಚಾರತನದಲ್ಲಿ ವಿಚಕ್ಷಣನು. ಯುದ್ಧಶಾಸ್ತ್ರದಲ್ಲಿ ಇವನಿಗೆ ಪ್ರವೀಣತೆಯಿಲ್ಲ. ಮೈಗಾವಲಿನವರಾದರೋ ಹನ್ನೆರಡು ಮಂದಿ ಇವರೆಲ್ಲರ ಹೊಡೆತವನ್ನು ನಾನೂ ಚಾರುವೀರನೂ ತಡೆಯಬೇಕಾಗಿರುವುದು. ಇವರನ್ನು

ಮುತ್ತಿ ಜಗಳ ಮಾಡಿದರೆ ಜಯಲಕ್ಷ್ಮಿಯು ನನ್ನನ್ನೇ ಸೇರುವಳೆಂಬುವುದು ಅನುಮಾನವು. ಈಗಲೇನು ಮಾಡುವುದು ? ಈಕೆಯು ಕಳಿಂಗಪಟ್ಟಣವನ್ನು ಸೇರಿದರೆ ಶುಕವಾಣಿಯು ಮಾಡಬೇಕಾದ ಕಾರ್ಯವು ಅಸಾಧ್ಯವೇನಿರುವುದು. ಭೋಜನಶಾಲೆಯನ್ನು ಬಿಟ್ಟು ನಾನು ಹೊರಡುವ ಸಮಯಕ್ಕೆ ಸರಿಯಾಗಿ ನನ್ನ ದುರದೃಷ್ಟಕ್ಕಾಗಿಯೇ ಆ ನಿಶಿರಾತ್ರಿಯಲ್ಲಿ ಬಂದ ಆ ಹಾಳು ವರ್ತಕನಿಂದಲ್ಲವೇ ಮನೋರಮೆಯು ಇಂಥಾ ಅಸಾಧ್ಯವಾದ ವ್ಯೈಗಾವಲಿನಿಂದ ಬಂದಿರುವಳು ಎಂದು ಚಿಂತಾಕ್ರಾಂತನಾಗಿ ಯೋಚಿಸುತ್ತಿದ್ದನು.

ಮನೋರಮೆಯು ಮುಂದಿನ ಗ್ರಾಮದಲ್ಲಿ ಆ ವ್ಯೈಗಾವಲಿನವರನ್ನು ಕಳುಹಿಸಿಬಿಡುವಳೆಂಬ ಯೋಚನೆಯು ಕರಾಳನಿಗೆ ಕಿಂಚಿತ್ತಾದರೂ ಹೊಳೆಯಲಿಲ್ಲ.

ಕರಾಳನು ಎಷ್ಟು ವಿಧವಾಗಿ ಯೋಚಿಸಿದರೂ ಯಾವದೊಂದೂ ಸರಿಯಾಗಿ ತೋರಲಿಲ್ಲ. ಹಾಗೆ ಸ್ವಲ್ಪಹೊತ್ತು ಮನೋರಮಾದಿಗಳನ್ನು ನೋಡುತ್ತಾ ನಿಂತಿರಲು ಕರಾಳನಿಗೆ ಯಾವುದೋ ಒಂದು ಯೋಚನೆಯು ಹೊಳೆಯಲು ಇರಲಿ, ಈ ಯೋಚನೆಯು ಸರಿಯಾಗಿರುವುದು! ಎಲ್ಲರಿಗಿಂತಲೂ ಮುಂಚಿತವಾಗಿಯೇ ನಾನು ಕಳಿಂಗಪಟ್ಟಣವನ್ನು ಸೇರಿ ನಡೆದಿರುವುದನ್ನೆಲ್ಲ ದುಷ್ಟಬುದ್ಧಿಗೆ ಹೇಳುವೆನು. ಹ್ಯಾಗಾದರೂ ಮನೋರಮೆಯು ಧನಕೋಟಿಯ ಮನೆಯನ್ನು ಸೇರದಂತೆ ಮಾಡಿಸುವೆನು. ಪ್ರತಾಪಕಂಠೀರವನು ನನ್ನ ಭಟರಿಂದ ತಪ್ಪಿಸಿಕೊಳ್ಳುವ ಪಕ್ಷದಲ್ಲಿ ಅವನನ್ನೂ ಸೇರದಂತೆ ಮಾಡಿಸುವೆನು ಎಂದು ನಿರ್ಧರಿಸಿ ಪುನಃ ದುರ್ಜನವಿದಾರಿಯ ಉಡುಪನ್ನು ಧರಿಸಿಕೊಂಡು ಚಾರುವೀರನಿಗೆ ತಿಳಿಸಬೇಕಾದ್ದನ್ನೆಲ್ಲಾ ತಿಳುಹಿಸಿ ತಾನು ಏಕಾಂಗಿಯಾಗಿಯೇ ಕಾಲುದಾರಿಯನ್ನನುಸರಿಸಿ ಕಳಿಂಗಪಟ್ಟಣಕ್ಕೆ ಹೋಗುತ್ತಿದ್ದನು.

ಇತ್ತ ಲಾಪತಿಯಾಜ್ಞಾಪ್ರಕಾರವಾಗಿ ಪ್ರಯಾಣಮಾಡಿದ ಶುಕವಾಣಿಯು ಪ್ರತಾಪಕಂಠೀರವಾದಿಗಳೇನಾದರೂ ಕಿರಾತರಿಂದ ತಪ್ಪಿಸಿಕೊಂಡು ತನ್ನನ್ನು ಸಂಧಿಸಿದರೆ ಕೇಡುಂಟಾಗುವುದೆಂದು ಯೋಚಿಸಿ ಕಾಲುದಾರಿಯನ್ನಿಡಿದು ಹೋಗುತ್ತಿದ್ದಳು. ಸುಮಾರು ೧೦ ಘಂಟೆ ಸಮಯಕ್ಕೆ ಸರಿಯಾಗಿ ಒಂದಾನೊಂದು ತೋಟದ ಸಮೀಪದಲ್ಲಿ ಹರಿಯುತ್ತಿದ್ದ ಹೊಳೆಯ ದಡದಲ್ಲಿ ಡೇರೆಯನ್ನು ನೆಡಿಸಿ ದಾದಿಯರಿಗೆ ಅಡಿಗೆ ಮಾಡುವಂತೆ ಹೇಳಿ, ಹತ್ತಿರದಲ್ಲಿದ್ದ

ಒಂದು ಮರದ ನೆರಳಿನಲ್ಲಿ ಕುಳಿತುಕೊಂಡು ಯೋಚಿಸುತ್ತಿದ್ದಳು. ತನಗೆ ಪ್ರೀತಿಪಾತ್ರನಾದ ಪತಿಗಾಗಿ ಕಾರ್ಣಾಟಕ ದೇಶದಲ್ಲಿರುವ ಒಂದು ದೊಡ್ಡ ಮನೆತನವನ್ನು ತಾನು ಬಿಟ್ಟು ಬಂದದನ್ನೂ, ಕೆಲವು ದಿವಸಗಳ ಹಿಂದೆ ತಾನು ನೋಡಲು ಹೋಗಿದ್ದ ತನ್ನ ತಂದೆತಾಯಿಗಳು ತಮ್ಮ ಮಗಳು ಕಿರಾತಾಧಿಪತಿಗೆ ಗಾಂಧರ್ವ ವಿವಾಹದಿಂದ ಪತ್ನಿಯಾಗಿರುವಳೆಂದು ತಿಳಿಯು ರೆಂಬುವುದನ್ನೂ, ತನ್ನ ಪತಿಯು ಕೈಗೊಂಡಿರುವ ಸಾಹಸ ಕಾರ್ಯವನ್ನೂ, ಆ ಕಾರ್ಯದ ಜಯಾಪಜಯಗಳನ್ನೂ ಕುರಿತು ಆಲೋಚಿಸುತ್ತಿದ್ದಳು.

ಈ ರೀತಿಯಾಗಿಯೇ ಎರಡು ಘಳಿಗೆಯವರಿಗೂ ಆಲೋಚಿಸುತ್ತಾ ಶುಕವಾಣಿಯು ಕುಳಿತಿರಲು ಕುದುರೆಗಳ ಖುರಪುಟಧ್ವನಿಯು ಕೇಳಬಂದಿತು. ತಕ್ಷಣವೇ ಆ ಸ್ಥಳವನ್ನು ಬಿಟ್ಟು ಓಡಿಹೋಗಿ ತೋಟದ ಮರಗಳ ಮಧ್ಯದಲ್ಲಿ ಅಡಗಿಕೊಂಡು ದಿಗಿಲುಪಟ್ಟು ಪ್ರತಾಪಕಂಠೀರವಾದಿಗಳು ಬರುವರೇನೋ ಎಂದು ನೋಡುತ್ತಿದ್ದಳು.

ಮನೋರಮೆಯು ಆಕೆಯನ್ನು ಹಿಂಬಾಲಿಸಿ ಬರುವ ಆಕೆಯ ದಾದಿಯರು ಅಶ್ವಾರೂಢರಾಗಿ ಬರುತ್ತಿದ್ದರು. ಶುಕವಾಣಿಯು ಮನೋರಮೆಯ ಅಸಮಾನ ರೂಪಲಾವಣ್ಯಗಳನ್ನು ನೋಡಿ, ಈಕೆಯು ನನ್ನ ಪತಿಯು ವರ್ಣಿಸಿ ಹೇಳಿದ ರೂಪರೇಖಾದಿಗಳನ್ನುಳ್ಳವಳಾಗಿರುವಳು. ಇವಳೇ ಮನೋರಮೆಯಾಗಿರಬೇಕು. ಮನೋರಮೆಯೇ! ಅದೃಷ್ಟವಶಾತ್ ನನ್ನ ಪತಿಯಿಂದ ತಪ್ಪಿಸಿಕೊಂಡು ಬಂದಿರುವೆಯಲ್ಲವೇ! ಆಗಲಿ ನಿನ್ನನ್ನು ನಾನೇ ಸೆರೆಹಿಡಿಯುವೆನು ಎಂದು ತನ್ನ ಮನಸ್ಸಿನಲ್ಲೆಣಿಸಿ ಯಾರಿಗೂ ತಿಳಿಯದಂತೆ ತನ್ನ ಡೇರೆಯ ಪಕ್ಕದಲ್ಲಿ ಬಂದು ನಿಂತಳು.

ಮನೋರಮೆಯು ದೊಡ್ಡ ಮಾರ್ಗವನ್ನು ಸೇರುವುದಕ್ಕಾಗಿಯೇ ಬರುತ್ತಿದ್ದಳು. ಡೇರೆಯನ್ನು ನೋಡಿದ ಕೂಡಲೇ ಅಲ್ಲಿ ಯಾರೋ ಪ್ರಯಾಣೀಕರಿಳಿದಿರುವರೆಂದೆಣಿಸಿ ತಾನು ವಿಶ್ರಮಿಸಿಕೊಂಡು ಮುಂದೆ ತೆರಳಬೇಕೆಂದು ಡೇರೆಯ ಸಮೀಪವನ್ನೈದಿದಳು. ಕೂಡಲೇ ಶುಕವಾಣಿಯು ಆಕೆಯನ್ನು ಕರೆದುಕೊಂಡು ಹೋಗಿ ಅತಿಥಿಸತ್ಕಾರವಂಗೈದಳು. ಎಲ್ಲರೂ ಭೋಜನವನ್ನು ತೀರಿಸಿಕೊಂಡ ನಂತರ ಶುಕವಾಣಿಯೂ ಮನೋರಮೆಯೂ

ಒಂದು ಮರದ ನೆರಳಿನಲ್ಲಿ ಕುಳಿತುಕೊಂಡು ವಿನೋದವಾಗಿ ಮಾತನಾಡು ತ್ತಿದ್ದರು. ಸಖಿಯರೆಲ್ಲರೂ ತಮ್ಮ ತಮ್ಮ ಕೆಲಸಕಾರ್‍ಯಗಳಲ್ಲಿದ್ದರು.

ಶುಕವಾಣಿಯು ಅತಿಥಿಸತ್ಕಾರವನ್ನು ಗೈಯ್ಯುತ್ತಿರುವಲ್ಲಿ ಹೀಗೆಂದು ತನ್ನ ಮನಸ್ಸಿನಲ್ಲಿ ಯೋಚಿಸಿದಳು—ಮೇಲೆ ಬಿದ್ದು ಇವರನ್ನು ಹಿಡಿಯೋಣ ವೆಂದರೆ, ನಾವು ಮೂವರು. ಇವರೂ ಮೂವರು. ಇದು ಸರಿಹೋಗುವುದಿಲ್ಲ. ಇವರನ್ನು ಉಪಾಯದಿಂದಲೇ ಸಿಕ್ಕಿಸಿಕೊಳ್ಳಬೇಕು. ನಮ್ಮ ಜೊತೆಯಲ್ಲಿಯೇ ಕಳಿಂಗಪಟ್ಟಣಕ್ಕೆ ಬರುವಂತೆ ಒಡಂಬಡಿಸಿ ಹ್ಯಾಗಾದರೂ ಮಾಡಿ ಇವರನ್ನು ಯಾವುದಾದರೊಂದು ಸಂಕೇತಸ್ಥಾನವನ್ನೈದಿಸಿ ಸೆರೆಹಿಡಿಸುವೆನು.

ಶುಕವಾಣಿಯು ಕರಾಳನನ್ನು ಕೈಹಿಡಿಯುವುದಕ್ಕೆ ಮೊದಲು ಸದ್ಗುಣ ಯುಕ್ತಳಾಗಿದ್ದಳು. ಆದರೂ ಆಕೆಯು ಅವನಲ್ಲಿಟ್ಟಿದ್ದ ವಿಚಿತ್ರತರವಾದ ಮೋಹಾತಿಶಯವು ಆಕೆಯ ಚಿತ್ತವೃತ್ತಿಗಳಿಗಿಂತಲೂ, ಮತ್ತಿತರ ವಿಚಾರಗಳಿ ಗಿಂತಲೂ ಪ್ರಬಲವಾಗಿಯೇ ಇತ್ತು. ಇಂಥಾ ಪ್ರೇಮಾತಿಶಯದಿಂದಲೇ ಶುಕವಾಣಿಯು ತನ್ನ ಆತ್ಮವನ್ನೇ ಕರಾಳನಿಗೆ ಒಪ್ಪಿಸಿದ್ದಳು. ಆದ್ದರಿಂದಲೆ ಅವನು ಬಯಸಿದ ಕಾರ್‍ಯವು ಎಂಥಾ ತಪ್ಪು ಕೆಲಸವಾಗಿದ್ದರೂ ಅದನ್ನು ಕೈಕೊಂಡು ನೆರವೇರಿಸಲು ವಿಧೇಯಳಾಗಿದ್ದಳು. ಹೀಗಿದ್ದಾಗ್ಯೂ ಶುಕ ವಾಣಿಯ ಸದ್ಗುಣಗಳು ಸಂಪೂರ್ಣವಾಗಿ ನಶಿಸಿಹೋಗಿರಲಿಲ್ಲ. ಅವುಗಳೆಲ್ಲವೂ ಮೋಹಾತಿಶಯದ ಪ್ರಭಲಾಧಿಕ್ಯದಿಂದ ಪ್ರಕಟವಾಗಿರಲಿಲ್ಲವು.

ತನ್ನೆದುರಿನಲ್ಲಿ ಕುಳಿತಿರುವ ನವಯೌವ್ವನವತಿಯಾದ ಸುಂದರಿಯೊಡನೆ ಶುಕವಾಣಿಯು ಮಾತನಾಡುತ್ತಾ ಇರಲು, ಮನೋರಮೆಯ ಅಸಮಾನರೂಪ ಲಾವಣ್ಯ, ವಿನಯಾದಿ ಗುಣಸಂಪತ್ತು, ಇನಿವಾಕ್ಕು, ಸಾತ್ವಿಕಸ್ವಭಾವ, ಇವುಗಳ ಮಾಧುರ್‍ಯವೆಂಬ ತೇಜಸ್ಸಿನಿಂದೊಪ್ಪುತ್ತಿರ್ಪ ಆಕೆಯ ಕಮಲವದನ ವೆಂಬ ಕಮಲಬಾಂಧವನು; ಆತಾರಾಪಥಮಧ್ಯಯರ ಸಂಭಾಷಣೆಯೆಂಬ ಆಕಾಶದಲ್ಲಿ, ಅಭಿವೃದ್ಧಿಗೊಳ್ಳುತ್ತಲಿರುವ ಕ್ರಮುವನ್ನನುಸರಿಸಿ, ಶುಕವಾಣಿಯು ಹೃದಯವೆಂಬ ಕಮಲವು ವಿಕಸಿತವಾಗುತ್ತಾ ಬರಲು ಅದರಲ್ಲಿ ನಿದ್ರಿಸುತ್ತಲಿದ್ದ ಶುಕವಾಣಿಯ ಸದ್ಗುಣಗಳೆಂಬ ಮರಿದುಂಬಿಗಳು ಒಂದೊಂದಾಗಿ ಎಚ್ಚರ ವಾಗುತ್ತಾ ಬಂದವು. ಅಸಮಾನ ಸೌಂದರ್‍ಯವನ್ನುಳ್ಳ ಸ್ತ್ರೀಯನ್ನೀಕ್ಷಿಸುವ ಮತ್ತೋರ್ವ ಸ್ತ್ರೀಯ ಮನಸ್ಸನ್ನು ಕರಗಿಸುವಂಥಾದ್ದು ಯಾವುದೋ

ಒಂಡಿರುವುದಲ್ಲವೆ ? ಹೀಗೆ ಕನಿಕರಗೊಂಡ ಆತ್ಮವು ಆ ವಿಶಾಲ ನೇತ್ರಗಳಿಂದ ಕಣ್ಣೀರು ತರಿಸುವುದು, ಆ ಸುಂದರಾನನವನ್ನು ಮರುಕದಿಂದ ಕಳೆಗುಂದಿಸುವುದು, ಆ ನಿರ್ಮಲ ಹೃದಯವನ್ನು ಕಳವಳಗೊಳಿಸುವುದು, ಕ್ರೂರಕೃತ್ಯವೆಂದು ತನ್ನಲ್ಲಿ ತಾನು ಹೇಳಿಕೊಳ್ಳುವುದಲ್ಲವೆ ? ಇವೇ ಮೊದಲಾದ ವಿಚಾರಗಳೆಲ್ಲ ಆ ಲೋಕರಂಜನೆಯನ್ನು ನೋಡುತ್ತಿರುವ ಶುಕವಾಣಿಯ ಮನಸ್ಸಿನಲ್ಲಿ ಅಂಕುರಿಸುತ್ತಿದ್ದವು. ಮನೋರಮೆಯ ರೂಪವನ್ನು ನೋಡಿ ಅಸೂಯೆ ಪಟ್ಟಿದ್ದರೆ ಶುಕವಾಣಿಯು ಇಂಥಾ ಚಿತ್ತವೃತ್ತಿಗೊಡಪಡುವಳೆ ? ಮನೋರಮೆಯ ರೂಪವು ಒಂದು ವಿಧವಾಗಿ ಶ್ರೇಷ್ಟತೆಯನ್ನೂ ಹೊಂದಿರುವದೆಂತಲೂ ತನ್ನ ರೂಪವು ಬೇರೊಂದು ಬಗೆಯಾಗಿ ಔನ್ನತ್ಯವನ್ನು ಹೊಂದಿರುವುದೆಂತಲೂ ಶುಕವಾಣಿಯು ತಿಳಿದುಕೊಂಡಿದ್ದಳು. ಮನೋರಮೆಯನ್ನು ನೋಡಿದ ಕರಾಳನು ಲೋಕರಂಜನೆಯೆಂದು ಕರೆಯಲ್ಪಡುವುದಕ್ಕೆ ಆಕೆಯು ಯೋಗ್ಯಳಾಗಿರುವಳೆಂದು ಶುಕವಾಣಿಯೊಡನೆ ಹೇಳಿದ್ದಾಗ್ಯೂ ತನ್ನ ಕಾಂತೆಗಿರುವ ಸೌಂದರ್ಯವು, ಮೋಹನಾಂಗವು ಮತ್ತ್ಯಾರಿಗೂ ಇಲ್ಲವೆಂದು ತಿಳಿಸಿದ್ದನು. ಆದುದರಿಂದಲೇ ಅಸೂಯೆಪಡದಿದ್ದ ಶುಕವಾಣಿಯ ಹೃದಯದಲ್ಲಿ ಅಂಕುರಿಸಿದ ಕನಿಕರವು ಅಭಿವೃದ್ಧಿಯನ್ನು ಹೊಂದಲು ಯಾವುದೊಂದೂ ಅಡ್ಡಿ ಇರಲಿಲ್ಲ.

ಕರಾಳನನ್ನು ಮದುವೆಯಾದ ಪ್ರಾರಂಭದಲ್ಲಿ ಕೆಲವು ದಿವಸಗಳವರಿವಿಗೂ ಅವನು ಯತ್ನಿಸುತ್ತಿದ್ದ ಗಂಡಾಂತರವಾದ ಸಾಹಸ ಕಾರ್ಯಗಳನ್ನು ನೋಡಿ ಶುಕವಾಣಿಯು ಅಸಹ್ಯಪಡುತ್ತಿದ್ದಳು. ಪ್ರತಾಪಕಂಠೀರವನಲ್ಲಿ ಮೋಹಗೊಂಡಂತೆ ನಟಿಸುವಾಗ ತನ್ನ ಪ್ರಿಯನಿಗೆ ಎರಡೆಣಿಸಲು ಆಕೆಯ ಮನವು ಕಿಂಚಿತ್ತಾದರೂ ಒಡಂಬಡಲಿಲ್ಲವು. ಅವನನ್ನು ಮೋಸಗೊಳಿಸಿ ಸೆರೆಹಿಡಿಯಬೇಕೆಂಬ ತಾತ್ಪರ್ಯದಿಂದಲೇ ಶುಕವಾಣಿಯು ಅಂಥಾ ಚಮತ್ಕಾರವನ್ನು ತೋರಿಸಿದಳು. ಆ ನವಯುವ್ವನನಾದ ರಾಜನ ವಿಷಯವಾಗಿ ತನ್ನ ಪತಿವ್ರತಾ ಧರ್ಮವನ್ನು ಎಳ್ಳಷ್ಟೂ ಭಂಗಗೊಳಿಸದಿದ್ದರೂ, ಯುವತಿಯಾದ, ನಿರ್ಮಲ ಹೃದಯಳಾದ, ತಾವರೆ ಸೊಬಗನ್ನುಳ್ಳ, ಮನೋರಮೆಯ ವಿಷಯವಾಗಿ ತನ್ನ ಮನೋಧರ್ಮವನ್ನು ಕುಂದಕಗೊಳಿಸಲು ಮನಸ್ಸು ಹಿಂದೆಳೆಯುತ್ತಿದ್ದರೂ ಶುಕವಾಣಿಯು ಮನೋರಮೆಯನ್ನು ಮೋಸ

ಗೊಳಿಸಲು ಸಿದ್ಧರಿಸುತ್ತಿದ್ದಳು. ಆದರೂ ಆ ಯುವತಿಯರಿಬ್ಬರೂ ಸಂಭಾಷಿಸುತ್ತಿರುವ ವೇಳೆಯಲ್ಲಿ ಕೆಲವು ಸಂದರ್ಭಗಳಲ್ಲಿ ಅಂದರೆ ಕೀರವಾಣಿಯಾದ ಮನೋರಮೆಯು ವಿಸಂಚಿಯು ಪಂಚಮದಿಂಚರಮಂಪಿರಿದಪಗಡಿಸುವ ಮಾತುಗಳನ್ನು ಕೇಳುವಾಗಲೂ, ಆ ಚಕೋರಾನನೆಯು ನಯನಯುಗತ್ರ್ಯಯುಭಾಗದ ಧಾವಳ್ಯಂನಲವೇರಿ ವಿರಾಜಿಸಿ ಪರಿದು ಅಡರುತ್ತಿರುವಾಗಲೂ, ಆ ಇಂದುವದನೆಯು ಬಿದಿಗೆವೆರೆಯು ಬಿಂಕಂಗೆಡಿಪದರಂಗಳನ್ನು ಕೊಂಕುಗೊಳಿಸಿ ಅತಿ ಮಾಧುರ್ಯತೆಯಿಂದ ನಗುವಾಗಲೂ ಆಕೆಯು ವಿಷಯವಾಗಿ ಶುಕವಾಣಿಯು ತನ್ನ ಮನಸ್ಸಿನಲ್ಲಿ ಕಳವಳಗೊಳ್ಳುತ್ತಿದ್ದಳು.

ಶುಕವಾಣಿಯ ಮನಸ್ಸು ಹೀಗಿರುವುದರಿಂದ ಆ ಲೋಕರಂಜನೆಯ ಕೈಯನ್ನು ಹಿಡಿದುಕೊಂಡು ಪ್ರೀತಿಪಾತ್ರಳಾದ ಸಹೋದರಿಯಂತೆ ಆಕೆಯನ್ನು ಆಲಂಗಿಸಿ, ಮುಂದೆ ದಾರಿಯಲ್ಲಿ ಆಕೆಗೆ ಸಂಭವಿಸುವ ಅನರ್ಥಗಳ ವಿಷಯವಾಗಿ ಎಚ್ಚರಿಕೆಯನ್ನು ಹೇಳಿಕೊಡುವಳೆಂದು ನಂಬುವಿರಲ್ಲವೆ?

ಆದರೆ ಶುಕವಾಣಿಯು ನಾವೆಣಿಸಿದಂತೆ ನಡೆಯುವಳೆ? ಆಕೆಯ ಕೇಡುಗ ಬುದ್ಧಿಯು ಇನ್ನೂ ಪ್ರಬಲವಾಗಿಯೇ ಇತ್ತು. ಕರಾಳನಲ್ಲಿಟ್ಟಿರುವ ಮೋಹಾತಿಶಯವೇ ಔನ್ನತ್ಯವನ್ನುಂಟಾಗಿತ್ತು. ಹೀಗಿದ್ದರೂ ಶುಕವಾಣಿಯ ಮನಸ್ಸಿನ ಸ್ಥಿತಿಯನ್ನು ನೋಡಿದರೆ ಆಕೆಯ ಸದ್ಗುಣಗಳನ್ನು ಔನ್ನತ್ಯಗೊಳಿಸುವುದಕ್ಕೂ, ಮತ್ತಾಕೆಯ ಸುಸ್ವಭಾವಗಳನ್ನು ಹೊರಪಡಿಸುವುದಕ್ಕೂ ಯಾವುದಾದರೂ ಒಂದು ಸೂಕ್ಷ್ಮವಾದ ಅಸಂಭವವೇ ಸಾಕಾಗಿತ್ತು.

ಶುಕವಾಣಿಯು ಸ್ವಲ್ಪಹೊತ್ತಿನವರಿಗೂ ಮನೋರಮೆಯೊಡನೆ ವಿವಿಧವಾದ ವಿಷಯಗಳನ್ನು ಮಾತನಾಡುತ್ತಿದ್ದು, ಆ ಲೋಕರಂಜನೆಯಿಂದಲೇ ನಿಮ್ಮ ಸಂಗಡಲೇ ನಾವುಗಳೂ ಕಳಿಂಗಪಟ್ಟಣಕ್ಕೆ ಹೊರಟುಬರುವೆವು ಎಂಬುದನ್ನು ಹೊರಪಡಿಸಬೇಕೆಂದು ಸಂಭಾಷಣೆಯನ್ನು ತಿರುಗಿಸಲು ಆಗ ತಾನೇ ಪ್ರಾರಂಭಿಸುತ್ತಿದ್ದಳು. ಅಷ್ಟರಲ್ಲಿಯೇ ಒಬ್ಬ ಹೆಂಗಸು ಅವರ ಸಾಮೀಪ್ಯವನ್ನೈದಿದಳು.

ಆಕೆಯು ಸುಮಾರು ೬೦ ವರುಷ ವಯಸ್ಸುಳ್ಳವಳಾದ ಮುದುಕಿಯಾಗಿದ್ದಳು. ವಿವಿಧ ಮೂಲಿಕೆಗಳನ್ನೂ, ಪರಿಮಳ ದ್ರವ್ಯಗಳನ್ನೂ,

ನಾನಾ ರೋಗಗಳನ್ನು ಗುಣಮಾಡುವ ಔಷಧಗಳನ್ನೂ, ಮಾರುತ್ತಾ ದೇಶ ದೇಶಗಳನ್ನು ಸುತ್ತುವ ಆಕೆಯು ಕರ್ಣಾಟಕ ದೇಶಸ್ಥಳಾಗಿದ್ದಳು.

ಆ ಮುದುಕಿಯು ಆ ಸ್ತ್ರೀರತ್ನಗಳ ಹತ್ತಿರಕ್ಕೆ ಹೋಗಿ ತನ್ನ ಪೆಟ್ಟಿಗೆಯನ್ನು ತೆರೆದು ಅವರ ಮುಂದಿಟ್ಟು, ಅಮ್ಮಾ, ಸುಂದರೀಮಣಿಗಳಿರಾ! ಇಗೋ ಇವು ಅಪರೂಪವಾಗಿ ಸಿಕ್ಕುವ ಮೂಲಿಕೆಗಳು. ಇವು ಅಮೂಲ್ಯವಾದ ಪರಿಮಳ ದ್ರವ್ಯಗಳು. ಇವು ನಿಖಿಲ ರೋಗಪರಿಹಾರ ಮಾಡುವ ಔಷಧಗಳು. ನಿಮಗೆ ಇಷ್ಟ ಬರುವ ಪದಾರ್ಥಗಳನ್ನು ಕೊಂಡುಕೊಳ್ಳಿರಿ. ಇಂಥಾ ಪದಾರ್ಥಗಳು ಮತ್ತೆಲ್ಲಿಯೂ ದೊರಕಲಾರವು. ಈ ಸಮಯವನ್ನು ಬಿಟ್ಟರೆ ಇನ್ನಾವ ವೇಳೆಯಲ್ಲಿಯೂ ನಿಮಗೆ ಇಂಥಾ ಪದಾರ್ಥಗಳು ದೊರೆಯಲಾರವು. ಇವುಗಳನ್ನು ಕೊಂಡುಕೊಳ್ಳಿ ಎಂದು ಮೂಲಿಕೆಗಳನ್ನೂ ಪರಿಮಳ ದ್ರವ್ಯದ ಮತ್ತು ಔಷಧ ಶೀಸೆಗಳನ್ನೂ, ಡಬ್ಬಿಗಳನ್ನೂ ಒಂದೊಂದಾಗಿ ಹೊರಗೆ ತೆಗೆದು ತನ್ನ ಕಣಿಯನ್ನು ಹರಟುತ್ತಿದ್ದಳು. ಇದನ್ನೆಲ್ಲಾ ಕೇಳಿ ಮನೋರಮೆಯು ಸ್ವಭಾವಜನ್ಯವಾಗಿ ನಕ್ಕಳು. ಶುಕವಾಣಿಯು ಲೋಕರಂಜನೆಯನ್ನು ಮೋಸಗೊಳಿಸಲು ಪ್ರಯತ್ನಪಡುತ್ತಿರುವಷ್ಟರಲ್ಲಿಯೇ ಆ ಹಾಳು ಮುದುಕಿ ಬಂದಳೆಂಬ ಅಸಮಾಧಾನವನ್ನು ಹೊರಪಡಿಸದಂತೆ ತಾನೂ ನಕ್ಕಳು. ಅವರಿಬ್ಬರೂ ನಕ್ಕದ್ದನ್ನು ನೋಡಿ, ಆ ಮುದುಕಿಯು ತನ್ನ ಸರಕುಗಳು ಖರ್ಚಾಗುವುದೆಂದು ನಿರ್ಧರಿಸಿ ಝಾಂಡ ಹಾಕಿದಳು.

ಅನಂತರದಲ್ಲಿ ಮಂಗಲೆಯು ತನ್ನ ಪೆಟ್ಟಿಗೆಯ ಮೂಲೆಯಲ್ಲಿದ್ದ ಒಂದು ಸಣ್ಣ ಸೀಸೆಯನ್ನು ಬಹಳ ಎಚ್ಚರಿಕೆಯಿಂದ ಹೊರಗೆ ತೆಗೆದು ಅದಕ್ಕೆ ಸುತ್ತಿರುವ ಕಾಗದವನ್ನು ನಿಧಾನವಾಗಿ ಬಿಡಿಸಿ ತನ್ನ ಕೈಯಲ್ಲಿ ಹಿಡಿದು ಕೊಂಡು—ಎಲೌ ಕೋಮಲಾಂಗಿಯರಿರಾ! ಇದೋ ಈ ಔಷಧವು ಎಂಥಾ ಪಾಪಸಂಪರ್ಕವನ್ನೂ ಹೋಗಲಾಡಿಸುವುದು. ಇದು ಬಹಳ ಉತ್ಕೃಷ್ಟವಾದ ಔಷಧವು ಇದು ಅಮೂಲ್ಯವಾದ ಪದಾರ್ಥಗಳಿಂದ ಮಾಡಲ್ಪಟ್ಟಿರುವುದು. ಇದು ನನ್ನ ವಂಶಪರಂಪರೆಯಾಗಿ ಬಂದಿರುವುದು. ಇದನ್ನು ಮಾಡುವುದು ಮತ್ತಾರಿಗೂ ತಿಳಿಯದು.

ಇದೇ ರೀತಿ ತನ್ನಲ್ಲಿರುವ ಔಷಧಿಗಳ ಗುಣಗಳನ್ನು ವರ್ಣಿಸಿ ಹೇಳುತ್ತಿದ್ದ ಮಂಗಲೆಯು ತಾನು ಕಲಿತ ಹರಟೆಯನ್ನು ಮುಗಿಸುವುದಕ್ಕೆ

ಸರಿಯಾಗಿ ಅಕಸ್ಮಿಕವಾದ ಸಂಕಟಧ್ವನಿಯೊಂದು ಶುಕವಾಣಿಯ ತುಟಿಗಳನ್ನು ಬಿಟ್ಟು ಹೊರಟಿತು.

ಮನೋರಮೆಯೂ ಮಂಗಲೆಯೂ ಘಾಬರಿಯಿಂದ ಎದ್ದು ಮುಂದು ವರಿಯಲು ದಾದಿಯರೆಲ್ಲರೂ ಓಡಿಬಂದರು. ಶುಕವಾಣಿಯು ಬಹು ಪ್ರಯಾಸ ದಿಂದ ತನ್ನ ಬಲಪಾದವನ್ನು ತೋರಿಸಿದಳು. ಒಂದು ಕೃಷ್ಣ ಸರ್ಪವು ಆಕೆಯ ಅಂಗಾಲನ್ನು ಕಚ್ಚಿ ಪಾದವನ್ನು ಸುತ್ತಿಕೊಂಡಿತ್ತು. ಮಂಗಲೆ ಹೊರತು ಉಳಿದವರೆಲ್ಲರೂ ಭಯದಿಂದಲೂ, ವ್ಯಸನದಿಂದಲೂ ಗಾಬರಿಪಡುತ್ತಿದ್ದರು. ಮಂಗಲೆಯಾದರೋ ಹತ್ತಿರದಲ್ಲಿಯೇ ಬಿದ್ದಿದ್ದ ಒಂದು ಕಟ್ಟಿಗೆಯನ್ನು ಎಳೆದುಕೊಂಡು ಆ ಹಾವಿನ ಬಾಲಕ್ಕೆ ಗುರಿಯಿಟ್ಟು ಹೊಡೆಯಲು ಅದು ಶುಕವಾಣಿಯ ಪಾದವನ್ನು ಬಿಟ್ಟು ಮಂಗಲೆಯ ಕಡೆಗೆ ಬರುವುದನ್ನು ನೋಡಿದಾಮುದುಕಿಯು ತನ್ನ ದೊಣ್ಣೆಯಿಂದ ಆ ಹಾವನ್ನು ಬಡಿದು ಸಾಯಿಸಿದಳು. ಕೂಡಲೇ ಮಂಗಲೆಯ ಮಾತಿನಂತೆ ಶುಕವಾಣಿಯು ನದಿಯ ದಡಕ್ಕೆ ಒಯ್ಯಲ್ಪಟ್ಟಳು. ಮಂಗಲೆಯು ಹಾವು ಕಚ್ಚಿದ್ದ ಘಾಯಕ್ಕೆ ಒಂದು ಮುಲಾಮನ್ನು ಹತ್ತಿಸಿ ಒಂದಾನೊಂದು ಚೂರ್ಣವನ್ನು ತೆಗೆದು ನೀರಿನಲ್ಲಿ ಕಲಸಿ ಶುಕವಾಣಿಗೆ ಕುಡಿಸಿದಳು.

ಶುಕವಾಣಿಯು ಮೂರ್ಛಿತಳಾಗಿದ್ದಳು. ಶುಕವಾಣಿಯ ತಲೆಯನ್ನು ತೊಡೆಯ ಮೇಲಿರಿಸಿಕೊಂಡು ಚೂತಲತಿಕೆಯು ವ್ಯಸನಾಕ್ರಾಂತಳಾಗಿ ಕುಳಿತಿದ್ದಳು. ಶುಕವಾಣಿಯ ಬಲಗೈಯನ್ನು ಬಾಗಿ ಹಿಡಿದುಕೊಂಡು ಮದನಿಕೆಯು ಬಹು ಸಂಕಟದಿಂದ ಶುಕವಾಣಿಯ ಮುಖವನ್ನು ನೋಡುತ್ತ ನಿಂತಳು. ಶುಕವಾಣಿಯ ದಾದಿಯರಿಬ್ಬರೂ ಬಹು ಭೀತಿಯಿಂದ ನಿಂತು ನೋಡುತ್ತಿದ್ದರು. ಮಂಗಲೆಯು ತಾನು ಜಲ್ಲಿಬಿಟ್ಟ ಔಷಧವನ್ನು ಕೊಟ್ಟದ್ದರೂ ನಿರಾಶೆಗೊಂಡು ಹತ್ತಿರದಲ್ಲಿಯೇ ನಿಂತು ನೋಡುತ್ತಿದ್ದಳು. ಸುಹೃದಯಳಾದ ಮನೋರಮೆಯು ಧಾರೆಧಾರೆಯಾಗಿ ಕಣ್ಣೀರುಬಿಡುತ್ತಾ, ಈ ಚಿಕ್ಕ ವಯಸ್ಸಿನಲ್ಲಿಯೇ, ಅದರಲ್ಲೂ ಈ ಸೌಂದರ್ಯವತಿಗೆ ಇಂಥಾ ಮರಣವು ಪ್ರಾಪ್ತವಾಗಬೇಕೆ ಎಂದು ರೋಧಿಸುತ್ತಾ—ಎಲೌ ಮಂಗಲೆಯೆ! ಈಕೆಯನ್ನು ಬದುಕಿಸಬಲ್ಲೆಯಾ? ನಿನ್ನ ಔಷಧಗಳಲ್ಲಿ ನಂಬಿಕೆಯಿರುವುದೆ? ನಿನ್ನ

ಪ್ರವೀಣತೆಯನ್ನೆಲ್ಲಾ ತೋರಿಸು ! ನೀನು ಎಷ್ಟು ದ್ರವ್ಯವನ್ನು ಕೇಳಿದರೂ ಕೊಡುವೆನು ಎಂದು ಬಹಳ ಸಂಕಟದಿಂದ ಕೇಳಿದಳು.

ಮಂಗಲಿ—ಔಷಧಗಳನ್ನು ಕೊಡುವುದೇನೊ ಮನುಷ್ಯ ಪ್ರಯತ್ನ ದಲ್ಲಿರುವುದು. ಬದುಕಿಸುವುದು ಸಾಯಿಸುವುದು ಭಗವಂತನನ್ನು ಸೇರಿರುವುದು. ನಾನೇನೋ ನನ್ನ ಸಾಹಸವನ್ನೆಲ್ಲಾ ಖರ್ಚು ಮಾಡುವೆನು.

ಮನೋರಮೆ—ನಿನ್ನ ಮಾತಿನಿಂದ ಭರವಸೆಯು ತೋರಿಬರುವು ದಿಲ್ಲವಲ್ಲಾ !

ಅಷ್ಟರಲ್ಲಿಯೇ ಶುಕವಾಣಿಗೆ ಪ್ರಜ್ಞೆ ಬರುತ್ತಿರಲು ಅವರಿಬ್ಬರ ಸಂಭಾ ಷಣೆಯು ಆಕೆಯ ಕಿವಿಯಲ್ಲಿ ಬೀಳಲು ಶುಕವಾಣಿಯು ಕಣ್ದೆರದು ಮನೋರಮೆಯನ್ನು ನೋಡಿ–ನಾನು ಬದುಕುವೆನೆಂಬ ಭರವಸೆಯನ್ನು ಬಿಡು! ಮೂರ್ಛೆಯಿಂದೆಚ್ಚತ್ತರೂ ನನ್ನ ಶರೀರದಲ್ಲಿರುವ ರಕ್ತನಾಳಗಳಲ್ಲೆಲ್ಲಾ ವಿಷವು ಸಂಚರಿಸುತ್ತಲೇ ಇರುವಂತೆ ನನಗೆ ತೋರುವುದು. ಇನ್ನುಸ್ವಲ್ಪ ಹೊತ್ತಿನಲ್ಲೆ ದೀರ್ಘ ನಿದ್ರೆಯನ್ನೈದಿಸುವ ಮೂರ್ಛೆಯು ಬರುವಂತಿರುವುದು. ನನ್ನ ಹಣೇಬರಹವು ಮುಗಿಯುತ್ತಾ ಬರುತ್ತಿರುವುದು. ಮನೋರಮೆ, ನನಗಾಗಿ ಇಷ್ಟು ವ್ಯಥೆಪಡುತ್ತಿರುವೆಯಲ್ಲಾ !

ಮನೋರಮೆಯು ತನ್ನ ಮನಸ್ಸಿನಲ್ಲಿ, ಈ ನಾರೀಮಣಿಗೆ ನನ್ನ ನಾಮಧೇಯವನ್ನು ಹೇಳದಿದ್ದರೂ ಈಕೆಯು ನನ್ನ ಹೆಸರನ್ನಿಡಿದು ಕರೆದಿರು ವಳಲ್ಲಾ ! ಈಕೆಗೆ ಹ್ಯಾಗೆ ತಿಳಿಯಿತು ಎಂದು ಯೋಚಿಸುತ್ತಾ ಆಶ್ಚರ್ಯದಿಂದ ಶುಕವಾಣಿಯ ಮುಖವನ್ನು ನೋಡತೊಡಗಿದಳು.

ಶುಕ—ಎಲೇ ಲೋಕರಂಜನೇ, ನಿನ್ನನ್ನು ಬಲ್ಲೆನು ! ನಿನಗೆ ತಿಳಿಸ ಬೇಕಾದದ್ದು ಬಹಳವಿರುವುದು. ಎಲ್ಲಾ ಸಂಗತಿಗಳನ್ನು ಹೇಳುವವರಿವಿಗೆ ನನ್ನ ಪ್ರಾಣವನ್ನು ತೆಗೆದುಕೊಳ್ಳಬೇಡವೆಂದು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುವೆನು ಎಂದು ಬಹು ಪ್ರಯಾಸದಿಂದ ತನ್ನ ಎದೆಯಲ್ಲಿ ಬಚ್ಚಿಟ್ಟಿದ್ದ ಒಂದು ಸಣ್ಣ ವಸ್ತುವನ್ನು ತೆಗೆದು ಮನೋರಮೆಗಿತ್ತಳು. ಮನೋರಮೆ ಯಾದರೋ ಕಳುವು ಹೋಗಿದ್ದ ತನ್ನ ಉಂಗುರವನ್ನು ನೋಡಿ ಸಂತೋಷಾ ಶ್ಚರ್ಯಭರಿತಳಾದಳು.

ಶುಕ—ಈ ಮುದ್ರಿಕೆಯನ್ನು ನಿನಗೊಪ್ಪಿಸಿದುದರಿಂದ ನಾನೆಸಗಿರುವ ಪಾಪ ಪರಿಹಾರವಾದಂತಾಯಿತು.

ಮನೋರಮೆಯು ಶುಕವಾಣಿಗೆ ಈ ನನ್ನ ಉಂಗುರವು ಹ್ಯಾಗೆ ದೊರೆಕಿತು ಎಂದು ಮನಸ್ಸಿನಲ್ಲಿ ಚಿಂತಿಸುತ್ತಿದ್ದಳು.

ಶುಕವಾಣಿಯು ಮನೋರಮೆಯು ಹೊರತು ಉಳಿದವರನ್ನು ದೂರ ಹೋಗುವಂತೆ ಹೇಳಿ ಅವರು ತಮ್ಮಿಬ್ಬರ ಸಂಭಾಷಣೆಯನ್ನು ಕೇಳದುಷ್ಟು ದೂರ ಹೋದುದನ್ನು ನೋಡಿ—ಎಲೇ ಲೋಕರಂಜನೇ! ನಿನ ಸದ್ಗುಣಗಳನ್ನೂ, ಸಾಧುಸ್ವಭಾವಗಳನ್ನೂ, ಸೌಂದರ್ಯಾವತಿಶಯಗಳನ್ನೂ ನೋಡಿ ನಿನ್ನ ವಿಷಯದಲ್ಲಿ ನನ್ನ ಮನಸ್ಸು ಸಂಪೂರ್ಣವಾಗಿ ಕನಿಕರಗೊಂಡಿರುವುದು. ಈಗ ನಿನಗೊಂದು ಸಮಾಚಾರವನ್ನು ಹೇಳುವೆನು. ಭಯಪಡಬೇಡ? ನನ್ನಲ್ಲಿ ಅಸಹ್ಯಗೊಳ್ಳಬೇಡ. ನಾನು ಯಾರೆಂದು ತಿಳಿಯುವಿಯಾ? ನಾನೇ ಕರಾಳನ ಪ್ರಿಯಪತ್ನಿಯು.

ಮನೋರಮೆಯು ಅತ್ಯಾಶ್ಚರ್ಯಗೊಂಡಳೇ ಹೊರತು ಮೃತ್ಯುದೇವತೆಯ ಪಾಲಾಗುತ್ತಿರುವ ಶುಕವಾಣಿಯಲ್ಲಿ ಅಸಹ್ಯಪಡುವುದಕ್ಕೇ ಆಗಲಿ ಅಥವಾ ಕೋಪಗೊಳ್ಳುವುದಕ್ಕೇ ಆಗಲಿ ಮನೋರಮೆಯು ಕಠಿನ ಹೃದಯವುಳ್ಳವಳಾಗಿರಲಿಲ್ಲ. ಆ ಲೋಕರಂಜನೆಯು ಕಣ್ಣೀರು ಸುರಿಸುತ್ತಾ— ನಿನ್ನ ಪತಿಯು ನನಗೆ ಮಾಡಿದ ಅನ್ಯಾಯಕ್ಕೆ ನೀನು ಈ ಉಂಗುರವನ್ನು ಕೊಟ್ಟದ್ದರಿಂದ ಅವನ ಪಾಪವು ನಿನ್ನಿಂದಲೇ ನಿವೃತ್ತಿಯಾಯಿತು. ಆತನೇ ಇದನ್ನು ತೆಗೆದುಕೊಂಡಿರುವನೆಂದು ನಾನು ತಿಳಿದಿದ್ದೆನು.

ಶುಕವಾಣಿ—(ಆಶ್ಚರ್ಯದಿಂದ) ಏನು! ನಿನಗೆ ತಿಳಿದಿರುವುದೆ?

ಮನೋ—ಕೊಠಡಿಯನ್ನು ಪ್ರವೇಶಿಸುತ್ತಿದ್ದಾಗಲೇ ಆತನನ್ನು ನೋಡಿದೆನು. ಆತನು ಕೈಯಲ್ಲಿ ಕಠಾರಿಯನ್ನು ಹಿಡಿದಿರಲು ಪ್ರಾಣಾಪಾಯ ಸಂಭವಿಸುವುದೇನೋ? ಎಂದು ಗಾಢನಿದ್ರೆಯನ್ನು ಮಾಡುವಂತೆ ನಟಿಸಿದೆನು.

ಶುಕ—ಹಾಗಾದರೆ ನನ್ನ ಪತಿಯ ಗುರುತನ್ನು ನೀನು ತಿಳಿದಿರುವೆ?

ಮನೋ—ಅಹುದು. ತಿಳಿದಿರುವೆನು. ಆದರೆ ಆತನು ಯಾತಕ್ಕಾಗಿ ನನ್ನನ್ನು ಈ ರೀತಿ ತೊಂದರೆಗೊಳಿಸುತ್ತಿರುವನು. ಅದನ್ನು ಹೇಳು?

ಶುಕ—ನಿಷ್ಕಳಂಕಿಯೇ! ಈ ಮುದ್ರಿಕೆಯ ಮಹಾತ್ಮೆಯು ನಿನಗೆ ಅರಿವಾಗಿಲ್ಲವು. ಓಹೋ! ಇದೇನು ಕೈಕಾಲುಗಳೆಲ್ಲಾ ಸಡಲಿಹೋಗು ವಂತಿರುವುದಲ್ಲಾ! ಕೊನೆಗಾಲ ಪ್ರಾಪ್ತವಾಯಿತೋ!

ಚೂತಲತಿಕೆ ಎದ್ದುಹೋದ ನಂತರ ಶುಕವಾಣಿಯ ತಲೆಯನ್ನು ತೊಡಿಯ ಮೇಲಿರಿಸಿಕೊಂಡು ಮನೋರಮೆಯು ಶುಕವಾಣಿಯ ಮುಖ ಕಾಂತಿಯು ಕಡಿಮೆಯಾಗುತ್ತಿರುವುದನ್ನು ನೋಡಿ—ನಾನೇನು ಮಾಡಲಿ! ಯಾವ ಸಹಾಯ ಮಾಡಲಿ! ಎಂದು ಬಹು ವ್ಯಥೆಗೊಂಡಳು.

ಶುಕವಾಣಿ—(ಬಹು ಕಷ್ಟದಿಂದ) ಅಯ್ಯೋ! ನರಪ್ರಾಣಿಯಾದ ನೀನೇನು ಸಹಾಯ ಮಾಡಬಲ್ಲೆ? ಭಗವಂತನು ಇನ್ನೂ ಕೆಲವು ನಿಮಿಷಗಳು ನನ್ನ ಪ್ರಾಣವನ್ನುಳಿಸಲಿ! ಮನೋರಮೆಯೆ, ನನ್ನ ಪತಿಯಲ್ಲಿ ಎಂಥಾ ಪ್ರೀತಿಯನ್ನಿಟ್ಟಿದ್ದೆನು! ಈಗಲೂ ಅವನಲ್ಲಿ ನನಗೆ ಅಂಥಾ ಪ್ರೀತಿಯಿರುವುದು. ಆದರೆ ನನ್ನಾತ್ಮವು ಇಹಲೋಕ ಪರಲೋಕಗಳ ಮಧ್ಯದಲ್ಲಿ ವರ್ತಿಸಿರುವ ಸಮಯದಲ್ಲಿ ಸದ್ಗುಣಗಳನ್ನೂ ಮನಃಶಾಂತಿಯನ್ನೂ ಹೆಚ್ಚಾಗಿ ಪ್ರೀತಿ ಸುವೆನು.

ಮನೋ—ನಿನ್ನ ಪತಿಯು ನನಗೆಸಗಿರುವ ಕೇಡುಗಳಿಗಾಗಿಯೇ ಆಗಲೀ ಮುಂದಾತನು ನನಗೆ ಕೃತ್ರಿಮವನ್ನೆಸಗಬೇಕೆಂದು ಯೋಚಿಸುತ್ತಿರು ವುದಕ್ಕೇ ಆಗಲೀ ಎಂಥಾ ಸುಸಮಯ ಒದಗಿದರೂ ಆತನಿಗೆ ಪ್ರತೀಕಾರವನ್ನು ಮಾಡುವೆನೆಂದು ಯೋಚಿಸಬೇಡ!

ಶುಕ—ಈ ನಂಬಿಕೆಯನ್ನು ಅನುಗ್ರಹಿಸಬೇಕೆಂದು ನಿನ್ನನ್ನು ಬೇಡಿ ಕೊಳ್ಳಬೇಕೆಂದಿದ್ದೆನು. ನಿನ್ನ ಮನಃಪೂರ್ವಕವಾಗಿಯೇ ಕೊಟ್ಟಿರುವೆ. ಇದಕ್ಕಾಗಿ ನಾನೆಷ್ಟು ಕೃತಜ್ಞಳಾದರೂ ಸಾಲದು. ನನ್ನ ಪತಿಗೆ ಮಾತ್ರ ಅನ್ಯಾಯ ಮಾಡಬೇಡ!

ಮನೋ—ನನ್ನ ಆತ್ಮ ಸಂರಕ್ಷಣೆಗೋಸುಗವೇ ಹೊರತು ಮತ್ಯಾವ ವಿಷಯದಲ್ಲಿಯೂ ಆತನಿಗೆ ಕೆಡಕು ಮಾಡೆನೆಂದು ಪ್ರತಿಜ್ಞೆ ಮಾಡುವೆನು.

ಶುಕ—ಇನ್ನು ಮುಂದೆ ನನ್ನ ಪತಿಯು ನಿನಗೆ ಯಾವ ವಿಧವಾದ ತೊಂದರೆಯನ್ನುಂಟುಮಾಡುವುದಿಲ್ಲ. ಎಲ್ಲಿಯಾದರೂ ಅವನು ಮಾರು

ವೇಷದಲ್ಲಿರುವಲ್ಲಿ ಮೋಸಗೊಳಿಸಿ ಅವನನ್ನು ತೋರಿಸಬೇಡವೆಂದು ಬೇಡಿ ಕೊಳ್ಳುವೆನು.

ಮನೋ—ನಿರಾಪರಾಧಿಗಳನ್ನು ಆತನು ಹಿಂಸಿಸುವ ಸಂದರ್ಭದಲ್ಲಲ್ಲದೆ ಮತ್ತ್ಯಾವ ವೇಳೆಯಲ್ಲಿಯೂ ಆತನನ್ನು ಹಿಡಿದುಕೊಡುವುದಿಲ್ಲ.

ಶುಕ—ಇದಕ್ಕಿಂತ ಹೆಚ್ಚಾಗಿ ನೀನು ವಾಗ್ದಾನ ಮಾಡಲಾರೆ. ಹಾಗೆ ನಾನು ಕೇಳುವುದು ಸರಿಯಾದುದಲ್ಲ. ಓಹೋ! ನನ್ನ ಪ್ರಾಣವು ಕಡಿಮೆಯಾಗುತ್ತಾ ಬಂದಿತು. ದೃಷ್ಟಿ ಮಾಂದ್ಯವಾಗುತ್ತಿರುವುದು. ಅಹಾ? ಆ ನಿಲಯುವನ್ನು ಎಂದೆಂದಿಗೂ ನೋಡಬಾರದಂತಾಯಿತೆ? ಮನೋ ರಮೆಯೇ, ಎಲ್ಲಿರುವೆ? ನಾನು ಹೇಳುವುದನ್ನೆಲ್ಲಾ ಕೇಳು. ಎಚ್ಚರಿಕೆ—ಎಚ್ಚರಿಕೆ—

ಮನೋ—ನಿನ್ನ ಪತಿಯ ವಿಷಯುದಲ್ಲಲ್ಲದೆ ಮತ್ತ್ಯಾರ ವಿಷಯುದಲ್ಲಿ ನಾನು ಎಚ್ಚರಿಕೆಯಲ್ಲಿರಬೇಕು. ಮಾತನಾಡು! ಅಯ್ಯೋ, ಮಾತನಾಡು! ನಿನ್ನನ್ನು ಬೇಡಿಕೊಳ್ಳುವೆನು, ಮಾತನಾಡು!

ಶುಕ—ಅಯ್ಯೋ, ಹೀಗೆ ಸಾಯುವುದು....ಈ ಚಿಕ್ಕ ವಯಸ್ಸಿನಲ್ಲಿ.... ಪ್ರಕಾಶವಾದ ಸೂರ್ಯಕಾಂತಿಯಲ್ಲಿ....ಮರಗಳಲ್ಲಿ ಕುಳಿತು ಹಾಡುತ್ತಿರುವ ಪಕ್ಷಿಗಳಿಂದೊಡಗೂಡಿ....ಸುತ್ತಲೂ ಪುಷ್ಪಗಳು ವಿಕಸಿಕವಾಗುತ್ತಿರುವಲ್ಲಿ.... ನನಗೆ ಹತ್ತುತ್ತಿರುವುದೇನು ಪರಲೋಕ ನಿದ್ರೆಯೋ? ಅಥವಾ ಇಹಲೋಕ ನಿದ್ರೆಯೊ? ಮನೋರಮೆ, ಎಲ್ಲಿರುವೆ?

ಮನೋ—ಇಗೋ, ಇಲ್ಲಿರುವೆನು.

ಶುಕವಾಣಿ ತತ್ತರಪಡುತ್ತಾ—ಮನೋರಮೆಯೇ! ನಾನು ದೈವಾ ಧೀನಳಾಗುತ್ತಿರುವೆನು........ಇನ್ನು ಒಂದೆರಡು ನಿಮಿಷಗಳಲ್ಲಿಯೇ ನನಗೆಲ್ಲವೂ ಶೂನ್ಯವಾಗುವುದು....ನೀನಾದರೂ ತಡಮಾಡದೆ ಕಳಿಂಗಪಟ್ಟಣಕ್ಕೆ ಹೊರಡು. ಎಚ್ಚರಿಕೆ! ಮನೋರಮೆಯೇ, ಎಚ್ಚರಿಕೆ ಎಂದು ಹೇಳುವಷ್ಟರಲ್ಲಿಯೇ ಶುಕವಾಣಿಯು ಮಾತನಾಡಲಾರದೆಹೋದಳು. ಆಕೆಯ ತುಟಿಗಳು ಮಾತ್ರ ಆಡುತ್ತಿರುವುದನ್ನು ನೋಡಿ ಮನೋರಮೆಯು ಕಿವಿಗೊಟ್ಟು ಕೇಳಿದಳು. ಶುಕವಾಣಿಯು ಉಚ್ಚರಿಸಿದ ಮಾತು "ದುಷ್ಟಬುದ್ಧಿ"—ಎಂಬುದಾಗಿರ

ಬಹುದೆಂದು ಮನೋರಮೆಗೆ ಅನುಮಾನವಾಗಿತ್ತೇ ಹೊರತು ದೃಢವಾಗಿ ತಿಳಿಯಲಿಲ್ಲ.

ಸ್ವಲ್ಪ ಹೊತ್ತಿನಲ್ಲಿಯೇ ಶುಕವಾಣಿಯು ನಿಶ್ಚೇಷ್ಟಿತಳಾದಳು. ಪುನಃ ಪ್ರಜ್ಞೆ ಬರುವುದೆಂದು ಸುಮಾರು ಎರಡು ಘಂಟೆಕಾಲದ ಪರಿಯಂತರವೂ ಮನೋರಮೆಯು-ಕಾದಿದ್ದು ಶುಕವಾಣಿಯು ದೈವಾಧೀನಳಾದಳೆಂದು ತಿಳಿದು ದಾದಿಯರಿದ್ದೆಡೆಯನ್ನು ಸೇರಿದಳು.

ಶುಕವಾಣಿಯು ದಾದಿಯರು ಘೋರೆಂದು ಅಳುತ್ತಿರಲು ಅವರನ್ನು ಸಮಾಧಾನಪಡಿಸಿ ಮಂಗಲೆಗೆ ನಾಲ್ಕು ವರಹಗಳನ್ನಿತ್ತು ಶುಕವಾಣಿಯ ದಾದಿಯರಿಗೆ ಶುಕವಾಣಿಯ ಶ್ರವವನ್ನು ಜಾಗ್ರತೆಯಾಗಿ ಸಾಗಿಸಿಕೊಂಡು ಹೋಗಿ ತಕ್ಕ ಸಂಸ್ಕಾರಗಳನ್ನು ಮಾಡುವುದು ನಿಮ್ಮಗಳ ಕರ್ತವ್ಯವು ಎಂದು ತಿಳಿಸಿ ದಾದಿಯರೊಡಗೂಡಿ ಅಶ್ವಾರೂಢಳಾಗಿ ದೊಡ್ಡ ಮಾರ್ಗವನ್ನಿಡಿದು ಕಳಿಂಗಪಟ್ಟಣಕ್ಕೆ ಪ್ರಯಾಣಿಸುತ್ತಿದ್ದಳು.

ಕಳಿಂಗಪಟ್ಟಣವು ಇನ್ನು ಇಪ್ಪತ್ತು ಮೈಲಿ ದೂರದಲ್ಲಿತ್ತು. ಎರಡು ಮೂರು ಮೈಲಿಗಳ ದೂರದಲ್ಲಿ ಮಾರ್ಗದ ಸಮೀಪದಲ್ಲಿದ್ದ ಒಂದಾನೊಂದು ಹಳ್ಳಿಯಲ್ಲಿ ಮನೋರಮೆಯು ನಾಲ್ಕಾರು ಮಂದಿ ಮೈಗಾವಲಿನವರನ್ನು ನೇಮಿಸಿಕೊಂಡು ಸ್ವಲ್ಪವೂ ಸಾವಕಾಶಗೈಯದಂತೆ ಪ್ರಯಾಣ ಮಾಡಿದಳು. ಕಳಿಂಗಪಟ್ಟಣದ ಸಮೀಪದಲ್ಲಿಯೇ ಮೈಗಾವಲಿನವರನ್ನು ಹಿಂತಿರಿಗಿ ಹೋಗುವಂತೆ ಆಜ್ಞಾಪಿಸಿ ಸೂರ್ಯಾಸ್ತಮಾನವಾಗುವುದಕ್ಕೆ ಮುಂಚಿತವಾಗಿಯೇ ಕಳಿಂಗಪಟ್ಟಣವನ್ನು ಪ್ರವೇಶಿಸಿದಳು.

ಅನಂತರದಲ್ಲಿ ಆ ಲೋಕರಂಜನೆಯೂ ಆಕೆಯ ದಾದಿಯರೂ ಮುಖದ ಮೇಲೆ ಮುಸುಕನ್ನೆಳೆದುಕೊಂಡು ಧನಕೋಟಿಯ ಮನೆಯಿರುವ ಸ್ಥಳವನ್ನು ಅಲ್ಲಲ್ಲಿ ವಿಚಾರಿಸುತ್ತಾ ಪಟ್ಟಣದ ಮಧ್ಯ ಭಾಗವನ್ನು ಸೇರಿದರು. ಮನೋರಮೆಯು ಆ ಸಾಹುಕಾರನ ಭವನವನ್ನು ಗೊತ್ತುಮಾಡಲೋಸುಗ ಯಾರನ್ನಾದರೂ ವಿಚಾರಿಸೋಣವೆಂದು ಅತ್ತಿತ್ತ ನೋಡುತ್ತಿರಲು ಒಬ್ಬ ಯುವ್ವನಸ್ಥನು ಆಕೆಯ ದೃಷ್ಟಿಗೆ ಗೋಚರವಾದನು. ಕೂಡಲೇ ದುಷ್ಟಬುದ್ಧಿ ಎಂಬ ಹೆಸರು ಆಕೆಯ ತುಟಿಯನ್ನು ಬಿಟ್ಟುಹೊರಟಿತು.

ಮನೋರಮೆಯ ಮುಖಕಮಲವು ಹೊರಬೀಳದಿದ್ದರೂ ಆಕೆಯ ಅವಯವಗಳನ್ನು ನೋಡಿ ಆಕೆಯೇ ಮನೋರಮೆಯೆಂದು ತಿಳಿದು ದುಷ್ಟಬುದ್ಧಿಯು ವಿವರ್ಣವದನನಾದನು. ಅವನು ಆ ರೀತಿಯಾಗಿ ಘಾಬರಿಪಡಲು ಕಾರಣವೇನಾಗಿರಬಹುದು ? ಆಕೆಯನ್ನು ಮೋಸಪಡಿಸಿ ಹಿಡಿಯಬೇಕೆಂದು ಹಾಕಿದ್ದ ಬಲೆಯಿಂದ ತಪ್ಪಿಸಿಕೊಂಡು ಬರಲಾರಳೆಂದು ಯೋಚಿಸಿದ್ದ ಅವನ ಕೋರಿಕೆಯೇನಾದರೂ ಈಡೇರಲಿಲ್ಲವೆಂದೋ ಅಥವಾ ಯಾರಿಗಾಗಿ ತಾನು ನಿರೀಕ್ಷಿಸುತ್ತಿದ್ದ ಕುದುರೆಗಳ ಖುರಪುಟ ಧ್ವನಿಯನ್ನು ಸಮೀಪದಲ್ಲಿಯೇ ನಿಲ್ಲಲು ತಕ್ಷಣವೇ ಮುಂದುವರಿದು ಎದುರ್ಗೊಳ್ಳಲು ಬಂದು ನೋಡುವಲ್ಲಿ ತನ್ನ ಹಾರೈಕೆಗೆ ವ್ಯತಿರುಕ್ತವಾಗಿ ಪರಿಣಮಿಸಿತೆಂದು ಭಗ್ನಮನೋರಥನಾದನೋ ? ಈ ಕಾರಣಗಳೆಲ್ಲಾ ಮುಂದಾಗುವ ಕಥಾಸಂದರ್ಭದಿಂದ ವ್ಯಕ್ತವಾಗುವುವು.

ಆದರೂ ತನ್ನ ಕಳವಳವನ್ನು ಹೊರಪಡಿಸದೆ ಮನೋರಮೆಯನ್ನೆದುಗೊಂಡು ಧನಕೋಟಿಯ ಗೃಹಕ್ಕೆ ಕರೆದೊಯ್ಯುತ್ತಿದ್ದನು. ಅವನ ಚಾಂಚಲ್ಯಭಾವವನ್ನು ಓರೆಗಣ್ಣಿನಿಂದ ನೋಡಿದ ಮನೋರಮೆಯು ಮನಸ್ಸಿನಲ್ಲಿ ಶುಕವಾಣಿಯು ಸಾಯುವಾಗ ಉಚ್ಚರಿಸಲೆತ್ನಿಸಿದ ಹೆಸರು "ದುಷ್ಟಬುದ್ಧಿ" ಎಂಬುದಾಗಿರಬಹುದೆಂದು ಬಹು ಅನುಮಾನವಾಗಿತ್ತು. ಈಗಲಾದರೋ ಇವನ ಮುಖಭಾವದಿಂದ ಇವನಲ್ಲಿ ನಾನೆಣಿಸಿದ್ದ ಅಪನಂಬಿಕೆಯು ನಿರ್ಧರವಾಯಿತು. ಆಗಲಿ ! ಸರಿಯಾದ ಸಮಯವನ್ನರಿತು ಇವನ ವಿಷಯವಾಗಿ ಸಾಹುಕಾರನೊಡನೆ ಮಾತನಾಡುವೆನು. ಈಗಲೇನಾದರೂ ನನ್ನ ಮನಸ್ಸಿನಲ್ಲಿರುವುದನ್ನು ಹೊರಪಡಿಸಿದರೆ ಇನ್ನೇನಾದರೂ ಮೋಸ ಕೃತ್ಯವನ್ನು ಮಾಡಿಯಾನು ? ಆದ್ದರಿಂದ ನನಗಿರುವ ಅಪನಂಬಿಕೆಯನ್ನು ವ್ಯಕ್ತಗೊಳಿಸದಂತೆ ಇವನ ವಿಷಯದಲ್ಲಿ ಏನೆಂದೂ ತಿಳಿಯದವಳಂತೆ ತೋರ್ಪಡಿಸಿಕೊಳ್ಳುವೆನು ಎಂದು ಯೋಚಿಸಿದಳು.

ಭವನವನ್ನು ಸೇರಲು ಧನಕೋಟಿಯ ಗೃಹದ ಆಡಳಿತವನ್ನೆಲ್ಲಾ ನೋಡಿಕೊಳ್ಳುತ್ತಲಿರುವ ಪ್ರೌಢೆಯೋರ್ವಳು ಸೇವಕ ಜನಗಳಿಂದೊಡಗೂಡಿ ಬಂದು ಮನೋರಮೆಯನ್ನೆದುರ್ಗೊಂಡು "ಬಿಜಯಮಂ ಗೈಯ್ಯಬೇಕು !

ಬಿಜಯುವಂ ಗೈಯ್ಯಬೇಕು!" ಎಂದು ಮರ್ಯ್ಯಾದಾಪೂರ್ವಕವಾಗಿ ವಂದನೆಗಳನ್ನ ರ್ಪಿಸಿದಳು.

ಮನೋರಮೆಯೂ ದಾದಿಯರೂ ಕುದುರೆಗಳನ್ನಿಳಿದು ಸೇವಕರಲ್ಲಿ ಒಪ್ಪಿಸಿ ಭವನವಂ ಪ್ರವೇಶಿಸಿದರು.

ತದನಂತರ ಭೋಜನಾದಿಗಳನ್ನು ತೀರಿಸಿಕೊಂಡು ಮನೋರಮೆಯು ತನ್ನ ಸಖಿಯರೊಡನೆ ವಿನೋದವಾದ ಮಾತನಾಡುತ್ತಿರಲು ಪ್ರೌಢೆಯು ಪ್ರವೇಶಿಸಿ ಧನಕೋಟಿಯು ಮುಖ್ಯವಾದುದೊಂದು ಕಾರ್ಯ್ಯಾಂತರವಾಗಿ ಹೋಗಿರುವನೆಂದೂ ಆ ದಿವಸ ಬರದ ಕಾಗದದಿಂದ ಹನ್ನೆರಡು ದಿವಸಗಳಲ್ಲಿ ಹಿಂತಿರುಗಿ ಬರುವನೆಂದೂ ತಿಳಿಸಿಹೋದಳು.

ಆ ದಿನ ರಾತ್ರಿ ಮನೋರಮೆಯು ತನ್ನ ದಾದಿಯರೊಡನೆ ಶಯನ ಗೃಹವಂ ಸೇರಿ ಸುಖನಿದ್ರೆಗೈದಳು.

ಮಾರನೇ ದಿನ ರವಿಯು ಉದಯಾದ್ರಿಯನ್ನೇರುವುದಕ್ಕೆ ಮುಂದಾಗಿ ಮನೋರಮೆಯು ಉಪ್ಪವಡಿಸಿ ನಿತ್ಯಕರ್ಮಾನುಷ್ಠಾನಂಗಳನ್ನು ತೀರಿಸಿಕೊಂಡು ತನ್ನ ಕೊಠಡಿಯಲ್ಲಿ ಸಖಿಯರೊಡನ ಕುಳಿತುಕೊಂಡಿರಲು ಗೃಹಿಣಿಯು ಪ್ರವೇಶಿಸಿ ನಮ್ಮ ಕಥಾನಾಯಕಿಗೆ ಉಲ್ಲಾಸವಾಗಿ ವಿಹಾರಗೈಯಲು ಧನ ಕೋಟಿಯ ದಿವ್ಯವಾದ ಉದ್ಯಾನವನಕ್ಕೆ ಮಜ್ಜನ ಗೃಹದಿಂದ ಹೋಗುವ ಸುರಂಗ ಮಾರ್ಗವನ್ನು ತೋರಿಸಿ ಅಪ್ಪಣೆಯಂ ಪಡೆದು ತನ್ನ ಕೃತ್ಯವಂ ಗೈಯಲು ಹೋದಳು.

ಮನೋರಮೆಯು ದಾದಿಯರೊಡನೆ ಬೆಳಿಗ್ಯೂ ಸಾಯಂಕಾಲವೂ ಉಲ್ಲಾಸವಾಗಿ ಆ ತೋಟದಲ್ಲಿ ಕ್ರೀಡಿಸುತ್ತಿದ್ದಳು. ಹೀಗೆಯೇ ಉಲ್ಲಾಸ ವಾಗಿರುವ ವೇಳೆಯಲ್ಲಿ ಸುಮಾರು ಆರು ಘಂಟೆಗೆ ಸರಿಯಾಗಿ ಗೃಹಿಣಿಯು ಮನೋರಮೆಯ ಬಳಿ ಸೇರಿ-ಯಾವಳೋ ಓರ್ವ ವೃದ್ಧಳು ತಮ್ಮನ್ನು ನೋಡಬೇಕೆಂದು ಭವನದ ದ್ವಾರದಲ್ಲಿ ಕಾದಿರುವಳು. ಅಪ್ಪಣೆಯಾದರೆ ಕರೆದುಕೊಂಡು ಬರುವೆನು ಎಂದು ಬಿನ್ನವಿಸಿ ನಿಂತುಕೊಂಡಳು.

ಮನೋ—ಈ ಪಟ್ಟಣದಲ್ಲಿ ನನ್ನ ಪರಿಚಯಸ್ಥರು ಯಾರೂ ಇಲ್ಲವೆ? ಆಕೆಯ ನಾಮಧೇಯವೇನೆಂದು ಕೇಳಿದಳು?

ಗೃಹಿಣಿ—ಮಂಗಲೆಯೆಂದು.

ಮನೋ—ಓಹೋ! ತಿಳಿಯಿತು! ಆಕೆಯನ್ನು ಇಲ್ಲಿಗೆ ಬರಹೇಳು.

ಗೃಹಿಣಿಯು ಅಪ್ಪಣೆಯೆಂದು ಮಂಗಲೆಯನ್ನು ಕಳಿದುಕೊಂಡು ಬಂದು ಮನೋರಮೆಯುಡೆಯಲ್ಲಿ ಬಿಟ್ಟುಹೋದಳು.

ಮಂಗಲೆಯನ್ನು ನೋಡಿದ ಕೂಡಲೇ ಮನೋರಮೆಯು—ಏನೌ! ಮಂಗಲೆ, ಶುಕವಾಣಿಗೆ ತಕ್ಕ ಸಂಸ್ಕಾರಗಳು ನಡೆಯಲ್ಪಟ್ಟವೆ? ಇಲ್ಲಿಗೆ ನೀನು ಬಂದ ಕಾರಣವೇನು? ನಾನು ಇಲ್ಲಿರುವೆನೆಂದು ನಿನಗೆ ಹ್ಯಾಗೆ ತಿಳಿಯಿತು?

ಮನೋರಮೆಯ ಕೊನೇ ಪ್ರಶ್ನೆಯನ್ನು ಮರೆಮಾಚಿ ಮಂಗಲೆಯು ಸತ್ತವರಿಂದ ಒಂದು ಸಮಾಚಾರವನ್ನು ತಂದಿರುವೆನು ಎಂದುತ್ತರವಿತ್ತಳು.

ಮನೋರಮೆಯು ಬೆಚ್ಚಿಬಿದ್ದು ಸತ್ತವರಿಂದ ಸಮಾಚಾರವೆಂದರೇನು? ಎಂದು ಯೋಚಿಸಿ, ಇದಕ್ಕೆ ಶ್ಲೇಷಾರ್ಥವೇನೋ ಇರಬಹುದೆಂದು—ಎಲೆ, ಮಂಗಲೆ, ಈ ನಿನ್ನ ಪಾಂಡಿತ್ಯವನ್ನು ಬಿಟ್ಟು ಸ್ಪಷ್ಟವಾಗಿ ಹೇಳು.

ಮಂಗಲೆ—ಸತ್ತವರಿಂದ ಬಾರದಿದ್ದರೂ ಸತ್ತವರಿಗಾಗಿ ಬಂದಿರುವೆನು. ಮಾರ್ಗ ಮಧ್ಯದಲ್ಲಿ ಸಂಧಿಸಿದ ನಿಮ್ಮನ್ನು ಕೃತ್ರಿಮದಿಂದ ಮೋಸಪಡಿಸ ಬೇಕೆಂಬ ಎಣಿಸಿದ್ದ ಆ ದುರದೃಷ್ಟಳಾದ ಕರಾಳಪತ್ನಿಯು ಪರಲೋಕಗತ ಳಾದಳೆಂದು ನಿಮಗೆ ತಿಳಿದಿರುವದಷ್ಟೆ.

ಮನೋ—ಆಕೆಯು ನನ್ನ ವಿಷಯದಲ್ಲಿ ಏನು ತಪ್ಪು ಮಾಡಿದ್ದರೂ ನಾನು ಆಕೆಯನ್ನು ಮನ್ನಿಸಿರುವೆನು. (ಪಾಠಕ ಮಹಾಶಯರೆ, ನೋಡಿದಿರಾ! ನಮ್ಮ ಕಥಾನಾಯಕಿಯ ಸದ್ಗುಣಗಳು ಹ್ಯಾಗಿರುವುವು.)

ಮಂಗಲೆ—ಅನಂತರ ಆಕೆಯ ದಾದಿಯರು ತಮ್ಮೊಡತಿಯ ಶರೀರವನ್ನು ಈ ಪಟ್ಟಣಕ್ಕೆ ಸಾಗಿಸಿ ನನ್ನನ್ನು ಹುಡುಕಿ, ಕಂಡುಹಿಡಿದು ನಿಮ್ಮಲ್ಲಿಗೆ ಕಳುಹಿಸಿರುವರು.

ಮನೋ—ಅವರಿಗೆ ನನ್ನ ಕೈಲಾಗುವ ಸಹಾಯವನ್ನು ಮಾಡಲು ಸಿದ್ಧಳಾಗಿರುವೆನು. ಅವರು ಏನನ್ನು ಬಯಸಿರುವರು ಹೇಳು.

ಮಂಗಲೆ—ಗತಿಸಿಹೋದ ಶುಕವಾಣಿಯು ತಪ್ಪನ್ನೆಲ್ಲಾ ನೀವು ಮನ್ನಿಸಿರುವಿರೆಂದು ಹೇಳಿರುವಿರಷ್ಟೆ. ಈ ಸಮಯದಲ್ಲಿ ಆಕೆಯ ಶವದ ಬಳಿಯಲ್ಲಿ ಆಕೆಯ ತಪ್ಪನ್ನೆಲ್ಲಾ ಕ್ಷಮಿಸಿರುವೆನೆಂದು ನೀವು ಪ್ರಯಾಣಗೈಯ್ಯಬೇಕೆಂದು

ಆಕೆಯ ದಾದಿಯರು ಕೋರುತ್ತಲಿರುವರು. ಹಾಗೆ ಮಾಡದಿದ್ದರೆ ಶುಕ ವಾಣಿಯ ಆತ್ಮವು ಸ್ವರ್ಗವನ್ನೈದಲಾರದೆಂದು ಅವರಿಬ್ಬರೂ ಬಹು ವ್ಯಸನಾಕ್ರಾಂತರಾಗಿರುವರು. ಆದ್ದರಿಂದ ಇದನ್ನು ನೆರವೇರಿಸಿದರೆ ಎಲ್ಲರಿಗೂ ಮನಸ್ಸಮಾಧಾನವಾಗುವುದು. ಶುಕವಾಣಿಯ ಆತ್ಮವು ಪರಲೋಕ ಸುಖ ವನ್ನು ಹೊಂದುವುದು. ದಯುಪಿಟ್ಟು ಇದನ್ನು ಕೈಕೊಳ್ಳಬೇಕೆಂದು ಬೇಡುವೆನು.

ಮನೊ— ಈ ಕೆಲಸವನ್ನು ಮನಃಪೂರ್ವಕವಾಗಿ ಮಾಡಿಕೊಡುವೆನು. (ಸ್ವಲ್ಪ ಯೋಚಿಸಿ) ಆದರೆ ಇದು ನನ್ನನ್ನು ಬಲೆಗೆ ಸಿಕ್ಕಿಸಿಕೊಳ್ಳಬೇಕೆಂದು ಮಾಡಿರುವ ತಂತ್ರವಲ್ಲವೆಂದು ನಾನು ಹ್ಯಾಗೆ ನಂಬಲಿ ? ಹೀಗೆ ಯಥಾರ್ಥ ವಾಗಿ ಮಾತನಾಡುವೆನೆಂದು ಕೋಪಿಸಿಕೊಳ್ಳಬೇಡೌ. ನೀನು ಹೇಳಿದು ದೆಲ್ಲವು ನಿಶ್ಚಯವಾಗಿರಬಹುದು. ನನ್ನ ವಿಷಯದಲ್ಲಿ ನೀನು ಕೇಡೆಣಿಸ ಲಾರೆಯೆಂದು ನನಗೆ ದೃಢವಾದ ನಂಬಿಕೆಯಿರುವುದು. ಆದಾಗ್ಯೂ ಒಂದು ವೇಳೆ ನಿನಗೆ ತಿಳಿಯದಂತೆ ತಂತ್ರಗಳನ್ನೆಸಗಿ ನಿನ್ನನ್ನು ಮುಂದೆ ದಬ್ಬಿ ತಾವು ಸಿಕ್ಕದಂತಿರಬೇಕೆಂದು ಇತರರು ಯೋಚಿಸಿ ಹೀಗೆ ಮಾಡಿಸಬಹುದಲ್ಲವೆ ?

ಮಂಗಲೆ—ಶ್ರೀಮನ್ನಾರಾಯಣನ ಸಾಕ್ಷಿಯಾಗಿಯೂ ಅಷ್ಟದಿಕ್ಪಾಲ ಕರ ಸಾಕ್ಷಿಯಾಗಿಯೂ ಗತಿಸಿಹೋಗಿರುವ ನನ್ನ ಮಾತಾಪಿತರ ಸಾಕ್ಷಿಯಾ ಗಿಯೂ ನಿನಗಪಾಯ ಸಂಘಟನೆಯಾಗುವುದಿಲ್ಲವೆಂದು ಪ್ರಮಾಣಮಾಡಿ ಕೊಡುವೆನು. ಅಯ್ಯೋ ! ನಿನ್ನನ್ನು ಬಾಧೆಗೊಳಿಸಲೆಣಿಸಿದ ಪಾಪಿಗಳಿಗೆ ಯಮಲೋಕದಲ್ಲಿ ಬೇರೊಂದು ನರಕವು ಸೃಷ್ಟಿಯಾಗಲಾರದೆ ?

ಮನೋರಮೆಯು ಸ್ವಲ್ಪಹೊತ್ತು ಯೋಚಿಸಿ, ಆಗಲಿ ಬರುವೆನು ಎಂದೊಪ್ಪಿಕೊಂಡಳು. ಸಖಿಯರು ತಮ್ಮ ಒಡತಿಯನ್ನು ಹೋಗಬೇಡ ವೆಂದು ಎಷ್ಟು ಬೇಡಿಕೊಂಡರೂ ಅವರನ್ನು ಸುಮ್ಮನಿರಿ ಎಂದು ಗದರಿಸಿ ಮಂಗಲೆಯನ್ನು ಅಲ್ಲೇ ಕಾದಿರುವಂತೆ ಹೇಳಿ ಶಯನಗೃಹವಂ ಸೇರಿ ಆಭರಣ ಗಳನ್ನೆಲ್ಲಾ ಕಳಚಿಟ್ಟು, ವಿದ್ಯಾಮುದ್ರಿಕೆಯನ್ನು ಯಾರಿಗೂ ಕಾಣಬಾರ ದಂತೆ ಬಚ್ಚಿಟ್ಟು ಮದನಿಕೆಯನ್ನು ಶಯನಗೃಹದಲ್ಲಿಯೇ ಇರುವಂತೆ ಹೇಳಿ, ಗೃಹಿಣಿಯು ಬಂದು ಕೇಳಿದರೆ ಉದ್ಯಾನದಲ್ಲಿ ವಿಹರಿಸಲು ಹೋಗಿರುವರೆಂದು ಹೇಳು ಎಂದಾಜ್ಞಾಪಿಸಿ ಚೂತಲತಿಕೆಯೊಡನೆ ಮಂಗಲೆಯನ್ನು ಸೇರಿದಳು.

ಅನಂತರ ಅವರು ಮೂವರೂ ಉದ್ಯಾನವನದ ಬಾಗಿಲಿನಿಂದ ರಹಸ್ಯವಾಗಿ ಭವನವನ್ನು ಬಿಟ್ಟು ಹೋಗುತ್ತಿದ್ದರು. ಆ ದಿವಸ ಸಾಯಂಕಾಲದಿಂದಲೂ ಆಕಾಶದಲ್ಲಿ ಮೋಡಗಳು ಕವಿದು ಗುಡುಗು ಮಿಂಚು ವಿಪರೀತವಾಗಿದ್ದವು. ಆದರೂ ಅವರ ಪುಣ್ಯಕ್ಕೆ ಸರಿಯಾಗಿ ಮಳೆಯು ಮಾತ್ರ ಬರಲಿಲ್ಲ. ಎರಡು ದಾರಿಗಳನ್ನು ಹಾಯ್ದು ಮೂರನೇದನ್ನು ಪ್ರವೇಶಿಸುವುದಕ್ಕೆ ಸರಿಯಾಗಿ ಮಿಂಚು ಮಿಂಚಲು ಸುತ್ತಮುತ್ತಲಿದ್ದ ಉಪ್ಪರಿಗೆ ಮನೆಗಳೆಲ್ಲವು ಚಟ್ಟನೆ ದೃಷ್ಟಿಗೆ ಗೋಚರವಾದುವು. ಆ ಕ್ಷಣದಲ್ಲಿಯೇ ಅಶ್ವಾರೂಢನಾಗಿ ಅವರ ಬಲಪಾರ್ಶ್ವದಲ್ಲಿ ಹೋಗುತ್ತಿದ್ದ ಓರ್ವ ಪುರುಷನ ವದನವು ಮನೋರಮೆಯ ದೃಷ್ಟಿಗೆ ಬೀಳಲು ಸ್ತಂಭೀಭೂತಳಾಗಿ ನಿಂತಲ್ಲಿಯೇ ನಿಂತಳು. ಮಿಂಚು ತೊಲಗಿ ಗಾಢಾಂಧಕಾರವು ವ್ಯಾಪಿಸಿತು. ದಾರಿ ತೋರಿಸಿಕೊಂಡು ಮುಂದೆ ಹೋಗುತ್ತಿದ್ದ ಮಂಗಲೆಯು ಪಕ್ಕದಲ್ಲಿ ಜಾಗ್ರತೆಯಾಗಿ ಬಾರೌ! ಎಂದು ಹೇಳಿದುದಕ್ಕೆ ಪ್ರತ್ಯುತ್ತರ ಬಾರದಿರಲು ಹಿಂತಿರುಗಿ ಮನೋರಮೆಯು ನಿಂತಿದ್ದ ಸ್ಥಳವನ್ನು ಸೇರಿ, ಯಾತಕ್ಕೆ ನನ್ನನ್ನು ನೀವು ಹಿಂಬಾಲಿಸಿ ಬರಲಿಲ್ಲ? ಮಿಂಚಿನಿಂದ ಹೀಗೆ ನೀವು ಭಯಪಟ್ಟು ನಿಂತಿರುವಿರೋ ?

ಮನೋ—ಮಿಂಚಿನಿಂದ ಎಲ್ಲವೂ ಸ್ಪಷ್ಟವಾಗಿ ದೃಷ್ಟಿಗೆ ಗೋಚರವಾಯಿತು. ಕಣ್ಣಿನಿಂದ ಯಾವ ಪದಾರ್ಥವನ್ನು ನೋಡಿದರೂ ಮನುಷ್ಯನ ಹೃದಯವನ್ನು ನೋಡುವುದರಿದಲ್ಲದೆ? ಹಲವು ಮಾತಿನಿಂದೇನು? ನನಗೇನೊ ಅನುಮಾನ ತೋರುವುದು.

ಮಂಲೆ—ಭಗವತ್ಸಾಕ್ಷಿಯಾಗಿಯೂ ಅಪಾಯಾಸ್ಪದ ಕಾರಣವೇನೂ ಇಲ್ಲ. ನನ್ನ ಮಾತುಗಳಲ್ಲಿಯೂ ನಿಮಗೆ ನಂಬಿಕೆ ತೋರದಿದ್ದರೆ ಇಗೊ ಈ ಕಠಾರಿಯನ್ನು ತೆಗೆದುಕೊಂಡು ನಿಮ್ಮ ಕೈಯಲ್ಲಿ ಹಿಡಿದುಕೊಳ್ಳಿ. ಏನಾದರೂ ಕಿಂಚಿತ್ ಅಪಾಯ ಸಂಭವಿಸುವುದೆಂದು ನಿಮಗೆ ತೋರಿದಕೂಡಲೇ ಇದರಿಂದ ನನ್ನ ಪ್ರಾಣವನ್ನು ತೆಗೆದುಬಿಡಿ. ಇದಕ್ಕಿಂತಲೂ ಮತ್ಯಾವ ಭರವಸೆಯನ್ನು ಕೊಡಲಿ ?

ಮನೋ—ಹಾಗಾದರೆ ಕಠಾರಿಯನ್ನು ಕೊಡು (ಎಂದು ಅದನ್ನು ತೆಗೆದುಕೊಂಡು) ನಾವುಗಳು ಹೋಗುವ ಸ್ಥಳದಲ್ಲಿ ಶುಕವಾಣಿಯು ದಾದಿಯರು ಹೊರತು ಮತ್ಯಾರಾದರೂ ಇರುವರೆ ?

ಮಂಗಲೆ—ಮತ್ತೊಬ್ಬನಿರುವನು. ಶ್ರೀಹರಿಯ ಪಾದದಾಣೆ ಆತನು ನಿಮಗೆ ಕೇಡನ್ನು ಉಂಟುಮಾಡುವುದಿಲ್ಲವು. ನಿಮ್ಮ ಸಂಗಡ ಒಂದು ಮಾತನ್ನೂ ಆಡುವುದಿಲ್ಲವು. ಈಗ ನಿಮಗೆ ತೃಪ್ತಿಯಾಯಿತೆ ? ಇದಕ್ಕಿಂತಲೂ ಇನ್ನೇನುತಾನೇ ಹೇಳಲಿ ?

ಮನೊ—ಹಾಗಾದರೆ ದಾರಿ ತೋರಿಸು.

ಮಂಗಲೆಯನ್ನು ಹಿಂಬಾಲಿಸಿ ಹೋಗುತ್ತಾ ಮನೋರಮೆಯು ತನ್ನ ಮನಸ್ಸಿನಲ್ಲಿ ಹೀಗೆಂದು ಯೋಚಿಸತೊಡಗಿದಳು : ಈ ಹೆಂಗಸಿನಲ್ಲಿ ನನಗೆ ವಿಶೇಷವಾದ ಪರಿಚಯವಿಲ್ಲ. ಆದರೂ ಈಕೆಯ ಪ್ರಮಾಣಾದಿಗಳನ್ನು ನೋಡಿದರೆ ಈಕೆಯು ಹೇಳುವುದನ್ನೆಲ್ಲಾ ನಂಬತಕ್ಕದ್ದಾಗಿದೆ. ಮತ್ತೀಕೆಯ ಮುಖಭಾವಗಳಿಂದಲೂ ಯಾವ ಕೃತ್ರಿಮವೂ ನಡೆಯಲಾರದೆಂದು ತೋರುವುದು. ನಿನ್ನಿಂದಲೇ ಶುಕವಾಣಿಯು ಸದ್ಗತಿಯನ್ನು ಹೊಂದುವಳಾಗುವಳು. ಒಂದುವೇಳೆ ಕರಾಳನು ಗತಿಸಿದ ತನ್ನ ಕಾಂತೆಯ ಶವದ ಬಳಿಯಲ್ಲಿರುವಲ್ಲಿ ನನ್ನಮೇಲೆ ಕೈಮಾಡಲಾರನು. ತನ್ನ ಶೋಕದಲ್ಲಿಯೇ ಮಗ್ನನಾಗುವನು. ಹ್ಯಾಗಾದರೂ ಪರೋಪಕಾರ ಮಾಡುವುದರಲ್ಲಿ ಹಿಂತೆಗೆಯಬಾರದು.

ಮಿಂಚುಹೊಳೆದ ಸಮಯದಲ್ಲಿ ಮನೋರಮೆಯು ನೋಡಿದ ಪುರುಷನ್ಯಾರು ? ಆಕೆಯು ಹಾಗೆ ದಿಗಿಲುಪಡಲು ಆ ಪುರುಷನು ಆಕೆಗೆ ಅಪ್ರಿಯನೊ? ಆ ಮಹಾಪುರುಷನು ಪ್ರತಾಪಕಂಠೀರವನಲ್ಲದೆ ಮತ್ಯಾರೂ ಅಲ್ಲ. ಮನೋರಮೆಯು ಆತನನ್ನು ಕರಾಳನೆಂದೇ ತಿಳಿದಿದ್ದಳಲ್ಲವೇ ? ಆದ್ದರಿಂದ ಪ್ರತಾಪಕಂಠೀರವನನ್ನು ನೋಡಿದಕೂಡಲೇ ಮಂಗಲೆಯು ಕೃತ್ರಿಮವನ್ನೆಸಗುವಳೆಂದು ಮನೋರಮೆಯು ಆ ಪಿಧವಾಗಿ ಆಚರಿಸಿದಳು. ಆದರೂ ಆಕೆಯು ಕರಾಳನನ್ನು ತಾನು ನೋಡಿದೆನೆಂದು ತನಗಿರುವ ಸಂಶಯವನ್ನು ವಿಶದವಾಗಿ ಮಂಗಲೆಯೊಡನೆ ಯಾತಕ್ಕೆ ಹೇಳಲಿಲ್ಲ ? ಕರಾಳನ ನಾಮವನ್ನು ಆ ಪಟ್ಟಣದ ವೀಥಿಯಲ್ಲಿ ಉಚ್ಚರಿಸಿದರೆ ಸುತ್ತುಮುತ್ತಲೂ ಸಂಚರಿಸುತ್ತಿರುವ ಪುರವಾಸಿಗಳ ಕಿವಿಗೇನಾದರೂ ಬಿದ್ದಕೂಡಲೇ ಬಹು ಅನರ್ಥ ಸಂಭವವಾಗಿ ಶುಕವಾಣಿಗೆ ತಾನು ಕೊಟ್ಟಿದ್ದ ಪ್ರಮಾಣ ಭಂಗವಾಗುವುದು. ನ್ಯಾಯಾಧಿಕಾರಿಗಳು ಪಟ್ಟಣವನ್ನೆಲ್ಲಾ ಹುಡುಕಲಾರಂಭಿಸುವರು. ಪಟ್ಟಣವೆಲ್ಲಾ

ಗಲಭೆಯಾಗುವುದು. ಕರಾಳನು ಸಿಕ್ಕಿದರೆ ಅವನನ್ನು ವಿಚಾರಣೆಯಿಲ್ಲದೆ ಗಲ್ಲಿಗೆ ಹಾಕುವರು. ಇದರಿಂದ ತನಗೆ ಪಾಪ ಸಂಘಟನೆಯಾಗುವುದು. ಎಂಬೀತರದ ಯೋಚನೆಗಳಿಂದ ಮನೋರಮೆಯು ಮೌನಾಕ್ರಾಂತಳಾದಳು. (ಆಹಾ ! ನಮ್ಮ ಕಥಾನಾಯಕಿಯ ಸುಗುಣಗಳನ್ನು ಎಷ್ಟು ವರ್ಣಿಸಿದರೆ ತಾನೇ ತೀರುವುದು.)

ಸ್ವಲ್ಪಹೊತ್ತಿನಲ್ಲಿಯೇ ಅವರು ಒಂದು ಗೃಹವನ್ನು ಸೇರಲು ಮಂಗಲೆ ಬಾಗಿಲನ್ನು ತಟ್ಟಿದಳು. ಶುಕವಾಣಿಯ ದಾದಿಯರಲ್ಲೊಬ್ಬಳು ಬಂದು ಬಾಗಿಲನ್ನು ತೆಗೆದು ಅವರನ್ನು ಶುಕವಾಣಿಯನ್ನು ಮಲಗಿಸಿದ್ದ ಕೊಠಡಿಗೆ ಕರೆದುಕೊಂಡುಹೋದಳು.

ಅಲ್ಲಿ ಎರಡು ದೀವಿಗೆಗಳು ಉರಿಯುತ್ತಿದ್ದವು. ಶುಕವಾಣಿಯನ್ನು ಮಲಗಿಸಿದ್ದ ಮಂಚದಕಾಲಿನ ಸಮೀಪದಲ್ಲಿ ಓರ್ವ ಪುರುಷನು ತಲೆಬಾಗಿಸಿ ಕೈಕಟ್ಟಿಕೊಂಡು ಮರುಕದಿಂದ ಶುಕವಾಣಿಯನ್ನು ನೋಡುತ್ತಿದ್ದನು. ಶುಕವಾಣಿಯ ದಾದಿಯರಲ್ಲೊಬ್ಬಳು ಆಕೆಯ ತಲೆಯ ಬಳಿಯಲ್ಲಿ ನಿಂತು ನೋಡುತ್ತಿದ್ದಳು. ಮನೋರಮೆ, ಮಂಗಲೆ, ಚೂತಲತಿಕೆಯರು ಆ ಕೊಠಡಿಯನ್ನು ಪ್ರವೇಶಿಸಿದರು. ಚೂತಲತಿಕೆಯು ಅಲ್ಲಿ ನಿಂತಿದ್ದ ಪ್ರತಾಪ ಕಂಠೀರವನನ್ನು ನೋಡಿ ಭಯದಿಂದ ಕೂಗಿಕೊಳ್ಳುವಳಿನ್ನುವಷ್ಟರಲ್ಲಿಯೇ ಮನೋರಮೆಯು ಸಖಿಯನ್ನು ತಡೆದು, ಬಾಯಿಮುಚ್ಚು ! ದೈವಾಧೀನ ಳಾಗಿರುವ ತನ್ನ ಕಾಂತೆಯ ಬಳಿಯಲ್ಲಿ ಏನೊಂದು ಕೇಡು ಮಾಡಲು ಯತ್ನಿಸನು ಎಂದು ಪಿಸುಮಾತಿನಿಂದ ಆಕೆಯ ಕಿವಿಯಲ್ಲಿ ಹೇಳಿದಳು.

ಎಲ್ಲರೂ ಮಂಚದ ಹತ್ತಿರಕ್ಕೆ ಹೋಗಲು ಪ್ರತಾಪಕಂಠೀರವನು ಬಂದಿರುವರ್ಯಾರೆಂದು ಕಣ್ಣೆತ್ತಿ ನೋಡಿ ಮನೋರಮೆಯನ್ನು ಕಂಡು ಸಂತೋಷಾಶ್ಚರ್ಯಭರಿತನಾದನು. ಇದನ್ನು ಪರಿಕಿಸಿದ ಮಂಗಲೆಯು ಅವ ನನ್ನು ಕೈಸನ್ನೆಯಿಂದ ಸುಮ್ಮನಿರೆಂದು ಎಚ್ಚರಿಸಿ ಒಂದೂ ಮಾತನಾಡಬೇಡ! ಎಂದು ಹೇಳಿದಳು. ತನ್ನನ್ನು ಮನೋರಮೆಯು ನೋಡಿದರೂ ನೋಡ ದಂತಿದ್ದುದನ್ನು ತಿಳಿದು ಪುನಃ ತಲೆಬಾಗಿಸಿ ನಿಂತನು.

ಮಂಗಲೆಯು ಶುಕವಾಣಿಯಮೇಲೆ ಹೊದಿಸಿದ್ದ ವಸ್ತ್ರವನ್ನು ಓರೆ

ಮಾಡಿ ಆಕೆಯ ಮುಖವನ್ನು ತೋರಿಸಿ, ಇಗೋ ಶುಕವಾಣಿಯು ದೀರ್ಘ ನಿದ್ರೆಯಲ್ಲಿರುವಳು. ತಡನೇಕೆ ಬಂದ ಕೆಲಸವು ನೆರವೇರಲಿ.

ಒಂದು ಕ್ಷಣವವರಿವಿಗೂ ಎಲ್ಲರೂ ಮೌನಭಾವವನ್ನು ಧರಿಸಿದರು. ಆ ಕೊಠಡಿ ಎಲ್ಲವೂ ಸಂಪೂರ್ಣವಾಗಿ ನಿಶ್ಶಬ್ದವಾಗಿತ್ತು. ತದನಂತರ ಮನೋರಮೆಯು ಪ್ರಮಾಣವನ್ನು ಮಾಡತೊಡಗಿ ಇಂತೆಂದುಪಕ್ರಮಿಸಿದಳು:—ಶುಕವಾಣಿಯೇ ನೀನು ಬದುಕಿರುವಾಗಲೇ ನಿನ್ನ ತಪ್ಪನ್ನೆಲ್ಲಾ ಕ್ಷಮಿಸಿ ನಿನಗಪ್ರಿಯವನ್ನು ಮಾಡುವುದಿಲ್ಲವೆಂದು ವಾಗ್ದಾನ ಮಾಡಿರುವೆನು. ಈಗಲೂ ನಿನ್ನ ಮೋಕ್ಷಪ್ರದವಾಗಿ ಈಗಲಿಲ್ಲಿರುವವರ ಎದುರಿನಲ್ಲಿಯೇ ಶ್ರೀಹರಿಯ ಪಾದಸಾಕ್ಷಿಯಾಗಿ ಆ ವಾಗ್ದಾನವನ್ನೇ ಅನುಸರಿಸಿ ನಡೆಯುವೆನೆಂದು ಪ್ರಮಾಣವಾಗಿ ಹೇಳುವೆನು.

ಇದು ಮುಗಿದಕೂಡಲೇ ಮನೋರಮೆಯು ದುಃಖದಿಂದ ಅಳಲಾರಂಭಿಸಿದಳು. ಮಿಕ್ಕ ಸ್ತ್ರೀಯರು ಆಕೆಯನ್ನು ನೋಡಿ ಅತ್ತರು. ಪ್ರತಾಪಕಂಠೀರವನೂ ಕೂಡ ದುಃಖಾಕ್ರಾಂತವದನಯುಕ್ತನಾದನು.

ಬಳಿಕ ಮನೋರಮೆಯು ಕಣ್ಣೊರಸಿಕೊಂಡು ಮಂಗಲೆ ಚೂತಲತಿಕೆಯರೊಡಗೂಡಿ ಹೊರಡಲೆತ್ನಿಸಿದಳು. ಪ್ರತಾಪಕಂಠೀರವನು ಮನೋರಮೆಯೊಡನೆ ಮಾತನಾಡಲು ಮುಂದುವರಿಯಬೇಕೆಂದಿರುವುದನ್ನು ತಿಳಿದ ಮಂಗಲೆಯು ಅವನನ್ನು ಅಲ್ಲಿಯೇ ಇರೆಂದು ಗದರಿಸುವ ರೀತಿ ಕೈಸನ್ನೆಯಿಂದ ಸೂಚಿಸಿದಳು. ಪ್ರತಾಪಕಂಠೀರವನಾದರೊ ಮಂಗಲೆಯ ಆಜ್ಞೆಗೊಳಗಾಗಿದ್ದನು. ಅಂಥಾ ಸ್ಥಳದಲ್ಲಿ ಮಂಗಲೆಯು ಹೇಳುವುದನ್ನು ಮೀರಿ ನಡೆಯಬಾರದೆಂದು ಆತನಿಗೆ ತೋರುತ್ತಿತ್ತು.

ಆ ಸ್ತ್ರೀಯರು ಆ ಮನೆಯನ್ನು ಬಿಟ್ಟು ಹೊರಟುಬರುತ್ತಾ ಮಾರ್ಗದಲ್ಲಿ ಏನೊಂದನ್ನೂ ಮಾತನಾಡದೆ ಮೌನವಾಗಿದ್ದರು. ಧನಕೋಟಿಯ ಗೃಹವನ್ನು ಸೇರಲು ಮನೋರಮೆಯು ಮಂಗಲೆಯನ್ನು ಕುರಿತು ನಿರ್ಮಲಹೃದಯಳಾದ ನಿನ್ನಲ್ಲಿ ಅಪನಂಬಿಕೆಗೊಂಡಿದ್ದಕ್ಕಾಗಿ ನನ್ನ ತಪ್ಪನ್ನು ಕ್ಷಮಿಸು. ಇಗೋ ನಿನ್ನ ಕಠಾರಿಯು ಇದನ್ನು ತೆಗೆದುಕೊಳ್ಳು ಎಂದು ಕಠಾರಿಯನ್ನಿತ್ತಳು.

ಮಂಗಲೆಯು ಅದನ್ನು ತೆಗೆದುಕೊಂಡು—ಆದ್ದರಿಂದ ಇನ್ನು ಮುಂದೆ

ಏನಾದರೂ ಸಂಧಿಸಿದರೆ ನನ್ನಲ್ಲಿ ನಿಶ್ಚಯಮನಸ್ಕರಾಗಿರಿ; ನಾನು ಹೋಗಿ ಬರುವೆನು ಎಂದು ಹೊರಡತೊಡಗಿದಳು.

ಮನೋರಮೆಯು ಆಕೆಯನ್ನು ತಡೆದು—ಇನ್ನೊಂದು ಮಾತಿರುವದು. ನಿಲ್ಲು ಹೇಳುವೆನು. ನನ್ನ ಪರವಾಗಿ ಅನೇಕ ವಿಷಯಗಳು ನಿನಗೆ ತಿಳಿದಿರುವಂತೆ ತೋರುವುದು. ಅಲ್ಲದೆ ಅವುಗಳನ್ನು ಚನ್ನಾಗಿ ಬಲ್ಲವರ ಜೊತೆಯಲ್ಲಿಯೇ ನೀನಿರುವೆ? ಆದ್ದರಿಂದ ಶುಕವಾಣಿಯು ನನಗೆ ಯಾವ ಕೃತ್ರಿಮವನ್ನು ಮಾಡಬೇಕೆಂದಿದ್ದಳು. ಹೇಳು?

ಮಂಗಲೆ—ನಾನು ಯಾವುದನ್ನೂ ಅರಿಯೆನು. ಹೋಗಿಬರುವೆನು ಎಂದು ಹೊರಟೇಹೋದಳು.

ಮನೋರಮೆಯು ಚೂತಲತಿಕೆಯು ರಹಸ್ಯವಾಗಿ ಭವನವನ್ನು ಪ್ರವೇಶಿಸಿ ತಮ್ಮ ಬಿಡಾರವನ್ನು ಸೇರಿದರು.

ಮಾರನೆಯ ದಿವಸ ಬೆಳಿಗ್ಗೆ ಮನೋರಮೆಯು ಭವನದ ಉದ್ಯಾನವನ್ನು ಪ್ರವೇಶಿಸಿ ಏಕಾಂಗಿಯಾಗಿ ವಿಹರಿಸುತ್ತಿದ್ದಳು. ಸಖಿಯರಿಬ್ಬರೂ ಭವನದಲ್ಲಿ ಏನನ್ನೋ ಮಾಡುತ್ತಿದ್ದರು.

ಆ ಉದ್ಯಾನವನವು ಮುಂಭಾಗದಲ್ಲಿಯೂ, ಉಭಯಪಾರ್ಶ್ವಗಳಲ್ಲಿಯೂ ಭವನದಿಂದ ಆವರಿಸಲ್ಪಟ್ಟಿತ್ತು. ಹಿಂಭಾಗದ ಎಲ್ಲೆಯು ಅತಿ ಎತ್ತರವಾದ ಒಂದು ಬಲವಾದ ಗೋಡೆಯಾಗಿತ್ತು. ಅದರಿಂದಾಚೆ ಆ ಪಟ್ಟಣದ ಒಂದಾನೊಂದು ರಾಜಮಾರ್ಗವು ಹೋಗುತ್ತಿತ್ತು. ಆ ಮಾರ್ಗವನ್ನು ಪ್ರವೇಶಿಸಲು ಗೋಡೆಯಲ್ಲಿ ಒಂದು ಬಾಕಲು ಇರಿಸಲ್ಪಟ್ಟಿತ್ತು. ಈ ವನದ್ವಾರದಿಂದಲೇ ಮನೋರಮೆಯು ಮಂಗಲೆಯೊಡನೆ ಹಿಂದಿನ ದಿನದ ಸಾಯಂಕಾಲದಲ್ಲಿ ಭವನವನ್ನು ಬಿಟ್ಟು ಹೊರಟಿದ್ದು.

ಆ ವನದಲ್ಲಿ ಗಂಧದ ಮರಗಳು, ಸೀಮಾವಿನ ಮರಗಳು, ಸಣ್ಣ ಸಣ್ಣ ಅಶೋಕ ವೃಕ್ಷಗಳು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಸಮುದಾಯದ ಮಧುರ ಧ್ವನಿಯು, ಲತಾಗೃಹಗಳು, ಕದಳೀ ಗೃಹಗಳು, ಶಿಲಾಮಂಟಪಗಳು ಪರಿಮಳ ವಿಶಿಷ್ಟವಾದ ಪುಷ್ಪವಾಟಿಕೆಗಳು, ತಾವರೆ ಪುಷ್ಪಗಳಿಂದ ರಮ್ಯವಾಗಿರುವ ಕೊಳಗಳು, ಕೊಳದಿಂದ ಕೊಳಕ್ಕೆ ಹರಿಯುವ ಸಣ್ಣ ಸಣ್ಣ ಕಾಲುವೆಗಳು, ದೃಷ್ಟಿಗೆ ಆನಂದವನ್ನೀಯುವ ಚಿಲುಮೆಗಳು, ಝೇಂಕಾರ

ಗೈಯುವ ಭೃಂಗ ಸಮುದಾಯವು, ಚಂದ್ರಕಾಂತಶಿಲೆಯ ಆಸನಗಳು, ಬಿಳಿ ಮರಳಿನಿಂದ ಹಾಸಲ್ಪಟ್ಟ ಇರ್ಕಡೆಗಳಲ್ಲಿಯೂ ಸಣ್ಣ ಸಾಲು ಮರಗಳನ್ನುಳ್ಳ ಸಣ್ಣ ಸಣ್ಣ ಮಾರ್ಗಗಳು, ಕಾಡಿನಿಂದ ಹಿಡಿದುಕೊಂಡು ಬಂದು ಸಾಕುತ್ತಿರುವ ಮರಿಜಿಂಕೆಗಳು, ಹಸುಳೆ ಜವಾರಿಯ ಮೃಗಗಳು ಇವೆ ಮೊದಲಾದವು ಶೋಭಾಯಮಾನಂಗೊಂಡು ಧನಕೋಟಿಯ ವೈಭವನವು ಎಷ್ಟೆಂದು ತೋರುವುದಿಲ್ಲವೆ ?

ಅಂಥಾ ಶೃಂಗಾರ ವನದಲ್ಲಿ ಮನೋರಮೆಯು ವಿಹರಿಸುತ್ತಾ ಅದರ ದಕ್ಷಿಣ ಭಾಗವನ್ನು ಸೇರಿ ಅಲ್ಲಿದ್ದ ಒಂದಾನೊಂದು ಚಂದ್ರಕಾಂತ ಶಿಲಾ ಶಾಸನದ ಮೇಲ್ಗಡೆ ಕುಳಿತು ಸುತ್ತುಮುತ್ತಲಿರುವ ಸೊಗಸನ್ನು ನೋಡುತ್ತಿದ್ದಳು. ಹೀಗೆ ಸ್ವಲ್ಪ ಹೊತ್ತು ವಿಲಾಸವಾಗಿರಲು ಅಕಸ್ಮಾತ್ತಾಗಿ ಭವನದ ದಕ್ಷಿಣ ಭಾಗದಲ್ಲಿರುವ ಒಂದಾನೊಂದು ಕೊಠಡಿಯ ಕಿಟಿಕಿಯು ತೆರೆಯಲ್ಪಟ್ಟು ಸಂತೋಷಾಶ್ಚರ್ಯ ಸೂಚಕವಾದ ಧ್ವನಿಯೊಂದು ಹೊರಟಿತು. ಮನೋರಮೆಯು ತಲೆಯನ್ನೆತ್ತಿ ಮೇಲೆ ನೋಡಲು ತೆರೆಯಲ್ಪಟ್ಟ ಕಿಟಿಕಿಯಲ್ಲಿ ಪ್ರತಾಪಕಂಠೀರವನು ಕಾಣಲ್ಪಟ್ಟನು. ಮನೋರಮೆಯು ಭಯಭ್ರಾಂತಳಾಗಿ ಇದೇನು ? ಧನಕೋಟಿಯ ಭವನದಲ್ಲಿ ಕರಾಳನಿರುವನೆ ! ಮೋಸವಾಯಿತು ! ಮೋಸವಾಯಿತು ! ಎಂದಂದುಕೊಂಡು ಮುಸುಕನ್ನು ಮುಖದ ಮೇಲೆ ಎಳೆದು ಒಂದು ಕ್ಷಣವೂ ನಿಲ್ಲದೆ, ಬೇಗ ಬೇಗನೇ ತನ್ನ ಕೊಠಡಿಯನ್ನು ಸೇರಲು ಬರುತ್ತಿದ್ದಳು. ಪ್ರತಾಪಕಂಠೀರವನಾದರೋ ಮನೋರಮೆಯ ಚರ್ಯವನ್ನು ನೋಡಿ ದಿಗ್ಭ್ರಾಂತನಾಗಿ ನಿಂತನು. ಮನೋರಮೆಯು ಮೆಟ್ಟಿಲುಗಳನ್ನು ಹತ್ತುತ್ತಿರಲು ಇದಿರಾಗಿ ಇಳಿಯುತ್ತಿದ್ದ ಚೂತಲತಿಕೆಯು ಒಡತಿಯನ್ನು ನೋಡಿ—ಮಹಾರಾಣಿಯೆ ಗೃಹಿಣಿಯು ಕೊಠಡಿಯಲ್ಲಿ ನಿಮ್ಮನ್ನು ಕಾಯುತ್ತಿರುವಳು. ಧನಕೋಟಿಯು ಬಂದಿರುವನಂತೆ.

ಈ ವಾರ್ತೆಯನ್ನು ಕೇಳಿದ ಕೂಡಲೇ ಮನೋರಮೆಯು ಸಂತೋಷ ಭರಿತಳಾಗಿ ತನ್ನ ಮನಸ್ಸಿನಲ್ಲಿ ಭಗವಂತನು ಸರಿಯಾದ ಸಮಯದಲ್ಲಿ ಕಾಪಾಡುವನಾದನು ಎಂದು ಹರ್ಷಹೃದಯಳಾಗಿ ಕೊಠಡಿಯನ್ನು ಪ್ರವೇಶಿಸಿ, ಬಹು ತ್ವರೆಯಾಗಿ ವಸ್ತ್ರಾಭರಣಗಳನ್ನು ಧರಿಸಿ ಮುದ್ರಿಕೆಯನ್ನು ಬೆರಳಿಗೆ ಹಾಕಿಕೊಂಡು ಗೃಹಿಣಿಯೊಡನೆ ಧನಕೋಟಿಯನ್ನು ಕಾಣಲು ಹೊರಟಳು.

ಗೃಹಿಣಿಯು ಮನೋರಮೆಯನ್ನು ಭವನದ ಮಧ್ಯದಲ್ಲಿರುವ ವಿಸ್ತಾರವಾದ ಕೊಠಡಿಯ ಬಳಿಗೆ ಕರೆದುಕೊಂಡು ಹೋಗಿ ಬಾಗಿಲನ್ನು ತೆರೆದು ಧನಕೋಟಿಯ ಸನ್ನಿಧಾನವನ್ನೈದಿಸಿ ಆತನನುಜ್ಞೆಯಂ ಪಡೆದು ಹೊರಟು ಹೋದಳು.

ಆ ಗೃಹವನ್ನು ಪ್ರವೇಶಿಸಿದ ಕೂಡಲೇ ಮನೋರಮೆಯು ಸುಖಾಸನದ ಮೇಲೆ ಕುಳಿತಿದ್ದ ಧನಕೋಟಿಯನ್ನೂ, ಸಮೀಪದಲ್ಲಿಯೇ ಮರ್ಯಾದಾ ಪೂರ್ವಕವಾಗಿ ನಿಂತುಕೊಂಡಿದ್ದ ಪ್ರತಾಪಕಂಠೀರವನನ್ನೂ ನೋಡಿದಳು. ತಕ್ಷಣವೇ ಭೀತಳಾದರೂ ಧನಕೋಟಿಯ ಬಳಿಯಲ್ಲಿ ಆತನೇನೂ ಮಾಡಲಾರನೆಂದು ಧೈರ್ಯವನ್ನವಲಂಬಿಸಿ ತನ್ನ ಮನಸ್ಸಿನಲ್ಲಿ ಇರುವ ಭೀತಿಯನ್ನು ಮುಖಚೇಷ್ಟೆಗಳಿಂದ ಹೊರಪಡಿಸದೆ ತಲೆಬಾಗಿ ಮರ್ಯಾದಾಪೂರ್ವಕವಾಗಿ ಧನಕೋಟಿಯ ಬಲಪಾರ್ಶ್ವದಲ್ಲಿ ನಿಂತುಕೊಂಡಳು. ಪ್ರತಾಪಕಂಠೀರವನು ಪ್ರವೇಶಿಸಿದಾಗ ಕುಶಲ ಪ್ರಶ್ನೆಯನ್ನು ಕೇಳಿ, ಇತರರ ಗುಣಾತಿಶಯಗಳನ್ನು ಮುಖಲಕ್ಷಣಗಳಿಂದಲೇ ತಿಳಿದುಕೊಳ್ಳುವುದರಲ್ಲಿ ವಿಚಕ್ಷಣನಾದ ಧನಕೋಟಿಯು ಪ್ರತಾಪಕಂಠೀರವನ ಗುಣಸಂಪತ್ತುಗಳನ್ನರಿಯಲು ಆತನ ಮುಖಲಕ್ಷಣಗಳನ್ನು ಪರಿಭಾವಿಸಲು ಈಕ್ಷಿಸುತ್ತಿದ್ದನು. ಮನೋರಮೆಯು ಬರಲು ಆಕೆಯ ಕಡೆಗೆ ತಿರುಗಿ ಅದೇ ಪ್ರಕಾರವಾಗಿ ಕುಶಲಪ್ರಶ್ನೆಯನ್ನು ಕೇಳಿ ಆಕೆಯ ದಿವ್ಯರೂಪವನ್ನು ನೋಡಲಾರಂಭಿಸಿ ಒಂದೆರಡು ಕ್ಷಣಗಳ ವರೆಗೂ ಸುಮ್ಮನೇ ಈಕ್ಷಿಸುತ್ತಿದ್ದನು.

ಆ ಬಳಿಕ ಧನಕೋಟಿಯು ಅವರಿಬ್ಬರನ್ನು ಕುರಿತು ನೀವುಗಳಿಬ್ಬರೂ ನನ್ನ ವೃದ್ಧಾಪ್ಯಕ್ಕೆ ಗೌರವವಿತ್ತು ಹೀಗೆ ನಿಂತಿರುವಿರಿ. ಆದಾಗ್ಯೂ ನಿಮ್ಮಿಬ್ಬರ ಪದವಿಗಳನ್ನು ಯೋಚಿಸಲು ನಿಮಗೆ ಮರ್ಯಾದೆಯನ್ನು ಮಾಡುವುದು ನನ್ನ ಕರ್ತವ್ಯವು. ಆದುದರಿಂದ ಮಹಾರಾಣಿಯೇ, ಈ ಪೀಠವನ್ನಲಂಕರಿಸಬೇಕು. ಮಹಾರಾಜನೆ, ಈ ಪೀಠವನ್ನಲಂಕರಿಸಬೇಕು ಎಂದು ಬಲಗಡೆಯಲ್ಲಿರುವ ಸಿಂಹಪೀಠದಲ್ಲಿ ಮನೋರಮೆಯನ್ನೂ, ಎಡಗಡೆಯಲ್ಲಿ ಇರುವ ಸಿಂಹಪೀಠದಲ್ಲಿ ಪ್ರತಾಪಕಂಠೀರವನನ್ನೂ ಕುಳ್ಳಿರಿಸಿದನು.

ಈವರಿವಿಗೂ ಮನೋರಮೆಯನ್ನು ಮೋಹಾಸಕ್ತಿಯಿಂದ ಈಕ್ಷಿಸುತ್ತಲಿದ್ದ ಪ್ರತಾಪಕಂಠೀರವನು ಆಕೆಯ ಪದವಿಯನ್ನು ಕೇಳಿದ ಕೂಡಲೇ

ಅತ್ಯಾಶ್ಚರ್ಯಗೊಂಡನು. ಮನೋರಮೆಯಾದರೋ ಕರಾಳನು ಇದೆಂಥಾ ವೇಷವನ್ನು ಹಾಕಿಕೊಂಡು ಧನಕೋಟಿಯನ್ನು ಮರುಳುಮಾಡುತ್ತಿರುವ ನೆಂದು ವಿಸ್ಮಯಗೊಂಡಳು.

ಬಳಿಕ ಧನಕೋಟಿಯು ಅವರಿಬ್ಬರೇ ಮನೋರಮೆಯೂ, ಪ್ರತಾಪ ಕಂಠೀರವನೂ ಎಂದು ತಿಳಿಯುವ ಬಗ್ಗೆ ಗುರುತಿಗಾಗಿ ದುಷ್ಟಬುದ್ಧಿಯು ಮುಖಾಂತ್ರ ಕೊಟ್ಟು ಕಳುಹಿಸಿದ್ದ ಉಂಗುರಗಳನ್ನು ಕೇಳಿ ತೆಗೆದುಕೊಂಡು ಅವೆರಡನ್ನೂ ಪರೀಕ್ಷಿಸುತ್ತಿದ್ದನು.

ಎಲ್ಲಾ ಭಾಗಗಳಲ್ಲಿಯೂ ಒಂದೇ ವಿಧವಾದ ಉಂಗುರಗಳನ್ನು ನೋಡಿದ ಮನೋರಮೆಯೂ ಮತ್ತು ಪ್ರತಾಪಕಂಠೀರವನೂ ಪುನಃ ವಿಸ್ಮಯ ಗೊಂಡರು.

ಧನಕೋಟಿಯು ಉಂಗುರಗಳ ವಿಷಯದಲ್ಲಿ ತೃಪ್ತಿಗೊಂಡು ಮನೋ ರಮೆಯು ಕಡೆಗೆ ಕೈನೀಡಿ ಪ್ರತಾಪಕಂಠೀರವನನ್ನು ಕುರಿತು—ಮಹಾರಾಜನೆ, ಈಕೆಯೇ ಕೇರಳ ದೇಶಕ್ಕೊಡೆಯಳಾದ ಮಹಾರಾಣಿ ಮನೋರಮೆಯು. ಆ ದೇಶದ ಪ್ರಜೆಗಳು ಈಕೆಯ ಅಸಮಾನ ರೂಪಲಾವಣ್ಯವನ್ನು ನೋಡಿ ಈಕೆಯನ್ನು ಲೋಕರಂಜನೆಯೆಂದು ಕರೆಯುವರು. ಪ್ರತಾಪಕಂಠೀರವನ ಕಡೆಗೆ ಕೈನೀಡಿ, ಮನೋರಮೆಯನ್ನು ಕುರಿತು—ಮಹಾರಾಣಿಯೆ, ಈತನೇ ಸಿಂಹಕೇತುವಿನ ಸ್ವೀಕೃತಪುತ್ರನಾದ ಚೇರದೇಶಕ್ಕೊಡೆಯನಾದ ಪ್ರತಾಪ ಕಂಠೀರವ ಮಹಾರಾಜನು ಎಂದು ಅವರಿಬ್ಬರಿಗೂ ಪರಿಚಯವನ್ನುಂಟು ಮಾಡಿದನು.

ಮನೋ—ಈ ಮಹಾರಾಜನನ್ನು ನಾನು ಸಂಧಿಸಿದುದು ಇದೇ ಮೊದಲಲ್ಲವು. ನನ್ನ ಪ್ರಯಾಣದಲ್ಲಿ ನಾನು ಇಳಿದುಕೊಂಡಿದ್ದ ಒಂದು ಪಟ್ಟಣದ ಭೋಜನಶಾಲೆಯಲ್ಲಿ ನನ್ನ ಉಂಗುರವು ಕಳುವುಹೋಯಿತು. ಮಾರನೇ ದಿವಸ ನಾನು ಪ್ರಯಾಣ ಮಾಡುತ್ತಿರುವಲ್ಲಿ ನನಗೀತನ ಜೊತೆ ಯುಂಟಾಯಿತು. ಬರುತ್ತಾ ಮಾರ್ಗದ ಬಳಿಯಲ್ಲಿಬ್ಬರು ಭಿಕ್ಷುಕರಿಗೆ ದಾನ ಮಸ್ಸೀಯುವ ವೇಳೆಯಲ್ಲಿ ಈ ನೃಪನ ಚೀಲದಲ್ಲಿದ್ದ ನಾಣ್ಯಾದಿಗಳೆಲ್ಲಾ ಚಲ್ಲಿಬಿದ್ದವು. ಈತನು ಉಂಗುರವು ನಾಣ್ಯಗಳ ಮಧ್ಯದಲ್ಲಿರುವುದನ್ನು ನೋಡಿ ನನ್ನದೇ ಎಂದು ತಿಳಿದು ಭಯಪಟ್ಟು ಸಮಯವನ್ನು ಹುಡುಕುತ್ತ

ಲಿದ್ದು ಈತನ ಜೊತೆಯಲ್ಲಿ ಬಿಟ್ಟು ಪಲಾಯನಳಾದೆನು. ಈಗಲೀಗ ಈ ಮರ್ಮವು ಹೀಗೆ ಪರಿಣಮಿಸುವುದರಿಂದ ಈ ನರಪಾಲನ ವಿಷಯದಲ್ಲಿ ನಾನಿಟ್ಟಿದ್ದ ಕೆಟ್ಟ ಅಭಿಪ್ರಾಯಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಈತನನ್ನು ಬೇಡಿಕೊಳ್ಳುವೆನು.

ಧನ—ನೀವುಗಳಿಬ್ಬರೂ ಮೊದಲೇ ಸಂಧಿಸಿರುವಿರಾದುದರಿಂದ ನಿಮ್ಮಿಬ್ಬರ ಪರಸ್ಪರ ಗುಣಗಾಂಭೀರ್ಯಾದಿಗಳು ನಿಮಗೇ ತಿಳಿದಿರುವುವು. ಅಲ್ಲದೆ ಪರಸ್ಪರ ಪ್ರೀತಿಯೂ ನಿಮ್ಮಿಬ್ಬರಲ್ಲಿ ಅಂಕುರಿಸುತ್ತಿದ್ದುದೆಂದು ನನಗೆ ತೋರುವುದು.

ಇದನ್ನು ಕೇಳಿದ ಕೂಡಲೇ ಪ್ರತಾಪಕಂಠೀರವನು ರೋಮಾಂಚಗೊಂಡು ಸಂತೋಷ ಹೃದಯನಾಗಿ ತನ್ನನ್ನು ತಾನೆ ಮರೆಯುವನೆಂದು ತೋರುತ್ತಿತ್ತು. ಮನೋರಮೆಯಾದರೋ ಬೌದ್ಧಮತಾವಲಂಬಿಯಾದ ನೃಪನನ್ನು ತನಗೆ ಪ್ರೀತಿಪಾತ್ರನನ್ನಾಗೆಸಗಬೇಕೆಂದಿರುವ ಧನಕೋಟಿಯಲ್ಲಿ ಕಿಂಚಿತ್ ಕೋಪಗೊಂಡವಳಾಗಿ ತಲೆಬಾಗಿಸಿ ನಿಂತಳು.

ಇದನ್ನು ತಿಳಿದಾಸಾಹುಕಾರನು—ಮಹಾರಾಣಿಯೇ, ನಿನ್ನ ನಿರ್ಮಲ ಹೃದಯಕ್ಕೆ ಅಸಮಾಧಾನವನ್ನು ನಾನು ತರುವೆನೆಂದೆಣಿಸಬೇಡ. ಕೇರಳ ದೇಶಾಧಿಪಳು ತನ್ನ ಅಸಮಾನ ಸೌಂದರ್ಯಕ್ಕಿಂತಲೂ ಹೆಚ್ಚಾದ **ಸದ್ಗುಣ**ಗಳನ್ನುಳ್ಳವಳೆಂದು ನಾನು ತಿಳಿದಿರುವೆನು. ಹೀಗಿರುವಲ್ಲಿ ಮಾರ್ಗಮಧ್ಯದಲ್ಲಿ ಸಂಧಿಸಿದ ಹೊಸಬನಾದೊರ್ವ ಯೌವ್ವನ ಪುರುಷನನ್ನು ವರಿಸೆಂದು ಹೇಳುವುದಕ್ಕೆ ನಾನು ಅಜ್ಞಾನಿಯೇ? ಹಾಗಲ್ಲ ನನ್ನ ಅಭಿಪ್ರಾಯವು ಬೇರೆ ಬಗೆಯಾಗಿರುವುದು. ನೀವುಗಳಿಬ್ಬರೂ ಯಾರ್ಯಾರೆಂದು ತಿಳಿಯುವಿರಾ? ಅಣ್ಣ ತಂಗಿಯರ ಮಕ್ಕಳೆ!

ಆಹಾ! ಅವರಿಬ್ಬರ ಸಂತೋಷಾಶ್ಚರ್ಯವನ್ನು ಎಷ್ಟೆಂದು ವರ್ಣಿಸೋಣ. ಅವರಿಬ್ಬರಿಗೆ ಮಾತನಾಡುವುದಕ್ಕೆ ಮಾತುಗಳೇ ಬಾಯಿಂದ ಹೊರಡಲಿಲ್ಲವಲ್ಲ! ಅವರ ಸಂತೋಷವನ್ನೆಷ್ಟೆಂದು ಹೇಳಬೇಕು!

ಧನ—ಅಹುದು. ನೀವುಗಳಿಬ್ಬರು ರಕ್ತಸಂಬಂಧಿಗಳು! ಕೇರಳ ದೇಶಕ್ಕೊಡೆಯನಾಗಿದ್ದ ವಜ್ರಮಕುಟ ರಾಜನೇ ನಿಮ್ಮ ಪಿತಾಮಹಾನು!

ಅವರಿಬ್ಬರ ಸಂತೋಷವು ಮತ್ತಧಿಕವಾಯಿತು.

ಧನ—ಶ್ರೀಹರಿಯು ಈ ಮಹಾರಾಜನ ಬೌದ್ಧಮತವನ್ನು ಪರಿಹರಿಸಿ, ನಿಮ್ಮಿಬ್ಬರಲ್ಲಿಯೂ ಅನ್ಯೋನ್ಯ ಪ್ರೀತಿಯನ್ನುಂಟುಮಾಡಿ ಸುಖಸಾಮ್ರಾಜ್ಯವ ವನ್ನೀಯಲಿ !

ಧನಕೋಟಿಯು ತನ್ನ ಆಶೀರ್ವಾದವನ್ನು ಮುಗಿಸುವುದಕ್ಕೆ ಸರಿಯಾಗಿ ಗೃಹಣಿಯು ಕೊಠಡಿಯಂ ಪ್ರವೇಶಿಸಿ—ಭಕ್ಷ್ಯಭೋಜ್ಯಾದಿಗಳೆಲ್ಲವೂ ಸಿದ್ಧ ವಾಗಿರುವುವು. ಆರೋಗಣೆಗೆ ಬಿಜಯಂಗೈಯ್ಯಬೇಕು.

ಧನ—ಎಲೌ! ಸನ್ಮಿತ್ರರಿರಾ! ಭೋಜನಾನಂತರ ವಿಶ್ರಾಂತವಾಗಿ ಕುಳಿತುಕೊಂಡು ನಿಮ್ಮ ಚರಿತ್ರೆಯನ್ನು ಹೇಳುವೆನು,

ಎಂದೆಲ್ಲರೂ ಭೋಜನವಂ ಗೈಯ್ಯಲು ಹೋದರು.

ಆ ದಿನ ಮಧ್ಯಾಹ್ನ ಸುಮಾರು ೩ ಘಂಟೆ ಸಮಯಕ್ಕೆ ಸರಿಯಾಗಿ ದುಷ್ಟಬುದ್ಧಿಯು ಧನಕೋಟಿಯ ಭವನವಂ ಬಿಟ್ಟು ನಾಲ್ಕಾರು ಬೀದಿಗಳನ್ನು ದಾಟಿ ಕಳಿಂಗಪಟ್ಟಣದ ದಕ್ಷಿಣ ಭಾಗವಂ ಪೊಕ್ಕು ಹೋಗುತ್ತಿದ್ದನು. ಉಪ್ಪರಿಗೆ ಮನೆಗಳಿಲ್ಲದೆ ಸಣ್ಣಸಣ್ಣ ಗೃಹಗಳನ್ನುಳ್ಳದ್ದಾಗಿಯೂ ಸಾಂದ್ರವಾದ ಮನೆಗಳ ಸಾಲುಗಳಿಲ್ಲದೆ ಚದರಿರುವ ಮನೆಗಳನುಳ್ಳದ್ದಾಗಿಯೂ, ಹೆಂಚಿನ ಮನೆಗಳಿಲ್ಲದೆ ಗುಡಿಸಲುಗಳನ್ನು ಹೋಲುವ ಹುಲ್ಲು ಚಾವಣಿಯ ಮನೆ. ಗಳನ್ನುಳ್ಳದ್ದಾಗಿಯೂ, ಶೃಂಗಾರವಾದ ರಾಜವೀಧಿಗಳಿಲ್ಲದೆ ಅಲ್ಲಲ್ಲಿ ಮಲಿನ ವಾಗಿರುವ ಸಂದಿಗೊಂದಿಗಳನ್ನುಳ್ಳದ್ದಾಗಿಯೂ ಇವರು ಆ ಪಟ್ಟಣದ ದಕ್ಷಿಣ ಭಾಗವು ನೋಟಕರಿಗೆ ಅಸಹ್ಯವನ್ನುಂಟುಮಾಡುತ್ತಿತ್ತು. ಈ ಸೊಗಸುಗಳಿಗೆ ಸರಿಯಾಗಿ ಅಲ್ಲಲ್ಲಿ ಪಾಳುಮನೆಗಳು ಅನೇಕವಿದ್ದವು.

ಇಂಥಾ ಒಂದಾನೊಂದು ಪಾಳುಮನೆಯ ಪಕ್ಕದಲ್ಲಿ ಹುಲ್ಲುಚಾವಣಿಯ ಮನೆಯೊಂದಿತ್ತು. ದುಷ್ಟಬುದ್ಧಿಯು ಈ ಮನೆಯನ್ನು ಸೇರಿ ಬಾಗಿಲು ತಟ್ಟಲು ಓರ್ವ ಮುದುಕಿಯು ಬಾಗಿಲನ್ನು ತೆರೆದು ಆತನೊಂದಿಗೆ ಏನೊಂದೂ ಮಾತನಾಡದೆ ಒಳಗೆ ಕರೆದುಕೊಂಡುಹೋದಳು. ಅವರಿಬ್ಬರೂ ಉಗ್ರಾಣ ವನ್ನು ಹೊಗಲು ದುಷ್ಟಬುದ್ಧಿಯು ಒಂದು ಮೂಲೆಯಲ್ಲಿ ಕೈಯನ್ನಿಟ್ಟು ಅಮುಕಿದನು. ನೆಲವು ಬಿರುಕುಬಿಟ್ಟು ಒಂದು ಸುರಂಗಮಾರ್ಗವು ದೃಷ್ಟಿಗೆ ಗೋಚರವಾಯಿತು. ದುಷ್ಟಬುದ್ಧಿಯು ತಾನೊಬ್ಬನೇ ಸುರಂಗದ್ವಾರವನ್ನು ಪ್ರವೇಶಿಸಿ ಸ್ವಲ್ಪದೂರ ಹೋಗಲು, ನೆಲಮಾಳಿಗೆಯೊಂದು ಗೋಚರವಾ

ಯಿತು. ಅಲ್ಲಿರುವ ಒಂದು ಶಿಲಾಸದಮೇಲೆ ಓರ್ವ ಪುರುಷನು ದುಃಖಿತನಾಗಿ ತಲೆಬಾಗಿಸಿಕೊಂಡು ಕುಳಿತಿದ್ದನು. ದುಷ್ಟಬುದ್ಧಿಯು ಆ ನೆಲಮಾಳಿಗೆಯನ್ನು ಪ್ರವೇಶಿಸಿದ ಕೂಡಲೇ ಆ ಪುರುಷನು ತಲೆಯೆತ್ತಿ ದುಷ್ಟಬುದ್ಧಿಯನ್ನು ನೋಡಿ—ಏನಯ್ಯಾ ಮಿತ್ರನೆ ಬಂದೆಯಾ, ಇಲ್ಲಿ ಕುಳಿತುಕೊ.

ದುಷ್ಟಬುದ್ಧಿಯು ಆತನೆದುರಿನಲ್ಲಿದ್ದ ಶಿಲಾಸನದಲ್ಲಿ ಕುಳಿತು—ಕಿರಾತಾಧಿಪನೆ !

ಕರಾಳ—ಕಿರಾತ ಪ್ರಜೆಗಳನ್ನು ಆಳದ ನಾನು ಕಿರಾತಾಧಿಪನೆಂತಾಗುವೆನು ?

ದುಷ್ಟ—ಹಾಗಂದರೇನೋ ನನಗೆ ತಿಳಿಯಲಿಲ್ಲ. ವಿವರಿಸಿ ಹೇಳು.

ಕರಾಳ—ನಾನು ದುಂದುಗಾರನೆಂದೂ, ಕಾಮುಕನೆಂದೂ, ಕೈಲಾಗದವನೆಂದೂ, ಚಾರುವೀರನು ಇಲ್ಲದಿದ್ದನ್ನೆಲ್ಲಾ ನನ್ನ ಭಟರಿಗೆ ಹೇಳಿ ಅವರನ್ನು ಪ್ರೇರೇಪಿಸಿ ತಾನೇ ಕಿರಾತಾಧಿಪನಾಗಿರುವನು. ನನ್ನಲ್ಲಿ ವಿಶೇಷ ಭಕ್ತಿಯನ್ನಿಟ್ಟಿದ್ದ ಭೀಷಣನೆಂಬ ಒಬ್ಬ ಭಟನು ಮಾತ್ರ ನೆನ್ನೆ ರಾತ್ರಿ ನನ್ನನ್ನು ಸೇರಿ ನಡೆದ ಸಂಗತಿಯನ್ನೆಲ್ಲಾ ಹೇಳಿದನು. ಐಶ್ವರ್ಯವೈಭವದಿಂದ ಶೋಭಿಸುತ್ತಿದ್ದ ಕರಾಳನು ಈಗ ಭಿಕ್ಷುಕಸ್ಥಿತಿಗೆ ತರಲ್ಪಟ್ಟವನೆಂಬುವುದು ಈಗ ನಿನಗೆ ಚೆನ್ನಾಗಿ ತಿಳಿಯಿತೆ. ನಿನ್ನಿಂದಲ್ಲವೆ ನನಗೆ ಈ ಗತಿಯು ಪ್ರಾಪ್ತಿಯಾಯಿತು.

ದುಷ್ಟ—ನೀನು ಹೀಗೆ ನನ್ನನ್ನು ದೂಷಿಸುವುದು ಸರಿಯಾದುದಲ್ಲ. ಚಾರುವೀರಾದಿ ನಿನ್ನ ಭಟರು ಪ್ರತಾಪಕಂಠೀರವಾದಿಗಳಿಗೆ ಸೋತುಹೋದುದರಿಂದಲೂ ನಿನ್ನ ಕಾಂತೆಯ ಅಕಾಲಮರಣದಿಂದಲೂ ಅಲ್ಲವೆ ಈ ನಮ್ಮ ಕಾರ್ಯವು ನೆರವೇರಲಿಲ್ಲ. ನೆನ್ನೆ ದಿವಸವೂ ಇದನ್ನು ನಾನು ಹೇಳಲಿಲ್ಲವೇ ?

ಕರಾಳ—ಆ ಮೋಸಗಾರಳ ಮಾತನ್ನೇಕೆತ್ತುವೆ !

ದುಷ್ಟ—ತನ್ನ ಕೊನೆಗಾಲದಲ್ಲಿಯೂ, ಆಕೆಯು ನಿರ್ಮಲ ಹೃದಯಳಾಗಿರಬೇಡವೇ ?

ಕರಾ—ನೀನು ಹೇಳುವುದು ಸತ್ಯವು. ನನ್ನಲ್ಲಿ ಸಂಪೂರ್ಣವಾದ ಅನುರಾಗವನ್ನಿಟ್ಟಿದ್ದ ಅವಳಲ್ಲಿ ನಾನು ದೂಷಣೆಯನ್ನಾರೋಪಿಸಬಾರದು. ಹಾ ! ಪ್ರಾಣಕಾಂತೆಯೇ ! ಎಲ್ಲಿರುವೆ ? ಮಡಿಮುಡಿ ಕೊಡೆಯಾ ? ಛೆ ! ಛೆ !

ಇದೇನು ಧೀರನಾದ ನಾನು ಹೆಂಗಸಿನಂತೆ ರೋಧಿಸುತ್ತಿರುವೆನು (ಎಂದು ಧೈರ್ಯಂಗೊಂಡು) ದುಷ್ಟಬುದ್ಧಿಯೆ, ಈಗ ನಾನು ಮಾಡತಕ್ಕದ್ದೇನಾದರೂ ಇರುವುದೇ? ನಿನ್ನ ಯಜಮಾನನು ನಿನ್ನ ವಿಷಯದಲ್ಲಿ ಹ್ಯಾಗಿರುವುವನು?

ದುಷ್ಟ—ಈ ದಿನ ಭೋಜನಾನಂತರ ಮನೋರಮೆಯು ಯಜಮಾನನ ಬಳಿಯನ್ನೈದುವುದಕ್ಕೆ ಮುಂಚೆ ಏಕಾಂಗಿಯಾಗಿ ತನ್ನ ಬಿಡಾರದಲ್ಲಿದ್ದ ಸಮಯವನ್ನರಿತು ಚಮತ್ಕಾರವಾದ ಸಂಭಾಷಣೆಯಿಂದ ಆಕೆಯಿಂದಲೇ ನನ್ನ ವಿಷಯದಲ್ಲಿ ನನ್ನ ಧಣಿಯು ಸ್ವಲ್ಪವೂ ಅನುಮಾನಗೊಂಡಿಲ್ಲವೆಂದು ತಿಳಿದುಕೊಂಡೆನು. ಆದರೂ ನಾನು ಮಾತನಾಡುತ್ತಿರುವ ವೇಳೆಯಲ್ಲಿ ನಾನು ಯಥಾರ್ಥವನ್ನು ಹೇಳುತ್ತಿರುವೆನೊ ಇಲ್ಲವೊ ಎಂದು ಆಗಾಗ್ಯೆ ಓರೆ ಗಣ್ಣಿನಿಂದ ನನ್ನ ಮುಖಚೇಷ್ಟೆಗಳನ್ನು ನೋಡುತ್ತಿದ್ದಳು. ನನ್ನಲ್ಲೇನೋ ಆಕೆಗೆ ಅನುಮಾನವಿರುವುದು. ಇದು ಹಾಗಿರಲಿ. ನಿನ್ನ ಕಾಂತೆಯ ಶವವು ದಹನಮಾಡಲ್ಪಟ್ಟಿರುವುದೇ?

ಕರಾಳ—ಈ ಪ್ರಶ್ನೆಯಿಂದ ನಿನಗೇನಾಗಬೇಕು?

ದುಷ್ಟ—ಈಗ ಕೆಲವು ಸಂಗತಿಗಳನ್ನು ಯೋಚಿಸಲು ನಿನ್ನ ಮನಸ್ಸು ಸರಿಯಾದ ಸ್ಥಿತಿಯಲ್ಲಿರುವುದೊ, ಅಥವಾ ದುಃಖದಿಂದ ಕಳವಳಗೊಂಡಿರು ವುದೋ ಎಂಬುವುದನ್ನು ತಿಳಿಯಲೋಸುಗ.

ಕರಾ—ನೆನ್ನೇದಿವಸ ನನ್ನ ಪತ್ನಿಯ ಶವವು ಇದ್ದ ಗೃಹಕ್ಕೆ ಹೋದೆನು. ಶುಕವಾಣಿಯ ಪತಿಯಾದ ಕರಾಳನು ನಾನೇ ಎಂದು ತಿಳಿದಿದ್ದ ಆ ಗೃಹದ ಯಜಮಾನಿಯಾದ ನನ್ನ ಕಾಂತೆಯ ಬಂಧುವು ಇನ್ನು ಮುಂದೇನಾದರೂ ನಾನು ಆ ಗೃಹಕ್ಕೆ ಬಂದು ಹೋಗುತ್ತಿದ್ದರೆ ಶುಕವಾಣಿಯ ಮಾತಾಪಿತರಿಗೆ ತಿಳಿಸಿಬಿಡುವೆನೆಂದು ಹೆದರಿಸಿದಳು. ದುರದೃಷ್ಟನಾದ ನಾನು ಸ್ಮಶಾನ ಭೂಮಿಗೂ ಹೋಗದಂತಾಯಿತು. ಅಯ್ಯೋ! ನಾನೆಂಥಾ ನಿರ್ಭಾಗ್ಯಶಾಲಿ!

ದುಷ್ಟ—ಮಿತ್ರನೇ ಸಮಾಧಾನಗೊಳ್ಳು. ನಡೆದುಹೋದುದನ್ನೆಲ್ಲಾ ನೆನಸಿಕೊಂಡು ಹೀಗೆ ಮರುಗಿದರೆ ಏನು ಪ್ರಯೋಜನ? ಮುಂದಾಗಬೇಕಾದ ಕಾರ್ಯಗಳನ್ನು ಯೋಚಿಸು. ನಿನ್ನ ಧೈರ್ಯ, ಸ್ಥೈರ್ಯ ಗಾಂಭೀರ್ಯಾದಿ ಗುಣ ಗಳೆಲ್ಲಾ ಎಲ್ಲಿ ಹೋದವು? ಅವುಗಳೂ ಶುಕವಾಣಿಯೊಡನೆ ದಹಿಸಲ್ಪಟ್ಟು ನಾಶವಾಗುವವೆ?

ಸ್ವಲ್ಪಹೊತ್ತು ಇಬ್ಬರೂ ಮೌನಭಾವವನ್ನು ಧರಿಸಿದರು.

ಆ ಬಳಿಕ ಕರಾಳನು ಧೈರ್ಯಗೊಂಡು—ಮಿತ್ರನೆ, ನೀನು ಹೇಳುವುದು ನಿಶ್ಚಯವು. ಈಗಲಾದರೋ ನನ್ನ ಉದ್ದೇಶ ಈ ವಿಧವಾಗಿರುವುದು: ಕೆಲವುಮಂದಿ ಕಿರಾತಭಟರನ್ನು ಸೇರಿಸಿಕ್ಕೊಂಡು ಆ ಚಂಡಾಲನಾದ ಚಾರು ವೀರನನ್ನು ಸೋಲಿಸಿ ನನ್ನ ಹಗೆಯನ್ನು ತೀರಿಸಿಕ್ಕೊಳ್ಳಬೇಕೆಂದಿರುವೆನು.

ದುಷ್ಟ—ಇದಕ್ಕೆ ಹೆಚ್ಚಾದ ದ್ರವ್ಯಸಹಾಯವಾಗಬೇಕಾಗಿರುವು ದಲ್ಲವೆ ?

ಕರಾ—ಅಹುದು. ಯುದ್ಧಸಾಮಗ್ರಿಯುಗಳಿಗೆಲ್ಲಾ ಹೆಚ್ಚಾದ ದ್ರವ್ಯ ವಿರಬೇಕು. ಅಯ್ಯೋ ನನ್ನ ದುರದೃಷ್ಟವೆ! ಮಿತ್ರನೆ ನನ್ನಲ್ಲಿ ಹಣವೆಲ್ಲಿರು ವುದು ? ಕಡೆಗೀ ಆಲೋಚನೆಯಿಂದೇನು ಪ್ರಯೋಜನವು ?

ದುಷ್ಟ—ಪ್ರಯೋಜನವನ್ನು ನಾನು ತೋರಿಸುವೆನು. ನಿನಗೆ ಬೇಕಾದ ದ್ರವ್ಯಸಂಪಾದನೆಗೆ ತಕ್ಕ ಉಪಾಯವನ್ನು ಹೇಳುವೆನು.

ಕರಾ—ಇದನ್ನು ಮಾತ್ರ ನೆರವೇರಿಸಿಕೊಟ್ಟರೆ ನನ್ನ ಜೀವಮಾನದ ಪರ್ಯಂತರವೂ ನಾನು ನಿನಗೆ ಕೃತಜ್ಞನಾಗುವೆನು.

ದುಷ್ಟ—ಹಾಗಾದರೆ ನಾನು ಹೇಳಿದಂತೆ ನಡೆದುಕೊಳ್ಳುವಿಯಾ ?

ಕರಾ—ಶಿರಸಾವಹಿಸಿ ನಡೆದುಕೊಳ್ಳುವೆನು.

ದುಷ್ಟ—ಈ ದಿನ ಅರ್ಧರಾತ್ರಿ ಸಮಯಕ್ಕೆ ಸರಿಯಾಗಿ ನನ್ನ ಯಜ ಮಾನನ ಉದ್ಯಾನವನದ ಹಿಂಭಾಗದಲ್ಲಿ ಇರುವ ದ್ವಾರವನ್ನು ಸೇರಿ ಬಾಗಿ ಲನ್ನು ನಿಧಾನವಾಗಿ ಮೂರುಸಲ ತಟ್ಟಿದರೆ ನಾನು ಬಂದು ಬಾಗಿಲನ್ನು ತೆರೆಯುವೆನು. ಮುಂದಕ್ಕೆ ಮಾಡಬೇಕಾಗುವ ಕಾರ್ಯವೆಲ್ಲಾ ನನಗಿರಲಿ.

ಕರಾ—ಇದೆಲ್ಲವನ್ನೂ ಮಾಡುವೆನು. ಆದರೆ ನಿನ್ನ ಉದ್ದೇಶ ವ್ಯಾವುದು ? ಅದನ್ನು ಸ್ವಲ್ಪ ದಯವಿಟ್ಟು ಹೇಳು.

ದುಷ್ಟ—ಮನೋರಮೆಯು ನನ್ನ ವಿಷಯದಲ್ಲಿ ಅಪನಂಬಿಕೆಗೊಂ ಡಿರುವಳೆಂದು ಹೇಳಿರುವೆನಷ್ಟೆ. ಆಕೆಯು ತನಗಿರುವ ಸಂಶಯವನ್ನು ನನ್ನ ಯಜಮಾನನೊಡನೆ ಹೇಳಿದರೆ ಆತನು ಎಲ್ಲವನ್ನೂ ವಿಚಾರಿಸಿ ನನ್ನನ್ನು ಈ ಪಟ್ಟಣದ ಅಧಿಕಾರಿಗಳಿಗೆ ಶಿಕ್ಷೆಗೈಯ್ಯಲು ಒಪ್ಪಿಸುವನು. ಆದರೆ ಈ ದಿನ ಮನೋರಮೆಯು ಆತನೊಡನೆ ನನ್ನ ವಿಷಯವಾಗಿ ಮಾತನಾಡ

ಲಾರಳು. ಯಾತಕ್ಕೆನ್ನುವಿಯೋ ? ಆಕೆಯು ಧನಕೋಟಿಯೊಡನೆ ಮಾತ ನಾಡಬೇಕಾದ ಇತರ ಸಮಾಚಾರಗಳನೇಕವಿರುವವು. ಆದುದರಿಂದ ಬೀಸುವ ದೊಣ್ಣೆಯೇಟಿಗೆ ತಲೆತಪ್ಪಿಸಿಕೊಂಡರೆ ಸಾವಿರವರುಷ ಆಯುಸ್ಸು ಎನ್ನುವಂತೆ ಈ ದಿವಸ ಕಳೆದರೆ ಮುಂದೆ ನಾನು ಸುರಕ್ಷಿತನಾಗುವೆನು.

ಅನಂತರದಲ್ಲಾ ದುಷ್ಟಬುದ್ಧಿಯು ತಾನು ಯೋಚಿಸಿರುವ ಕಾರ್ಯದ ಎಲ್ಲಾ ಭಾಗಗಳನ್ನೂ ಕರಾಳನಿಗೆ ವಿಸ್ತರಿಸಿ ಹೇಳಿ ಅವನನುಮತಿಯನ್ನು ಪಡೆದು ಧನಕೋಟಿಯ ಭವನವಂ ರಹಸ್ಯವಾಗಿ ಸೇರಿ ಕುದುರೆಲಾಯವಂ ಪೊಕ್ಕು ಅಶ್ವಾರೂಢನಾಗಿ ಕಳಿಂಗಪಟ್ಟಣದ ಉತ್ತರಭಾಗದ ಎಲ್ಲೆಯಂ ಸೇರಿದನು.

ಎಲ್ಲೆಯ ಹತ್ತಿರದಲ್ಲಿಯೇ ಒಂದಾನೊಂದು ಭವನವು ಗೋಚರ ವಾಗಲು ಅದರ ಬಳಿಗೈದಿ ದ್ವಾರಪಾಲಕನ ಕಿವಿಯಲ್ಲಿ ಏನನ್ನೋ ಹೇಳಿ ಒಳಪೊಕ್ಕನು. ತಕ್ಷಣವೇ ಆ ಭವನದ ಮಧ್ಯಭಾಗದಲ್ಲಿರುವ ಉದ್ಯಾನದಲ್ಲಿ ವಿಹರಿಸುತ್ತಲಿದ್ದ ರಂಭಾದ್ಯಪ್ಸರಸ್ತ್ರೀಯರನ್ನೇಳಿಸುವ ಸ್ತ್ರೀಯರ ಸಮೂಹ ವನ್ನೋಡಿ ಅವರ ಅಂಗಾಂಗಗಳನ್ನೆಲ್ಲಾ ಎವೆಯಿಕ್ಕದೆ ಈಕ್ಷಿಸುತ್ತಾ ಬೆರಗಾಗಿ ಸ್ವಲ್ಪಹೊತ್ತು ದುಷ್ಟಬುದ್ಧಿಯು ನಿಂತಲ್ಲೇ ನಿಂತನು. ಅನಂತರ ಆ ವನದ ಒಂದಾನೊಂದು ಪಾರ್ಶ್ವದ ಸಮೀಪದಲ್ಲಿ ಇದ್ದ ಲತಾಗೃಹವಂ ಪೊಕ್ಕು ಅಲ್ಲಿ ಸುಖಾಸನದಮೇಲೆ ಉಲ್ಲಾಸವಾಗಿ ಕುಳಿತಿದ್ದ ಓರ್ವ ಬೌದ್ಧನಂ ಕಂಡು ಪ್ರಣಾಮವಂಗೈದನು.

ಶುಂಡಾಲನಾಮವಂಗೊಂಡಾ ಬೌದ್ಧನು ನಮಸ್ಕಾರವಂಗೈದ ದುಷ್ಟ ಬುದ್ಧಿಯನ್ನು ಕುರಿತು—ಬುದ್ದೇಶನು ನಿನ್ನನ್ನು ಕಾಪಾಡಲಿ! ನೀನು ಯಾವ ಉದ್ಯೋಗದಲ್ಲಿ ಶೋಭಿಸುತ್ತಾ ಇರುವೆ ? ನಿನ್ನ ನಾಮಧೇಯವೇನು ?

ದುಷ್ಟ—ಧನಕೋಟಿಯ ಮನೆಯ ಸೇವಕರಲ್ಲೆಲ್ಲಾ ಮುಖಂಡನಾದ ನನ್ನನ್ನು ದುಷ್ಟಬುದ್ಧಿಯೆಂದು ಕರೆಯುವರು.

ಶುಂಡಾ—ಧನಕೋಟಿಯ ಸೇವಕನೋ ! ಬುದ್ಧೇಶ್ವರನು ಧನಕೋಟಿ ಯನ್ನು ಕಾಪಾಡಲಿ. ನೀನು ಬಂದ ಕರ್ತವ್ಯವೇನಾಗಿರುವುದು ? ಸ್ವಲ್ಪ ಹೇಳು ನೋಡೋಣ.

ದುಷ್ಟ—ಈಗ ನಾನು ಹೇಳಿದ ಧನಕೋಟಿಯ ಮನೆಯಲ್ಲಿ ದೇದೀಪ್ಯಮಾನವಾದ ಸುಂದರಾಕೃತಿಯನ್ನುಳ್ಳ ಸ್ತ್ರೀಶಿರೋಮಣಿಯೋರ್ವಳು ಇರುವಳು. ಆ ಅಬಲಾಮಣಿಯು ೧೭ ವರುಷ ವಯಸ್ಕಳಾಗಿ ನವಯವ್ವನ ಯುವತಿಯಾಗಿರುವಳು. ಆಕೆಯ ಸಮಾನ ರೂಪು, ಲಾವಣ್ಯಾದಿಗಳನ್ನುಳ್ಳ ಸ್ತ್ರೀಯರು ಈ ಜಗತ್ತಿನಲ್ಲಿಲ್ಲವು.

ಶುಂಡಾ—ಅಗೋ! ಅಲ್ಲಿ ವಿಹರಿಸುತ್ತಿರುವ ಸುಂದರಿಯರ ಸಮಾನ ಸ್ತ್ರೀಯರ್ಯಾರಿರುವರು?

ದುಷ್ಟ—ನಾನು ವರ್ಣಿಸಿದ ಸ್ತ್ರೀಶಿರೋಮಣಿಯನ್ನು ನಾನು ಇದುವರಿವಿಗೂ ಕಾಣದಿದ್ದ ಪಕ್ಷದಲ್ಲಿ ಈಗ ನೀನು ಹೇಳಿದುದನ್ನೇ ಒಪ್ಪಿಕೊಳ್ಳುತ್ತಿದ್ದೆನು.

ಶುಂಡಾ—ಇದೇನು ಹಾಗನ್ನುವೆ? ಅದೋ. ಚೆಲುವೆಯ ಸಾಮಿಪ್ಯವನ್ನೈದುತ್ತಿರುವ ಆ ಹಂಸಗಮನೆಯನ್ನು ನೋಡು. ಪಾಡುತ್ತಲಿರುವ ಆ ಕೀರವಾಣಿಯನ್ನು ನೋಡು. ಆ ಚಂದ್ರವದನೆಯನ್ನು ನೋಡು. ಆ ಮೋಹನಾಂಗಿಯನ್ನು ನೋಡು. ಆ ಮೀನಾಕ್ಷಿಯನ್ನು ನೋಡು.

ದುಷ್ಟ—ಈ ಸ್ತ್ರೀಯರು ನಾನು ಹೇಳಿದ ನಾರೀರತ್ನದ ಪಾದಧೂಳಿಗೆ ಸಮಾನರಾಗಿರುವರೇ? ಇವರೆಲ್ಲಾ ನರಪ್ರಾಣಿಗಳು. ನಾನು ವರ್ಣಿಸಿ ಹೇಳಿದ ಅಬಲಾಮಣಿಯು ದೇವಲೋಕದಿಂದಿಳಿದು ಬಂದ ದೇವತಾಸ್ತ್ರೀಯೋ ಎಂದು ತಿಳಿದುಕೊ.

ಶುಂಡಾ—ಹಾಗಾದರೆ ನೀನು ಹೇಳುವುದೆಲ್ಲವೂ ಸತ್ಯವಾಗಿರಬಹುದು.

ದುಷ್ಟ—ಆದರೆ ನಾನು ವರ್ಣಿಸುವ ಸ್ತ್ರೀಯಲ್ಲಿ ಒಂದು ಅವಗುಣವಿರುವುದು. ಏನೆನ್ನುವಿಯೋ? ಆಕೆಯು ಒಂದು ವಿಷಯದಲ್ಲಿ ಮಾತ್ರ ಉನ್ಮತ್ತಳಂತಿರುವಳು.

ಶುಂಡಾ—ಆ ವಿಷಯವ್ಯಾವುದು?

ದುಷ್ಟ—ಆಕೆಯ ಅಸಮಾನರೂಪು ಲಾವಣ್ಯಗಳನ್ನು ನೋಡಿ ಜನರು ಆಕೆಯನ್ನು ಲೋಕರಂಜನೆಯೆಂದು ಕರೆಯುವರು. ಮತ್ತಾಕೆಯ ಹೆಸರು ಮನೋರಮೆಯು. ಆದುದರಿಂದ ಮನೋರಮೆಯೆಂಬ ನಾಮಧೇಯುವನ್ನುಳ್ಳ ಕೇರಳದೇಶಕ್ಕೊಡೆಯಳು ತಾನೇ ಎಂದು ಹೇಳಿಕೊಳ್ಳುತ್ತಾಳೆ.

ಅನಂತರ ಶುಂಡಾಲನೊಡನೆ ಸ್ವಲ್ಪಹೊತ್ತು ಮಾತನಾಡುತ್ತಲಿದ್ದು ದುಷ್ಟಬುದ್ಧಿಯು ಅವನ ಅಪ್ಪಣೆಯಂ ಪಡೆದು ಧನಕೋಟಿಯ ಭವನವಂ ರಹಸ್ಯವಾಗಿ ಬಂದು ಸೇರಿದನು.

ರಾತ್ರಿ ಹನ್ನೆರಡು ಘಂಟೆಯಾಯಿತು. ದುಷ್ಟಬುದ್ಧಿಯು ತನ್ನ ಶಯನ ಗೃಹವನ್ನು ಬಿಟ್ಟು ಉದ್ಯಾನವನವಂ ಪೊಕ್ಕು ಹಿಂದಲ ಬಾಗಿಲಿನ ಸಮೀಪ ದಲ್ಲಿ ಕಾಯುತ್ತಾ ನಿಂತುಕೊಂಡಿದ್ದನು. ಒಂದು ನಿಮಿಷದಲ್ಲಿಯೇ ಬಾಗಿಲು ಮೂರುಸಲ ತಟ್ಟಲ್ಪಟ್ಟಿತು. ಕರಾಳನು ಮತ್ತು ಭೀಷಣನು ವನವಂ ಪೊಕ್ಕರು.

ಭವನದಲ್ಲೆಲ್ಲಿಯೂ ನಿಶ್ಶಬ್ದವಾಗಿತ್ತು. ಆಕಾಶದಲ್ಲಿ ನಕ್ಷತ್ರಗಳು ಪ್ರಕಾಶಿಸುತ್ತಲಿದ್ದವು. ಈ ತುಂಟರಿಗೆ ಸಹಾಯಮಾಡಲು ವಾಯುವು ಜಡನಾದನು. ಮರಗಳೆಲೆಗಳೆಲ್ಲವು ಈ ದುಷ್ಟರ ಕೃತ್ಯವನ್ನು ನೋಡಿ ಬೆರಗಾಗಿ ನಿಂತುಕೊಂಡ ನರಪ್ರಾಣಿಗಳೋ ಎನ್ನುವಂತೆ ಚಲಿಸದಿದ್ದವು. ಹೀಗಿದ್ದರೂ ಆ ಉದ್ಯಾನವನದಲ್ಲಿ ಚಿಲುಮೆಗಳ ತುಂತುರು ಹನಿಗಳು ಯಾರೋ ಕಳ್ಳರು ಬಂದು ತಮ್ಮ ಯಜಮಾನನ ಭವನವಂ ಪ್ರವೇಶಿಸಿದ ರೆಂದು ತಮ್ಮ ಯಜಮಾನನ ಕಿವಿಯಲ್ಲಿ ಪಿಸುಗುಟ್ಟುತ್ತಿರುವವೊ ಎನ್ನುವಂತೆ ನಿಧಾನವಾಗಿ ಚಟಚಟನೆ ಬಿದ್ದು ಕಿಂಚಿತ್ಶಬ್ದ ಮಾಡುತ್ತಿದ್ದವು. ಆ ವನ ದಲ್ಲಿದ್ದ ತಟಾಕಂಗಳಲ್ಲಿರುವ ಕಪ್ಪೆಗಳೂ ಕಳ್ಳರೂ ಕಳ್ಳರೂ ಎಂದು ಕೂಗಿ ಕೊಳ್ಳುವವೋ ಎಂಬಂತೆ ಧ್ವನಿಗೈಯ್ಯುತ್ತಿದ್ದವು.

ದುಷ್ಟಬುದ್ಧಿ, ಕರಾಳನು, ಭೀಷಣನು ಮನೋರಮೆಯ ಶಯನ ಗೃಹದ ಬಳಿಯನ್ನೈದಿದರು. ಕರಾಳನು, ಭೀಷಣನು ಸ್ವಲ್ಪವೂ ಶಬ್ದವಾಗ ದಂತೆ ಕೀಲುಗಳನ್ನು ಬಿಡಿಸಿ ಬಾಗಿಲನ್ನು ತೆಗೆದಿರಿಸಲು ದುಷ್ಟಬುದ್ಧಿಯು ಕರಾಳನ ಕಿವಿಯಲ್ಲಿ ನಾನು ಹೇಳಿದಂತೆ ಶುಂಡಾಲನೊಡನೆ ಎಲ್ಲವನ್ನೂ ಸರಿಮಾಡಿಕೊಂಡು ಬಂದಿರುವೆನು. ನಿಮ್ಮ ಕೆಲಸವು ನಡೆಯಲಿ ಎಂದು ಹೇಳಿ ಅವರನ್ನು ಬಿಟ್ಟು ಉದ್ಯಾನವನವಂ ಪೊಕ್ಕು ನೋಡುತ್ತಿದ್ದನು.

ಅಷ್ಟರಲ್ಲಿಯೇ ಚಂದ್ರನುದಯಿಸಿ ಪ್ರಕಾಶಿಸುತ್ತಲಿದ್ದನು. ದುಷ್ಟ ಬುದ್ಧಿಯು ಗಿಡಗಳ ಮಧ್ಯದಲ್ಲಿ ಅಡಗಿಕೊಂಡು ನೋಡುತ್ತಿದ್ದನು. ಇವ ನ್ಯಾತಕ್ಕೆ ಇಲ್ಲಿ ಅಡಗಿರುವನು? ಒಂದುವೇಳೆ ಆಕಸ್ಮಿಕವಾಗಿ ಭವನದಲ್ಲಿ

ಕಳ್ಳರು ಸಿಕ್ಕಿಕೊಂಡು ಗಲಭೆಯುಂಟಾದರೆ ತಾನು ತಪ್ಪಿಸಿಕೊಳ್ಳಬೇಕೆಂದಲ್ಲವೇ ದುಷ್ಟಬುದ್ಧಿಯು ಈ ವಿಧವಾಗಿ ಆಚರಿಸುತ್ತಿದ್ದನು. ಎಲೆ ದುಷ್ಟ! ನಿನ್ನ ನಾಮಧೇಯಕ್ಕೆ ಸರಿಯಾದ ಗುಣಗಳು ನಿನಗಿರುವವು! ನಿನ್ನಿಂದಲಲ್ಲವೆ ಲೋಕರಂಜನೆಯು ಕಷ್ಟಕ್ಕೆ ಗುರಿಯಾಗುವಳು?

ಕರಾಳನು, ಭೀಷಣನು ಒಳಪೊಕ್ಕು ಪ್ರಜ್ಞೆ ಶೂನ್ಯಗೊಳಿಸುವ ಚರ್ಣವನ್ನುಳ್ಳ ಮೂರು ಡಬ್ಬಿಗಳ ಬಿರಡೆಗಳನ್ನು ತೆಗೆದು ನಿದ್ರಿಸುತ್ತಲಿದ್ದ ಮೂವರಬಲೆಯರ ನಾಸಿಕಗಳಿಗೆ ಸರಿಯಾಗಿ ಹಿಡಿದು ಅರ್ಧನಿಮಿಷದವರೆಗೂ ಸುಮ್ಮನೆ ನಿಂತುಕೊಂಡರು. ಆ ಕಮಲವದನೆಯರ ಮುಖವು ಕಾಂತಿಹೀನಗೊಳ್ಳಲು ಆ ದುಷ್ಟರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿ ಸಂತೋಷಹೃದಯರಾದರು. ಕೂಡಲೇ ಮನೋರಮೆಯನ್ನು ಮಾತ್ರ ಎತ್ತಿಕೊಂಡು ಬಂದು ಹೊರಗಿರಿಸಿ ಬಾಗಿಲನ್ನು ಯಥಾಸ್ಥಾನದಲ್ಲಿ ನಿಲ್ಲಿಸುತ್ತಲಿದ್ದರು.

ಗಿಡಗಳ ಮಧ್ಯದಲ್ಲಿ ದುಷ್ಟಬುದ್ಧಿಯು ಅಡಗಿಕೊಂಡಿದ್ದ ಸ್ವಲ್ಪದೂರದಲ್ಲಿ ಯಾರೋ ಬರುತ್ತಿರುವಂತೆ ಹೆಜ್ಜೆಗಳ ಶಬ್ದವು ಕೇಳಬಂದಿತು. ಕೂಡಲೆ ದುಷ್ಟಬುದ್ಧಿಗೆ ಜಂಗಾಬಲ ತಪ್ಪಿಹೋಯಿತು. ಬರುತ್ತಿದ್ದ ಮನುಷ್ಯನು ದುಷ್ಟಬುದ್ಧಿಯು ಇರುವ ಕಡೆಗೆ ಬರುತ್ತಿದ್ದನು. ಆತನನ್ನು ಎಲೆಗಳ ಮಧ್ಯದಿಂದ ನೋಡಿದ ದುಷ್ಟಬುದ್ಧಿಯ ಮನೋಭೀತಿಯನ್ನು ವರ್ಣಿಸಲಾಗುವುದೆ?

ಈ ದಿನ ರಾತ್ರೆ ನನಗೆ ನಿದ್ರೆ ಹತ್ತದಿರಲು ಕಾರಣವೇನು? ಇದೇನಾದರೂ ಅಪಾಯಸೂಚನೆಯೋ? ಅಥವಾ ಈ ದಿನ ನಾನು ಕೈಕೊಂಡ ಕಾರ್ಯಗಳ ಸ್ವಭಾವಜನ್ಯವಾದ ಜ್ಞಾನತಂತುವಿನ ಉದ್ವೇಗವೊ? ಇರಲಿ, ಈ ನಿರ್ಮಲವಾದ ಗಾಳಿಯಲ್ಲಿ ಸ್ವಲ್ಪಹೊತ್ತು ಸಂಚರಿಸುತ್ತಿದ್ದರೆ ನಿದ್ರೆ ಬರಬಹುದು. ಅನಂತರ ಶಯನಗೃಹವಂ ಸೇರಿ ನಿದ್ರೆಗೈವೆನು ಎಂದು ಧನಕೋಟಿಯು ತನಗೆತಾನೇ ಹೇಳಿಕೊಳ್ಳುತ್ತಾ ಬರುತ್ತಿದ್ದನು.

ಮನೋರಮೆಯನ್ನು ಹೊತ್ತುಕೊಂಡು ವನದ್ವಾರವನ್ನು ಸೇರಲು ಹೋಗುತ್ತಿದ್ದ ಕರಾಳನ ಮುಂದುಗಡೆ ಬರುತ್ತಿದ್ದ ಭೀಷಣನನ್ನು ನೋಡಿದ ಕೂಡಲೆ ಕಳ್ಳರು! ಎಂಬ ಧ್ವನಿಯೊಂದು ಧನಕೋಟಿಯು ಬಾಯಿಂದ

ಹೊರಟಿತು. ಎರಡನೇಸಲ ಬಾಯಿಬಿಡುವುದರೊಳಗಾಗಿ ಭೀಷಣನ ಖಡ್ಗವು ಧನಕೋಟಿಯ ಎದೆಯನ್ನು ಹೊಗಲು ಧನಕೋಟಿಗೆ ಪ್ರಪಂಚವೆಲ್ಲವೂ ಶೂನ್ಯವಾಯಿತು.

ಧನಕೋಟಿಯ ಕೂಗನ್ನು ಕೇಳಿದಕೂಡಲೆ ದುಷ್ಟಬುದ್ಧಿಯು ಭೀತಿಯಿಂದ ಬುದ್ಧಿಶೂನ್ಯನಾಗಿ ಹುಚ್ಚು ಹಿಡಿದವನಂತೆ ಭವನದ ಕಡೆಗೆ ಓಡಿದನು. ಮತ್ಯಾವ ಗಲಭೆಯೂ ಉಂಟಾಗದಿರಲು ದುಷ್ಟಬುದ್ಧಿಯು ಬೇರೊಂದು ವಿಧವಾದ ಭೀತಿಯಿಂದ ಕಳವಳಗೊಂಡನು. ಕೂಡಲೇ ತನ್ನ ಯಜಮಾನನಿಗೇನೋ ಅಪಾಯ ಸಂಭವಿಸಿರುವುದೆಂದು ತಿಳಿದು ಧನಕೋಟಿಯು ಸತ್ತುಬಿದ್ದಿದ್ದ ಸ್ಥಳವನ್ನು ಸೇರಲು ಓಡಿಬರುತ್ತಿದ್ದನು. ಕರಾಳನು ಮನೋರಮೆಯನ್ನು ಹೊತ್ತುಕೊಂಡು ವನದ್ವಾರವನ್ನು ಪೊಕ್ಕದ್ದು ದುಷ್ಟಬುದ್ಧಿಯ ಕಣ್ಣಿಗೆ ಬೀಳಲು ಸಂತೋಷಹೃದಯನಾದನು. ಇನ್ನೊಂದು ಹೆಜ್ಜೆಯನ್ನಿಡಲು ಧನಕೋಟಿಯ ಶವವಂ ಕಂಡು ಎಂದೂ ಇಲ್ಲದಿದ್ದ ದುಃಖದಿಂದ ತನ್ನ ಮನಸ್ಸಿನಲ್ಲಿಯೆ ಅಯ್ಯೋ, ಧಣಿಯೇ! ಅನಾಥನಾದ ನನ್ನನ್ನು ಬಾಲ್ಯದಿಂದಲೂ ಸಂರಕ್ಷಿಸಿದವನೇ! ನೀನೆಲ್ಲಿರುವೆ? ನನ್ನ ಹಾಳು ತಂತ್ರವು ನಿನ್ನನ್ನು ಬಲಿಗೊಳ್ಳುವದೆಂದು ಸ್ವಲ್ಪ ಸೂಚನೆಯುಂಟಾಗಿದ್ದರೆ ಇದನ್ನು ಮಾಡುತ್ತಲೇಇರಲಿಲ್ಲವಲ್ಲಾ! ನಿನ್ನನ್ನು ಕೊಲ್ಲಲೆತ್ನಿಸಿದ ಕರಾಳನನ್ನೇ ಆಗಲಿ ಭೀಷಣನನ್ನೇ ಆಗಲಿ ನಾನು ನೋಡಿದ್ದ ಪಕ್ಷದಲ್ಲಿ ತಡೆಯುತ್ತಿದ್ದೆನಲ್ಲಾ!

ತತ್ಕ್ಷಣವೇ ಇನ್ನೊಂದು ಯೋಚನೆಯು ದುಷ್ಟಬುದ್ಧಿಗೆ ಹೊಳೆಯಲು ತನ್ನ ಮನಸ್ಸಿನಲ್ಲಿ ಈ ಸ್ಥಳದಲ್ಲೇ ನಾನಿರಲು ಯಾರಾದರೂ ಕಂಡರೆ ನನ್ನನ್ನೇ ಕೊಲೆಘಾತಕನೆಂದು ಹಿಡಿದುಕೊಂಡು ಹೋಗುವರು ಎಂದು ಯೋಚಿಸಿ ಸುತ್ತಲೂ ಕಿವಿಗೊಟ್ಟು ಕೇಳಿ ಒಂದು ನಿಮಿಷದೊಳಗಾಗಿ ತನ್ನ ಕೊಠಡಿಯನ್ನು ಸೇರಿ ಧಾರೆಧಾರೆಯಾಗಿ ಕಣ್ಣೀರು ಸುರಿಸುತ್ತಾ ಅಳುತ್ತಲಿದ್ದನು. ಮತ್ತೆರಡುಮೂರು ನಿಮಿಷಗಳಲ್ಲಿಯೇ ಮತ್ತೊಂದು ಯೋಚನೆಯು ಹೊಳೆಯಲು, ಕೊಠಡಿಯನ್ನು ಬಿಟ್ಟು ಧನಕೋಟಿಯ ಶವದ ಬಳಿಗೈದಿ ಆ ಸಾಹುಕಾರನು ಯಾವಾಗಲೂ ತನ್ನ ಕವಚದಲ್ಲಿ ಜೋಪಾನವಾಗಿ ಇರಿಸಿಕೊಳ್ಳುತ್ತಿದ್ದ ಬೀಗದ ಕೈಗಳನ್ನು ತನ್ನ ಧಣಿಯ ಕವಚದಿಂದ ತೆಗೆದು

ಕೊಂಡು ಓಡಿಹೋಗಿ ತನ್ನೊಡೆಯನ ಶಯನಗೃಹವಂ ಪ್ರೊಕ್ಕು ಅಲ್ಲಿದ್ದ ಒಂದಾನೊಂದು ಪೆಟ್ಟಿಗೆಯಂ ತೆರೆದು ಧನಕೋಟಿಯ ರಹಸ್ಯವಾದ ಕಾಗದ ಪತ್ರಗಳನ್ನು ಹುಡುಕಿ ತನಗೆ ಬೇಕಾಗಿರುವ ಎರಡು ಲಕೋಟೆಗಳನ್ನು ತೆಗೆದ್ಕು ಕೊಂಡು ಪೆಟ್ಟಿಗೆಯನ್ನು ಬೀಗಹಾಕಿ ಆ ಗೃಹವನ್ನು ಬಿಟ್ಟು ಹೊರಟನು.

ಆ ಎರಡು ಲಕ್ಕೋಟೆಗಳ ಮೇಲೆಯೂ ಒಂದೇ ವಿಳಾಸವು ಬರೆಯಲ್ಪಟ್ಟಿತ್ತು. ಆ ವಿಳಾಸವು ಹೀಗಿತ್ತು ;—ನನ್ನ ಅವಸಾನಾನಂತರ ನನ್ನ ಹೆಸರು ಕೆತ್ತಲ್ಪಟ್ಟಿರುವ ಎಲ್ಲಾ ಭಾಗಗಳಲ್ಲಿಯೂ ಒಂದೇ ವಿಧವಾದ ಎರಡು ಉಂಗುರಗಳಲ್ಲಿ ಒಂದೊಂದನ್ನು ಪ್ರತ್ಯೇಕವಾಗಿ ತೋರಿಸುವ ಚೇರದೇಶಸ್ಥನಾದ ಓರ್ವ ಯವ್ವನಪುರುಷನಿಗೂ, ಕೇರಳದೇಶಸ್ಥಳಾದ ಓರ್ವ ಯುವತಿಗೂ ಕೊಡುವುದು.

ಭವನದಲ್ಲೆಲ್ಲಿಯೂ ನಿಶ್ಶಬ್ದವಾಗಿದ್ದರೂ ದುಷ್ಟಬುದ್ಧಿಯು ಲಕೋಟೆಗಳನ್ನು ಒಡೆದುನೋಡಿ ಲಕ್ಷ್ಮೀನಿಲಯವನ್ನು ಪ್ರವೇಶಿಸುವ ರಹಸ್ಯವಾದ ಮಾರ್ಗವನ್ನು ಯಾತಕ್ಕೆ ತಿಳಿದುಕೊಳ್ಳಬಾರದಾಗಿತ್ತು. ಕೆಟ್ಟಕೆಲಸವನ್ನು ಮಾಡುವ ದುಷ್ಟರಿಗೆ ಯಾರು ನೋಡುವರೊ, ಯಾರು ಎಚ್ಚರವಾಗಿ ಹೊಂಚಿಕಾದುಕೊಂಡಿರುವರೊ ಎಂಬ ದಿಗಿಲು ಇರುವುದಲ್ಲವೆ? ಆದುದರಿಂದಲೆ ದುಷ್ಟಬುದ್ಧಿಯು ಲಕ್ಕೋಟೆಯನ್ನು ಒಡೆಯದೆ ಶೀಘ್ರವಾಗಿ ಧನಕೋಟಿಯ ಕವಚದಲ್ಲಿ ಬೀಗದಕೈಗಳನ್ನು ಯಥಾಸ್ಥಾನದಲ್ಲಿಟ್ಟು ಒಂದು ಮಮಟಿಯನ್ನು ತೆಗೆದುಕೊಂಡು ಬಂದು ಪುಷ್ಪವಾಟಿಕೆಯ ಒಂದು ಮೂಲೆಯಲ್ಲಿ ಹಳ್ಳವನ್ನಗೆದು ಎರಡು ಲಕೋಟೆಗಳನ್ನೂ ಹೂತಿಟ್ಟು ಆ ಸ್ಥಳದಲ್ಲಿ ಕೆಲವು ಹೂಗಿಡಗಳನ್ನು ನೆಟ್ಟು ತೋಟಗಾರನ ದೃಷ್ಟಿಗೆ ಏನೂ ತೋರದಂತಿರುವಂತೆ ನೆಲವನ್ನು ಸರಿಮಾಡಿ ತನ್ನ ಕೊಠಡಿಯನ್ನು . ಸೇರಲು ಹೋಗುತ್ತಿದ್ದನು. ಭವನದ ಬಳಿಯನ್ನೈದುವಷ್ಟರಲ್ಲಿಯೇ ಭವನದ ಮಧ್ಯದ್ವಾರವು ತೆರೆಯಲ್ಪಟ್ಟು ಮೂವರು ಪ್ರವೇಶಿಸಿದರು. ಇವರನ್ನು ನೋಡಿದಕೂಡಲೆ ದುಷ್ಟಬುದ್ಧಿಯು ದಿಗ್ಭ್ರಾಂತನಾಗಿ ತೋಟದ ಕಡೆಗೆ ತಿರುಗಿ ಓಡಲಾರಂಭಿಸಿದನು. ಆವರು ಮೂವರು ದುಷ್ಟಬುದ್ಧಿಯನ್ನು ಹಿಂಬಾಲಿಸಿ ಹಿಡಿದರು.

ದುಷ್ಟಬುದ್ಧಿಯೆಂದು ತಿಳಿದ ಪ್ರತಾಪಕಂಠೀರವನು—ಈ ನಿಶಿರಾತ್ರೆಯಲ್ಲಿ ಇಲ್ಲಿ ಏನು ಮಾಡುತ್ತಿರುವೆ? ನಮ್ಮನ್ನು ನೋಡಿ ಯಾತಕ್ಕೆ ಓಡಿ

ಹೋದೆ? ನೀನು ಹಾಗೆ ದಿಗಿಲುಪಡಲು ಕಾರಣವೇನು? ಅರ್ಧಘಂಟೆಗೆ ಮುಂಚೆ ಉಂಟಾದ ಧ್ವನಿಯಾವುದು?

ಅಷ್ಟರಲ್ಲಿಯೇ ದುಷ್ಟಬುದ್ಧಿಯನ್ನು ಹಿಡಿದಿದ್ದ ಸಿಂಹಬಲನು ಅವನ ಗುರುತನ್ನು ತಿಳಿದಮೇಲೆ ತನ್ನ ಹಿಡಿತವನ್ನು ಬಿಟ್ಟು ಒಡನೆಯೇ ಕೈ ತ್ಯಾವವಾದಂತೆ ತೋರಲು, ಕೈಯನ್ನೆತ್ತಿ ಚಂದ್ರಕಾಂತಿಯಲ್ಲಿ ನೋಡಿ—ಇದೂ ರಕ್ತವು!

ಪ್ರತಾ—ರಕ್ತ?

ಅನಂತರ ಯಾರಾದರೂ ದುಷ್ಟಬುದ್ಧಿಯನ್ನು ಹೊಡೆದು ಘಾಯ ಪಡಿಸಿದರೋ ಹೇಗೋ ಎಂದು ಕನಿಕರಗೊಂಡು ಪ್ರತಾಪಕಂಠೀರವನು ವಿಚಾರಿಸುತ್ತಿರುವಷ್ಟರಲ್ಲಿ ನೆಲದಮೇಲೆ ಬಿದ್ದಿರುವ ಮನುಷ್ಯಾಕಾರವೊಂದು ಸಿಂಹಬಲನ ದೃಷ್ಟಿಗೆ ಬಿತ್ತು. ಹತ್ತಿರಕ್ಕೆ ಹೋಗಿ ನೋಡಲು ಕೊಲೆಗೀಡಾಗಿ ಗತಪ್ರಾಣನಾದ ಧನಕೋಟಿಯ ಕಳೇಬರವೆಂದು ವ್ಯಕ್ತವಾಯಿತು. ಈ ಕ್ರೂರಕೃತ್ಯಕ್ಕೆ ಹೇಗಾದರೂ ದುಷ್ಟಬುದ್ಧಿಯು ಸಹಾಯಪರನಾಗಿರಬಹುದೆಂದು ಸಿಂಹಬಲನಿಗೆ ಅನುಮಾನ ಹುಟ್ಟಿತು. ಅದಕ್ಕನುಸಾರವಾಗಿ ದುಷ್ಟಬುದ್ಧಿಯನ್ನು ವಿಚಾರಿಸಲು ಆ ನೀಚನು ಬಿಕ್ಕಿಬಿಕ್ಕಿ ಅಳುತ್ತಾ ಗದ್ಗದಸ್ವರದಿಂದ ಮಾತನಾಡಲುಪಕ್ರಮಿಸಿ ತಾನು ಭವನದ ಮೇಲಂತಸ್ತಿನಲ್ಲಿರುವ ತನ್ನ ಕೊಠಡಿಯಲ್ಲಿ ನಿದ್ರಿಸುತ್ತಿರಲು ಒಂದು ಕೆಟ್ಟ ಕನಸನ್ನು ಕಂಡು ಕಣ್ಣು ಬಿಟ್ಟೆನೆಂತಲೂ, ಆ ಸಮಯದಲ್ಲಿ ಉದ್ಯಾನವನದಿಂದ ಭಯಸೂಚಕ ಧ್ವನಿಯೊಂದು ಕೇಳಬಂದಿತೆಂದೂ, ಅದಕ್ಕೆ ಕಾರಣವೇನಿರಬಹುದೆಂದು ಸ್ವಲ್ಪ ಹೊತ್ತು ಯೋಚಿಸಿ ಯಾವದೊಂದೂ ಬಗೆಹರಿಯದೆ ಭವನದಿಂದ ಇಳಿದು ಬಂದು ವನವನ್ನು ಹೊಕ್ಕು ಧ್ವನಿಬಂದ ದಿಕ್ಕನ್ನು ಅನುಸರಿಸಿ ಮೆಲ್ಲಮೆಲ್ಲನೆ ಅಡಿಯಿಟ್ಟುಕೊಂಡು ಹೋಗುತ್ತಾ, ಸುತ್ತಮುತ್ತಲು ನೋಡುತ್ತಾ, ಅಲ್ಲಲ್ಲಿಗೆ ನಿಂತುಕೊಳ್ಳುತ್ತಾ ಬರುತ್ತಿರುವಲ್ಲಿ ಕಾಲಿಗೆ ಏನೋ ಎಡವಿದಂತಾಗಲು ತಟಕ್ಕನೆ ಆ ಸ್ಥಳದಲ್ಲಿಯೇ ನಿಂತುಬಿಟ್ಟೆನೆಂತಲೂ, ಚಂದ್ರನನ್ನು ಆವರಿಸಿದ್ದ ಮೋಡವು ಆಗತಾನೆ ಚಂದ್ರನನ್ನು ಬಿಟ್ಟು ಮುಂದುವರಿದು ಚಂದ್ರಕಾಂತಿಯು ಹೊಳೆಯಲು ಎಡವಿದ ವಸ್ತುವು ಧನಕೋಟಿಯ ಕಳೇಬರವೆಂದು ಕಣ್ಣಿಗೆ ಬಿದ್ದಿತೆಂದೂ, ಆ ಕ್ಷಣವೇ ಮೂರ್ಛಿತನಾಗಿ ಸ್ವಲ್ಪಹೊತ್ತಿನಮೇಲೆ ಚೇತರಿಸಿ

ಕೊಂಡು ಬಹುವಿಧವಾಗಿ ದುಃಖಿಸಿ ಯಜಮಾನನ ಮರಣವಾರ್ತೆಯನ್ನು ತಿಳಿಸಬೇಕೆಂದು ಭವನದ ಕಡೆಗೆ ಬರುತ್ತಿದ್ದನೆಂತಲೂ, ಅಷ್ಟರಲ್ಲಿಯೇ ತನಗೆದುರಾಗಿ ಜನರು ಬರುತ್ತಿರುವುದನ್ನು ಕಂಡು ತನ್ನಮೇಲೇನಾದರೂ ಅನುಮಾನ ಹುಟ್ಟೀತೆಂಬ ಭ್ರಾಂತಿಯಿಂದ ಬುದ್ಧಿಶೂನ್ಯನಾಗಿ ಪಲಾಯನಂಗೈಯ್ಯಲಾರಂಭಿಸಿದನೆಂತಲೂ, ತಾನು ನಿರಪರಾಧಿಯೆಂತಲೂ—ಹೇಳಿ ಸುಳ್ಳನ್ನು ಮರಸಿದನೇ ಹೊರತು ನಿಜವನ್ನು ಮಾತ್ರ ಹೊರಪಡಿಸಲಿಲ್ಲ.

ಇದನ್ನೆಲ್ಲಾ ಕೇಳಿ ಪರ್ಯಾಲೋಚಿಸಲಾಗಿ ರಾಜನ ಮನಸ್ಸಿನಲ್ಲಿಯೂ ವೀರಬಾಹುವಿನ ಮನಸ್ಸಿನಲ್ಲಿಯೂ ಸಿಂಹಬಲನಿಗೆ ಇದ್ದಂತೆಯೇ ಅನುಮಾನವು ಮೊಳಕೆದೋರಿತು.

ನಂತರ ಕೊತ್ತವಾಲ, ತಳವಾರರನ್ನು ಕರೆದುಕೊಂಡು ಬರಲು ವೀರಬಾಹುವು ಕಳುಹಿಸಲ್ಪಟ್ಟನು. ದುಷ್ಟಬುದ್ಧಿಯನ್ನು ಎಳದುಕೊಂಡು ಸಿಂಹಬಲನು ಭವನಕ್ಕೆ ಹೋಗುತ್ತಿದ್ದನು. ರಾಜನಾದರೊ ಭವನವನ್ನು ಹೊಕ್ಕು ಭವನಾಧಿಪತಿಯ ಮರಣವಾರ್ತೆಯನ್ನು ತಿಳಿಸಲು ಭವನವೆಲ್ಲಾ ಗೋಳಿನಿಂದ ತುಂಬಿ ತುಳುಕಾಡುತ್ತಲಿತ್ತು. ಈ ದುಃಖಸಮಾಚಾರವನ್ನು ಮನೋರಮೆಗೆ ಅರಿಕೆಗೈಯ್ಯುವಂತೆ ದಾಸಿಯೋರ್ವಳು ಆಜ್ಞಾಪಿಸಲ್ಪಟ್ಟಳು.

ಸ್ವಲ್ಪಹೊತ್ತಿನಲ್ಲಿಯೇ ಕೊತ್ತವಾಲ, ತಳವಾರರನ್ನು ಕರೆದುಕೊಂಡು ವೀರಬಾಹುವು ಬಂದುಸೇರಿದನು. ಅವರು ದುಷ್ಟಬುದ್ಧಿಯನ್ನು ವಿಚಾರಿಸುತ್ತಿರುವಷ್ಟರಲ್ಲಿ ಮನೋರಮೆಯು ಮಾಯವಾಗಿರುವಳೆಂದು ದಾಸಿಯು ಓಡಿಬಂದು ಮೊರೆಯಿಟ್ಟಳು. ಕೂಡಲೆ ದುಷ್ಟಬುದ್ಧಿಯನ್ನು ಕೆಲವುಜನ ತಳವಾರರ ಪಹರೆಗೊಳಪಡಿಸಿ ಉಳಿದವರನ್ನು ಕರೆದುಕೊಂಡು ಪ್ರತಾಪಕಂಠೀರವಾದಿಗಳೊಡನೆ ಕೊತ್ತವಾಲನು ಮನೋರಮೆಯ ಶಯನಗೃಹವಂ ಹೊಕ್ಕನು. ಮನೋರಮೆಯ ದಾದಿಯರನ್ನು ಎಚ್ಚರಗೊಳಿಸಿ ವಿಚಾರಿಸಲು ಯಾವುದೊಂದು ಸೂಚನೆಯೂ ದೊರೆಯಲಿಲ್ಲ. ದಾದಿಯರು ಒಡತಿಗಾಗಿ ದುಃಖಿಸಲಾರಂಭಿಸಿದರು. ಶಯನಗೃಹವನ್ನೆಲ್ಲಾ ಸ್ವಲ್ಪವೂ ಬಿಡದೆ ಶೋಧಿಸಲು ಒಂದೊಂದುಕಡೆ ಚಲ್ಲಿ ಆರಿಹೋದ ಸೊಕ್ಕು ದ್ರಾವಕದ ಸೊಂಕು ಕಾಣಬಂದಿತು. ಉದ್ಯಾನವನದ ಕಡೆಗೆ ಇರುವ ಬಾಗಿಲು ಕಳಚಿ ಮತ್ತೆ ಯಥಾಸ್ಥಾನದಲ್ಲಿ ಇರಿಸಲ್ಪಟ್ಟಿತ್ತೆಂಬ ಅಂಶವು ಕಂಡುಹಿಡಿಯಲ್ಪಟ್ಟಿತು.

ಈ ಕಾರಣಗಳಿಂದ ಹಲವರು ಚೋರರು ಬಂದು ಕಳವು ನಡೆಸಿದರೆಂದು ನಿರ್ಧರಿಸಲ್ಪಟ್ಟಿತು. ಕೊನೆಗೆ ಕೊತ್ತವಾಲನು ಭವನವನ್ನೆಲ್ಲಾ ಶೋಧನೆ ಮಾಡಿಸಿ, ಉದ್ಯಾನವನದಲ್ಲಿ ರಾಜನೆದುರಿಗೆ ದುಷ್ಟಬುದ್ಧಿಯು ಹೇಳಿದ ವಾಂಗ್ಮೂಲವನ್ನು ಬರೆದುಕೊಂಡು ದುಷ್ಟಬುದ್ಧಿಯನ್ನು ಪಹರೆಯೊಡನೆ ನ್ಯಾಯಸ್ಥಾನಕ್ಕೆ ಕರೆದುಕೊಂಡು ಹೋದನು.

ಪ್ರತಾಪಕಂಠೀರವನಾದರೊ ಅಪಾರವಾದ ದುಃಖದಿಂದ ತೊಳಲಿ ಬಳಲಿ ಕಡೆಗೆ ಧೈರ್ಯವನ್ನವಲಂಬಿಸಿ ಮನೋರಮೆಯನ್ನು ಹುಡುಕಲು ನಾಲ್ಕಾಕಡೆಗೂ ತುರಗಾರೂಢರನ್ನು ಕಳುಹಿಸಿ ತಾನೂ ಕುದುರೆಯನ್ನೇರಿ ವೇಗವಾಗಿ ಹೋಗುತ್ತಿದ್ದನು.

* * * *

ಇತ್ತಲಾ ಪ್ರಾತಃಕಾಲ ಸಮಯದಲ್ಲಿ ಹತ್ತಾರು ರಥಗಳು ಒಂದಾನೊಂದು ಗೊಂಡಾರಣ್ಯಮಾರ್ಗವನ್ನು ಹಿಡಿದು ಅನೇಕಮಂದಿ ಅಶ್ವಾರೂಢರ ರಕ್ಷಣೆಯಿಂದ ಹೋಗುತ್ತಿದ್ದವು.

ಆಗ ನಕ್ಷತ್ರಗಳ ಕಿಂಚಿತ್ ಬೆಳಕು ಮಾಡಲಾರಂಭಿಸಿತು. ಹೊಗೆ ಬಣ್ಣವು ಪೂರ್ವದಿಕ್ಕಿನಲ್ಲಿ ಉದ್ಭವಿಸಿ ಮುಂದುವರಿದು ಆಕಾಶವನ್ನು ಆಕ್ರಮಿಸುತ್ತಲಿತ್ತು. ಅಲ್ಲಲ್ಲಿ ನಿದ್ರೆಯಿಂದ ತಿಳಿದೆದ್ದ ಅಲ್ಪಸ್ವಲ್ಪ ಪಕ್ಷಿಗಳ ಕಲಕಲ ರವವು ಮನೋಹ್ಲಾದಕರವಾಗಿತ್ತು. ತಂಗಾಳಿಯು ಪುಷ್ಪಪರಿಮಳವನ್ನು ಹೊತ್ತುಕೊಂಡು ಮಂದವಾಗಿ ಬೀಸುತ್ತಾ ಸ್ಪರ್ಶದಿಂದ ಸುಖವನ್ನೀಯುತ್ತಲಿತ್ತು.

ಈ ತಂಗಾಳಿಯ ದೆಸೆಯಿಂದ ರಥಗಳ ಗುಂಪಿನ ಮಧ್ಯದಲ್ಲಿ ದಿವ್ಯವಾದ ಒಂದು ರಥದಲ್ಲಿ ಮನೋರಮೆಯು ಕರಾಳಪ್ರಯೋಗ ಪ್ರಜ್ಞಾಶೂನ್ಯವು ತೊಲಗಲು ನಿದ್ರೆತಿಳಿದವಳಂತೆ ಕಣ್ತೆರೆದಳು. ಸುತ್ತಲೂ ನೋಡಲು ನಾಲ್ಕು ಕಡೆಗಳಲ್ಲೂ ಪರದೆಗಳಿದ್ದವು. ಆಕಡೆ ಈಕಡೆ ಹುಡುಕಲು ದಾದಿಯರು ಕಾಣಲಿಲ್ಲ. ರಥವಾದರೊ ವೇಗವಾಗಿ ಹರಿಯುತ್ತಲಿತ್ತು. ಇಂತಹ ತನ್ನ ಸ್ಥಿತಿಯನ್ನು ಕಂಡು ಮನೋರಮೆಯು ಬುದ್ಧಿಶೂನ್ಯಳಾಗಿ ಮೂರ್ಛಿತಳಾದಳು. ಸ್ವಲ್ಪಹೊತ್ತಿನಲ್ಲಿಯೇ ಎಚ್ಚರವಾಗಲು ಧೈರ್ಯವನ್ನವಲಂಬಿಸಿ ಒಂದು ಪಾರ್ಶ್ವದ ಪರದೆಯನ್ನು ತಳ್ಳಿ ಇಣಿಕಿನೋಡಿ ಸುತ್ತಮುತ್ತಲು

ರಥಗಳೂ ಅಶ್ವಾರೂಢರೂ ಬಳಸಿ ಬರುತ್ತಿರುವುದನ್ನು ಕಂಡು ಕೈಯನ್ನು ಒಳಕ್ಕೆ ಎಳೆದುಕೊಂಡು ನಾನಾ ಬಗೆಯಾಗಿ ಯೋಚಿಸತೊಡಗಿದಳು—"ಆಹಾ! ನನ್ನ ರೂಪುಲಾವಣ್ಯಾದಿಗಳನ್ನು ನೋಡಿ ಧನದಾಶೆಯಿಂದ ಧನಕೋಟಿಯು ನನ್ನನ್ನು ಯಾರಿಗಾದರೂ ವಿಕ್ರಯಿಸಿರುವನೋ? ಆತನಿಗೆ ಅಮಿತವಾದ ಧನವಿರುವುದು. ನಮ್ಮ ತಾತನ ಪರಮಮಿತ್ರನು. ವೃದ್ಧಾಪ್ಯಸ್ಥಿತಿಯಲ್ಲಿ ಬಹುಕಾಲ ಕಳೆದು ಮರಣವನ್ನೆದುರು ನೋಡುತ್ತಿರುವನು. ಅಂತಹ ಲೋಕಪ್ರಸಿದ್ಧವಾದ ಸದ್ಗುಣ ಸ್ವಭಾವವುಳ್ಳವನು ಇಂತಹ ನೀಚಕಾರ್ಯಕೆ ಮನಗೊಡುವನೆಂದರೆ ಲೋಕದಲ್ಲಿ ಸತ್ಯವೆನ್ನುವದೇ ತೊಡೆದುಹೋಗಿರಬೇಕು. ಇದು ಧನಕೋಟಿಯಿಂದಾದ ಕಾರ್ಯವಲ್ಲ. ಪ್ರತಾಪಕಂಠೀರವನೇನಾದರೂ ಬೌದ್ಧಮತವನ್ನು ತ್ಯಜಿಸಲಾರದೆ ಕೃತ್ರಿಮದಿಂದ ನನ್ನನ್ನು ಅಪಹರಿಸಿಕೊಂಡು ಹೋಗುತ್ತಿರುವನೋ ಮೋಹಕ್ಕೊಳಗಾಗಿ ಧರ್ಮಮಾರ್ಗವನ್ನು ತ್ಯಜಿಸು ವವನು ಮಾನಶಾಲಿಯೆನಿಸಿ ನೀತಿಪರನಾಗಿರುವುದಿಲ್ಲ. ಆತನ ರಾಜ್ಯದಲ್ಲಿ ಪ್ರಜೆಗಳೂ ಅಧಿಕಾರಿಗಳೂ ಮಾನಶಾಲಿಗಳೆಂದೂ ಎಲ್ಲೆಲ್ಲಿಯೂ ಪ್ರಸಿದ್ಧ ವಾಗಿರುವುದು. ರಾಜನಲ್ಲಿಯೂ ಈ ಗುಣಗಳಿರಬೇಕು. ಇದು ಪ್ರತಾಪ ಕಂಠೀರವನ ಕಾರ್ಯವಲ್ಲ. ಆಗಲಿ! ಈ ಅಶ್ವರೂಢರ ಉಡುಪನ್ನು ನೋಡಿ ಇವರು ಯಾರ ಕಡೆಯವರೆಂದು ತಿಳಿಯುವೆನು" ಎಂದು ಎರಡನೇ ಸಲ ಪರದೆಯನ್ನು ತಳ್ಳಿ ಇಣಕಿ ನೋಡಲು ತಕ್ಷಣವೇ ಶುಂಡಾಲನೈತಂದು "ಸುಂದರೀ ರತ್ನವೆ! ಏನು ಬಯಸುವೆ?" ಎಂದು ಕೇಳಿದನು.

ಮನೋರಮೆಯು ಅವನನ್ನು ಚನ್ನಾಗಿ ದೃಷ್ಟಿಸಿ ನೋಡಿ ಆತುರ ಮನಸ್ಸುಳ್ಳವಳಾಗಿ "ನೀನ್ಯಾರು? ನಿನ್ನ ಹೆಸರೇನು? ಈ ರಥಗಳಲ್ಲಿರುವವ ರ್‍ಯಾರು? ಇದೆಲ್ಲಾ ಎಲ್ಲಿಗೆ ಹೋಗುವುದು? ನಾನಿಲ್ಲಿರುವುದಕ್ಕೆ ಕಾರಣವೇನು?" ಎಂದು ಒಂದೇಸಲ ಇಷ್ಟು ಪ್ರಶ್ನೆಗಳನ್ನೂ ಕೇಳಲು; ಶುಂಡಾಲನು ಸಮಾಧಾನ ಮನಸ್ಸುಳ್ಳವನಾಗಿ "ನಾನು ಸಿಂಹಳ ದೇಶಸ್ಥನು. ನನ್ನ ಹೆಸರು ಶುಂಡಾಲಬೌದ್ಧನು. ಈ ರಥಗಳಲ್ಲಿರುವವರು ನಿನ್ನಂತಹ ಸುಂದರ ಸ್ತ್ರೀಯರು. ಈ ಅಶ್ವಾರೂಢರು ನನ್ನ ಕಡೆಯವರು. ಇವರನ್ನು ನಿಮ್ಮ ರಕ್ಷಣೆಗಾಗಿ ಇಟ್ಟಿರುವೆನು. ಇದೆಲ್ಲಾ ಸಿಂಹಳ ರಾಜಧಾನಿಗೆ ಹೋಗುವುದು. ನಿನ್ನ ಅಣ್ಣಂದರಿಬ್ಬರು ಧನಕೋಟಿಯ ಸೇವಕನೋರ್ವನ ಮೂಲಕ ನಿನ್ನನ್ನು

ನನಗೆ ವಿಕ್ರಯ ಮಾಡಿ ಧನವನ್ನು ಪಡೆದುಕೊಂಡಿರುವುದು. ಇದೇ ನೀನಿಲ್ಲಿರುವುದಕ್ಕೆ ಕಾರಣವು" ಎಂದು ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರ ವಿತ್ತನು.

ಇದನ್ನು ಕೇಳಿ ಸೂಚಿತವಾದ ಅಭಿಪ್ರಾಯವು ಹೊಳಿಯಲು ಆ ಕ್ಷಣವೇ ಬೇರು ಕಡಿದ ಬಾಳೇ ಗಿಡದಂತೆ ಮನೋರಮೆಯು ದೊಪ್ಪನೆ ರಥದಲ್ಲಿಯೇ ಬಿದ್ದು ಮೂರ್ಛಿತಳಾದಳು. ಕೂಡಲೇ ಶುಂಡಾಲನು ಓರ್ವ ಪರಿಚಾರಿಣಿ ಯಿಂದ ಶೈತ್ಯೋಪಚಾರವನ್ನು ಮಾಡಿಸಿದನು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರವಾಗಲು ತನ್ನಲ್ಲಿ ತಾನು "ಹಾ! ಶುಕವಾಣಿ! ಎಲ್ಲಿರುವೆ? ನಿನ್ನ ಅವಸಾನ ಕಾಲದಲ್ಲಿ 'ಎಚ್ಚರಿಕೆ-ಎಚ್ಚರಿಕೆ-ದುಷ್ಟಬುದ್ಧಿ-ದುಷ್ಟಬುದ್ಧಿ' ಎಂದು ಬಹು ಪ್ರಯಾಸದಿಂದ ಬಾಯಿಬಿಟ್ಟು ಹೇಳಿದ ನಿನ್ನ ಮಾತುಗಳನ್ನು ಲಕ್ಷ್ಯಕ್ಕೆ ತಾರದೆ ಹೋದೆನಲ್ಲಾ! ದುಷ್ಟಬುದ್ಧಿಯು ಗುಣಶಾಲಿಯೆಂದು ತಿಳಿದಿದ್ದೆನಲ್ಲಾ! ದುರ್ಗುಣ ಸ್ವಭಾವವುಳ್ಳವನಾಗಿದ್ದರೆ ಧನಕೋಟಿಯು ತನ್ನಲ್ಲಿರಿಸಲಾರನೆಂದು ಯೋಚಿಸಿದೆನಲ್ಲಾ! ಈಗಲೀಗ ನೀನೆಚ್ಚರಿಸಿದ ಮಾತುಗಳಲ್ಲಿ ಉದಾಸೀನವಿಟ್ಟುದಕ್ಕೆ ತಕ್ಕ ಫಲ ಪ್ರಾಪ್ತಿಯಾಯಿತು. ನನ್ನ ಅಣ್ಣಂದಿರು ನನ್ನನ್ನು ಮಾರಿದರಂತೆ! ನನಗೆ ಅಣ್ಣಂದಿರು ಅಂದರೇನು? ಇದೆಲ್ಲಾ ದುಷ್ಟಬುದ್ಧಿಯ ಕೃತ್ರಿಮವೇ ಸರಿ" ಎಂದು ದುಃಖಿಸುತ್ತಿದ್ದಳು.

ಶುಂಡಾಲನು ನಮ್ಮ ಕಥಾನಾಯಕಿಯನ್ನು ಸಮಾಧಾನಪಡಿಸಲೆತ್ನಿಸಿ ಆಕೆಯನ್ನು ಕುರಿತು "ಎಲೈ, ಸುಂದರೀ ರತ್ನವೆ! ನಾನು ಬಹಳ ದಿನಗಳಿಂದ ಗುಲಾಮು ವ್ಯಾಪಾರ ಮಾಡುತ್ತಿರುವೆನು. ನನ್ನಂತೆಯೆ ಇನ್ನೂ ಅನೇಕ ಗುಲಾಮು ವ್ಯಾಪಾರಿಗಳಿರುವರು. ನಾವೆಲ್ಲರೂ ನಾನಾ ಪ್ರದೇಶಗಳಲ್ಲಿ ಸುತ್ತಿ ಸುಂದರ ಸ್ತ್ರೀಯರನ್ನು ವಿಕ್ರಯದಿಂದ ಪಡೆದು ಕರೆದುಕೊಂಡು ಹೋಗಿ ರಾಜಮಾತೆಗೆ ಪ್ರತಿ ಸಂವತ್ಸರವೂ ಒಂದುಸಲ ಒಪ್ಪಿಸುವ ಪದ್ಧತಿಯುಂಟು. ಆಕೆಯು ಅರಮನೆಯಲ್ಲಿ ನೆರೆದ ಈ ಸ್ತ್ರೀ ಸಮೂಹದಲ್ಲಿ ರೂಪಲಾವಣ್ಯಾದಿ ಗಳಲ್ಲಿ ಉಳಿದವರಿಗಿಂತಲೂ ಶ್ರೇಷ್ಠಳೆನಿಸಿದ ಓರ್ವ ಸ್ತ್ರೀರತ್ನವನ್ನು ಆರಿಸಿ ತೆಗೆದು ತನ್ನ ಸೊಸೆಯರ ಗುಂಪಿಗೆ ಸೇರಿಸುವಳು. ಈ ಪದವಿಯನ್ನು ಪಡೆದ ಅನೇಕ ಸ್ತ್ರೀಯರನ್ನು ನೋಡಿರುವೆನು. ಆದರೆ ನಿನ್ನ ಸಮಾನ ರೂಪ ಲಾವಣ್ಯಾದಿಗಳನ್ನುಳ್ಳ ಸ್ತ್ರೀಶಿರೋಮಣಿಯನ್ನು ಇದುವರೆಗೂ ಕಂಡರಿಯೆನು.

ಆದ್ದರಿಂದ ನೀನೆ ಈ ಸಲ ಸಿಂಹಳೇಶನ ಅಂತಃಪುರ ಪ್ರವೇಶಕ್ಕೆ ಯೋಗ್ಯೆ ಳೆಂಬುವುದರಲ್ಲಿ ಸಂದೇಹವಿಲ್ಲ. ಇಂತಹ ಶ್ರೇಷ್ಠ ಪದವಿಯು ನಿನಗೆ ಪ್ರಾಪ್ತಿಸುವ ಸಂಭವವಿರುವುದರಿಂದ ಸಂತೋಷಹೃದಯಳಾಗಿರು. ದುಃಖಿಸ ಬೇಡ" ಎಂದು ಹೇಳಿದ ಮಾತುಗಳು ಮನೋರಮೆಗೆ ಕರ್ಣಕಠೋರ ವಾಗಿದ್ದರೂ ಮುಂದೆ ತನ್ನ ಕನ್ನಿಕಾವಸ್ಥೆಗೆ ಸಂಭವಿಸುವ ವ್ರತಭಂಗವನ್ನು ಚಿಂತಿಸಿ ಯಾವ ಉಪಾಯದಿಂದಲಾದರೂ ತಪ್ಪಿಸಿಕೊಂಡು ಹೋಗಬೇಕೆಂದು ಅವಳು ಧೈರ್ಯವನ್ನವಲಂಭಿಸಿ ಶುಂಡಾಲನನ್ನು ನೋಡಿ "ನಾನು ಯಾರೆಂದು ತಿಳಿದಿರುವೆ?" ಎಂದು ಗದರಿಸಲು ಅವನು "ನೀನು ಧನಕೋಟಿಯ ಪರಿಚಾರಿಣಿಯರಲ್ಲಿ ಒಬ್ಬಳೆಂದೇ ತಿಳಿದಿರುವೆನು" ಎಂದು ಉತ್ತರವೀಯಲು, ಮನೋರಮೆಯು ಕೋಪಾವಿಷ್ಟಳಾಗಿ "ನಾನು ಕೇರಳಾಧಿಪಳಾದ ಮನೋ ರಮೆಯೆಂದು ನಿನಗೆ ತಿಳಿಯದೊ? ಈ ರೀತಿ ಮರ್ಯಾದೆ ತಪ್ಪಿ ಮಾತನಾಡಿದರೆ ನಿನಗೆ ತಕ್ಕ ಶಿಕ್ಷೆಯನ್ನು ಮಾಡಿಸುವೆನು" ಎಂದು ಗರ್ಜಿಸಲು, ಅವನು "ನಿನ್ನ ಹೆಸರು 'ಮನೋರಮೆ' ಎಂದಿರುವುದರಿಂದಲೂ, ನೀನು ಬಹು ರೂಪವತಿಯಾಗಿರುವುದರಿಂದಲೂ ಕೇರಳಾಧಿಪಳಾದ ಮನೋರಮೆಗೆ ಸಮಾನ ಳೆಂದು ಉನ್ಮತ್ತಳಂತೆ ಹೇಳಿಕೊಳ್ಳುವ ನಿನ್ನ ಸ್ವಭಾವವನ್ನು ದುಷ್ಟಬುದ್ಧಿಯು ನನಗೆ ಮೊದಲೇ ತಿಳಿಸಿರುವನು. ಮುಂದೆ ಸಿಂಹಳೇಶನಿಗೆ ನೀನು ಪ್ರೀತಿ ಪಾತ್ರಳಾಗಿ ನನಗೆ ಕೇಡೆಣಿಸಲೆತ್ನಿಸಿದರೆ ನನ್ನನ್ನು ಕಾಪಾಡಲು ರಾಜಮಾತೆಯು ಇದ್ದೇ ಇರುವಳು. ಇದಲ್ಲದೆ ನಿನ್ನಂತಹ ಅಶದೃಶಳಾದ ಸ್ತ್ರೀರತ್ನವನ್ನು ಒದಗಿಸಿಕೊಟ್ಟ ನನ್ನಲ್ಲಿ ನಮ್ಮ ರಾಜನು ಕೃತಘ್ನನಾಗಿ ನನ್ನನ್ನು ಶಿಕ್ಷೆಗೆ ಗುರಿಮಾಡಲಾರನು" ಎಂಬ ಪ್ರತ್ಯುತ್ತರವನ್ನು ಕೇಳಿ ಮನೋರಮೆಯು ಇನ್ನು ನಯವಿನಯಾದಿಗಳಿಂದ ಇವನನ್ನು ಒಡಂಬಡಿಸಬೇಕೆಂದು ಯೋಚಿಸಿ "ಎಲೈ! ಶುಂಡಾಲಬಾಂಧವನೇ! ರಾಜಮಾತೆಯಲ್ಲಿ ನೀನು ಪಡೆಯುವ ಬಹುಮಾನಕ್ಕಿಂತಲೂ ಹತ್ತರಷ್ಟು ದ್ರವ್ಯವನ್ನು ಕೊಡಿಸುವೆನು. ಕಾಗದ, ಲೇಖಣಿಗಳನ್ನು ತರಿಸು. ನಿನಗೆ ಎಷ್ಟು ಹಣಬೇಕು? ಹೇಳು. ನಾನು ಬರೆದುಕೊಡುವ ಚೀಟಿಯನ್ನು ಧನಕೋಟಿಗೆ ತೋರಿಸಿದರೆ ಆತನು ಧನವನ್ನು ಸಲ್ಲಿಸುವನು" ಎಂದು ವಿನಯವಾಗಿ ಹೇಳಲು, ಶುಂಡಾಲನು "ನಿನ್ನ ಚೀಟಿಯನ್ನು ತೋರಿಸಿದ ಒಂದು ಕ್ಷಣದಲ್ಲಿಯೇ ಕಳಿಂಗಪಟ್ಟಣದ ಸೈನ್ಯವು

ಚೀಟಿ ತಂದವನನ್ನು ಕರೆದುಕೊಂಡು ಹಿಂಬಾಲಿಸಿ ಬಂದು ನನ್ನನ್ನು ಹಿಡಿದು ಸೆರೆಯಲ್ಲಿ ಇಡುವರು. ನಿನಗೆ ತಪ್ಪಿಸಿಕೊಳ್ಳಲು ಅನುಕೂಲವಾಗುವುದು. ನನಗೆ ಶೆರೆಮನೆಯಲ್ಲಿರಬೇಕಾದ ಪ್ರತಿಕೂಲವಾಗುವುದು. ಇದಕ್ಕೆ ನಾನು ಒಪ್ಪುವನಲ್ಲ" ಎಂಬ ಖಂಡಿತವಾದ ಉತ್ತರವನ್ನೀಯಲು, ಮನೋರಮೆಯು "ಇದೋ ನನ್ನ ಕೈಯಲ್ಲಿರುವ ಈ ಅಮೂಲ್ಯವಾದ ಉಂಗುರಗಳನ್ನು ಕೊಡುವೆನು. ಈಗಲಾದರೂ ನನ್ನನ್ನು ಬಿಟ್ಟುಬಿಡುವೆಯಾ?" ಎಂದು ಉಂಗುರಗಳನ್ನು ಕಳಿಯಬೇಕೆಂದು ಎತ್ತಿಸಲು ಕೈಬೆರಳುಗಳು ಬರಿಯವಾಗಿದ್ದವು. ಅದನ್ನು ನೋಡಿ ಬಹುವಾಗಿ ಮನನೊಂದು ತನ್ನಲ್ಲಿ ತಾನು "ಆಹಾ! ದುಷ್ಟಬುದ್ಧಿಯೇ! ತಾನು ತಪ್ಪಿಸಿಕೊಳ್ಳಬೇಕೆಂದು ಎತ್ನಿಸಿದ ಮಾರ್ಗಗಳಿಗೆಲ್ಲಾ ಕಲ್ಲು ಹಾಕಿದೆಯಾ? ಇನ್ನು ಈ ಬೌದ್ಧನೊಡನೆ ಯಾವ ಪ್ರಯತ್ನವೂ ಸಾಗುವುದಿಲ್ಲ" ಎಂದು ಚಿಂತಿಸಿ ನಿರಾಶೆಯಿಂದ ಸುಮ್ಮನಾದಳು.

ಈ ಬಗೆಯಾದ ಮನೋರಮೆಯ ಮನೋಭಾವಗಳನ್ನು ಗ್ರಹಿಸಿದ ಶುಂಡಾಲನು ಅವಳ ವಿಕ್ರಯದಲ್ಲಿ ಕೃತ್ರಿಮವೇನೊ ನಡದಿರಬೇಕೆಂದು ಅನುಮಾನಗೊಂಡು ರಥಗಳ ವೇಗವನ್ನು ಹೆಚ್ಚಿಸಿ ಶೀಘ್ರವಾಗಿ ಸಿಂಹಳ ರಾಜ್ಯಕ್ಕೆ ಒಳಪಟ್ಟ ಪ್ರದೇಶವನ್ನು ಸೇರಿ ನಿರ್ಭಯವಾಗಿ ಮುಂದೆ ಪ್ರಯಾಣ ಮಾಡುತ್ತಿದ್ದನು.

(ಈ ಸಂದರ್ಭದಲ್ಲಿ ಮನೋರಮೆಯೂ ಪ್ರತಾಪಕಂಠೀರವನೂ ಹೇಗೆ ಅಣ್ಣ ತಂಗಿಯರ ಮಕ್ಕಳಾದರು ಎಂಬ ಅವರ ಪೂರ್ವಚರಿತ್ರೆಯನ್ನು ಸೂಚಿಸಿ ಹೇಳುವುದರಿಂದ ಮುಂದಿನ ಕಥಾ ಸಂದರ್ಭಗಳಿಗೆ ಅನುಕೂಲವಾಗುವುದು.)

---

## ಪೂರ್ವ ಚರಿತ್ರೆ

ಈಗ ಇಂಡಿಯಾ ದೇಶವೆಂದು ಕೆಂಪು ಜನರಿಂದ ನಾಮಕರಣವನ್ನು ಪಡೆದಿರುವ ಹಿಂದೂದೇಶವು ಪೂರ್ವದಲ್ಲಿ ಭರತಖಂಡವೆಂದು ಪ್ರಖ್ಯಾತಿಗೊಂಡಿತ್ತು. ಈ ಖಂಡದ ದಕ್ಷಿಣ ದೇಶದಲ್ಲಿ ಕೇರಳ ರಾಜ್ಯವು ವಜ್ರಮಕುಟನೆಂಬ ಒಬ್ಬ ರಾಜನ ಆಳ್ವಿಕೆಯಲ್ಲಿ ಪ್ರಸಿದ್ಧಿ ಪಡೆದಿತ್ತು. ಇವನ ರಾಜಧಾನಿ

ಮಣಿಪುರ. ಇವನಿಗೆ ಪ್ರತಾಪಸಿಂಹ, ಪ್ರತಾಪಕುಮಾರಿಯರೆಂಬ ಇಬ್ಬರು ಮಕ್ಕಳಿದ್ದರು. ಇವರು ಪ್ರಾಪ್ತವಯಸ್ಕರಾಗಲು ತಕ್ಕ ವಧೂವರರನ್ನು ತಂದು ಮದುವೆ ಮಾಡಿ ಅಳಿಯನಿಗೆ ಯಥಾಯೋಗ್ಯವಾದ ಪದವಿಯನ್ನಿತ್ತು ತನ್ನ ಪಟ್ಟಣದಲ್ಲಿ ಇರಿಸಿಕೊಂಡು ರಾಜ್ಯಭಾರ ಮಾಡುತ್ತಿದ್ದನು.

ಒಂದು ದಿನ ಸಿದ್ಧಪುರುಷನೋರ್ವನು ರಾಜನನ್ನು ಏಕಾಂತದಲ್ಲಿ ಕಂಡು ಉಚಿತ ಮರ್ಯಾದೆಯಿಂದ ಯೋಗ್ಯವಾದ ಪೀಠದಲ್ಲಿ ಕುಳಿತು ರಾಜನನ್ನು ಕುರಿತು—"ಎಲೈ ರಾಜನೇ! ಈ ಲೋಕದಲ್ಲಿ ಮಹತ್ತರವಾದ ಒಂದು ರಹಸ್ಯವಿರುವುದು. ಇದು ಯಾವಾಗಲೂ ಮೂವರಿಗೆ ಮಾತ್ರ ತಿಳಿದಿರಬೇಕು. ಇವರಲ್ಲಿ ಒಬ್ಬನು ಗತಿಸಿಹೋದರೆ ಆತನ ಸ್ಥಾನಕ್ಕೆ ಯೋಗ್ಯನಾದ ಒಬ್ಬನನ್ನು ಉಳಿದ ಇಬ್ಬರು ಹುಡುಕಿ ರಹಸ್ಯವನ್ನು ತಿಳಿಸಬೇಕು. ಈ ಪದ್ಧತಿಯು ಪರಂಪರೆಯಾಗಿ ನಡೆದು ಬರುವುದರಿಂದ ಈ ರಹಸ್ಯವು ಸ್ಥಿರವಾಗಿ ನಿಲ್ಲುವುದಕ್ಕೆ ಕಾರಣವಾಯಿತು. ಇದಕ್ಕೆ ಪಾತ್ರರು ಸದ್ಗುಣ ಶ್ರೇಷ್ಠರಾಗಿರಬೇಕು. ಹಿಂದೂಮತಾವಲಂಬಿಗಳಲ್ಲದೆ ಇತರರು ಅರ್ಹರಾಗುವುದಿಲ್ಲ. ವೃದ್ಧರು, ಯವ್ವನಸ್ಥರು, ಸ್ತ್ರೀಯರು, ಪುರುಷರೆಂಬ ಭೇದವಿಲ್ಲ. ಈ ಕಾಲದಲ್ಲಿ ಈ ರಹಸ್ಯವನ್ನು ತಿಳಿದ ಮೂವರಲ್ಲಿ ಓರ್ವನು ಎರಡು ವಾರಗಳ ಹಿಂದೆ ಗತಿಸಿಹೋದನು. ಉಳಿದಿಬ್ಬರಲ್ಲಿ ನಾನು ಒಬ್ಬನು. ನಿನ್ನ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಕೇಳಿ ನಿನ್ನ ಸುಗುಣಾತಿಶಯುಗಳನ್ನು ಪರೋಕ್ಷದಲ್ಲಿ ವಿಚಾರಿಸಿ ತಿಳಿದು ಮೂರನೇಯವನ ಸ್ಥಾನಕ್ಕೆ ನೀನು ತಕ್ಕವನೆಂದು ನಿನ್ನಲ್ಲಿಗೆ ಬಂದಿರುವೆನು ನಿನ್ನ ಅಭಿಪ್ರಾಯವೇಂತಿರುವುದು?" ಎಂದು ಕೇಳಲು ರಾಜನು ಸ್ವಲ್ಪ ಹೊತ್ತು ಪರ್ಯಾಲೋಚಿಸಿ ರಹಸ್ಯಭಾಗಿಯಾಗುವುದಕ್ಕೆ ಒಡಂಬಟ್ಟನು.

ನಂತರ ಸಿದ್ಧನು ಲಕ್ಷ್ಮೀನಿಲಯದ ಮರ್ಮವನ್ನೆಲ್ಲಾ ಸಾಂಗವಾಗಿ ವಿವರಿಸಿ ಹೇಳಿದನು. ಆದರೂ ಆ ನಿಲಯದ ನೆಲೆಯನ್ನು ಸರಿಯಾಗಿ ತಿಳಿದುಕೊಳ್ಳಲು ಕೆಲವು ದಿನ ಸಿದ್ಧನೊಡನೆ ಗೋಪ್ಯವಾಗಿ ಪ್ರಯಾಣ ಮಾಡಬೇಕಾದ ಅವಶ್ಯಕತೆಯುಂಟಾದುದರಿಂದ ರಾಜನು ಮಂತ್ರಿ ಮೊದಲಾದ ಕೆಲವು ಜನ ಆಪ್ತರಿಗೆ ತಾನು ಅಸ್ವಸ್ಥನಾಗಿ ಅಂತಃಪುರದಲ್ಲಿರುವೆನೆಂಬ ಸುದ್ದಿಯನ್ನು ಹುಟ್ಟಿಸುವಂತೆ ನೇಮಿಸಿ ಸಿದ್ಧನೊಡನೆ ಪುರವನ್ನು ಬಿಟ್ಟು

ಹೊರಟನು. ಒಂದುವಾರದೊಳಗಾಗಿ ಲಕ್ಷ್ಮೀನಿಲಯದ ಮರ್ಮವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಇಹಲೋಕ ಸೌಖ್ಯಾರ್ಹವಾದ ಕೆಲವು ಅನುಕೂಲ ಗಳನ್ನು ಹೊಂದಿ ಹಿಂತಿರುಗಿ ರಾಜಧಾನಿಯನ್ನು ಸೇರಿ ಸುಜಸಾಂಮ್ರಾಜ್ಯ ದಲ್ಲಿರುತ್ತಿದ್ದನು.

ಹೀಗೆ ಎರಡು ವರುಷಗಳು ಕಳೆಯಲು ಒಂದುದಿನ ಆ ಸಿದ್ಧನ ಶಿಷ್ಯ ನೋರ್ವನು ಬಂದು ರಾಜನನ್ನು ಏಕಾಂತದಲ್ಲಿ ಕಂಡು ಗುರುಗಳು ಅಸ್ವಸ್ಥ ರಾಗಿರುವರೆಂದು ತಿಳಿಸಲು ರಾಜನು ಗೋಪ್ಯವಾಗಿ ಸಿದ್ಧನ ಆಶ್ರಮವನ್ನು ಸೇರಿ ಬೇಕಾದ ಚಿಕಿತ್ಸೆಯನ್ನು ಮಾಡಿಸಿದನು. ಆದರೂ ವ್ಯಾಧಿಯು ವಾಸಿಯಾಗದೆ ಸಿದ್ಧನು ದೈವಾಧೀನನಾಗಲು ಸಂಸ್ಕಾರಾದಿ ಕರ್ಮಗಳನ್ನು ನೆರವೇರಿಸಿ ಪಟ್ಟಣಕ್ಕೆ ಬಂದು ಸಿದ್ಧನ ಸ್ಥಾನಕ್ಕೆ ಯೋಗ್ಯನಾದವನನ್ನು ಹುಡುಕುವ ಕಾರ್ಯದಲ್ಲಿ ಆಸಕ್ತನಾಗಿದ್ದನು.

ತನ್ನ ಮಗನು, ಅಳಿಯನು ಸತ್ಪುರುಷರೆನಿಸಿಕೊಂಡು ವಿವೇಕಶಾಲಿ ಗಳಾಗಿದ್ದರೂ ಮಗಳು, ಸೊಸೆಯು ಸುಗುಣೆಗಳಾಗಿ ಸುವ್ರತೆಯು ರಾಗಿದ್ದರೂ, ಇವರೆಲ್ಲರೂ ಇಹಲೋಕ ಸುಖಾನುಭವದಲ್ಲಿ ಆಸಕ್ತರಾಗಿ ತಮ್ಮ ಉನ್ನತ ಪದವಿಯ ವಿಭವೈಶ್ವರ್ಯಗಳಲ್ಲಿ ಮಗ್ನರಾಗಿರುವರು. ಧರ್ಮ ಮಾರ್ಗದಲ್ಲಿ ನಡೆಯುವ ಸತಿಪತಿಗಳಲ್ಲಿ ಸತಿಯನ್ನು ಅರಿಯದೆ ಪತಿಯಾಗಲಿ ಪತಿಯನ್ನು ಅರಿಯದೆ ಸತಿಯಾಗಲಿ ಯಾವ ರಹಸ್ಯವನ್ನೂ ಗೋಪ್ಯವಾಗಿ ಇರಿಸುವರೆಂಬುದು ಅಸಾಧ್ಯಕಾರ್ಯ. ಒಂದು ವೇಳೆ ನಿರ್ಬಂಧದಿಂದ ಇರಿಸುವಂತೆ ಮಾಡುವುದು ಅನುಚಿತ ಮತ್ತು ಅಧರ್ಮ. ತನ್ನ ರಾಣಿ ಯಾದರೋ ಗತಿಸಿ ನಾಲ್ಕು ವರ್ಷಗಳಾದವು ಎಂಬೀರೀತಿ ನಾನಾ ವಿಧವಾಗಿ ಯೋಚಿಸಿ ರಾಜನು ಸ್ವಜನದಲ್ಲಿ ಒಬ್ಬರನ್ನೂ ಒಲ್ಲದೆ ಸ್ನೇಹಿತನಾದ ಧನಕೋಟಿಯ ವಿಷಯದಲ್ಲಿ ಪೂರ್ವಾಪರಗಳನ್ನು ಯೋಚಿಸಿ ಅವನೇ ತಕ್ಕವನೆಂದು ನಿರ್ಧರಿಸಿ ಅವನನ್ನು ಸಿದ್ಧನ ಸ್ಥಾನದಲ್ಲಿ ಇರಿಸಿದನು.

ಆ ಬಳಿಕ ಒಂದು ವರುಷದ ಮೇಲೆ ಪ್ರತಾಪಸಿಂಹನಿಗೆ ಶುಭ ಮುಹೂರ್ತದಲ್ಲಿ ಗಂಡು ಶಿಶುವು ಜನನವಾಗಲು ಆ ಮಗುವಿಗೆ ಪ್ರತಾಪ ಕಂಠೀರವನೆಂದು ಹೆಸರಿಟ್ಟು ಆ ಬಾಲಕನ ಬಾಲಲೀಲೆಗಳನ್ನು ನೋಡಿ

ಪಿತಾಮಹ ಮಾತಾಪಿತೃಗಳು ಆನಂದ ಸಾಗರದಲ್ಲಿ ಮುಳುಗಿ ತೇಲಾಡು ತ್ತಿದ್ದರು.

ಈ ಸಂತೋಷ ಕಾಲದಲ್ಲಿ ಚಾರನೋರ್ವನು ಓಡಿ ಬಂದು ರಾಜನ ಸ್ಥಾನವನ್ನು ಹೊಕ್ಕು ಹಸ್ತಿನಾವತಿಯಿಂದ ಶತ್ರು ಸೈನ್ಯವು ಕೇರಳ ದೇಶವ ನ್ನಾಕ್ರಮಿಸಲು ಬರುತ್ತಿರುವನೆಂದು ಮೊರೆಯಿಟ್ಟನು. ಅದನ್ನು ಕೇಳಿ ರಾಜನು ಪುರರಕ್ಷಣೆಗೆ ಬೇಕಾದ ಸೈನ್ಯವನ್ನು ಪ್ರತಾಪಸಿಂಹನ ಅಧೀನದಲ್ಲಿರಿಸಿ ಉಳಿದ ಸೈನ್ಯ ಸನ್ನಾಹದಿಂದ ಅಳಿಯನಾದ ವೀರವರ್ಮನನ್ನು ಸಂಗಡ ಕರೆದುಕೊಂಡು ಕೇರಳ ದೇಶದ ಎಲ್ಲೆಯಲ್ಲೇ ಶತ್ರು ಸೈನ್ಯವನ್ನು ಸಂಧಿಸಿ ಯುದ್ಧ ಮಾಡತೊಡಗಿದನು. ಎಷ್ಟು ಪರಾಕ್ರಮವನ್ನು ತೋರಿಸಿದರೂ ಎಷ್ಟು ಕಠಿನವಾಗಿ ಕಾದಿದರೂ ಶತ್ರು ಕಂಟಕವು ಹಿಂದುಳಿದು ಬರುತ್ತಲಿದ್ದ ಸೈನ್ಯದಿಂದ ದಿನೇ ದಿನೇ ಅಭಿವೃದ್ಧಿಯಾಗುತ್ತಿರುವುದನ್ನು ನೋಡಿ ಜಯುಸ ಲಶಕ್ಯವಾಗುವದೆಂದು ತಿಳಿದು ವಜ್ರಮುಕುಟನು ಶತ್ರುಗಳು ಅಟ್ಟಿಕೊಂಡು ಬರದಂತೆ ತಂತ್ರವನ್ನೆಸಗಿ ಸೈನ್ಯ ಸಮೇತನಾಗಿ ನಿಶಿರಾತ್ರಿಯಲ್ಲಿ ಪಲಾಯನ ವನ್ನು ಗೈದು ಆಯಾಸವಿಲ್ಲದೆ ರಾಜಧಾನಿಯನ್ನು ಸೇರಿ ಕೋಟೆಕೊತ್ತಳಗಳನ್ನು ಬಲಪಡಿಸುತ್ತಿದ್ದನು.

ಇತ್ತ ಬೆಳಗಾಗಲು ಕುರುಸೈನ್ಯಾಧಿಪನು ಶತ್ರುವು ಸೈನ್ಯಸಮೇತನಾಗಿ ಪಲಾಯನವಾಗಿರುವುದನ್ನು ಕಂಡು ವಜ್ರಮುಕುಟನ ಬುದ್ಧಿಕೌಶಲ್ಯವನ್ನು ಕೊಂಡಾಡಿ ಅಲ್ಲಿಂದ ಪ್ರಯಾಣ ಮಾಡಿ ಮಣಿಪುರವನ್ನು ಸೇರಿ ಕೋಟೆಗೆ ಮುತ್ತಿಗೆ ಹಾಕಿದನು. ಕೋಟೆಯ ಹೊರವಳೆಯದಲ್ಲಿ ಶತ್ರುಗಳು ಆಗಾಗ್ಯೆ ಕಲತು ಯುದ್ಧ ಮಾಡುತ್ತಾ ಆರು ತಿಂಗಳ ಕಾಲವನ್ನು ಕಳೆದರು. ನಂತರ ಹಸ್ತಿನಾಪುರದರಸನಾದ ಶೂರಸೇನನು ಮೂಲಬಲದಲ್ಲಿ ಅರ್ಧವನ್ನು ಕಳುಹಿ ಸಲು ಶತ್ರು ಸೈನ್ಯವು ವೃದ್ಧಿಯಾಗಿ ಏಕಕಾಲದಲ್ಲಿ ಕೋಟೆಯನ್ನು ಮುತ್ತಿ ಯುದ್ಧ ಮಾಡತೊಡಗಿತು. ಜಯಲಕ್ಷ್ಮಿಯು ಕುರುಸೈನ್ಯಾಧಿಪನನ್ನು ವರಿಸಿದಳು. ಕೋಟೆಯು ಹಿಡಿಯಲ್ಪಟ್ಟು ಶತ್ರುಗಳು ಪುರಪ್ರವೇಶಂ ಗೈದರು. ವಜ್ರಮುಕುಟನು ಅವನ ಪುತ್ರಕಳತ್ರಾದಿಗಳು ದಿಕ್ಕು ದಿಕ್ಕಿಗೆ ಪಲಾ ಯನವಂಗೈಯಲಾರಂಭಿಸಿದರು. ಸೈನ್ಯಾಧಿಪನು ಅರಮನೆಯನ್ನು ಹೊಕ್ಕು ರಾಜಮನೆತನದಲ್ಲಿ ಯಾರನ್ನೂ ಕಾಣದೆ ಅವರನ್ನು ಹುಡುಕಿ ತರುವಂತೆ

ಆಜ್ಞಾಪಿಸಿದನು. ಪ್ರತಾಪಸಿಂಹನು ಒಂಭತ್ತು ತಿಂಗಳ ಮಗುವನ್ನೆತ್ತಿ ಕೊಂಡು ಕೋಟೆಯು ಶತ್ರುವಶವಾಯಿತೆಂದು ಕೇಳಿದ ಕೂಡ್ಲೆ ಪಲಾಯನ ವಾದನಾದ್ದರಿಂದ ಆವನನ್ನು ಹೊರತು ಮಿಕ್ಕವರೆಲ್ಲರೂ ಸಿಕ್ಕಿಬಿದ್ದರು. ಅವರೆಲ್ಲರನ್ನು ಕೊಲ್ಲಿಸಬೇಕೆಂಬ ಸೈನ್ಯಾಧಿಪನ ಸನ್ನಾಹವನ್ನು ನೋಡಿ ರಾಜಮನೆತನವನ್ನು ಉಳುಹಿಸಬೇಕೆಂದು ಪ್ರಜೆಗಳೆಲ್ಲರೂ ದೀನಭಾವದಿಂದ ಬಹು ವಿಧವಾಗಿ ಬೇಡಿಕೊಳ್ಳಲು ಸೈನ್ಯಾಧಿಪನು ಸ್ವಲ್ಪ ಮನಸ್ಸು ಕರಗಿದವ ನಾಗಿ ಪ್ರಜೆಗಳನ್ನು ಕುರಿತು ಇಂತೆಂದನು :—

ಇವರನ್ನು ಉಳುಹಿಸಬೇಕಾದರೆ ವಜ್ರಮುಕುಟನು ಈ ದಿನವೇ ಕೇರಳ ದೇಶವನ್ನು ಬಿಟ್ಟು ಹೋಗಬೇಕು. ಇನ್ನೆಂದಿಗಾದರೂ ಈ ದೇಶವನ್ನು ಪ್ರವೇಶಿಸದೆ ಕೇರಳೀಯರ ಸಹವಾಸದಲ್ಲಿರದೆ, ಈ ರಾಜ್ಯದ ರಾಜಕೀಯ ಮೊದಲಾದ ಯಾವ ವಿಷಯಗಳಲ್ಲಿಯೂ ಸಂಬಂಧಪಡದಂತೆ ಇದ್ದುಕೊಂಡು ತನ್ನ ಬಂಧುಬಳಗದಲ್ಲಿ ಯಾವ ವಿಧವಾಗಿ ಸಮಾಚಾರ ವ್ಯವಹಾರಗಳನ್ನು ನಡಸದೆ ಇರುವೆನೆಂದು ಪ್ರಮಾಣ ಪುರಸ್ಸರವಾಗಿ ಪ್ರತಿಜ್ಞೆ ಮಾಡಿ ಯಥಾ ಪ್ರಕಾರ ನಡೆದುಕೊಳ್ಳಬೇಕು" ಎಂದು ಹೇಳಿದ ಸೈನ್ಯಾಧಿಪನ ನಿಬಂಧನೆ ಗಳನ್ನು ಕೇಳಿ ವಜ್ರಮುಕುಟನು ಮನಸ್ಸಿನಲ್ಲಿ ರೋಷಗೊಂಡವನಾಗಿ ಪ್ರಾಣದ ಮೇಲಣ ಮಮತೆಯನ್ನು ತೊರೆದವನಾದರೂ ಬಹು ವಿವೇಕಶಾಲಿಯಾದುದ ರಿಂದ ತಾನೊಡಂಬಡದಿದ್ದರೆ ತನ್ನವರ ಪ್ರಾಣಹಾನಿಯಾಗುವದೆಂದು ತಿಳಿದು ಆ ಕ್ರೂರ ಕಟ್ಟಳೆಗಳಿಗೆ ಒಳಪಟ್ಟವನಾಗಿ ರಾಜ್ಯವನ್ನು ಬಿಟ್ಟು ಹೊರಟುಹೋದನು.

ಉಳಿದ ರಾಜಮನೆತನದವರು ಸೆರೆಯಲ್ಲಿಡಲ್ಪಟ್ಟರು. ಪ್ರತಾಪಸಿಂಹ ನನ್ನು ಹಿಡಿದು ತಂದವರಿಗೆ ದೊಡ್ಡ ಬಹುಮಾನ ಕೊಡುವದಾಗಿ ಶತ್ರುಗಳು ಸಾರಿಸಿದರು. ಸ್ವಲ್ಪ ದಿವಸಗಳಮೇಲೆ ಪ್ರತಾಪಸಿಂಹನ ಪತ್ನಿಯು ಪತಿ ಪುತ್ರರ ವಿಯೋಗದುಃಖದಿಂದ ಬಳಲಿ ದೈವಾಧೀನಳಾದಳು.

ಆ ಬಳಿಕ ಒಂದು ವರುಷಕಾಲ ಕಳೆಯಿತು. ಈ ಮಧ್ಯೆ ಕೇರಳೀ ಯರು ಸ್ವದೇಶಾಭಿಮಾನದಿಂದ ರಾಜ್ಯದ ಅನೇಕಕಡೆ ದಂಗೆ ಎದ್ದು ಹಸ್ತಿನಾ ಪುರದ ಅಧಿಕಾರಿಗಳಿಗೆ ಇಲ್ಲದಿಇದ್ದ ತೊಂದರೆಗಳನ್ನು ಉಂಟುಮಾಡುತ್ತಾ ಬಂದರು. ದಂಗೇಕೋರರ ದಾಂಧಳೆಯು ಸಹಿಸಲಶಕ್ಯವಾಗಿ ಕಂಡುಬರಲು

ಅವರನ್ನು ಸಮಾಧಾನಗೊಳಿಸಲು ಎತ್ನಿಸಿ ಶೂರಸೇನನು ರಾಜನೀತಿಯಲ್ಲೇ ಒಂದು ಉಪಾಯವನ್ನು ಯೋಚಿಸಿ ಕೇರಳೀಯರಲ್ಲಿ ಮುಖ್ಯಸ್ಥರಾದವರನ್ನು ಹಸ್ತಿನಾವತಿಗೆ ಕರೆಸಿಕೊಂಡು ಸಭೆ ಸೇರಿಸಿ ಸೆರೆಯಲ್ಲಿರುವ ವೀರವರ್ಮನು ಇನ್ನು ಮುಂದೆ ಕೇರಳ ದೇಶಕ್ಕೆ ಅರಸಾಗಿರುವಂತೆಯೂ, ಆ ರಾಜ್ಯದ ಮೂರು ಮುಖ್ಯ ಪಟ್ಟಣಗಳಲ್ಲಿ ಕುರುರಾಜ್ಯ ವ್ಯಾಪಾರ ಸಂರಕ್ಷಣೆಗಾಗಿ ಕುರು ಸೈನ್ಯವಿರುವಂತೆಯೂ ಒಡಂಬಡಿಸಿ ಕಳುಹಿಸಿದನು. ಈ ಏರ್ಪಾಡಿನಿಂದ ಕೇರಳ ರಾಜ್ಯವು ಸ್ವತಂತ್ರವಾಯಿತೆಂದು ಜನಗಳಿಗೆ ಕಂಡು ಬಂದರೂ ಕುರು ಸೈನ್ಯದ ಆಧೀನದಲ್ಲಿ ಸಿಕ್ಕಿಬಿದ್ದಿರುವಂತೆಮಾಡಿದ ಆ ಕುರುರಾಜನ ಕೌಶಲ್ಯವೇ ಕೌಶಲ್ಯವು.

ಆನಂತರ ಎರಡು ವರುಷಗಳ ಮೇಲೆ ಪ್ರತಾಪಕುಮಾರಿಯು ಅಸದೃಶ ರೂಪಲಾವಣ್ಯದಿಂದ ದೇದೀಪ್ಯಮಾನವಾದ ಹೆಣ್ಣು ಶಿಶುವನ್ನು ಹೆತ್ತಳು. ಅದಕ್ಕೆ ಮನೋರಮೆಯೆಂದು ಹೆಸರಿಟ್ಟು ಮಾತಾಪಿತರು ಅದರ ಬಾಲಲೀಲೆ ಗಳನ್ನು ನೋಡಿ ಆನಂದಿಸುತ್ತಿದ್ದರು.

ಈ ಮಧ್ಯೆ ಪ್ರತಾಪಸಿಂಹನೂ, ಅವನ ಶಿಶುವೂ ಚಂದ್ರದ್ರೋಣ ಪರ್ವತ ಪ್ರಾಂತ್ಯದಲ್ಲಿ ಸತ್ತುಬಿದ್ದಿದ್ದರೆಂಬ ವರ್ತಮಾನವು ಎಲ್ಲೆಲ್ಲಿಯೂ ಹರಡಿಕೊಂಡಿತು ಜನರು ಇದನ್ನು ನಿಜವೆಂದು ನಂಬಿದ್ದರು.

ಅತ್ತ ವಜ್ರಮುಕುಟನು ಮಣಿಪುರವನ್ನು ಬಿಟ್ಟು ಹೊರಟು ಲಕ್ಷ್ಮೀ ನಿಲಯವನ್ನು ಸೇರಿ ದೇವಪಾರಾಯಣನಿರತನಾಗಿ ಕಾಲವನ್ನು ಕಳೆಯುತ್ತಾ ಇರುತ್ತಿರಲು ಧನಕೋಟಿಯು ಆಗಾಗ್ಗೆ ಬಂದು ನೋಡಿಕೊಂಡು ಹೋಗುತ್ತ ಲಿದ್ದು ಹೊರಗಿನ ವರ್ತಮಾನಗಳನ್ನು ತಿಳಿಸುತ್ತಲಿದ್ದನು. ಅಳಿಯನು ಅರಸಾದನೆಂಬ ಸುದ್ದಿಯನ್ನು ಕೇಳಿ ವಜ್ರಮುಕುಟನು ಸಂತೋಷಭರಿತ ನಾದನು. ಕುರುಸೈನ್ಯಾಧಿಪನಲ್ಲಿ ಮಾಡಿದ ಪ್ರತಿಜ್ಞೆಗೆ ತಪ್ಪಲಾರದೆಯೂ, ಒಂದುವೇಳೆ ತಪ್ಪಿ ನಡೆದು ಅಳಿಯನಿಗೆ ಧನಕೋಟಿಯ ಮೂಲಕ ತನ್ನ ಸ್ಥಿತಿಗತಿಗಳನ್ನು ತಿಳಿಸಲುದ್ಯುಕ್ತನಾದರೆ ಇವನು ಅರಮನೆಗೆ ಹೋಗಿ ಬರುವುದು ಅನುಮಾನಕ್ಕೆ ಆಸ್ಪದವಾಗಿ ವೀರವರ್ಮನ ರಾಜ್ಯಭಾರಕ್ಕೆ ತೊಂದರೆಯುಂಟಾಗಬಹುದು ಎಂಬಿವೇ ಮೊದಲಾದುದನ್ನು ಯೋಚಿಸಿ ಪ್ರತಿಜ್ಞೆಗೆ ಬದ್ಧನಾಗಿದ್ದನು. ಆದರೂ ಒಂಭತ್ತು ತಿಂಗಳ ಮಗುವನ್ನು

ಎತ್ತಿಕೊಂಡು ಹೋದ ಮಗನು ಏನಾದನೋ ಎಂಬ ವಿಚಾರವು ಆಗಾಗ್ಯೆ ಬಾಧಿಸುತ್ತಲಿತ್ತು. ಸ್ವಲ್ಪ ದಿವಸಗಳ ಮೇಲೆ ಅವರಿಬ್ಬರೂ ಪರ್ವತ ಪ್ರಾಂತ್ಯ ದಲ್ಲಿ ಸತ್ತು ಬಿದ್ದಿದ್ದರೆಂಬ ವರ್ತಮಾನವನ್ನು ಕೇಳಿ ದುಃಖಿಸುತ್ತಿದ್ದು ಧನಕೋಟಿಯಿಂದ ಸಮಾಧಾನಗೊಳಿಸಲ್ಪಟ್ಟವನಾಗಿ ಯಥಾಪ್ರಕಾರ, ದೇವ ಪಾರಾಯಣ ನಿರತನಾಗಿರುತ್ತಿದ್ದನು.

ಹೀಗೆಯೇ ಕೆಲವು ಕಾಲ ಕಳೆದು ಧನಕೋಟಿಯು ಸಾಯುವುದಕ್ಕೆ ಮುಂಚೆ ಎರಡು ವರುಷಗಳಲ್ಲಿ ವಜ್ರಮಕುಟನು ಅಸ್ವಸ್ಥನಾದನು. ಔಷಧಿ ಯನ್ನು ಕೊಟ್ಟು ಚಿಕಿತ್ಸೆಯನ್ನು ಮಾಡಿಸುವುದಕ್ಕಾಗಿ ಧನಕೋಟಿಯು ಕಳಿಂಗಪಟ್ಟಣದಲ್ಲಿ ಪ್ರಖ್ಯಾತಳಾದ ಮಂಗಲೆ ಎಂಬ ಓರ್ವ ಮುದುಕಿಯನ್ನು ಗೊತ್ತುಮಾಡಿ ಸಂಗಡ ಕರೆದುಕೊಂಡು ಲಕ್ಷ್ಮೀನಿಲಯಕ್ಕೆ ಹೊರಟನು. ದಾರಿಯಲ್ಲಿ ಹೊತ್ತು ಕಳೆಯಲು ಮಂಗಲೆಯು ತಾನು ವೈದ್ಯವೃತ್ತಿಯಲ್ಲಿ ಸಂಚಾರ ಮಾಡಿ ನೋಡಿದ ಅನೇಕ ಪಟ್ಟಣಗಳ ವರ್ತಮಾನಗಳನ್ನು ಹೇಳುತ್ತಾ ಚೇರ ದೇಶದ ಪ್ರಸ್ತಾಪನೆಯು ಬರಲು ಆ ದೇಶದಧಿಪತಿಯಾದ ಪದ್ಮರಾಜನು ತನಗೆ ಕಾಡಿನಲ್ಲಿ ಸಿಕ್ಕಿದ ಒಂದು ಗಂಡು ಶಿಶುವನ್ನು ಸಾಕಿ ಸಲಹಿ ತಾನು ಜೀವಿಸಿರುವಾಗಲೇ ಸ್ವೀಕೃತ ಪುತ್ರನಿಗೆ ಪಟ್ಟಾಭಿಷೇಕ ಮಾಡಿ ಅಭಿನಂದಿಸುತ್ತಲಿರುವನೆಂದು ಆ ರಾಜನ ಸುಗುಣಾತಿಶಯಗಳನ್ನು ವರ್ಣಿ ಸುತ್ತಾ ಬರುತ್ತಿರಲು ಲಕ್ಷ್ಮೀನಿಲಯವು ಸಮೀಪಿಸಿತು. ಗೊತ್ತುಮಾಡಿದ ನಿಬಂಧನೆಗೆ ಅನುಸಾರವಾಗಿ ಅವಳ ಕಣ್ಣುಗಳನ್ನು ಕಟ್ಟಿ ಧನಕೋಟಿಯು ಲಕ್ಷ್ಮೀನಿಲಯದ ಒಳಗಡೆ ಕರೆದುಕೊಂಡು ಹೋಗಿ ಕಣ್ಣು ಬಿಚ್ಚಿ ಸ್ನೇಹಿತನಿಗೆ ಚಿಕಿತ್ಸೆ ಮಾಡಿಸಿದನು. ಎರಡು ವಾರಗಳಲ್ಲಿಯೇ ವಜ್ರಮಕುಟನ ಕಾಯಿಲೆ ವಾಸಿಯಾಗಲು ಧನಕೋಟಿಯು ಮೊದಲಿನಂತೆ ಮಂಗಲೆಯ ಕಣ್ಣುಗಳನ್ನು ಕಟ್ಟಿ ಲಕ್ಷ್ಮೀನಿಲಯವನ್ನು ಬಿಟ್ಟು ಸ್ವಲ್ಪ ದೂರ ಹೊರಗೆ ಬಂದು ಬಿಚ್ಚಲು ಇಬ್ಬರೂ ಮಾತನಾಡುತ್ತಾ ಕಳಿಂಗಪಟ್ಟಣವನ್ನು ಸೇರಿದರು. ತರುವಾಯ ಮಂಗಲೆಗೆ ಯಥೋಚಿತವಾದ ಬಹುಮಾನವನ್ನು ಕೊಟ್ಟು ಅವಳು ತನ್ನ ಸಂಗಡ ಪ್ರಯಾಣ ಮಾಡಿದ್ದು ಮೊದಲಾದ್ದನ್ನು ಯಾರಿಗೂ ತಿಳಿಸದೆ ಇರುವಂತೆ ಪ್ರಮಾಣವನ್ನು ತೆಗೆದುಕೊಂಡು ಕಳುಹಿಸಿಕೊಟ್ಟನು.

ನಂತರ ಪದ್ಮರಾಜನ ವಿಷಯವಾಗಿ ಮಂಗಲೆಯು ಹೇಳಿದುದನ್ನು

ಧನಕೋಟಿಯೂ ಪರ್ಯಾಲೋಚಿಸಿ ಆ ಮಗುವು ಪ್ರತಾಪಸಿಂಹನದಾಗಿದ್ದರೂ ಇರಬಹುದು ಎಂದು ಸಂಶಯಪಟ್ಟು ಪದ್ಮರಾಜನೊಡನೆ ಗೋಪ್ಯವಾಗಿ ಕಾಗದ ಪತ್ರಗಳನ್ನು ಬೆಳೆಸಿದನು. ಅವನು ತನ್ನ ಸ್ವೀಕೃತ ಪುತ್ರನಾದ ಪ್ರತಾಪಕಂಠೀರವನ ಯಾವದ್ವೃತ್ತಾಂತವನ್ನೂ ತಿಳಿಸಿದನು. ಅದೆಂತೆಂದರೆ :—

ಒಂದು ದಿನ ಪದ್ಮರಾಜನು ಅರಣ್ಯದಲ್ಲಿ ಬೇಟೆಯಾಡುತ್ತಾ ಒಂದು ಜಿಂಕೆಯನ್ನು ಬಹಳ ದೂರದವರಿಗೂ ಅಟ್ಟಿಕೊಂಡು ಹೋಗಿ ಅದನ್ನು ಕೊಂದು ಹಿಂತಿರುಗಿ ತನ್ನ ಪರಿವಾರವನ್ನು ಹುಡುಕಿಕೊಂಡು ಬರುತ್ತಿರಲು ಒಂದು ಮರದ ಕೆಳಗೆ ಹರಕು ಬಟ್ಟೆಗಳನ್ನು ಉಟ್ಟುಕೊಂಡು ಕೈಯಲ್ಲಿರುವ ಮಗುವಿನ ಮುಖವನ್ನು ನೋಡಿ ನೋಡಿ ವ್ಯಸನಪಡುತ್ತಾ ಕುಳಿತ್ತಿದ್ದ ಪ್ರತಾಪಸಿಂಹನನ್ನು ಕಂಡು ಕನಿಕರದಿಂದ "ನೀನ್ಯಾರಪ್ಪಾ" ಎಂದು ಕೇಳಿದನು. ಅವನು ಅದಕ್ಕೆ ಸರಿಯಾದ ಉತ್ತರವನ್ನು ಕೊಡದೆ ಏನೇನನ್ನೊ ಮಾತನಾಡಲಾರಂಭಿಸಿದನು. ಇದರಿಂದ ಅವನಿಗೆ ಹುಚ್ಚು ಹಿಡಿದಿದೆ ಎಂದು ಗೊತ್ತಾಯಿತು. ಅಷ್ಟರಲ್ಲಿ ಪರಿವಾರದವರು ಕೆಲವರು ಪದ್ಮರಾಜನನ್ನು ಹುಡುಕಿಕೊಂಡು ಅಲ್ಲಿಗೆ ಬರಲು ಮಗುವಿನೊಡನೆ ಪ್ರತಾಪಸಿಂಹನನ್ನು ಸಂಗಡ ಕರೆದುಕೊಂಡು ಪದ್ಮರಾಜನು ರಾಜಧಾನಿಯನ್ನು ಸೇರಿ ತಂದೆ ಮಕ್ಕಳ ರಾಜಲಕ್ಷಣಗಳನ್ನು ಪರೀಕ್ಷಿಸಿ ನೋಡಿ ಪ್ರತಾಪಸಿಂಹನು ಯಾವನೊ ಓಬ್ಬ ರಾಜಕುಮಾರನೆಂದೂ ಶಿಶುವು ಅವನದೇ ಎಂದೂ ಊಹಿಸಿ ತಂದೆ ಮಕ್ಕಳಿಗೆ ಬೇಕಾದ ಆರೈಕೆಯನ್ನು ಕೊಡಿಸಿ ಸಲಹುತ್ತಿದ್ದನು. ಎರಡು ತಿಂಗಳಲ್ಲೇ ಹುಚ್ಚು ವಾಸಿಯಾಗದೆ ಪ್ರತಾಪಸಿಂಹನು ದೈವಾಧೀನನಾದನು. ಆಮೇಲೆ ತನಗೆ ಮಕ್ಕಳಿಲ್ಲದ್ದರಿಂದ ಆ ಮಗುವನ್ನು ಬಹು ಪ್ರೇಮದಿಂದ ಸಾಕಿ ಪುತ್ರನಾಗಿ ಸ್ವೀಕರಿಸಿ ರಾಜ್ಯಪಟ್ಟಾಭಿಷೇಕವನ್ನು ಮಾಡಿಸಿ ಪದ್ಮರಾಜನು ಮಗನಿಗೆ ಆಗಾಗ್ಯೆ ರಾಜನೀತಿಗಳನ್ನು ಬೋಧಿಸುತ್ತಾ ಮಗನ ಅಭಿವೃದ್ಧಿಯನ್ನು ನೋಡಿ ನೋಡಿ ಸಂತೋಷಭರಿತ ಹೃದಯನಾಗಿ ಇರುತ್ತಿದ್ದನು.

ಇದನ್ನೆಲ್ಲಾ ತಿಳಿದುಕೊಂಡು ಪದ್ಮರಾಜನು ಭದ್ರವಾಗಿ ಇರಿಸಿದ್ದು ಕಳುಹಿಸಿದಂಥಾ ಪ್ರತಾಪಸಿಂಹನು ಅರಣ್ಯವಾಸದಲ್ಲಿ ಉಟ್ಟಿದ್ದ ಬಟ್ಟೆಬರೆ

ಗಳನ್ನು ತೆಗೆದುಕೊಂಡು ಧನಕೋಟಿಯು ಲಕ್ಷ್ಮೀನಿಲಯವನ್ನು ಸೇರಿ ಯಾವದ್ವೃತ್ತಾಂತವನ್ನು ಸ್ನೇಹಿತನಿಗೆ ತಿಳಿಯ ಹೇಳಿ ಬಟ್ಟೆಬರೆಗಳನ್ನು ತೋರಿಸಲು ವಜ್ರಮುಕುಟನು ಕಣ್ಣುಗಳಲ್ಲಿ ಕಂಬನಿದುಂಬಿ "ನನ್ನ ಮಗನು ಪಟ್ಟಣದಿಂದ ಪಾಲಾಯನವಾಗುವಾಗ ವೇಷಧಾರಿಯಾಗಿ ಉಟ್ಟ ಬಟ್ಟೆಗಳೇ ಇವು" ಎಂದು ದುಃಖಿಸಿದನು. ತಾನು ಊಹಿಸಿದ ಸಂಗತಿಯೇ ಧೃಡವಾಯಿತೆಂದು ಧನಕೋಟಿಯು ಕೃತಕೃತ್ಯನಾಗಿ ವಜ್ರಮುಕುಟನನ್ನು ಸಮಾಧಾನ ಪಡಿಸಿದನು. ಈ ಸಮಯದಲ್ಲಿ ಪ್ರತಾಪಕಂಠೀರವನು ತನ್ನ ಪೂರ್ವ ವೃತ್ತಾಂತವನ್ನು ಕೇಳಿ ವಜ್ರಮುಕುಟನು ಬದುಕಿರುವನೆಂದು ತಿಳಿದರೆ ರಾಜಕೀಯದಲ್ಲಿ ಪ್ರಮಾದ ಉಂಟಾಗಬಹುದು. ವೀರವರ್ಮನು ಗಂಡು ಮಕ್ಕಳಿಲ್ಲದೆ ಕಾಲವಾದುದರಿಂದ. ಆವನ ಏಕಪುತ್ರಿಯಾದ ಮನೋರಮೆಯು ಅಳ್ವಿಕೆಯಲ್ಲಿರುವ ಕೇರಳ ರಾಜ್ಯದ ನೆಮ್ಮದಿಗೆ ಶೂರಸೇನನು ಏನಾದರೂ ಭಂಗವನ್ನು ಉಂಟುಮಾಡಿಯಾನು ಎಂಬೀವಿಧವಾದ ನಾನಾ ಯೋಚನೆಯಿಂದ ವಜ್ರಮುಕುಟನು ಮೊಮ್ಮಗನನ್ನು ನೋಡಲು ಲವಲವಕೆಗೊಂಡ ಮನಸ್ಸನ್ನು ಹಿಂದೆಳೆದುಕೊಂಡನು.

ಇದಕ್ಕೆ ಸ್ವಲ್ಪ ದಿವಸಗಳ ಹಿಂದೆ ಲಕ್ಷ್ಮೀನಿಲಯದ ರಹಸ್ಯಭಾಗಿಯಾದ ಸಿದ್ಧನೊಬ್ಬನು ಗತಿಸಿಹೋಗಿದ್ದನು. ಆವನ ಸ್ಥಾನಕ್ಕೆ ಯೋಗ್ಯನಾದವನನ್ನು ಧನಕೋಟಿಯು ಹುಡುಕುತ್ತಿದ್ದನು. ನಂತರ, ಕೆಲವು ದಿವಸಗಳ ಮೇಲೆ ವಜ್ರಮುಕುಟನು ಅಸ್ವಸ್ಥನಾಗಿ ಅವಸಾನ ಕಾಲವು ಸಮೀಪಿಸಲು ಧನಕೋಟಿಯನ್ನು ಕುರಿತು "ಮುಂದಕ್ಕೆ ಪ್ರತಾಪಕಂಠೀರವನೂ ಮನೋರಮೆಯೂ ಈ ನಿಲಯದ ರಹಸ್ಯಭಾಗಿಗಳಾಗಬೇಕೆಂಬುದು ನನ್ನ ಬಯಕೆ. ಇದನ್ನು ನೆರವೇರಿಸುವುದು ನಿನ್ನ ಮೇಲೆ ಬಿದ್ದ ಭಾರ" ಎಂದು ಹೇಳಿ ದೈವಾಧೀನನಾದನು. ಶವವನ್ನು ಆ ನಿಲಯದಲ್ಲೇ ಸಮಾಧಿ ಮಾಡಿ ಧನಕೋಟಿಯು ಕಥಾಪ್ರಾರಂಭವಾಗುವುದಕ್ಕೆ ಒಂದು ತಿಂಗಳ ಹಿಂದೆ ಕಳಿಂಗ ಪಟ್ಟಣವನ್ನು ಸೇರಿದನು.

ಅವನಿಗೂ ವೃದ್ಧಾಪ್ಯ ಪ್ರಾಪ್ತವಾಗಿ ಬಹು ದಿವಸ ಬದುಕಿರಲಾರನೆಂಬ ಅನುಮಾನ ಹುಟ್ಟಿ ಲಕ್ಷ್ಮೀನಿಲಯದ ರಹಸ್ಯವನ್ನೂ ಮತ್ತು ವಜ್ರಮುಕುಟನ ಚರಿತ್ರೆಯನ್ನೂ ಬರೆದು ಒಂದು ಲಕ್ಕೋಟಿಯಲ್ಲಿಟ್ಟು ಅರಗಿನ ಮುದ್ರೆ ಹಾಕಿ

ಇದೇ ರೀತಿ ಮತ್ತೊಂದು ಪ್ರತಿಯನ್ನು ಬರೆದು ಮುದ್ರೆ ಹಾಕಿ ಮೇಲ್ಗಡೆ ಒಂದಕ್ಕೆ ಪ್ರತಾಪಕಂಠೀರವನಿಗೆ ಎಂದೂ, ಮತ್ತೊಂದಕ್ಕೆ ಮನೋರಮೆಗೆ ಎಂದೂ ವಿಳಾಸಗಳನ್ನು ಬರೆದು ಬಹು ಜೋಪಾನವಾಗಿ ಇರಿಸಿಕೊಂಡಿದ್ದನು.

*　　　*　　　*　　　*

ಹಿಂದಿನ ಕಥಾಸಂದರ್ಭದಲ್ಲಿ " ಭೋಜನಾನಂತರ ವಿಶ್ರಾಂತವಾಗಿ ಕುಳಿತುಕೊಂಡು ನಿಮ್ಮ ಚರಿತ್ರೆಯನ್ನು ಹೇಳುವೆನು" ಎಂದು ಧನಕೋಟಿಯು ಹೇಳಲು ಮೂವರೂ ಭೋಜನಕ್ಕೆ ಹೋದರಷ್ಟೆ. ಭೋಜನಾನಂತರ ಧನಕೋಟಿಯು ವಜ್ರಮುಕುಟನ ಚರಿತ್ರೆಯಲ್ಲಿ ಲಕ್ಷ್ಮೀನಿಲಯದ ರಹಸ್ಯ ಸಂಗತಿಗಳನ್ನು ಬಿಟ್ಟು ಉಳಿದುದನ್ನೆಲ್ಲಾ ಹೇಳಿ ಮುಂದೆ ಪ್ರತಾಪಕಂಠೀರವನನ್ನು ಬೌದ್ಧಮತಾವಲಂಬನದಿಂದ ಬಿಡಿಸಿ ಅವನಿಗೆ ಮನೋರಮೆಯನ್ನು ಮದುವೆ ಮಾಡಿಸಿ ಅವರಿಬ್ಬರಿಗೂ ಲಕ್ಷ್ಮೀನಿಲಯದ ರಹಸ್ಯವನ್ನು ತಿಳಿಸಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದನು. ಆದರೆ ಆ ದಿನ ರಾತ್ರಿಯೇ ಘಾತುಕರಿಂದ ಕೊಲ್ಲಲ್ಪಡಲು ಆ ಸಂಕಲ್ಪವು ಸಧ್ಯಃ ಅವನಲ್ಲಿಯೇ ಕೊನೆಗಂಡಿತು.

ಇತ್ತ ಶುಂಡಾಲನು ರಾಮೇಶ್ವರವನ್ನು ಸೇರಿ ತಾನು ತಂದ ಕನ್ಯೆಯರನ್ನು ಒಂದು ಹಡಗಿನಲ್ಲಿ ಹತ್ತಿಸಿದನು. ಇವರು ಹಡಗಿನಲ್ಲಿ ಕುಳಿತ್ತಿದ್ದ ಇತರ ಪ್ರಯಾಣೀಕರ ನಡುವೆ ತಮಗೆ ಪ್ರತ್ಯೇಕವಾಗಿ ಏರ್ಪಡಿಸಿದ್ದ ಸ್ಥಳವನ್ನು ಸೇರಲು ಹೊರಟರು. ಪ್ರಯಾಣೀಕರಲ್ಲಿ ಒಬ್ಬ ಮುದುಕಿಯನ್ನು ನೋಡಿದ ಕೂಡಲೇ ಮನೋರಮೆಯ ಮುಖಕಮಲವು ಸಂತೋಷಾಶ್ಚರ್ಯ ಸೂಚಕ ಭಾವದಿಂದ ವಿಕಸಿತವಾಯಿತು. ಹೀಗಾಗುವುದೆಂದು ಮೊದಲೇ ತಿಳಿದಿದ್ದ ಆ ಮುದುಕಿಯು ಕಣ್ಣುಸನ್ನೆಯಿಂದ ತನ್ನನ್ನು ಮಾತನಾಡಿಸದೆ ಮನೋಭಾವವನ್ನು ಮುಖದಲ್ಲಿ ತೋರ್ಪಡಿಸದೆ ಹೋಗೆಂದು ಮನೋರಮೆಗೆ ಸೂಚಿಸಿದಳು. ಅದರಂತೆಯೇ ಮನೋರಮೆಯು ಆಚರಿಸಿದಳು. ಆ ಸಮಯದಲ್ಲಿ ಮುದುಕಿಯ ಸಂಗಡ ಕುಳಿತ್ತಿದ್ದ ಕಪ್ಪುದೇಹದ ಒಬ್ಬ ಹೆಂಗಸು ಮನೋರಮೆಯ ದೃಷ್ಟಿಗೆ ಬಿದ್ದಳು.

ತರುವಾಯ ಮನೋರಮೆಯು ಮುದುಕಿಯನ್ನು ಬಿಟ್ಟು ಹೊರಟು ಮನಸ್ಸಿನಲ್ಲಿ " ಮಂಗಲೆಯು ಇಷ್ಟು ದೂರ ಬರುವುದಕ್ಕೆ ಕಾರಣವೇನು ?

ಶುಕವಾಣಿಯು ಶವವನ್ನು ನೋಡಿಕೊಂಡು ಬಂದ ರಾತ್ರಿಯೇ ನಾನು ಅಪಹರಿಸಲ್ಪಟ್ಟು ಬಹು ತ್ವರೆಯಿಂದ ಇಲ್ಲಿಗೆ ತರಲ್ಪಟ್ಟೆನು. ಆ ಶವದ ಬಳಿಗೆ ನನ್ನನ್ನು ಕರೆದುಕೊಂಡು ಹೋದವಳೂ ಇವಳೇ. ಆದ್ದರಿಂದ ಇವಳೂ ಕೂಡ ಬಹು ತ್ವರೆಯಿಂದ ಬಂದಿರಬೇಕು. ನನ್ನನ್ನು ಬಿಡಿಸುವುದಕ್ಕೆ ಬಂದಿರುವಳೋ? ಎಂದರೆ, ಈ ಮಾರ್ಗದಲ್ಲಿಯೇ ನಾನು ಒಯ್ಯಲ್ಪಟ್ಟೆನೆಂಬ ಸಂಗತಿಯು ಇವಳಿಗೆ ಹೇಗೆ ತಿಳಿಯಿತು? ಮೊದಲೇ ತಿಳಿದಿದ್ದ ಪಕ್ಷದಲ್ಲಿ ಕಳಿಂಗ ಪಟ್ಟಣದಲ್ಲಿಯೇ ನನ್ನನ್ನು ಸುಲಭವಾಗಿ ಬಿಡಿಸುತ್ತಿದ್ದಳಲ್ಲವೆ? ನಾನಾದರೋ ಬಿಚ್ಚುಕತ್ತಿ ಪಹರೆಯಿಂದ ಭದ್ರವಾಗಿರುವ ಸಿಂಹಳೇಶನ ಅರಮನೆಗೆ ಒಯ್ಯಲ್ಪಡುವೆನು. ಅಂತಹ ಸ್ಥಳದಿಂದ ನನ್ನನ್ನು ಬಿಡಿಸಲು ಈ ಬಡಪಾಯಿ ಶಕ್ತಳೆ? ನನ್ನಂತಹ ದುರ್ಭಾಗ್ಯರು ಯಾವ ವಿಷಯವನ್ನೂ ತಮಗೆ ಅನ್ವಯಿಸುವಂತೆ ಎಣಿಸುವರು. ಈಗ ಮಂಗಲೆಯು ತನ್ನ ಸ್ವಂತ ಕೆಲಸದ ನಿಮಿತ್ತವಾಗಿ ಬಂದಿರಬಹುದು. ಆದರೆ ಅವಳು ಸುಮ್ಮನಿರೆಂದು ಕಣ್ಣುಸನ್ನೆ ಮಾಡಲು ಕಾರಣವೇನು? ಇದರಿಂದ ನನ್ನ ಸ್ಥಿತಿಯು ಅವಳಿಗೆ ಮೊದಲೇ ತಿಳಿದಿರಬೇಕೆಂದು ಗೊತ್ತಾಗುವುದಿಲ್ಲವೆ? ಇದು ಹೇಗೆಯೋ ಎಂದು ನಿರ್ಧರಿಸುವುದಕ್ಕೆ ಬಗೆಹರಿಯದಿರುವುದು" ಎಂದು ಪದೇ ಪದೇ ನಾನಾ ವಿಧವಾಗಿ ಯೋಚಿಸುತ್ತಿದ್ದಳು.

ಹಡಗು ಸಿಂಹಳದೇಶಾಭಿಮುಖವಾಗಿ ಹೊರಟು ಸಾಯಂಕಾಲಕ್ಕೆ ಸಿಂಹಳ ರಾಜಧಾನಿಯಾದ ಕೊಳಂಬು ನಗರವನ್ನು ಮುಟ್ಟಿತು. ಶುಂಡಾಲನು ಕನ್ಯಾಸಮೂಹವನ್ನು ಇಳಿಸಿಕೊಂಡು ರಾಜಮಾತೆಯ ಆಜ್ಞಾನುಸಾರ ಆ ದಿನವೇ ಅವರನ್ನು ಅರಮನೆಗೆ ತಂದು ಒಪ್ಪಿಸಿದನು. ಇತರ ಗುಲಾಮು ವ್ಯಾಪಾರಿಗಳು ತಂದ ಕನ್ಯೆಯರು ಇವರೊಡನೆ ಅರಮನೆಯಲ್ಲಿ ಸೇರಿದರು. ನಂತರ ರಾಜಮಾತೆಯು ಭದ್ರಾಸನದಲ್ಲಿ ಕುಳಿತಿರಲು ಅರಮನೆ ಗುರುಕಾರನು ಪ್ರತಿಯೊಬ್ಬ ಕನ್ಯೆಯನ್ನು ಒಮ್ಮೆ ಎದುರಿಗೆ ಕರೆತಂದು ಸ್ವಲ್ಪ ಹೊತ್ತು ನಿಲ್ಲಿಸಿ ಅಪ್ಪಣೆಯಾದ ಮೇಲೆ ಕರೆದುಕೊಂಡು ಹೋಗಿ ಬೇರೊಂದು ಗೃಹದಲ್ಲಿ ಬಿಟ್ಟುಬರುವನು.

ರಾಜಮಾತೆಯು ಸ್ತ್ರೀ ಸೌಂದರ್ಯ, ಲಾವಣ್ಯಾದಿಗಳನ್ನು ಪರೀಕ್ಷಿಸುವುದರಲ್ಲಿ ಬಹು ನಿಪುಣೆ. ಎಷ್ಟು ಮಂದಿ ಕನ್ಯೆಯರು ಎದುರಿಗೆ ಬಂದು ಹೋದರೂ

ಇಷ್ಟನೆಯವಳೇ ಉಳಿದವರಿಗಿಂತಲೂ ಶ್ರೇಷ್ಠಳೆಂದು ಗೊತ್ತುಮಾಡುವಂತಹ ಬುದ್ಧಿಶಕ್ತಿಯನ್ನು ಪರಿಪೂರ್ಣವಾಗಿ ಪಡೆದಿದ್ದಳು.

ಹೀಗೆ ಕನ್ಯಾಸೌಂದರ್ಯ ಪರೀಕ್ಷೆಯು ನಡೆಯುತ್ತಿರಲು ಮನೋರಮೆಯು ಮನಸ್ಸಿನಲ್ಲಿ ಬಹು ಕಳವಳಪಟ್ಟು "ಶುಂಡಾಲನು ನನ್ನ ಸೌಂದರ್ಯವನ್ನು ನೋಡಿ ನಾನೇ ಈ ಸಲ ಆರಿಸಲ್ಪಡುವೆನೆಂದು ನಿರ್ಧರವಾಗಿ ಹೇಳುತ್ತಿರುವನು. ನನ್ನ ಸೌಂದರ್ಯವೂ ಇದಕ್ಕೆ ಅನುಗುಣವಾಗಿಯೇ ಇರುವುದು. ಲೋಕದಲ್ಲಿ ಸೌಂದರ್ಯವು ಹೆಚ್ಚಾಗಿದ್ದರೆ ಸ್ತ್ರೀಯರು ಅಭಿನಂದಿಸುವರು. ನಾನಾದರೊ ಈ ಹಾಳು ಸೌಂದರ್ಯವನ್ನು ಶತ್ರುವೆಂದು ಭಾವಿಸುವ ಕಾಲ ಒದಗಿತು. ನಾನೇ ಆರಿಸಲ್ಪಡುವ ಪಕ್ಷದಲ್ಲಿ ಇಚ್ಛೆಯಿಲ್ಲದ ಪುರುಷನ ಆಲಿಂಗನಕ್ಕಿಂತಲೂ ಯಮಭಟರ ಆಲಿಂಗನವೇ ಮೇಲು. ಆದ್ದರಿಂದ ಈ ಸಂದರ್ಭದಲ್ಲಿ ಆತ್ಮಹತ್ಯವೇ ಪಾವನವು ಆದರೂ ನನ್ನ ಕೈಲಾದಮಟ್ಟಿಗೂ ಮಾಡಬೇಕಾದ ಪ್ರಯತ್ನಗಳೆನ್ನೆಲ್ಲಾ ಮಾಡಿ ಯಾವುದೂ ಸಾಗದಿದ್ದರೆ ಕೊನೆಯಲ್ಲಿ ಇದನ್ನು ಆಚರಿಸುವೆನು. ರಾಜಮಾತೆಯಾದರೋ ನನ್ನಂತಹ ಸ್ತ್ರೀಯಳು. ಅವಳ ಕಾಲಿಗೆ ಬಿದ್ದಾದರೂ ನನ್ನ ಪದವಿಯನ್ನು ತಿಳಿಸಿ ನನ್ನನ್ನು ಕೃತ್ರಿಮದಿಂದ ಅಪಹರಿಸಿ ತಂದ ಸಂಗತಿಯನ್ನು ಮೊರೆಯಿಟ್ಟು ಕೊಳ್ಳುವೆನು. ಆಗ ನನಗೆ ಬಿಡುಗಡೆಯಾಗುವುದು. ನನ್ನ ವೃತ್ತಾಂತವನ್ನೆಲ್ಲಾ ತಿಳಿಸಬೇಕಾದರೆ ಸ್ವಲ್ಪ ಹೊತ್ತು ಹಿಡಿಯುವುದು. ನನ್ನ ಹಿಂದೆ ಕನ್ಯೆಯರು ಉಳಿದಿದ್ದರೆ ನನ್ನ ಸಂಗತಿಯನ್ನು ಕೇಳುವುದಕ್ಕೆ ರಾಜಮಾತೆಗೆ ಸಾಕಾದಷ್ಟು ವಿರಾಮವಿರುವುದಿಲ್ಲ. ಕೊನೆಯಲ್ಲಿ ಹೋದರೆ ಅವಕಾಶ ಸಿಕ್ಕುವುದು. ಇದಲ್ಲದೆ ಎಲ್ಲವೂ ತೀರಿತೆಂದು ಅವಸರದಿಂದ ಚೆನ್ನಾಗಿ ಪರೀಕ್ಷಿಸದೆ ರಾಜಮಾತೆಯು ನನ್ನನ್ನು ಆರಿಸದೇ ಹೋದರೂ ಹೋಗಬಹುದು. ಆದ್ದರಿಂದ ಕೊನೆಯಲ್ಲಿ ಹೋಗುವುದೇ ಉತ್ತಮ" ಎಂದು ನಿರ್ಧರಿಸಿಕೊಂಡು ಧೈರ್ಯದಿಂದ ಕೊನೆಯಲ್ಲಿ ನಿಂತಳು.

ಈ ಧೈರ್ಯವೇ ಅವಳಿಗೆ ವಿರೋಧವಾಗಿ ಪರಿಣಮಿಸಿತು. ಹೇಗೆಂದರೆ, ಧೈರ್ಯಗೊಂಡ ಕಾಲದಲ್ಲಿ ಜನರಿಗೆ ಸ್ವಭಾವವಾಗಿ ಮುಖದಲ್ಲಿ ರಕ್ತಚಲನೆ ಹೆಚ್ಚುವುದು. ಇದರಿಂದ ಮುಖಕಾಂತಿಯು ಹೆಚ್ಚುವುದು. ಈ ವಿಧವಾಗಿ ಮನೋರಮೆಯ ಮುಖಕಮಲವೂ ವಿಕಸಿತವಾಯಿತು.

ಕೊನೆಯಲ್ಲಿ, ಗುರುಕಾರನು ಬಂದು ಮನೋರಮೆಯನ್ನು ಕರೆದ ಕೊಂಡು ಹೋಗಿ ರಾಜಮಾತೆ ಎದುರಿಗೆ ನಿಲ್ಲಿಸಿದನು. ಅವಳು ಎವೆಯಿಕ್ಕದೆ ಮನೋರಮೆಯನ್ನು ಸ್ವಲ್ಪ ಹೊತ್ತು ದೃಷ್ಟಿಸಿ ನೋಡಿ ಆಶ್ಚರ್ಯಪಟ್ಟು ಗುರುಕಾರನ ಕಡೆ ಕಣ್ಣು ಸನ್ನೆಯನ್ನು ಮಾಡಿ ಭದ್ರಾಸನದಿಂದ ಇಳಿಯು ತ್ತಿದ್ದಳು. ಇಂಗಿತವನ್ನು ಅರಿತು ಅವನು ಇದುವರಿಗೂ ಪರೀಕ್ಷಿಸಲ್ಪಟ್ಟ ಕನ್ಯೆಯರಲ್ಲಿ ಯಾರೂ ಆರಿಸಲ್ಪಡಲಿಲ್ಲವೆಂದು ಅವರಿಗೆ ತಿಳಿಸುವುದಕ್ಕೆ ಹೋದನು. ಇದೇ ಸಮಯವೆಂದು ತಿಳಿದು ಮನೋರಮೆಯು ರಾಜ ಮಾತೆಯು ಇಳಿದ ಒಡನೆ ಅವಳ ಕಾಲಿಗೆ ಬಿದ್ದು "ಮಹಾರಾಣೀ! ಕಾಪಾಡು. ಕಾಪಾಡು. ನನ್ನದೊಂದು ಭಿನ್ನಪವಿರುವುದು. ಲಾಲಿಸಬೇಕು" ಎಂದು ಮೊರೆಯಿಡಲು, ರಾಜಮಾತೆಯು "ಅದೇನು? ನಿರ್ಭಯವಾಗಿ ಹೇಳು" ಎಂದು ಅಭಯವನ್ನಿತ್ತಳು. ಮನೋರಮೆಯು "ನಾನು ಕೇರಳಾ ಧಿಪಳಾದ ಮನೋರಮೆಯು...." ಎಂದು ಹೇಳುವಷ್ಟಕ್ಕೆ ರಾಜಮಾತೆಯು "ಏನು! ಮನೋರಮೆಯೆ? ಆಲೋಕಪ್ರಭೆಯೆ? ಆದುದರಿಂದಲೇ ಇಂತಹ ರೂಪು, ಇಂತಹ ಸೌಂದರ್ಯ, ಇಂತಹ ಲಾವಣ್ಯ" ಎಂದು ವಿಸ್ಮಿತಳಾಗಲು ಮನೋರಮೆಯು "ಅಹುದು. ನನ್ನನ್ನು ಲೋಕಪ್ರಭೆಯೆಂದೂ ಕರೆಯುವ ರೂಢಿಯುಂಟು. ಕಾರಣಾಂತರದಿಂದ ಉಚಿತ ಪರಿವಾರವಿಲ್ಲದೆ ಇಬ್ಬರು ದಾದಿಯರಿಂದೊಡಗೂಡಿ ರಾಜಧಾನಿಯಿಂದ ಗೋಪ್ಯವಾಗಿ ಹೊರಟು ಕಳಿಂಗ ಪಟ್ಟಣವನ್ನು ಸೇರಿ ಧನಕೋಟಿಯ ಮನೆಯಲ್ಲಿ ಇಳಿದುಕೊಂಡಿದ್ದೆನು. ದಾದಿಯರ ಬಳಿ ಶಯನ ಗೃಹದಲ್ಲಿ ಮಲಗಿ ನಿದ್ರಿಸುತ್ತಿರಲು ನನ್ನನ್ನು ಪ್ರಜ್ಞಾಶೂನ್ಯಗೊಳಿಸಿ ಕಳುವಿನಿಂದ ಅಪಹರಿಸಿ ತೆಗೆದುಕೊಂಡು ಇಲ್ಲಿಯ ವರೆಗೂ ಕರೆದು ತಂದಿರುವರು. ಅನಾಥಳಾದ ನನ್ನನ್ನು ಕಾಪಾಡಬೇಕು" ಎಂದು ದೈನ್ಯ ಭಾವದಿಂದ ಕೇಳಿಕೊಳ್ಳಲು, ರಾಜಮಾತೆಯು "ಎಲೆ, ರಾಣಿ, ನಿನ್ನನ್ನು ಕೃತ್ರಿಮದಿಂದ ತಂದವರು ತಕ್ಕ ಶಿಕ್ಷೆಯನ್ನು ಅನುಭವಿ ಸುವರು" ಎಂದು ಸಮಾಧಾನಪಡಿಸಿ ಮನೋರಮೆಯೊಡನೆ ಮಾತನಾಡುತ್ತ ಲಿದ್ದಳು.

ಅಷ್ಟರಲ್ಲಿ ಗುರುಕಾರನು ಪ್ರವೇಶಿಸಿ ರಾಜಮಾತೆಯು ಮನೋರಮೆಗೆ ಅನ್ವಯಿಸಿದ "ರಾಣಿ" ಎಂಬ ಪದವು ಕಿವಿಗೆ ಬೀಳಲು ಕೇಳಿ ರಾಜಮಾತೆಯು

ಹತ್ತಿರಕ್ಕೆ ಹೋಗಿ ಪಿಸುಮಾತಿನಲ್ಲಿ "ನಿಮ್ಮೊಡನೆ ರಹಸ್ಯವಾಗಿ ಮಾತನಾಡುವ ವಿಷಯವಿದೆ" ಎಂದು ಹೇಳಿದನು. ಅವಳು ಮನೋರಮೆಯನ್ನು ಕುರಿತು "ಸ್ವಲ್ಪ ಹೊತ್ತಿನಲ್ಲಿಯೇ ಬರುವೆನು" ಎಂದು ಹೇಳಿ ಗುರುಕಾರನೊಡನೆ ಹೊರಟಳು. ಅವನು ರಾಜಮಾತೆಯನ್ನು ಹೊರಗೆ ಕರೆತಂದು ಶುಂಡಾಲನು ತನಗೆ ತಿಳಿಸಿದ ಮನೋರಮೆಯ ಉನ್ಮತಭಾವವನ್ನು ವಿವರವಾಗಿ ಹೇಳಲು ರಾಜಮಾತೆಯು "ಇಂತಹ ಪರಿಪೂರ್ಣ ಸುಂದರಿಯಲ್ಲಿ ಇದೊಂದು ಕೊರತೆ ಇರುವುದೇ? ಆದರೂ ಚಿಂತೆಯಿಲ್ಲ. ಅಂತಃಪುರವನ್ನು ಸೇರಿದ ಮೇಲೆ ಕ್ರಮೇಣ ನಿವರ್ತಿಯಾಗುವುದು. ಈಗ ಹಿಂತಿರುಗಿ ಹೋಗಿ ಮಾತನಾಡಿಸಿದರೆ ಮೊದಲಿನ ಕಥೆಯನ್ನೇ ಹರಟುವಳು. ಅವಳಿಗೆ ಬೇಕಾದ ಪರಿಚರ್ಯೆಯನ್ನು ಮಾಡಿಸು. ನಾನು ಹೋಗುವೆನು" ಎಂದು ಆಜ್ಞಾಪಿಸಿ ಮನೋರಮೆಯ ಬಳಿಯಂ ಸಾರದೆ ಭೋಜನ ಗೃಹಾಭಿಮುಖಳಾದಳು.

ಇತ್ತ ಗುರುಕಾರನು ಮನೋರಮೆಯ ಸಮೀಪವಂ ಸಾರಿ "ತಮಗೆ ಸಿದ್ಧಪಡಿಸಿರುವ ಗೃಹಕ್ಕೆ ದೇವಿಯರು ಚಿತ್ತೈಸಿ ನಮ್ಮ ಪರಿಚರ್ಯವನ್ನು ಕೈಗೊಳ್ಳಬೇಕು" ಎಂದು ವಿನಯೋಕ್ತಿಯಿಂದ ವಿಜ್ಞಾಪಿಸಿದನು. ಮನೋರಮೆಯು ಆತುರ ಮನಸ್ಸಿನಿಂದ "ಮಹಾರಾಣಿಯು ಯಾತಕ್ಕೆ ಹಿಂತಿರುಗಿ ಬರಲಿಲ್ಲ?" ಎಂದು ಕೇಳಲು ಗುರುಕಾರನು "ಹಿಂತಿರುಗಿ ಬಂದು ದೇವಿಯರೊಡನೆ ಮಾತನಾಡುತ್ತಿರಲು ಈಗ ಅವಕಾಶವಿಲ್ಲವೆಂದು ತಿಳಿಸಿ ತೆರಳಿದರು" ಎಂದು ಅರ್ಧಕಠಿನೋಕ್ತಿಯಿಂದ ಉತ್ತರವಿತ್ತನು.

ಇದನ್ನು ಕೇಳಿ ಮನೋರಮೆಯು ಮನಸ್ಸಿನಲ್ಲಿ ಬಹು ಕಳವಳಪಟ್ಟು ತಾನು ಉನ್ಮತ್ತಳೆಂಬ ವಿಷಯವನ್ನು ಹೇಳಿ ರಾಜಮಾತೆಯ ಮನಸ್ಸನ್ನು ಕೆಡಿಸಿರುವರೆಂದು ತಿಳಿದು ಆತ್ಮಹತ್ಯವನ್ನು ನಿರ್ಧರಿಸಿ ಗುರುಕಾರನೊಡನೆ ಹೊರಟು ತನಗೆ ಸಿದ್ಧಪಡಿಸಿದ ಗೃಹವನ್ನು ಪೊಕ್ಕು ಅಲ್ಲಿ ನಿಯಮಿತರಾದ ದಾದಿಯರಿಬ್ಬರಿಂದ ಪರಿಚರ್ಯವಂ ಕೈಗೊಂಡು ಅಲ್ಪ ಸ್ವಲ್ಪ ಆಹಾರವನ್ನು ಭುಂಜಿಸಿದಳು.

ನಂತರ ದಾದಿಯರ ರೂಪು, ನಡೆ, ನುಡಿಗಳಿಂದ ಕೇರಳೀಯರಾಗಿರಬಹುದೆಂದು ಊಹಿಸಿ ಅವರಿಬ್ಬರನ್ನು ಹತ್ತಿರಕ್ಕೆ ಕರೆದು ವಿಚಾರಿಸಿದಳು. ಮನೋರಮೆಯ ಊಹೆಗೆ ಅನುಗುಣವಾಗಿ ಅವರು ಕೇರಳ ದೇಶದ ಸ್ತ್ರೀಯ:

ರಾಗಿದ್ದರು. ಒಬ್ಬಳಿಗೆ ವಯಸ್ಸು ಹದಿನಾರು ವರುಷ, ಇನ್ನೊಬ್ಬಳಿಗೆ ಹದಿನೇಳು ವರುಷ. ೬-೭ ವಯಸ್ಸಿನಲ್ಲಿ ಇಬ್ಬರೂ ಅನಾಥರಾಗಿ ಕುಳಿಂದನ ಅರಮನೆಯನ್ನು ಸೇರಿದರು. ಅಲ್ಲಿ ಸಲಹಲ್ಪಟ್ಟು ಎರಡು ವರುಷಗಳ ಹಿಂದೆ ದಾದಿಯರಾಗಿ ನೇಮಿಸಲ್ಪಟ್ಟರು ಈ ಎರಡು ವರುಷಗಳಲ್ಲಿಯೂ ರಾಜನಿಗೆಂದು ಆರಿಸಲ್ಪಡುವ ಕನ್ಯೆಗೆ ಪರಿಚಾರಿಣಿಯರಾಗಿದ್ದರು.

ಈ ಕೊನೆಯ ಸಂಗತಿಯನ್ನು ಕೇಳಿದ ಕೂಡಲೇ ಕಳಿಂಗಪಟ್ಟಣ ಪ್ರಾಂತ್ಯದ ಹಳ್ಳಿಯಿಂದ ಅಪಹರಿಸಲ್ಪಟ್ಟ ಕಮಲಿನಿಯ ವಿಷಯವು ಮನೋರಮೆಯ ಮನಸ್ಸಿಗೆ ಹೊಳೆಯಲು ದಾದಿಯರನ್ನು ಕುರಿತು "ಎರಡು ವರುಷಗಳಿಂದಲೂ ನೀವಿಬ್ಬರೂ ಪರಿಚರ್ಯೆಗೈದ ಈ ಕನ್ಯೆಯರ ಹೆಸರನ್ನು ಹೇಳಬಲ್ಲಿರಾ?" ಎಂದು ಕೇಳಲು; ದಾದಿಯರಲ್ಲೊಬ್ಬಳು, ''ಎರಡನೇವರುಷದಲ್ಲಿ ಆರಿಸಲ್ಪಟ್ಟ ಕನ್ಯೆಯ ಹೆಸರು ಕಮಲಿನಿ. ಆಕೆಯನ್ನು ಅರಮನೆಯಲ್ಲಿ 'ತಾರಾದೇವಿ' ಎಂದು ಕರೆಯುವರು. ಆಕೆಗೆ ಈಗ ಒಂದು ಹೆಣ್ಣು ಮೊಗವು ಇರುವುದು. ಬಹುಕಾಲದಿಂದಲೂ ಬಂದ ಪದ್ಧತಿಗೆ ಅನುಸಾರವಾಗಿ ಯಾವ ಕನ್ಯೆಯು ರಾಜಪತ್ನಿಯಾದ ಮೊದಲನೇ ವರುಷದಲ್ಲಿ ಮಕ್ಕಳ ಭಾಗ್ಯವನ್ನು ಪಡೆವಳೋ ಅವಳೇ ರಾಣಿಪದವಿಗೆ ಅರ್ಹಳು. ಇದುವರಿಗೂ ಆದ ರಾಜಪತ್ನಿಯರಲ್ಲಿ ತಾರಾದೇವಿಯೊಬ್ಬರೇ ರಾಣಿಪದವಿಯಲ್ಲಿರುವರು. ಹೋದ ಸಲ ಬಂದ ಕನ್ಯೆಯ ಹೆಸರು ಭ್ರಮರಾಂಬೆ" ಎಂದು ವಿಜ್ಞಾಪಿಸಿದಳು.

ಕಮಲಿನಿಯು ಕುಳಿಂದ ಪತ್ನಿಯಾಗಿರುವಳೆಂದು ತಿಳಿದ ಕೂಡಲೇ ನೀರಿನಲ್ಲಿ ಮುಳುಗಿಹೋಗುವ ಮನುಷ್ಯನಿಗೆ ಒಂದು ಹುಲ್ಲು ಕಡ್ಡಿಯು ದೊರೆತರೂ ಸಹಾಯವಾಗುವದೆಂದು ಅದನ್ನು ಭದ್ರವಾಗಿ ಹಿಡಿದುಕೊಳ್ಳುವಂತೆ ಕಮಲಿನಿಯ ಮೂಲಕವಾದರೂ ತನ್ನ ಸ್ಥಿತಿಗತಿಗಳನ್ನು ರಾಜನಿಗೆ ತಿಳಿಸಿ ಬಿಡುಗಡೆಯಾಗುವೆನೆಂಬ ಭರವಸೆಯನ್ನು ಮನೋರಮೆಯು ಹೊಂದಿ ತನ್ನ ಮನಸ್ಸಂತೋಷವನ್ನು ಹೊರಗೆ ತೋರ್ಪಡಿಸದಿದ್ದಳು. ದಾದಿಯ ವಾಚಾಳಿತನವೇ ಇಷ್ಟಕ್ಕೆ ಅವಕಾಶವಿತ್ತುದು. ದಾದಿಯು ಮಾತು ಮುಗಿಯಲು ಮನೋರಮೆಯು ಉದಾಸೀನಭಾವವನ್ನು ನಟಿಸಿ "ಒಬ್ಬ ಕನ್ಯೆಯು ಮಾತ್ರ ರಾಜಪತ್ನಿಯಾಗುವಳು. ಮಿಕ್ಕವರನ್ನು ಏನು ಮಾಡುವರು" ಎಂದು ಕೇಳಲು, ದಾದಿಯು "ಈ ನಗರದ ದೊಡ್ಡ ಮನುಷ್ಯರ ಪ್ರಾಯದ ಮಕ್ಕಳು

ಅವರನ್ನು ಗುಲಾಮು ವ್ಯಾಪಾರಿಗಳಿಂದ ಬೆಲೆಗೆ ತೆಗೆದುಕೊಂಡು ಮದುವೆ ಯಾಗುವರು. ರೂಪಕ್ಕೆ ತಕ್ಕಂತೆ ಬೆಲೆದೊರಿಯುವುದು. ರಾಜಪತ್ನಿಯಾಗುವ ಕನ್ಯೆಗೆ ಉಳಿದ ಯಾವ ಕನ್ಯೆಗಿಂತಲೂ ಹತ್ತರಷ್ಟು ಬೆಲೆ ಹೆಚ್ಚು. ಈ ಕನ್ಯೆಯನ್ನು ತಂದವನು ಮಹದೈಶ್ವರ್ಯವಂತನಾಗುವನು" ಎಂದು ಉತ್ತರ ವಿತ್ತಳು. ಇನ್ನು ಕಮಲಿನಿಯ ವಿಷಯವನ್ನು ವಿಚಾರಿಸಬೇಕೆಂದು ಮನೋ ರಮೆಯು "ಈ ರೀತಿ ರಾಜಪತ್ನಿಯರಾಗುವವರು ತಮ್ಮ ನೆಂಟರಿಷ್ಟರಲ್ಲಿ ತಾವೆ ಹೋಗಿಬರುವರೊ ಅಥವಾ ಅವರನ್ನೇ ಅರಮನೆಗೆ ಬರಮಾಡಿಕೊಳ್ಳುವರೊ?" ಎಂದು ಕೇಳಲು, ದಾದಿಯು "ಅವರು ಅಷ್ಟು ಪುಣ್ಯಮಾಡಿದವರಲ್ಲ. ಎಂದು ಅರಮನೆಯನ್ನು ಹೊಕ್ಕರೋ ಅಂದಿನಿಂದಲೂ ಅವರಿಗೆ ಹೊರಗಿನ ಪ್ರಪಂಚವೇ ಶೂನ್ಯವಾಗುವುದು. ಕುಳಿಂದ ರಾಜನ ಅರಮನೆಯು ಬಹು ವಿಸ್ತಾರವಾದ್ದು. ಇದರ ಒಳಭಾಗದಲ್ಲಿ ಆರಾಮು, ಲತಾಗೃಹಗಳು, ತಿಳಿನೀರ್ ಕೊಳಗಳು, ಹೂದೋಟಗಳು ಮೊದಲಾದವು ಇರುವುವು. ನಾನಾ ವಿಧ ಭೋಗಸಂಪತ್ಸಮೃದ್ಧಿಯಿಂದ ಕೂಡಿರುವ ಗೃಹಗಳು ಮುಂತಾದುವೂ ಇರು ವವು. ಇಂಥಾ ಅರಮನೆಯಲ್ಲಿ ರಾಜಪತ್ನಿಯರು ಎಲ್ಲಿಬೇಕಾದರೂ ಹೋಗ ಬೇಕಾದರೂ ಸ್ವೇಚ್ಛೆಯಾಗಿ ವಿಹರಿಸುವದಕ್ಕೆ ಅಡ್ಡಿ ಇರುವುದಿಲ್ಲ. ರಾಜನು, ಗುರುಕಾರನು, ನಪುಂಸಕ ಭೃತ್ಯರು ಹೊರತು ಒಂದು ಗಂಡನೊಣವಾದರೂ ಹೊಗಲರಿಯದು ಎಂಬಂತೆ ಹಗಲೂ, ರಾತ್ರಿಯೂ ಸದಾ ಬಿಚ್ಚಿದ ಕತ್ತಿಗಳನ್ನು ಹಿಡಿದುಕೊಂಡು ಪಹರೆಯನ್ನು ಕೊಡುತ್ತಿರುವ ಸೈನಿಕರು ಅರಮನೆಯ ಹೊರವಳಯದಲ್ಲಿ ನಾಲ್ಕುಮಾರಿಗೆ ಒಬ್ಬರಂತೆ ನಿಯಮಿತರಾಗಿ ನಿಂತಿರುವರು. ಆದರೆ ಅರಮನೆಯ ಮೂರನೆ ಅಂತಸ್ಥಿನಲ್ಲಿರುವ ವಿಶಾಲವಾದ ಗೃಹಗಳಲ್ಲಿ ದೊಡ್ಡದೊಡ್ಡ ಕಿಟಕಿಗಳಿರುವವು. ಅಲ್ಲಿಂದ ಈ ನಗರವು ಬಹುದೂರದವರೆಗೂ ಕಾಣುವದು. ನೀವಿರುವ ಈ ಗೃಹದ ಕಿಟಕಿಯಿಂದ ಸಮುದ್ರವೂ ಸಹ ಕಾಣು ವದು. ಅರಮನೆಯೊಳಗಿರುವವರು ಈ ಕಿಟಕಿಗಳಿಂದ ಈ ನಗರದಲ್ಲಿ ನಡೆಯುವ ನೋಟಗಳನ್ನು ನೋಡಬಹುದು. ರಾಜಪತ್ನಿಯರಿಗೆ ಇರುವ ನಿರ್ಬಂಧಗಳು ಮಾತ್ರ ಸ್ವಲ್ಪವೂ ಕಡಿಮೆಇಲ್ಲದೆ ದಾದಿಯರಿಗೂ ಸಹ ಅನ್ವಯಿಸುವದು. ದಾದಿ ಯರೆಂದು ನೇಮಿಸಲ್ಪಡುವವರೆಲ್ಲರೂ ಮರಣಾವಧಿ ಅರಮನೆಯಲ್ಲೇ ಇರಬೇ ಕೆಂಬ ಕ್ರೂರಕಟ್ಟಳೆ ಇರುವದು. ರಾಜಪತ್ನಿಯರಿಗೆ ರಾಜನಿರುವನು. ದಾದಿಯ

ರಾದರೊ ಕನ್ಯಾವಸ್ಥೆಯಲ್ಲೇ ಕಾಲಕಳೆಯಬೇಕು. ಈ ಕಾರಣದಿಂದಲೇ ದಾದಿಯರಲ್ಲಿ ಅನೇಕರು ಸವೆದು ಕೃಶರಾಗಿ ೨೫-೩೦ ವರುಷವಯಸ್ಸಿನಲ್ಲೇ ಮರಣಕ್ಕೀಡಾಗುವರು. ಇಲ್ಲಿನ ದಾದಿಯ ಕೆಲಸವು ಜಿತಮನಸ್ಕರಿಗೂ ನಮ್ಮಂಥ ಅನಾಥೆಯರಿಗೂ ಅಲ್ಲದೆ ಇತರರಿಗೆ ಮರಣ ಹೇತುವು" ಎಂದು ಹರಟೆ ಮುಗಿಸಿದಳು. ಇದನ್ನೆಲ್ಲಾ ಉದಾಸೀನ ಭಾವದಿಂದ ಕೇಳುತ್ತಿರುವ ಳಾದರೂ ಮನೋರಮೆಯು ಮನಸ್ಸಿನಲ್ಲಿ ಕಳವಳಗೊಳ್ಳುತ್ತಲೂ ವಿಧವಿಧ ವಾಗಿ ಯೋಚಿಸುತ್ತಲೂ ದಾದಿಯ ಮಾತು ಮುಗಿದ ಕೂಡಲೇ "ಕಮಲಿನಿ ಎಂಬಾಕೆಯು ಈಗ ತಾರಾದೇವಿಯೆಂದು ಕರೆಯಲ್ಪಡುತ್ತಿರುವಳೆಂದು ಹೇಳಿದೆಯಲ್ಲ. ಆಕೆಗೆ ವಯಸ್ಸು ಎಷ್ಟಾಗಿರಬಹುದೆಂದು ಯೋಚಿಸುವೆ ?" ಎಂದು ಕೇಳಲು, ದಾದಿಯು "ಸುಮಾರು ೨೧-೨೨ ವರುಷವಿರಬಹುದು. ಅವರನ್ನು ನೋಡಬೇಕೆಂಬ ಇಚ್ಛೆಯು ನಿಮಗೆ ಇದ್ದರೆ ಹೇಳಿ. ನಿಮ್ಮ ಅಭಿಲಾಷೆಯನ್ನು ದೇವಿಯವರಿಗೆ ಅರಿಕೆ ಮಾಡುವೆವು" ಎಂದು ಉತ್ತರ ವಿತ್ತಳು. ಮನೋರಮೆಯು ಲವಲವಿಕೆಗೊಂಡ ಮನಸ್ಸನ್ನು ಸಂಪೂರ್ಣ ವಾಗಿ ಅಡಗಿಸಲಾರದೆ ಸ್ವಲ್ಪ ಆತುರದಿಂದ "ಹಾಗೇ ಆಗಲಿ ! ಈಗಲೇ ಕರೆತರುವಿರಾದರೆ ಉತ್ತಮ" ಎಂದು ಅನುಮತಿಯನ್ನೀಯಲು ದಾದಿಯು "ಈಗ ಆಚರಿಸುತ್ತಿರುವ ಹಬ್ಬದಲ್ಲಿ ರಾಜಪತ್ನಿಯರು ಸೂರ್ಯಾಸ್ತಮಾನದವರಿಗೆ ಉಪವಾಸವಿರುವ ಕಾಲದಲ್ಲಿ ಅವರವರ ಗೃಹವನ್ನು ಬಿಟ್ಟು ಕದಲಬಾರದು. ಮತ್ತು ರಾತ್ರಿ ಒಂಭತ್ತು ಘಂಟೆಯಾದ ಮೇಲೆ ಅವರವರು ತಮ್ಮ ಗೃಹಗಳಲ್ಲಿ ಇರಬೇಕು ಎಂಬ ಕಟ್ಟಳೆಯು ಇರುವುದರಿಂದ ದೇವಿಯರನ್ನು ಈಗಲೇ ಕರೆತರುವುದಕ್ಕೆ ಆಗುವುದಿಲ್ಲ. ನಾಳೆ ಸೂರ್ಯಾಸ್ತಮಾನವಾದ ಮೇಲೆ ಕರೆತರುವುದಕ್ಕಾಗುವುದು. ಈಗ ನಿಮ್ಮ ಇಚ್ಛೆಯನ್ನು ಮಾತ್ರ ಅರಿಕೆ ಮಾಡುವೆವು" ಎಂದು ಹೇಳಿ ಹೊರಡಲುದ್ಯುಕ್ತರಾಗಲು ಮನೋರಮೆಯು "ತಾರಾದೇವಿಗೆ ಆಕೆಯ ತಾಯಿ, ತಂಗಿಯರನ್ನು ನಾನು ಸ್ವಲ್ಪ ದಿನಗಳ ಕೆಳಗೆ ನೋಡಿ ಬಂದಿರುವೆನೆಂದೂ ಅವರ ಸಮಾಚಾರವನ್ನು ಹೇಳುವೆನೆಂದೂ ತಿಳಿಸಿ" ಎಂದು ಹೇಳಿಕಳುಹಿಸಿದಳು.

ದಾದಿಯರು ಮನೋರಮೆಯನ್ನು ಬಿಟ್ಟು ಹೊರಟು ಕಮಲಿನಿಯನ್ನು ಕಂಡು ಮನೋರಮೆಯು ಹೇಳಿದ ಸಂಗತಿಯನ್ನು ತಿಳಿಸಿ ಅವಳು ಮನೋ

ರಮೆಯನ್ನು ನೋಡಲು ಸಮ್ಮತಿಸಿದುದನ್ನು ಹಿಂತಿರುಗಿ ಬಂದು ಮನೋರಮೆಗೆ ತಿಳಿಸಿದರು. ಅನಂತರ ದಾದಿಯರು ಸಮೀಪದಲ್ಲಿ ಮಲಗಿರಲು ಮನೋರಮೆಯು ಮಂಚದ ಮೇಲೆ ಮಲಗಿ ಸ್ವಪ್ನಗಳೇ ತುಂಬಿದ ನಿದ್ರೆಯಿಂದ ಆ ರಾತ್ರಿಯನ್ನು ಕಳೆದಳು.

ಮಾರನೇ ದಿನ ಬೆಳಿಗ್ಗೆ ಎದ್ದು ನಿತ್ಯಕರ್ಮಗಳನ್ನು ತೀರಿಸಿಕೊಂಡು ಸ್ವಲ್ಪ ಹೊತ್ತು ಬಗೆಬಗೆಯಾದ ಯೋಚನೆಯಲ್ಲಿ ಮುಳುಗಿದವಳಾಗಿಯೂ, ಒಂದೊಂದು ವೇಳೆ ದಾದಿಯರೊಡನೆ ಮಾತನಾಡುತ್ತಲೂ, ಸ್ವಲ್ಪ ಹೊತ್ತು ಆ ಗೃಹದಲ್ಲಿ ಇರಿಸಿರುವ ಪುಸ್ತಕಗಳಲ್ಲಿ ಒಂದನ್ನು ಆರಿಸಿ ತೆಗೆದು ಓದುತ್ತಲೂ ಸೂರ್ಯಾಸ್ತಮಾನಕಾಲವು ಎಷ್ಟು ಹೊತ್ತಿಗೆ ಆಗುವದೋ ಎಂದು ಹಲವು ಬಗೆಯಾಗಿ ಹಗಲನ್ನು ಕಳೆದಳು. ಸಾಯಂಕಾಲವಾಗಲು ದಾದಿಯರು ಮನೋರಮೆಯ ಅಪ್ಪಣೆಯನ್ನು ಪಡೆದು ಕಮಲಿನಿಯನ್ನು ಕರೆತಂದು ಬಿಟ್ಟರು.

ತಾರಾದೇವಿಯು ದಾದಿಯರನ್ನು ಪಕ್ಕದ ಮನೆಯಲ್ಲಿ ಕಾದುಕೊಂಡಿದ್ದು ಕರೆದಾಗ ಬರುವಂತೆ ಆಜ್ಞಾಪಿಸಿ ಕಳುಹಿಸಿ ಮನೋರಮೆಯನ್ನು ನೋಡಿ "ನನ್ನ ತಾಯಿ ಹೇಗಿರುವಳು? ತನ್ನ ತಂಗಿಯರು ಹೇಗಿರುವರು? ನನ್ನನ್ನು ನೆನೆಸುತ್ತಾರೆಯೇ? ಒಂದು ಬಾರಿಯಾದರೂ ಅವರ ಮುಖವನ್ನು ನೋಡುವುದಕ್ಕೆ ಇಲ್ಲದ ನನ್ನ ಬಾಳನ್ನು ಎಷ್ಟೆಂದು ನಿಂದಿಸಲಿ!" ಎಂದು ಕಣ್ಣೀರು ಬಿಟ್ಟು ದುಃಖಿಸಿದಳು. ಮನೋರಮೆಯು ಬಹು ಪಶ್ಚಾತ್ತಾಪದಿಂದ "ಮಹಾರಾಣಿಯೇ, ದುಃಖಿಸಬೇಡಿರಿ. ಸಮಾಧಾನ ಹೊಂದಿರಿ. ನಿಮ್ಮ ತಾಯಿ, ತಂಗಿಯರು ಸುಖವಾಗಿರುವರು. ನಿಮ್ಮ ತಾಯಿ ನಿಮ್ಮನ್ನು ನೆನಸಿಕೊಂಡು ವ್ಯಸನಪಟ್ಟರೂ ನಿಮ್ಮ ತಂಗಿಯರ ಎದುರಿನಲ್ಲಿ ಮಾತ್ರ ತನ್ನ ವ್ಯಸನವನ್ನು ತೋರ್ಪಡಿಸದೆ ಇರುವಳು. ನಿಮ್ಮ ತಂಗಿಯರು ಇನ್ನೂ ಯುವತಿಯರು. ಆದುದರಿಂದ ಅವರಿಗೆ ನಿಮ್ಮ ತಾಯಿಗಿರುವಷ್ಟು ವ್ಯಸನವಿಲ್ಲದಿದ್ದರೂ ಯಾವಾಗಲಾದರೊಂದು ಸಲ ನಿಮ್ಮನ್ನು ನೆನಸಿಕೊಂಡು ದುಃಖಿಸುವರು" ಎಂದು ಹೇಳಿ ತಾರಾದೇವಿಯನ್ನು ಸಮಾಧಾನಪಡಿಸಿದಳು.

ನಂತರ ತನ್ನ ಹೆಸರು, ಪದವಿ ಮೊದಲಾದುದನ್ನು ತಿಳಿಸಿ ತಾನು ಕಾರಣಾಂತರದಿಂದ ಪರಿವಾರವಿಲ್ಲದೆ ಇಬ್ಬರು ದಾದಿಯರಿಂದೊಡಗೂಡಿ

ರಾಜಧಾನಿಯನ್ನು ಬಿಟ್ಟು ಹೊರಟು, ಮಾರ್ಗ ಮಧ್ಯದಲ್ಲಿ ದಾರಿತಪ್ಪಿ ಕಮಲಿನಿಯ ತಾಯಿಯನ್ನು ಸಂಧಿಸಿ, ಅಲ್ಲಿಂದ ಮುಂದಕ್ಕೆ ಹೊರಟು ಕಳಿಂಗ ಪಟ್ಟಣವನ್ನು ಸೇರಿ ಧನಕೋಟಿಯ ಮನೆಯಲ್ಲಿ ಇಳಿದುಕೊಂಡು ಇರಲು ಕೃತ್ರಿಮದಿಂದ ಅಪಹರಿಸಲ್ಪಟ್ಟು ಶುಂಡಾಲನ ವಶದಲ್ಲಿ ಸಿಕ್ಕಿ ಬಿದ್ದು ಕೊಳಂಬುವಿಗೆ ಒಯ್ಯಲ್ಪಟ್ಟು ರೂಪಶ್ರೇಷ್ಟಳೆಂದು ರಾಜಮಾತೆಯು ಆರಿಸಲು ಆ ಮಹಾರಾಣಿಯಲ್ಲಿ ತನ್ನ ಸ್ಥಿತಿಗತಿಗಳನ್ನು ತಿಳಿಸಿ ಕಾಪಾಡಬೇಕೆಂದು ಮೊರೆಯಿಡಲು ಅವಳ ಸನ್ನಿಧಿಯಿಂದ ಬಿಡಿಸಿ ತಾನು ಉನ್ಮತ್ತಳೆಂಬ ದುರಭಿಪ್ರಾಯವನ್ನು ಅವಳಿಗೆ ಬೋಧಿಸಿ ಅವಳ ಮನಸ್ಸನ್ನು ಕೆಡಿಸಿ ತನ್ನನ್ನು ಈ ಗತಿಗೆ ತಂದಿರುವ ಕ್ರೂರಕೃತ್ರಿಮವನ್ನೆಲ್ಲಾ ಸವಿಸ್ತಾರವಾಗಿ ಹೇಳಿ ತನ್ನನ್ನು ಕಾಪಾಡಬೇಕೆಂದು ಮೊರೆಯಿಟ್ಟಳು.

ತಾರಾದೇವಿಯು ಮೊದಲು ಮೊದಲು ಮನೋರಮೆಯು ಮಾತಿನಲ್ಲಿ ನಂಬಿಕೆ ಇಡದಿದ್ದರೂ ಕೊನೆಯಲ್ಲಿ ಹೇಳಿದುದನ್ನೆಲ್ಲಾ ಪರಿಗಣಿಸಿ ನಿಜವೆಂದು ನಂಬಿ ಬಹು ಪಶ್ಚಾತ್ತಾಪಪಟ್ಟು ಕನಿಕರದಿಂದ “ ಎಲೆ ರಾಣಿ, ನಿನ್ನ ದುರವಸ್ಥೆಯು ಬಹು ಪರಿತಾಪಕರವಾದ್ದು. ನಾನೂ ಕೂಡ ಈ ಅವಸ್ಥೆಯನ್ನು ಅನುಭವಿಸಿರುವೆನು. ಆದುದರಿಂದ ಈ ಸಂಕಟದ ಪರಿಮಾಣವು ಇಷ್ಟೇ ಎಂದು ನನಗೆ ಪರಿಪೂರ್ಣವಾಗಿ ತಿಳಿದಿರುವುದು. ನನ್ನ ದೇಹವನ್ನಾದರೂ ಒಪ್ಪಿಸಿ ನಿನಗೆ ಸಹಾಯ ಮಾಡಬೇಕೆಂಬ ಮನಸ್ಸಿದ್ದರೂ ಚೈತನ್ಯವಿಲ್ಲದಿರುವುದು. ಒಂದುವೇಳೆ ಪ್ರಯತ್ನಪಟ್ಟರೂ ಅನೇಕ ಪ್ರತಿಬಂಧಕಗಳಿರುವವು. ನನ್ನ ಪತಿಯು ಸಿಂಹಳದೇಶಕ್ಕೆಲ್ಲಾ ಅರಸನಾದರೂ ಪೂರ್ವಾನುಸಾರವಾದ ಪದ್ಧತಿಗೆ ಆಳಾಗಿರುವನು. ಆತನಲ್ಲಿ ನಿನ್ನ ಪರವಾಗಿ ಮಾತನಾಡಲೆತ್ನಿಸುವೆನಾದರೆ ಸವತಿಮಾತ್ಸರ್ಯದಿಂದ ಇಂತಹ ಯುಕ್ತಿಯನ್ನು ತೆಗೆದಿರುವಳೆಂದು ತಿರಸ್ಕೃತಳಾಗುವೆನು. ಇದಲ್ಲದೆ ಈ ಹಬ್ಬದಲ್ಲಿ ರಾಜನು ರಾಣೀವಾಸದಲ್ಲಿ ಇರುವುದಿಲ್ಲ. ರಾಜಮಾತೆಯು ಮೊದಲೇ ದುರ್ಬೋಧನೆಗೆ ಒಳಗಾಗಿರುವಳೆಂದು ನೀನೆತಿಳಿಸಿರುವೆ. ಹೀಗಿರುವಲ್ಲಿ ನನ್ನ ಎತ್ನವು ಆಕೆಯಲ್ಲಿನಡೆಯುವದೆ? ಕೃತಿಮದಿಂದಲಾದರೂ ನಿನ್ನನ್ನು ಇಲ್ಲಿಂದ ಸಾಗಿಸೋಣವೆಂದರೆ ಅರಮನೆ ಒಳಗಡೆ ಇರುವವರು ನನ್ನ ಆಜ್ಞೆಗೆ ಒಳಪಟ್ಟಿರುವರಾದರೂ ಹೊರಗಡೆನಿಂತು

ಸಹರಿಕೊಡುವ ಪ್ರತಿಯೊಬ್ಬ ಸೈನಿಕನಿಗೂ ನಾನು ಕಡೆಯಾಗಿರುವೆನು." ಎಂದು ಹೇಳಿದಳು.

ಸಿಂಹಳೇಶನ ಪಟ್ಟಮಹಿಷಿಯೆಂದೆನಿಸಿ ಅತ್ಯುನ್ನತ ಪದವಿಯಲ್ಲಿರುವ ತಾರಾದೇವಿಯಿಂದ ಸಹಾಯವನ್ನು ಪಡೆದು ಬಿಡುಗಡೆಯಾಗುವೆನೆಂದು ಬಹು ಭರವಸೆಯಿಂದ ಮನೋರಮೆಯು ಕಟ್ಟಿದ ಕಟ್ಟಡಕವು ಆಕಾಶದಲ್ಲಿ ಹಾರಿ ಮಾಯುವಾಯಿತು. ಇಂಥಾದ್ದೇ ಹೀಗಾದಮೇಲೆ ಹೊರಗಡೆಯಲ್ಲಿ ತಿರುಕ ಳಂತಿರುವ ಮಂಗಲೆಯೆಂಬ ಮುದುಕಿಯಿಂದ ಏನಾದೀತು ? ಎಂದು ಚಿಂತಿಸಿ ಮನೋರಮೆಯು ಬಹಳ ನಿರಾಸೆಗೊಂಡು ಮನಸ್ಸಿನಲ್ಲಿ ಬಹು ವ್ಯಥೆಪಟ್ಟಳು. ತಾರಾದೇವಿಯು ಮನೋರಮೆಯ ಮನಸ್ಸನ್ನು ತಿಳಿದು ಸಮಾಧಾನಪಡಿಸು ತ್ತಿದ್ದಳು.

ಅಷ್ಟರಲ್ಲಿ ದಾದಿಯರ ಮೂಲಕ ಅಪ್ಪಣೆಯನ್ನು ಪಡೆದು ಗುರುಕಾರನು ಪ್ರವೇಶಿಸಿ ತಾರಾದೇವಿಯು ಅಲ್ಲಿರುವದನ್ನು ಕಂಡು ದೂರದಲ್ಲಿ ನಮ್ರತೆಯಿಂದ ನಿಂತು ಮನೋರಮೆಯನ್ನು ಕುರಿತು "ತಮ್ಮ ದೇಶದಲ್ಲಿ ತಮಗೆ ತೊತ್ತಿಯಾಗಿದ್ದ ಯುವತಿಯೊಬ್ಬಳು ಈ ನಗರಕ್ಕೆ ಬಂದು ಈಗಲೂ ತಮಗೆ ಸೇವಕಳಾಗಿರಲು ಅಪೇಕ್ಷಿಸಿ ಹೊರಗಡೆ ಕಾದಿರುವಳು" ಎಂದು ಭಿನ್ನವಿಸಿದನು ಮನೋರಮೆಯು ಇದನ್ನು ಕೇಳಿದ ಕೂಡಲೆ ಈಗ ಬಂದಿರುವಳು ಮದನಿಕೆ ಚೂತಲತಿಕೆಯರಲ್ಲಿ ಒಬ್ಬಳಾಗಿರಬೇಕೆಂದು ಎಣಿಸಿ ಹರ್ಷಿತಳಾಗಿ "ತನ್ನ ಹೆಸರೇನೆಂದು ತಿಳಿಸಿದಳು? ಅದು ಅನಾವಶ್ಯಕ. ಈಗಲೇ ಬರಹೇಳು" ಎಂದು ಆತುರದಿಂದ ಅಪ್ಪಣೆ ಯನ್ನು ಕೊಡಲು, ತಾರಾದೇವಿಯು "ಇಷ್ಟು ಆತುರಪಡಬೇಡ. ಇಷ್ಟು ಸರಾಗವಾಗಿ ಆ ಯುವತಿಯನ್ನು ಬರಮಾಡಲಾರರು. ಇಲ್ಲಿನ ಕಟ್ಟಳೆಗಳು ನಿನಗೆ ತಿಳಿಯವು. ಇವಳ ಆಗಮನವು ಪ್ರಾಯಶಃ ಮುಖ್ಯವಾದದ್ದಾಗಿರ ಬಹುದು" ಎಂದು ಪಿಸುಮಾತಿನಲ್ಲಿ ಹೇಳಿದಳು. ಗುರುಕಾರನು ದೂರದಲ್ಲಿ ನಿಂತುಕೊಂಡಿದ್ದನಾದ್ದರಿಂದ ತಾರಾದೇವಿಯು ಹೇಳಿದ ಮಾತುಗಳಲ್ಲಿ ಒಂದಾ ದರೂ ಅವನಿಗೆ ಕೇಳಿಸಲಿಲ್ಲ.

ನಂತರ ತಾರಾದೇವಿಯು "ಇನ್ನೇನು ಹೇಳಬೇಕಾಗಿದೆ ಹೇಳು" ಎಂದು ಆಜ್ಞಾಪಿಸಲು ಗುರುಕಾರನು ಮನೋರಮೆಯನ್ನು ಕುರಿತು "ತಮ್ಮ ನಡೆನುಡಿಗಳಿಂದ ಈ ಯುವತಿಯನ್ನು ತೊತ್ತಿಯಾಗಿ ಇರಿಸಿಕೊಳ್ಳಲು ತಮಗೆ

ಸಮ್ಮತಿಯಾಗಿರುವುದೆಂದು ತಿಳಿದೆನು. ಆದರೆ ಈ ವಿಷಯದಲ್ಲಿ ಮೊದಲು ರಾಜಮಾತೆಯ ಅನುಮತಿಯನ್ನು ಕೇಳಬೇಕಾಗಿದೆ" ಎಂದು ವಿಜ್ಞಾಪಿಸಿದನು. "ಈ ಕೆಲಸವು ನನಗಿರಲಿ. ಈಗಲೇ ರಾಜಮಾತೆಯ ಬಳಿಗೆ ಹೋಗುವೆನು" ಎಂದು ತಾರಾದೇವಿಯು ಗುರುಕಾರನಿಗೆ ತಿಳಿಸಿ "ಶೀಘ್ರದಲ್ಲಿಯೇ ಬರುವೆನು" ಎಂದು ಪಿಸುಮಾತಿನಲ್ಲಿ ಮನೋರಮೆಗೆ ಹೇಳಿ, ಗುರುಕಾರನನ್ನು ಕರೆದುಕೊಂಡು ರಾಜಮಾತೆಯ ಸನ್ನಿಧಿಯನ್ನು ಸೇರಿ ಆ ಯುವತಿಯನ್ನು ಬರಮಾಡುವುದಕ್ಕೆ ಅವಳ ಅನುಮತಿಯನ್ನು ಕೊಡಿಸಿ ಗುರುಕಾರನನ್ನು ಕಳುಹಿಸಿ ಹಿಂತಿರಿಗಿ ಮನೋರಮೆಯ ಬಳಿಯನ್ನೈದಿ ಅವಳನ್ನು ಕುರಿತು "ನಾನು ಹೋಗಿ ಕೇಳಿದ ಮಾತ್ರಕ್ಕೆ ರಾಜಮಾತೆಯು ತನ್ನ ಅನುಮತಿಯನ್ನು ಕೊಟ್ಟಳು. ಆದರೆ ಈ ತೊಳ್ತಿಯು ನಿನ್ನ ಜೀವಮಾನಕಾಲದವರಿಗೂ ಈ ಅರಮನೆಯೊಳಗಡೆಯಲ್ಲೇ ವಾಸವಾಗಿರಬೇಕೆಂಬ ಮೊದಲಿನಿಂದ ಬಂದ ಕಟ್ಟಳೆಯನ್ನು ಇವಳಿಗೆ ತಿಳಿಯುವಂತೆ ಹೇಳಿ ಬರಮಾಡುವಂತೆ ಗುರುಕಾರನಿಗೆ ಆಜ್ಞಾಪಿಸಿರುವಳು. ಇವಳಿಗೆ ನಿನ್ನಮೇಲೆ ಇರುವ ಯಾವ ಅನುರಾಗವು ಇವಳನ್ನು ಕಳಿಂಗಪಟ್ಟಣದಿಂದ ಇಲ್ಲಿಯವರಿಗೂ ನಿನ್ನನ್ನು ಅನುಸರಿಸಿ ಬರುವಂತೆ ಪ್ರೇರೇಪಿಸಿತೊ ಅದೇ ಅನುರಾಗವು ಈಗಲೂ ಈ ಕಠಿನ ಕಟ್ಟಳೆಗೆ ತಡೆಯಿಲ್ಲದೆ ಒಡಂಬಡುವಂತೆ ಮಾಡುವದರಲ್ಲಿ ಸಂದೇಹವಿಲ್ಲ." ಎಂದು ಹೇಳಿ ಮುಗಿಸುವಷ್ಟರಲ್ಲಿ ಗುರುಕಾರನು ಹಿಂತಿರಿಗಿ ಪ್ರವೇಶಿಸಿ, "ನಾನು ಹೇಳಿದ ಕಟ್ಟಳೆಗೆ ನಿಮ್ಮ ತೊಳ್ತಿಯು ಒಡಂಬಡಲು ಇವಳನ್ನು ಬರಮಾಡಿರುವೆನು. ತಮ್ಮಲ್ಲಿಗೆ ಬಂದು ಕಾಣಿಸಿಕೊಳ್ಳಲು ತಮ್ಮ ಅಪ್ಪಣೆಯನ್ನು ಎದುರುನೋಡುತ್ತಾ ಪಕ್ಕದ ಮನೆಯಲ್ಲಿ ಕಾದಿರುವಳು" ಎಂದು ತಿಳಿಸಿದನು. ತಾರಾದೇವಿಯು "ಇನ್ನು ನಿನ್ನ ತೊಳ್ತಿಯೊಡನೆ ಮಾತನಾಡಬೇಕಾದ ವಿಷಯಗಳು ಅನೇಕವಿರಬಹುದು. ನಾನು ಹೊರಡುವೆನು" ಎಂದು ಹೇಳಿ ಹೊರಟಳು. ಗುರುಕಾರನು ಅಪ್ಪಣೆಯನ್ನು ಪಡೆದು ಹೊರಟುಹೋದನು.

ಅವರಿಬ್ಬರೂ ಹೋಗಲು ಮನೋರಮೆಯು ಆ ತೊಳ್ತಿಯು ಬರಲೆಂದು ಅಪ್ಪಣೆಯನ್ನಿತ್ತು ಬರುವವಳು ಮದನಿಕೆಯೋ ಚೂತಲತಿಕೆಯೋ ಎಂದು ಲವಲವಿಕೆಗೊಂಡು ಅವಳನ್ನು ಆಲಂಗಿಸಿಕೊಳ್ಳಬೇಕೆಂದು ಸಿದ್ಧಳಾಗಿ ಎದ್ದು ನಿಂತಿರಲು ಬಾಗಿಲು ತೆರೆಯಲ್ಪಟ್ಟು ಪರಿಚಿತೆಯಿಲ್ಲದ ಯುವತಿಯೊಬ್ಬಳು

ಕಾಣಿಸಿಕೊಂಡಳು. ಆವಳನ್ನು ನೋಡಿದಾಕ್ಷಣ ಮನೋರಮೆಯ ಮನಸ್ಸು ಪಾತಾಳಕ್ಕೆ ಇಳಿಯಿತು. ಆ ಯುವತಿಯು ತಾನು ಪ್ರವೇಶಿಸಿದ ಬಾಗಿಲನ್ನು ಮುಚ್ಚಿ ಮನೋರಮೆಯ ಸಮೀಪವಂ ಸಾರಿದಳು. ಹತ್ತಿರದಲ್ಲಿ ಅವಳನ್ನು ನೋಡಿದಾಕ್ಷಣ ಮನೋರಮೆಯ ಮನಸ್ಸು ಪಾತಾಳದಿಂದ ಸ್ವರ್ಗಕ್ಕೆ ಏರಿತು. ಹೀಗಾಗಲು ಕಾರಣವೇನೆಂದರೆ — ರಾಮೇಶ್ವರದಲ್ಲಿ ಹಡಗನ್ನು ಹತ್ತಿ ಪ್ರಯಾಣಿಕರ ನಡುವೆ ಮಂಗಲೆಯೊಡನೆ ಕುಳಿತ್ತಿದ್ದು ಮನೋರಮೆಯ ಕಣ್ಣಿಗೆ ಬಿದ್ದ ಕಪ್ಪು ದೇಹದ ಆ ಸ್ತ್ರೀಯಳೇ ಆ ತೊಳ್ತಿಯಾಗಿದ್ದಳು.

ನಂತರ ಆ ತೊಳ್ತಿಯು ಅಡ್ಡಬಿದ್ದು ನಮಸ್ಕಾರಮಾಡಲು ಮನೋರಮೆಯು ಅವಳನ್ನು ಕುರಿತು "ನೀನ್ಯಾರು ? ನಿನ್ನ ಹೆಸರೇನು ?" ಎಂದು ಕೇಳಲು, ಅವಳು ಬಾಗಿಲನ್ನು ಭದ್ರವಾಗಿ ಮುಚ್ಚಿ ಸುತ್ತಮುತ್ತಲೂ ನೋಡಿ ಯಾರೂ ಹೊಂಚಿ ಕೇಳುವುದಿಲ್ಲವೆಂದು ಧೃಡಪಡಿಸಿಕೊಂಡು ಬಂದು, "ತಮ್ಮನ್ನು ಈ ಸೆರೆಯಿಂದ ಬಿಡಿಸಿ ತೆಗೆದುಕೊಂಡು ಹೋಗಲು ಯತ್ನಿಸಿರುವ ಮಂಗಲೆಗೆ ನಾನು ಆಪ್ತಳು. ನನ್ನನ್ನು ಕಾಮಿನಿಯೆಂದು ಕರೆಯುವರು" ಎಂದು ಉತ್ತರವಿತ್ತಳು. ಇದನ್ನು ಕೇಳಿ ಮನೋರಮೆಯು ಸಂತೋಷಾಶ್ಚರ್ಯಗೊಂಡವಳಾಗಿ "ನಿಜವಾಗಿಯೂ ನನ್ನನ್ನು ಬಿಡಿಸುವಷ್ಟು ಭರವಸೆಯು ನಿನಗೆ ಇರುವುದೆ ?" ಎಂದು ಆತುರದಿಂದ ಕೇಳಲು, ಕಾಮಿನಿಯು "ದೇವರ ಮೇಲೆ ಭಾರವಿಟ್ಟು ಈ ಕಾರ್ಯವನ್ನು ನೆರವೇರಿಸುವುದಕ್ಕಾಗಿಯೇ ಇಲ್ಲಿಯವರಿಗೂ ನಾನು ಬಂದಿರುವುದು" ಎಂದು ಉತ್ತರವಿತ್ತಳು. ಇದರಿಂದ ಮನೋರಮೆಯ ಮನಸ್ಸು ಸಂತೋಷದಿಂದ ತುಂಬಿ ತುಳುಕಾಡುವಂತಾಗಿ ಕಾಮಿನಿಯನ್ನು ಗಾಢಾಲಿಂಗನೆ ಮಾಡಿಕೊಂಡು ತನ್ನ ಸಮೀಪದಲ್ಲಿಯೇ ಕುಳ್ಳಿರಿಸಿಕೊಳ್ಳುವುದಕ್ಕೆ ಯತ್ನಿಸಲು, ಕಾಮಿನಿಯು ತಡೆದು "ಕ್ಷಮಿಸಬೇಕು ; ತಮ್ಮ ಪದವಿ ಮೊದಲಾದ್ದನ್ನು ನಾನು ಚೆನ್ನಾಗಿ ಬಲ್ಲೆನು. ಇದಲ್ಲದೆ ಪ್ರಕೃತದಲ್ಲಿ ತೋಳ್ತಿಯಂತೆ ನಟಿಸುವುದರಿಂದ ನಾನು ಬಂದ ಕೆಲಸವು ನೆರವೇರಬೇಕಾಗಿರುವುದು. ಆದ್ದರಿಂದ ನನ್ನ ಮನಸ್ಸಿನಂತೆ ಆಚರಿಸುವುದಕ್ಕೆ ಅಭ್ಯಂತರ ಮಾಡಬೇಡಿ" ಎಂದು ವಿನಯೋಕ್ತಿಯಿಂದ ಕೇಳಿಕೊಳ್ಳಲು ಮನೋರಮೆಯು "ನಿನ್ನ ಇಷ್ಟವಿದ್ದಂತೆ ಆಗಲಿ. ಈ ಕಾರ್ಯವು ಗೆಲ್ಲಲಿ ಸೋಲಲಿ ನಿನ್ನ ಉಪಕಾರವನ್ನು ಮಾತ್ರ ಎಂದೆಂದಿಗೂ ಮರೆಯ

ಲಾರೆನು. ಮಂಗಲೆಯೂ ನೀನೂ ಸೇರಿ ಯೋಚಿಸಿರುವ ತಂತ್ರವೇನು ? ಹೇಳು " ಎಂದು ಕೇಳಿದಳು. ಕಾಮಿನಿಯು " ನೀವು ಒಪ್ಪಿದರೆ ನಡಿಯುವುದು " ಎಂದು ಮಾತನ್ನು ತಿರುಗಿಸಿ ಹೇಳಲು ಮನೋರಮೆಯು " ನಾನು ಒಪ್ಪುವುದರಲ್ಲಿ ಅನುಮಾನವೆ ? ಎಲೆ ಕಾಮಿನಿ, ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿರುವುದನ್ನು ಹೇಳುವೆನು ಕೇಳು. ಆತ್ಮಹತ್ಯ ಮಾಡಿಕೊಂಡು ಪ್ರಾಪ್ತಿಸುವ ಪಾಪದಿಂದ ದುರ್ಗತಿಗಾದರೂ ಹೋಗುವೆನೇ ಹೊರತು ಪರಸ್ಪರ ಅನುರಾಗಲಭ್ಯದಿಂದ ವರಿಸದ ಪುರುಷನ ಆಲಿಂಗನವೆಂಬ ಕಾಳೋರಗನ ಬಾಯಿಗೆ ನಾನು ತುತ್ತಾಗುವುದಿಲ್ಲ. ಇದು ಖಂಡಿತವು " ಎಂದು ಉದ್ರೇಕದಿಂದ ಹೇಳಿದಳು.

ಮನೋರಮೆಯು ಇಂತಹ ಮನೋಭಾವವನ್ನು ಗ್ರಹಿಸಿದವಳಾಗಿ ಕಾಮಿನಿಯು " ನಾವು ಯೋಚಿಸಿರುವ ತಂತ್ರವನ್ನು ಕೇಳುವುದಕ್ಕೆ ಮುಂಚೆ ದುಃಖಕರವಾದ ಸಮಾಚಾರವೊಂದಿರುವುದು. ಅದನ್ನು ಸಮಾಧಾನದಿಂದ ಕೇಳಬೇಕು. ನೀವು ಅಪಹರಿಸಲ್ಪಟ್ಟ ರಾತ್ರಿಯೇ ಧನಕೋಟಿಯು ಕೊಲೆಗೀಡಾಗಿ ಮೃತನಾದನು. ಈ ಕ್ರೂರಕೃತ್ಯವು ದುಷ್ಟಬುದ್ಧಿಯಿಂದ ನಡೆದಿರಬೇಕೆಂದು ತಿಳಿಯಬಂದು ಆ ದುಷ್ಟನನ್ನು ಸೆರೆಯಲ್ಲಿಟ್ಟಿರುವರು " ಎಂದು ಹೇಳಿದಳು. ಇದನ್ನು ಕೇಳಿ ಮನೋರಮೆಯು ನಾನಾ ವಿಧವಾಗಿ ಹಂಬಲಿಸಿ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸಿ " ಆಹಾ ! ಆ ದುಷ್ಟನಮೇಲಿನ ಅನುಮಾನವನ್ನು ಧನಕೋಟಿಗೆ ತಿಳಿಸದೆ ಪಾಪಿಯಾದೆನಲ್ಲ. ತಿಳಿಸಿದ್ದರೆ ಈ ಅನರ್ಥಗಳಿಗೆ ಕಾರಣವಾಗುತ್ತಿರಲಿಲ್ಲವಲ್ಲ ! " ಎಂದು ದುಃಖಿಸಿದಳು.

ಕಾಮಿನಿಯು ಸ್ವಲ್ಪಹೊತ್ತು ಮನೋರಮೆಯನ್ನು ಸಮಾಧಾನಪಡಿಸಿ " ಆ ದುಷ್ಟನನ್ನು ಪ್ರತಾಪಕಂಠೀರವನೇ ಕಂಡುಹಿಡಿದವನು. ನೀವು ಕಾಣದೇ ಹೋಗಿರುವುದಕ್ಕೆ ಈ ಕೊಲೆಯೇ ಕಾರಣವೆಂದು ಊಹಿಸಿದರು. ಮಂಗಲೆಯು ಕಾರಣಾಂತರದಿಂದ ನೀವು ಶುಂಡಾಲನಲ್ಲಿ ಸಿಕ್ಕಿಬಿದ್ದ ಸಂಗತಿಯನ್ನು ಗೊತ್ತುಹಿಡಿದು, ಧನಕೋಟಿಯ ಭವನವನ್ನೈದಿ, ಪ್ರತಾಪಕಂಠೀರವನು ನಿಮ್ಮನ್ನು ಹುಡುಕಿಕೊಂಡು ಹೋಗಿರಲು ಆತನನ್ನು ಭವನದಲ್ಲಿ ಕಾಣದೆ ನಿಮಗೊದವಿದ ಆಪತ್ತಿನ ಸಂಗತಿಯನ್ನು ಮತ್ತು ಆತನು ಕೊಲಂಬುವಿಗೆ ಬಂದು ತನ್ನನ್ನು ಕಾಣಲು ತಿಳಿಯಬೇಕಾದ ಸ್ಥಳ ವಿಳಾಸಗಳನ್ನು ಒಂದು ಕಾಗದದಲ್ಲಿ ಬರೆದು

ಲಕ್ಕೋಟೆಯಲ್ಲಿ ಭದ್ರಪಡಿಸಿ ಧನಕೋಟಿಯ ಭವನದ ಗೃಹಿಣಿಯ ಕೈಯಲ್ಲಿ ಅದನ್ನು ಕೊಟ್ಟು, ಪ್ರತಾಪಕಂಠೀರವನು ಹಿಂತಿರುಗಿ ಬಂದು ಒಡನೆಯೇ ಕೊಡುವಂತೆ ಹೇಳಿ ಸ್ವಲ್ಪವೂ ಕಾಲವಿಳಂಬನಂಗೈಯ್ಯದೆ ನನ್ನನ್ನು ಸಂಗಡ ಕರೆದುಕೊಂಡು, ನಿಮ್ಮನ್ನು ಹಿಂಬಾಲಿಸಿ ಬಂದು ಕೊಲಂಬುವನ್ನು ಸೇರಿದಳು. ಇನ್ನು ನೀವು ಹೇಗೆ ಒಯ್ಯಲ್ಪಟ್ಟಿರಿ? ಅದನ್ನು ತಿಳಿಸಬೇಕು" ಎಂದು ಕೇಳಿದಳು. ಮನೋರಮೆಯು "ಧನಕೋಟಿಯ ಭವನದಲ್ಲಿ ನನಗೆಂದು ಏರ್ಪಡಿಸಿದ್ದ ಶಯನಗೃಹದಲ್ಲಿ ರಾತ್ರಿ ಮಲಗಿದ್ದೆನು. ಎಚ್ಚರವಾಗಲು ಕಣ್ಣುಬಿಟ್ಟು ನೋಡಿ ಗೊಂಡಾರಣ್ಯ ಮಾರ್ಗದಲ್ಲಿ ಬಹು ವೇಗದಿಂದ ಹರಿಯುತ್ತಿರುವ ರಥದಲ್ಲಿ ದಾದಿಯರಲ್ಲದೆ ಓರ್ವಳೇ ಇರುವುದನ್ನು ಕಂಡೆನು. ನನ್ನನು ಅಪಹರಿಸಿ ಎತ್ತಿಕೊಂಡ ವೇಳೆಯಲ್ಲಿ ನನಗೆ ಪ್ರಜ್ಞೆಯೇ ಇರಲಿಲ್ಲ. ಇದನ್ನು ನೋಡಿದರೆ ಅವುದೋ ಒಂದು ಪ್ರಜ್ಞಾಶೂನ್ಯಗೊಳಿಸುವ ಸೊಕ್ಕು ದ್ರಾವಕವನ್ನು ನನ್ನ ಮೂಗಿನಲ್ಲಿ ಬಿಟ್ಟಿರಬೇಕೆಂದು ತೋರುವುದು. ಅನಂತರ ಈ ಕೃತ್ರಿಮವು ದುಷ್ಟಬುದ್ಧಿಯಿಂದ ನಡೆದುದೆಂದು ತಿಳಿಯಬಂದಿತು. ಅವನೊಡನೆ ಇನ್ನಿಬ್ಬರು ದುಷ್ಟರು ಸೇರಿರಬೇಕು. ಏತಕ್ಕೆಂದರೆ ಇಬ್ಬರು ನನ್ನ ಅಣ್ಣಂದಿರೆಂದು ಹೇಳಿಕೊಂಡು ಶುಂಡಾಲನಲ್ಲಿ ನನ್ನನ್ನು ಒಪ್ಪಿಸಿದರಂತೆ" ಎಂದು ಹೇಳಿ ತನ್ನನ್ನು ಬಿಡಿಸುವುದಕ್ಕೆ ಮಾಡಿರುವ ತಂತ್ರದ ಪ್ರಸ್ತಾಪವನ್ನು ಎತ್ತಬೇಕೆಂದಿದ್ದಳು.

ಅಷ್ಟರಲ್ಲಿ ಬಾಗಿಲು ತೆರೆಯಲ್ಪಟ್ಟಿತು. ದಾದಿಯರಿಬ್ಬರು ಭಕ್ಷ್ಯಭೋಜ್ಯಾದಿಗಳನ್ನು ತಂದು ಇವರಿಬ್ಬರಿಗೂ ಉಣಬಡಿಸಿದರು. ಕಾಮಿನಿಯು ಅನುಮಾನಕ್ಕೆ ಆಸ್ಪದವಿಲ್ಲದಂತೆ ನಡೆದುಕೊಂಡಳು. ಇದಕ್ಕೆ ಅನುಗುಣವಾಗಿ ಮನೋರಮೆಯು ಆಚರಿಸಿದಳು. ದಾದಿಯರು ಆ ರಾತ್ರೆ ಅಲ್ಲೇ ಮಲಗಿದುದರಿಂದ ಕಾಮಿನಿಯ ಕಾರ್ಯೋದ್ಯೋಗಕ್ಕೆ ಆಸ್ಪದವಾಗಲಿಲ್ಲ. ಮಾರನೇದಿನ ಹಗಲೆಲ್ಲಾ ಮನೋರಮೆಯೊಡನೆ ಏಕಾಂತವಾಗಿ ಮಾತನಾಡಲು ಕಾಮಿನಿಗೆ ಅವಕಾಶ ದೊರೆಯಲಿಲ್ಲ. ಸಾಯಂಕಾಲವಾಗಿ ಸಮಯ ಒದಗಲು ಕಾಮಿನಿಯು ಮನೋರಮೆಯನ್ನು ಕುರಿತು, "ಸಿಂಹಳೇಶನ ಹಸ್ತಗತವಾಗಿರುವುದಕ್ಕಿಂತಲೂ ಆತ್ಮಹತ್ಯವನ್ನಾದರೂ ಮಾಡಿಕೊಂಡು ಮೃತಳಾಗುವೆನೆಂದು ನಿನ್ನೆಯ ದಿನ ಹೇಳಿದಿರಿ. ಮೃತರಾದವರಂತೆಯೇ ನೀವು

ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕಾಗಿರುವುದು. ರಾಜಮಾತೆಯು ಆರಿಸಿದ ಸುಂದರಿಯನ್ನು ಕುಳಿಂದನ ಮಂಚಕ್ಕೆ ಎಳೆದುಕೊಂಡು ಹೋಗುವುದಕ್ಕೆ ಬದಲು ಪ್ರೇತದಂತೆ ಇಲ್ಲಿಂದ ಸಾಗಿಸಬೇಕಾಗಿರುವುದು" ಎಂದು ಹೇಳಿದು ದನ್ನು ಕೇಳಿದಾಕ್ಷಣವೇ ಮನೋರಮೆಯು "ಇದೇನು ಇಂಥಾ ಕ್ರೂರನುಡಿ" ಎಂದು ಭಯಗ್ರಸ್ತಳಾಗಿ ಕಾಮಿನಿಯು ಕೃತ್ರಿಮವನ್ನೆಣಿಸುವಳೋ ಹೇಗೋ ಎಂದು ಸಂಶಯಪಟ್ಟಳು. ಕಾಮಿನಿಯು ಇಂಗಿತವನ್ನು ಅರಿತು "ಭಯ ಪಡಬೇಡಿ. ನಾನು ಬಂದಿರುವುದು ನಿಮಗೆ ಕೃತ್ರಿಮವನ್ನು ಮಾಡುವುದಕ್ಕೆ ಎಂದು ಯೋಚಿಸಬಹುದು. ನನ್ನ ವಿಷಯವು ನಾನು ಮಾಡುವುದರಲ್ಲಿ ಗೊತ್ತಾಗುವುದು. ನಿಮಗೆ ಕೃತ್ರಿಮವನ್ನೆಸಗುವುದರಿಂದ ಮಂಗಲೆಗಾಗಲಿ ನನಗಾಗಲಿ ಬರುವ ಲಾಭವೇನು? ಆ ದಿನ ರಾತ್ರಿ ಮಂಗಲೆಯಲ್ಲಿ ನಂಬಿಕೆ ಯನ್ನಿಟ್ಟು ಶುಕವಾಣಿಯು ಶವದ ಬಳಿಗಾಗಿ ಹೊರಟಿರಿ. ಆದರೂ ಬರುವ ದಾರಿಯಲ್ಲೆಲ್ಲಾ ಆಕೆಯು ಕೃತ್ರಿಮವೆಸಗಬಹುದೆಂಬ ಅನುಮಾನವು ನಿಮ್ಮ ಮನಸ್ಸಿನಲ್ಲಿ ಇದ್ದೇಇತ್ತು. ಆಗ ನಿಮ್ಮನ್ನು ಆಪತ್ತಿಗೆ ಗುರಿಮಾಡಿದಳೆ?" ಎಂದು ಹೇಳಲು, ಮನೋರಮೆಯು "ಅದು ಹಾಗಿರಲಿ; ನಿನ್ನ ತಂತ್ರದ ಅರ್ಥವೇ ನನಗೆ ಸ್ಫುರಿಸಲಿಲ್ಲ ತಿಳಿಯುವಂತೆ ಹೇಳು" ಎಂದು ಕೇಳಿದಳು. ಅದಕ್ಕೆ ಕಾಮಿನಿಯು "ಹಸುರು ಮೂಲಿಕೆ ವೈದ್ಯದಲ್ಲಿ ಮಂಗಲೆಯು ಬಹು ಪಾಂಡಿತ್ಯವುಳ್ಳವಳೆಂದು ನಿಮಗೆ ತಿಳಿದೇಇರುವುದು. ಇದೋ ಈ ಚೂರ್ಣವು" ಎಂದು ಕುಪ್ಪಸದೊಳಗಿಂದ ಒಂದು ಕಾಗದ ಪೊಟ್ಟಣವನ್ನು ತೆಗೆದು "ಇದರಲ್ಲಿ ಸ್ವಲ್ಪವನ್ನು ಸೇವಿಸಿದ ಮಾತ್ರಕ್ಕೆ ಎಂತಹ ಘನಪಂಡಿತನೂ ಕೂಡ ಮರಣ ವೆಂದು ನಿರ್ಧರಿಸುವಂತಹ ಗೂಢ ಮೂರ್ಛೆಯೊಂದು ಉಂಟಾಗುವುದು. ಈಗ ಮಂಗಳೆಯ ತಂತ್ರದ ಮೂಲವು ನಿಮಗೆ ತಿಳಿದಿರುವುದು. ಇದನ್ನು ಮಾಡ ಬೇಕು, ಬಿಡಬೇಕು ಎಂಬುವುದನ್ನು ನಿರ್ಧರಿಸುವುದು ನಿಮಗೆ ಸೇರಿದ್ದು" ಎಂದು ಹೇಳಿ ಸುಮ್ಮನಾದಳು.

ಬಳಿಕ ಮನೋರಮೆಯು ಮನಸ್ಸಿನಲ್ಲಿ "ಕುಳಿಂದಪತ್ನಿಯಾಗುವದ ಕ್ಕಿಂತಲೂ ಆತ್ಮಹತ್ಯವೇ ಮೇಲೆಂದು ಧೃಡಪಡಿಸಿಕೊಂಡಿರುವೆನು. ಇವ ಳೊಡನೆ ಹಾಗೆ ಹೇಳಿಯೂ ಇರುವೆನು. ಇವಳು ಕೃತ್ರಿಮವನ್ನು . ನಡೆಸುವ ಳೇನೋ ಎಂಬುದೊಂದೇ ಅನುಮಾನ. ಚಿಂತೆಯಿಲ್ಲ. ಕೊನೆಯಲ್ಲಿ ಆತ್ಮ

ಹತ್ಯವನ್ನು ನನ್ನ ಕೈಯಿಂದಲೇ ಮಾಡಿಕೊಳ್ಳುವುದಕ್ಕಿಂತಲೂ ಇವಳು ಕೊಡುವ ವಿಷದಿಂದಾದರೂ ಮೃತಿಯನ್ನೈದುವುದೇ ಲೇಸು. ಮುಂದೆ ದೇವರು ಬಿಟ್ಟಂತಾಗಲಿ" ಎಂದು ಕಾಮಿನಿ ಹೇಗೆ ಹೇಳುವಳೋ ಹಾಗೆ ನಡೆದುಕೊಳ್ಳಲು ನಿರ್ಧರಿಸಿಕೊಂಡಳು. ಇವಳ ಮನಸ್ಸನ್ನು ತಿಳಿದು ಕಾಮಿನಿಯು "ನಾಡಿದ್ದು ರಾತ್ರಿಗೆ ಈ ಬೌದ್ಧರ ಹಬ್ಬವು ಮುಗಿಯುವುದು. ಆಗ ನಿಮ್ಮನ್ನು ಕುಳಿಂದನಿಗೆ ಒಪ್ಪಿಸಬೇಕೆಂಬ ಕಟ್ಟಳೆ ಇರುವುದು. ಆದ್ದರಿಂದ ನಾಳೆ ರಾತ್ರಿಯೇ ಈ ಚೂರ್ಣದಿಂದ ನಿಮ್ಮನ್ನು ಮೂರ್ಛೆಗೊಳಿಸುವೆನು. ಮಾರನೆ ದಿನ ಬೆಳಿಗ್ಗೆ ನೀವು ಹಿಂದೂಮತಸ್ಥರಾಗಿ ಇನ್ನೂ ಕನ್ಯಾವಸ್ಥೆಯಲ್ಲಿ ಇದ್ದುದರಿಂದ ಶವಸಂಸ್ಕಾರಗಳನ್ನು ನಿಮ್ಮ ಮತದ ರೀತಿ ಹಿಂದುಗಳಿಂದ ಮಾಡಿಸಿ ಹಿಂದೂ ಸ್ಮಶಾನದಲ್ಲಿ ಸಮಾಧಿಮಾಡಿಸುವುದಕ್ಕಾಗಿ ಸಾಗಿಸಿಕೊಂಡು ಹೋಗುವೆನು. ಒಂದುವೇಳೆ ನಾನು ಕೇಳಿಕೊಳ್ಳುವುದನ್ನು ತಿರಸ್ಕರಿಸಿ ನನ್ನ ಅಧೀನಕ್ಕೆ ನಿಮ್ಮನ್ನು ಒಳಪಡಿಸದೆ ಬೌದ್ಧ ಸಂಸ್ಕಾರಗಳಿಂದ ಬೇರೆ ಸ್ಥಳದಲ್ಲಿ ಸಮಾಧಿ ಮಾಡುವ ಸಂದರ್ಭವು ಒದಗುವ ಪಕ್ಷದಲ್ಲಿ ಇಗೋ ಈ ದ್ರಾವಕವು" ಎಂದು ನಡುವಿನಲ್ಲಿಟ್ಟಿದ್ದ ಒಂದು ಸಣ್ಣ ಸೀಸೆಯನ್ನು ತೆಗೆದು "ಇದನ್ನು ಮಂಗಲೆಯು ನನ್ನಲ್ಲಿ ಕೊಟ್ಟಿರುವಳು. ಇದರಲ್ಲಿ ಒಂದೆರಡು ತೊಟ್ಟನ್ನು ನಿಮ್ಮ ಬಾಯಲ್ಲಿ ಬಿಟ್ಟಾಕ್ಷಣವೇ ಮೂರ್ಛೆಯು ಹೋಗಿ ನಿದ್ರೆ ತಿಳಿದಂತೆ ಏಳುವಿರಿ. ಸೀಸೆಯನ್ನು ಕೈಯಲ್ಲಿ ಇಟ್ಟುಕೊಳ್ಳಿ" ಎಂದು ಕೊಟ್ಟು, "ಈ ದ್ರಾವಕದ ಒಂದೆರಡು ತೊಟ್ಟನ್ನು ನನಗೆ ಉಪಯೋಗಿಸಿ" ಎಂದು ಹೇಳಿ ಸ್ವಲ್ಪ ಚೂರ್ಣವನ್ನು ಒಂದು ಬಟ್ಟಲಿನ ನೀರಿನಲ್ಲಿ ಕದಡಿ ಕುಡಿಯಲುದ್ಯುಕ್ತಳಾಗಲು ಮನೋರಮೆಯು ಅವಳನ್ನು ತಡೆದು ಬಟ್ಟಲನ್ನು ಕೈಯಿಂದ ಕಿತ್ತುಕೊಂಡು ಅಲ್ಲಿದ್ದ ಹೂವಿನ ತಟ್ಟೆಯಲ್ಲಿ ಚೆಲ್ಲಿಬಿಟ್ಟು "ಇನ್ನು ಸಾಕು. ಸಾಕು. ಇನ್ನು ಎಳ್ಳಿನಷ್ಟಾದರೂ ನಿನ್ನಲ್ಲಾಗಲಿ, ಮಂಗಲೆಯಲ್ಲಾಗಲಿ ನನಗೆ ಅನುಮಾನವಿರುವುದಿಲ್ಲ. ನೀವಿಬ್ಬರೂ ನನಗೆ ಆಪ್ತರೇ ಸರಿ. ನಿನ್ನಲ್ಲಿ ಅನುಮಾನಪಟ್ಟು ಕೆಟ್ಟವಳಾದೆನು. ಕ್ಷಮಿಸು. ಕ್ಷಮಿಸು" ಎಂದು ಕೇಳಿಕೊಳ್ಳಲು ಕಾಮಿನಿಯು ಅವಳನ್ನು ಸಮಾಧಾನಪಡಿಸಿದಳು.

ನಂತರ, ಸ್ವಲ್ಪಹೊತ್ತಾದ ಮೇಲೆ, ತಾರಾದೇವಿಯು ಬಂದು ಕಾಮಿನಿಗೆ ಕೆಲಸವನ್ನು ನೇಮಿಸಿ ಕಳುಹಿಸಿ ಮನೋರಮೆಯೊಡನೆ ಏಕಾಂತವಾಗಿ

ಮಾತನಾಡುತ್ತಿದ್ದಳು. ಕಾಮಿನಿಯು ಮಾಡಿರುವ ತಂತ್ರವನ್ನು ಮತ್ತು ಅವಳಲ್ಲಿಯೂ ಮಂಗಲೆಯಲ್ಲಿಯೂ ಮನೋರಮೆಗೆ ಇರುವ ನಂಬಿಕೆಯನ್ನೂ ಕೇಳಿ ತಾರಾದೇವಿಯು "ಈಸಂದರ್ಭದಲ್ಲಿ ನಾನೂ ಕೈಲಾದಮಟ್ಟಿಗೆ ಸಹಾಯ ಮಾಡುವೆನು" ಎಂದು ಹೇಳಿ ತನ್ನ ತಾಯಿತಂಗಿಯರನ್ನು ನೆನೆದು ಕಣ್ಣೀರು ಬಿಟ್ಟು ಅವರಿಗೆ ತನ್ನ ಕ್ಷೇಮಸಮಾಚಾರವನ್ನು ತಿಳಿಸುವಂತೆ ಕೇಳಿಕೊಂಡಳು. ಮನೋರಮೆಯು ಅವಳನ್ನು ಸಮಾಧಾನಪಡಿಸಿ ಕಳುಹಿಸಿದಳು.

ಮಾರನೇದಿನ ರಾತ್ರಿ ಭೋಜನ ಕಾಲವು ಸಮೀಪಿಸಿತು. ದಾದಿಯರು ಭಕ್ಷ್ಯಭೋಜ್ಯಾದಿಗಳನ್ನು ತಂದರು. ಮನೋರಮೆಯು ಅವರನ್ನು ಕುರಿತು, "ಈದಿನವೇನೋ ನನಗೆ ಬಹಳ ಆಯಾಸವಾಗಿದೆ. ಈ ಗೃಹದಲ್ಲಿ ಧಾಳಿಯು ಹೊಡೆತವು ಹೆಚ್ಚಾಗಿದೆ. ಪಕ್ಕದ ಮನೆಯಲ್ಲಿ ನನಗೆ ಮಲಗುವುದಕ್ಕೆ ಸಿದ್ಧಪಡಿಸಿಕೊಂಡು ಬನ್ನಿರಿ. ಊಟವಾದಕೂಡಲೆ ನಾನು ಮಲಗಬೇಕು" ಎಂದು ಹೇಳಿ ಅವರಿಬ್ಬರನ್ನು ಕಳುಹಿಸಿಬಿಟ್ಟಳು. ಅವರು ಹೋದ ಒಂದೆರಡು ನಿಮಿಷಗಳಲ್ಲಿ ಕಾಮಿನಿಯು ಚೂರ್ಣವನ್ನು ತೆಗೆದು ಒಂದು ಬಟ್ಟಲಿನ ನೀರಿನಲ್ಲಿ ಸ್ವಲ್ಪ ಕದಡಿ ಮನೋರಮೆಯ ಕೈಗೆ ಕೊಟ್ಟಳು. ಅದನ್ನು ಅವಳು ಕುಡಿದಳು. ಅರ್ಧ ನಿಮಿಷದಲ್ಲಿ ಗೂಢಮೂರ್ಛೆಯು ಆವರಿಸಿಕೊಂಡಿತು. ಮನೋರಮೆಯು ಶವದಂತೆ ಮಲಗಿದಳು. ಕಾಮಿನಿಯು ದುಃಖದಿಂದ ಅರಚಿಕೊಂಡಂತೆ ನಟಿಸಿದಳು. ಪಕ್ಕದ ಮನೆಯಲ್ಲಿ ಹಾಸಿಗೆಯನ್ನು ಹಾಕುತ್ತಿದ್ದ ದಾದಿಯರು ಗಾಬರಿಯಿಂದ ಓಡಿಬಂದು ಮನೋರಮೆಯ ಸ್ಥಿತಿಯನ್ನು ನೋಡಿ ಓಡಿಹೋಗಿ ರಾಜಮಾತೆ ಮೊದಲಾದವರಿಗೆ ಮನೋರಮೆಯ ಅವಸ್ಥೆಯನ್ನು ತಿಳಿಸಿದರು. ಈ ಸಮಾಚಾರವು ಅರಮನೆಯಲ್ಲೆಲ್ಲಾ ಹರಡಿಕೊಂಡಿತು. ಅರಮನೆಗೆ ಸೇರಿದ ಇಬ್ಬರು ರಾಜವೈದ್ಯರನ್ನು ಗುರಕಾರನನ್ನು ಕರೆದುಕೊಂಡು ರಾಜಮಾತೆಯು ಬಂದಳು. ತಾರಾದೇವಿಯೂ ರಾಣಿವಾಸದ ಇತರ ಸ್ತ್ರೀಯರೂ ಬಂದು ನೆರೆದರು. ಕಾಮಿನಿಯು ಒಂದು ಮೂಲೆಯಲ್ಲಿ ನಿಂತು ಶೋಕವನ್ನು ನಟಿಸುತ್ತಿದ್ದಳು.

ವೈದ್ಯರು ನಾಡಿ ಮೊದಲಾದ್ದನ್ನು ಪರೀಕ್ಷಿಸಿ ಮೃತಳಾಗಿರುವಳೆಂದು ತಲೆಯನ್ನಲ್ಲಾಡಿಸುವುದರಿಂದ ಸೂಚಿಸಿ ಇದ್ದಕ್ಕೆ ಇದ್ದಂತೆ ಹೀಗಾಗಲು ಕಾರಣವೇನಿರಬಹುದೆಂದು ಮನಸ್ಸಿನಲ್ಲೇ ಯೋಚಿಸಿ ಎಷ್ಟು ವಿಧವಾಗಿ

ಪರೀಕ್ಷಿಸಿದರೂ ಅವರಿಗೆ ಗೊತ್ತಾಗದೆಹೋಯಿತು ರಾಜಮಾತೆಯು ಕಾರಣವನ್ನು ಕೇಳಿದಳು. ಕಾರಣವನ್ನು ತಿಳಿಸದಿದ್ದರೆ ತಮ್ಮ ದೊಡ್ಡ ಹೆಸರಿಗೆ ಕುಂದಕ ಉಂಟಾಗುವುದೆಂದು ಒಬ್ಬನ ಮುಖವನ್ನು ಒಬ್ಬನು ನೋಡಿ ನಾಡಿ ಮೊದಲಾದ್ದನ್ನು ನೋಡುತ್ತಿರುವಂತೆ ನಟಿಸಿ ಮನಸ್ಸಿನಲ್ಲೇ ಯೋಚಿಸುತ್ತಿದ್ದರು. ಅಷ್ಟರಲ್ಲಿ ವೈದ್ಯರಲ್ಲೊಬ್ಬನು ಕಾಮಿನಿಯು ಹಂಬಲಿಸಿ ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತಿದ್ದ ಕೆಲವು ಮಾತುಗಳನ್ನು ಕೇಳಿ ಅವಳ ಹತ್ತಿರಕ್ಕೆ ಹೋಗಿ "ಈಗ ನೀನಾಡಿದ ಮಾತುಗಳ ಅರ್ಥವೇನು ಹೇಳು" ಎಂದು ಕೇಳಲು, ಕಾಮಿನಿಯು "ನಾನು ಯಾವ ಮಾತನ್ನಾಡಿದೆ ?" ಎಂದು ಭಯಪಟ್ಟವಳಂತೆ ನಟಿಸಿದಳು. ಆಗ ಎಲ್ಲರ ದೃಷ್ಟಿಯೂ ಕಾಮಿನಿಯ ಕಡೆಗೆ ತಿರುಗಿತು. ಆ ವೈದ್ಯನು ಪುನಃ ಅವಳನ್ನು ಕುರಿತು "ಇದನ್ನೆಲ್ಲಾ ಚಂಡಾಲನು ಮಾಡಿದನೆಂದು ಹೇಳಿದೆಯಲ್ಲ, ಇದರ ಅರ್ಥವೇನು ? ವಿವರವಾಗಿ ಹೇಳು. ಭಯಪಡಬೇಡ ಹೇಳು" ಎಂದು ಕೇಳಿದನು. ಆಗ ರಾಜಮಾತೆಯು "ಇದು ಈ ರಮಣಿಯನ್ನು ಮಾರಿದ ಗುಲಾಮ ವ್ಯಾಪಾರಿಯ ಹೆಸರು" ಎಂದು ತಿಳಿಸಲು, ಕಾಮಿನಿಯು ರಾಜಮಾತೆಯ ಹತ್ತಿರಕ್ಕೆ ಹೋಗಿ ಅಡ್ಡಬಿದ್ದು "ಮಹಾರಾಣಿಯೇ ಈ ಅನಾಥಳ ಮಾತನ್ನು ಕೇಳಬೇಕು. ಪಾಪಿ ಚಂಡಾಲನೇ ನನ್ನ ಒಡತಿಯನ್ನು ಕೊಂದವನು. ಆ ಚಂಡಾಲನೇ ನನ್ನ ಒಡತಿಗೆ ಸೊಕ್ಕು ದ್ರಾವಕವನ್ನು ಪ್ರಯೋಗಿಸಿ ಆಕೆಯ ಮನೆಯಿಂದ ಆಕೆಯನ್ನು ಬಿಡಿಸಿ ತಂದವನು. ನನ್ನ ಒಡತಿಯು ಬಹು ಸೂಕ್ಷ್ಮವಾದ ಮೃದು ಶರೀರವನ್ನುಳ್ಳವಳು ಆ ದ್ರಾವಕವೇ ಶರೀರದಲ್ಲೆಲ್ಲಾ ಆವರಿಸಿ ವಿಷವಾಗಿ ಪರಿಣಮಿಸಿತು. ಇದರಿಂದಲೇ ನನ್ನ ಒಡತಿಯು ಈ ಗತಿಗೆ ಬಂದಳು. ಆ ಕೊಲೆಪಾತಕನನ್ನು ತಕ್ಕ ಶಿಕ್ಷೆಗೆ ಗುರಿಮಾಡಬೇಕು" ಎಂದು ಹಂಬಲಿಸಿ ಮೊರೆಯಿಟ್ಟವಳಂತೆ ನಟಿಸಿದಳು.

ಈಮಧ್ಯೆ ಗುರುಕಾರನು ಮನೋರಮೆಯ ಸೇವೆಗೆಂದು ನೇಮಿಸಿದ್ದ ಅರಮನೆಯ ದಾದಿಯರಿಬ್ಬರನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ ಕಾಮಿನಿಯ ವಿಷಯದಲ್ಲಿ ವಿಚಾರಿಸಿದನು. ಅವರು ಮನೋರಮೆಗೂ ಕಾಮಿನಿಗೂ ಬಹು ವಿಶ್ವಾಸವಿತ್ತೆಂದೂ ತಾವು ನೋಡಿದ್ದರಲ್ಲಿ ಕಾಮಿನಿಯು

ಸುಗುಣೆಯೆಂದೂ ತಿಳಿಸಿದರು. ಈ ಸಂಗತಿಗಳನ್ನು ಗುರುಕಾರನು ರಾಜ ಮಾತೆಗೆ ಅಂತರಂಗವಾಗಿ ಅರಿಕೆಮಾಡಿದನು.

ವೈದ್ಯರು ತಮ್ಮ ಪ್ರಖ್ಯಾತಿಗೆ ಸಂಭವಿಸಿದ ಗಂಡವು ನಿವಾರಣೆಯಾಯಿತೆಂದು ಮನಸ್ಸಿನಲ್ಲಿ ಸಂತೋಷಪಟ್ಟು ಮನೋರಮೆಯು ಮೃತಳಾಗಲು ಕಾಮಿನಿಯು ಸೂಚಿಸಿ ಹೇಳಿದ ಸೊಕ್ಕು ದ್ರಾವಕದ ಕಾರಣವನ್ನೇ ವಿಸ್ತಾರವಾಗಿ ಹೇಳಿದರು. ಇದೇ ಸಮಯವೆಂದು ತಿಳಿದ ತಾರಾದೇವಿಯು ರಾಜಮಾತೆಯನ್ನು ಕುರಿತು "ಕಾಮಿನಿಯು ಹೇಳಿದ್ದೇ ನಿಜವೆಂದು ನಾನೂ ಕೂಡ ಹೇಳಬಲ್ಲೆನು. ಹೇಗೆಂದರೆ: ಈ ಎರಡು ದಿನವೂ ಮನೋರಮೆಯ ಗೃಹಕ್ಕೆ ಹೋಗಿ ಅವಳೊಡನೆ ಮಾತನಾಡುತ್ತಿದ್ದೆನು. ಶುಂಡಾಲನ ವಿಷಯದಲ್ಲಿ ಕಾಮಿನಿಯು ಹೇಳಿದುದನ್ನೆ ಅವಳೂ ನನ್ನಲ್ಲಿ ಹೇಳುತ್ತಿದ್ದಳು. ಇದಲ್ಲದೆ ನಿನ್ನೆ ರಾತ್ರಿ ತನ್ನ ಮನಸ್ಸೇ ಸಮಾಧಾನವಿಲ್ಲವೆಂದೂ, ಮನಸ್ಸಿನಲ್ಲಿ ಸಂಕಟವೆಂದೂ, ತಾನು ಬಹುದಿನ ಬದುಕಿರಲಾರಳೆಂದೂ ನನ್ನಲ್ಲಿ ಹೇಳಿಕೊಂಡಳು" ಎಂದು ತಿಳಿಸಲು, ರಾಜಮಾತೆಯು "ಇದನ್ನೆಲ್ಲಾ ನೋಡಿದರೆ ಈ ವಿಷಯದಲ್ಲಿ ಯಾವ ಅನುಮಾನವೂ ಇರುವುದಿಲ್ಲ" ಎಂದು ಗುರುಕಾರನ ಕಡೆಗೆ ತಿರುಗಿ "ಬೇಗನೆ ಹೋಗಿ ಆ ಚಂಡಾಲ ಶುಂಡಾಲನನ್ನು ಮತ್ತು ನ್ಯಾಯಾಧಿಪತಿಯನ್ನು ಕರೆದುಕೊಂಡು ಬಾ" ಎಂದು ಆಜ್ಞಾಪಿಸಲು ಗುರುಕಾರನು ಅಪ್ಪಣೆಯಂ ಶಿರಸಾವಹಿಸಿ ಹೊರಟನು.

ನಂತರ ತಾರಾದೇವಿಯು ಗುರುಕಾರನು ಬಾಗಿಲು ದಾಟಿಹೋಗುವುದನ್ನೇ ಕಾದಿದ್ದು ರಾಜಮಾತೆಯನ್ನು ಕುರಿತು "ನನ್ನದೊಂದು ಬಿನ್ನಹವಿರುವುದು ಲಾಲಿಸಬೇಕು. ಮನೋರಮೆಯು ಮರಣವು ಸಮೀಪಿಸಿದೆ ಎಂಬ ಚಿಂತೆಯಲ್ಲೇ ಇದ್ದು ಬೌದ್ಧಮತಾವಲಂಬನಕ್ಕೆ ಮುಂಚಿತವಾಗಿ ತಾನು ಮೃತಳಾದರೆ ಸ್ವಮತ ಸಂಸ್ಕಾರದಿಂದ ತನ್ನನ್ನು ಸಮಾಧಿ ಮಾಡಿಸಬೇಕೆಂಬ ತನ್ನ ಬಯಕೆಯನ್ನು ತಮಗೆ ತಿಳಿಸುವಂತೆ ನನ್ನನ್ನು ಕೇಳಿಕೊಂಡಳು. ಅವಳ ಬಯಕೆಯನ್ನು ಸಲ್ಲಿಸುವುದಕ್ಕೋಸ್ಕರ ಇಲ್ಲಿಂದ ಮತಸಂಸ್ಕಾರ ರೀತಿ ಸಾಗಿಸುವುದರ ವಿಚಾರಣೆಯನ್ನು ನನಗೆ ದಯಪಾಲಿಸಬೇಕು" ಎಂದು ಬೇಡಿಕೊಳ್ಳಲು ರಾಜಮಾತೆಯು ಕ್ಷಣಮಾತ್ರ ಯೋಚಿಸಿ "ಇದರಿಂದೇನು ಬಾಧಕವಿಲ್ಲ. ನಿನ್ನ ಇಷ್ಟದಂತಾಗಲಿ" ಎಂದು ಹೇಳಿ ಹೊರಟಳು.

ಅಲ್ಲಿ ಶುಂಡಾಲನನ್ನು ಹಿಡಿತರಿಸಿ ನ್ಯಾಯಾಧಿಪತಿಯ ಎದುರಿನಲ್ಲಿ ನಿಲ್ಲಿಸಿದ್ದರು. ರಾಜಮಾತೆಯು ಬಂದು ಆಸನದಲ್ಲಿ ಕುಳಿತುಕೊಂಡ ಕೂಡಲೆ ಶುಂಡಾಲನ ವಿಚಾರಣೆ ಜರುಗಿತು. ಮನೋರಮೆಯನ್ನು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ಕ್ರಯಕ್ಕೆ ಪಡೆದನೆಂಬುದೇ ಮೊದಲಾದ ನಿಜವಾದ ಸಂಗತಿಗಳನ್ನು ಹೇಳಿ ಒಪ್ಪಿಕೊಂಡನು. ನ್ಯಾಯಾಧಿಪತಿಯು ಅವನಿಗೆ ಮನೋರಮೆಯ ಮರಣವನ್ನು ತಿಳಿಸಿ, ರಾಜಸಂತತಿಯಲ್ಲಿ ರೋಗಪೀಡಿತರಾದ ಮಕ್ಕಳು ಹುಟ್ಟಬಹುದಾದ ಸಂಭವವನ್ನು ನಿವಾರಣೆಗೊಳಿಸುವುದಕ್ಕಾಗಿ "ರೋಗಿಷ್ಟರು, ದುರ್ಬಲರು, ಅಥವ ರೋಗಪೀಡಿತರಾಗಿದ್ದು ಹೊಸದಾಗಿ ಗುಣಹೊಂದಿದವರು ಮುಂತಾದ ಅನಾರೋಗ್ಯಸ್ಥಿತಿಯಲ್ಲಿರುವ ಕನ್ಯೆಯರನ್ನು ಯಾವನೇ ಆಗಲಿ ಅರಮನೆಗೆ ತಂದು ವಿಕ್ರಯಿಸುವನೋ ಅವನ ಸೊತ್ತೆಲ್ಲಾ ರಾಜ ಕೋಶಕ್ಕೆ ಸೇರಿಸಲ್ಪಟ್ಟು ಅವನು ಒಂದು ದಿವಸದ ಅವಧಿಯಲ್ಲಿ ಸಿಂಹಳ ದೇಶದ ಎಲ್ಲೆಯನ್ನು ಬಿಟ್ಟುಹೋಗಿರಬೇಕು. ಇದಕ್ಕೆ ತಪ್ಪಿದರೆ ಮರಣ ದಂಡನೆಗೆ ಗುರಿಯಾಗುವನು ಎಂದು ನಿರ್ಮಿಸಿದ ನ್ಯಾಯಶಾಸನಕ್ಕನುಸಾರ ವಾಗಿ ಶುಂಡಾಲನಿಗೆ ಶಿಕ್ಷೆಯನ್ನು ವಿಧಿಸಿದನು.

ಇತ್ತ ಬೆಳಗಾಗಲು ಮನೋರಮೆಯನ್ನು ಅರಮನೆ ಹೊರಗಡೆ ಸಾಗಿಸು ವುದಕ್ಕೋಸ್ಕರ ತಾರಾದೇವಿಯು ಕಾಮಿನಿಯ ಗುರ್ತು ಹೇಳಿದ ಪುರೋಹಿತ ನನ್ನು ನಾಲ್ಕು ಜನ ಹಿಂದೂ ಸ್ತ್ರೀಯರನ್ನು ಕರೆತರಿಸಿದಳು. ಈ ನಾಲ್ವರಲ್ಲಿ ಮಂಗಲೆಯೊಬ್ಬಳಾಗಿದ್ದಳು. ಉಳಿದ ಮೂವ್ವರು ವೇಷಧಾರಿಗಳಾಗಿ ಬಂದಿದ್ದ ಆ ಪುರೋಹಿತನ ಮನೆಯವರೇ ಆಗಿದ್ದರು. ಎಲ್ಲವೂ ಸಿದ್ಧವಾಗಿ ಮನೋ ರಮೆಯನ್ನು ಎತ್ತುವ ಪ್ರಯತ್ನದಲ್ಲಿರುವಷ್ಟರಲ್ಲಿ ಗುರುಕಾರನು ಬಾಗಿಲನ್ನು ತೆರೆದುಕೊಂಡು ಪ್ರವೇಶಿಸಿದನು. ಅಲ್ಲಿರುವವರಲ್ಲಿ ಯಾರೂ ನಿರೀಕ್ಷಿಸದ ಆ ಸಮಯದಲ್ಲಿ ಅವನು ಬಂದಿರುವುದನ್ನು ನೋಡಿ ತಮ್ಮ ತಂತ್ರವು ಗೊತ್ತಾಯಿತೇನೋ ಎಂದು ಎಲ್ಲರೂ ದಿಗಲುಬಿದ್ದರು. ತಾರಾದೇವಿಯ ಮುಖದಲ್ಲಿ ರಕ್ತವು ಚಲಿಸಲಿಲ್ಲ ಕಾಮಿನಿಯು ಬೆಚ್ಚಿಬಿದ್ದಳು. ಮಂಗಲೆಯ ಮುಖವು ಭಯವನ್ನು ಸೂಚಿಸಿತು. ಇಷ್ಟೆಲ್ಲಾ ತನ್ನ ದೃಷ್ಟಿಗೆ ಬಿದ್ದರೂ ಇವು ದುಃಖಸೂಚಕ ಭಾವಗಳೆಂದು ತಿಳಿದುಕೊಂಡು ತಾರಾದೇವಿಗೆ ವಂದಿಸಿ ಕಾಮಿನಿಯನ್ನು ಕುರಿತು "ನಿನ್ನ ಒಡತಿಯು ಗತಿಸಿದ ದಿನವೇ ಅರಮನೆಯಲ್ಲಿ

ಇರಬೇಕೆಂಬ ನಿರ್ಬಂಧವು ನಿನಗೆ ತಪ್ಪಿಹೋಯಿತು. ಈಗಲೂ ನಿನಗೆ ಇಷ್ಟವಿರುವ ಪಕ್ಷದಲ್ಲಿ ರಾಜಮಾತೆಯರಿಗಾದರೂ, ತಾರಾದೇವಿಯರಿಗಾದರೂ ನೀನು ತೋಳ್ಳಿಯಾಗಿರಬಹುದು. ಇಲ್ಲಿಂದ ಬಿಟ್ಟು ಹೋಗಬೇಕೆಂದಿದ್ದರೂ ನಿನಗೆ ಅಭ್ಯಂತರವಿರುವುದಿಲ್ಲ" ಎಂದು ಹೇಳಲು ಕಾಮಿನಿಯು "ನನ್ನ ಒಡತಿಯ ಮರಣ ಸಮಾಚಾರವನ್ನು ಬಂಧುಜನಕ್ಕೆ ತಿಳಿಸಲು ನಾನಲ್ಲದೆ ಇತರರು ಹೋಗುವರಿಲ್ಲ" ಎಂದು ತನ್ನ ಅಭಿಪ್ರಾಯವನ್ನು ಸೂಚಿಸಿದಳು. ಇದನ್ನು ತಿಳಿದು ಗುರುಕಾರನು "ನಿನ್ನ ಇಷ್ಟವು ಹೀಗಿರಬಹುದೆಂದು ಊಹಿಸಿ ನಿನ್ನ ಒಡತಿಯಲ್ಲಿ ನಿನಗಿರುವ ಅಭಿಮಾನವನ್ನು ಮೆಚ್ಚಿ ರಾಜಮಾತೆಯು ನಿನಗೆ ಬಹುಮಾನವಾಗಿ ಇಗೊ, ಈ ಆಭರಣವನ್ನು ಕೊಟ್ಟಿರುವರು" ಎಂದು ಕೊಟ್ಟು ಹೊರಟುಹೋದನು.

ನಂತರ ಮನೋರಮೆಯನ್ನು ಹೊತ್ತುಕೊಂಡು ಹೊರಟರು. ತಾರಾದೇವಿಯು ತನ್ನ ಕತ್ತಿನಲ್ಲಿದ್ದ ಒಂದು ಅಮೂಲ್ಯವಾದ ಆಭರಣವನ್ನು ತೆಗೆದು ತನ್ನ ಜ್ಞಾಪಕಾರ್ಥವಾಗಿಯಾದರೂ ಇಟ್ಟುಕೊಳ್ಳೆಂದು ಕಾಮಿನಿಗೆ ಬಹುಮಾನವಾಗಿ ಕೊಟ್ಟು ಕಳುಹಿಸಿದಳು.

ಯಾರಿಗೂ ಯಾವ ಅನುಮಾನವೂ ಹುಟ್ಟದಂತೆ ನಡೆದುಕೊಂಡು ಮನೋರಮೆಯನ್ನು ಪುರೋಹಿತನ ಮನೆಗೆ ಸಾಗಿಸಿಕೊಂಡು ಹೋಗಿ ಮನೆಯೊಳಗೆ ಇಟ್ಟರು. ಮಂಗಲೆಯು ಪ್ರಜ್ಞೆ ಬರುವ ದ್ರಾವಕದ ಒಂದೆರಡು ತೊಟ್ಟನ್ನು ಬಾಯಲ್ಲಿ ಬಿಡಲು ಮನೋರಮೆಯು ನಿದ್ರೆ ತಿಳಿದೆಚ್ಚರವಾಗುವಂತೆ ಎದ್ದಳು. ಎಲ್ಲರೂ ಸಂತೋಷಪಟ್ಟರು. ವೀರಬಾಹು ಸಿಂಹಬಲರಿಂದೊಡಗೂಡಿ ಪ್ರತಾಪಕಂಠೀರವನು ಬಂದಿದ್ದನು. ಪುರೋಹಿತನಿಗೆ ಯತೇಚ್ಛವಾಗಿ ಬಹುಮಾನ ದೊರಕಿತು. ಪ್ರಯಾಣಕ್ಕೆ ಬೇಕಾದ ಸಲಕರಣಗಳೆಲ್ಲಾ ಸಿದ್ಧವಾದವು.

ಸೂರ್ಯಾಸ್ತಮಾನವಾಗಿ ಸಂಧ್ಯಾಕಾಲವು ಕಳೆಯಿತು. ಆಕಾಶದಲ್ಲಿದ್ದ ನಕ್ಷತ್ರಗಳು ಮೂಡಿದುವು. ಆಗ ಇಬ್ಬರು ಸ್ತ್ರೀಯರು ಮುಸುಕು ಹಾಕಿಕೊಂಡು ಒಂದು ಗಾಡಿಯಲ್ಲಿ ಕುಳಿತು ಪುರೋಹಿತನ ಮನೆಯ ಮುಂಭಾಗದಿಂದ ಹೊರಟರು. ಹಿಂದಿನ ಬಾಗಿಲಿನಿಂದ ಮೂವ್ವರು ಪುರುಷರು ಅಶ್ವಾರೂಢರಾಗಿ ಹೊರಟು ಬೇರೆ ದಾರಿಯನ್ನು ಹಿಡಿದರು.

ಇತ್ತ ಶುಂಡಾಲನು ರಾಮೇಶ್ವರವನ್ನು ಸೇರಿ ಅಲ್ಲಿರುವ ತನ್ನ ಆಪ್ತ ಸ್ನೇಹಿತನ ಮನೆಯಲ್ಲಿ ಗೋಪ್ಯವಾಗಿ ಇಳಿದುಕೊಂಡು ತನಗೆ ಬಂದ ವಿಪತ್ತನ್ನು ತಿಳಿಸಿ ಮುಂದಕ್ಕೆ ತನಗೆ ಬದುಕುವ ಮಾರ್ಗವೇನೆಂದು ಅವನಲ್ಲಿ ಯೋಚಿಸಿ ತನ್ನ ಆಸ್ತಿಯನ್ನಾದರೂ ಕೊಡಿಸಿ ಕೊಡುವಂತೆ ಮುಖ್ಯ ಮಂತ್ರಿಯಲ್ಲಿ ಕೇಳಿಕೊಳ್ಳಬೇಕೆಂದು ನಿರ್ಧರಿಸಿ ತದನುಸಾರವಾಗಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಸ್ನೇಹಿತನ ಕೈಯ್ಯಲ್ಲಿ ಕೊಟ್ಟು "ನಿನ್ನ ಯುಕ್ತಿ ಸಾಹಸವನ್ನೆಲ್ಲಾ ವ್ಯಯಮಾಡಿ ಮಂತ್ರಿಯನ್ನು ಕಂಡು ಇದನ್ನು ಕೊಟ್ಟು ಎದುರಿನಲ್ಲಿ ಹೇಳಬೇಕಾದ್ದನ್ನೆಲ್ಲಾ ಹೇಳಿ ನನ್ನನ್ನು ಕಾಪಾಡು" ಎಂದು ಸ್ನೇಹಿತನನ್ನು ಪ್ರೇರೇಪಿಸಿ ಕೊಲಂಬುವಿಗೆ ಕಳುಹಿಸಿಕೊಟ್ಟನು.

ಸಂಧ್ಯಾಕಾಲವಾದರೂ ಅವನು ಹಿಂತಿರುಗಿ ಬಾರದಿರಲು ಶುಂಡಾಲನು ಬಹು ಲವಲವಿಕೆಯಿಂದ ಸಮುದ್ರತೀರವನ್ನು ಸೇರಿ ಅಧಿಕಾರಿಗಳಲ್ಲಿ ಯಾರಾದರೂ ಆಕಸ್ಮಾತ್ತಾಗಿ ನೋಡಿದರೆ ಮರಣಕ್ಕೆ ಗುರಿಮಾಡಿಯಾರು ಎಂಬ ಭಯದಿಂದ ದಡದ ಹತ್ತಿರ ಮಾರ್ಗದ ಮಗ್ಗುಲಲ್ಲಿ ಬೆಳೆದಿದ್ದ ಮರಗಳ ಮಧ್ಯದಲ್ಲಿ ಒಂದು ದೊಡ್ಡ ಮರವನ್ನೇರಿ ಸಮುದ್ರದ ಕಡೆಯೇ ನೋಡಿಕೊಂಡು ಸ್ನೇಹಿತನ ಬರವನ್ನು ನಿರೀಕ್ಷಿಸುತ್ತಿದ್ದನು.

ಸ್ವಲ್ಪ ಹೊತ್ತಿನ ಮೇಲೆ ಚಂದ್ರನು ಹುಟ್ಟಿ ಆ ತೀರವನ್ನು ಬೆಳಗುತ್ತಿದ್ದನು. ನಂತರ ಒಂದು ಘಳಿಗೆ ಮೇಲೆ ದಿವ್ಯವಾದ ಒಂದು ರಥವು ದಾರಿಯಲ್ಲಿ ಹರಿದು ಬಂದು ದಡದ ಸಮೀಪದಲ್ಲಿ ನಿಂತಿತು. ಇದಾದ ಕಾಲುಘಳಿಗೆಯಲ್ಲಿ ಒಂದು ಸಾಮಾನ್ಯವಾದ ದೋಣಿಯು ದಡವನ್ನು ಸೇರಲು ಮುಸುಕನ್ನು ಹಾಕಿಕೊಂಡಿದ್ದ ಸ್ತ್ರೀಯರಿಬ್ಬರು ಇಳಿದರು. ಅಷ್ಟರಲ್ಲಿ ಮತ್ತೊಂದು ದೊಡ್ಡ ದೋಣಿಯು ತೀರವನ್ನು ಮುಟ್ಟಿ ಮೂರು ಕುದುರೆಗಳು ಮೂವರು ಪುರುಷರು ಇಳಿದು ಬಂದು ಆ ಇಬ್ಬರು ಸ್ತ್ರೀಯರನ್ನು ರಥದಲ್ಲಿ ಹತ್ತಿಸಿ ತಾವು ಕುದುರೆಗಳನ್ನು ಏರಿ ಅಂಗರಕ್ಷಕರಾಗಿ ರಥದೊಡನೆ ಹೊರಟರು.

ರಥವು ಶುಂಡಾಲನು ಹತ್ತಿರುವ ಮರದ ಸಾಮೀಪ್ಯವನ್ನು ಸೇರಿದ ಸಮಯದಲ್ಲಿ ಮನೋರಮೆಯು ಮುಸುಕನ್ನು ತೆಗೆದು ಎಲ್ಲಾ ಏರ್ಪಾಡುಗಳು ಸಮಂಜಸವಾಗಿ ನಡೆದಿರುವವೆ ಎಂದು ತಿಳಿದುಕೊಳ್ಳುವುದಕ್ಕಾಗಿ ತಲೆಯನ್ನು ಹೊರಗೆ ಚಾಚಿ ಸುತ್ತಲೂ ನೋಡಿದಳು.

ಆ ಸಮಯದಲ್ಲಿ ಚಂದ್ರಕಾಂತಿಯು ಮನೋರಮೆಯ ಮುಖದ ಮೇಲೆ ಚೆನ್ನಾಗಿ ಬಿದ್ದಿತು. ಅದೇ ಕ್ಷಣದಲ್ಲಿ ಶುಂಡಾಲನ ದೃಷ್ಟಿಯೂ ಕೂಡ ಆವಳ ಮುಖದ ಮೇಲೆ ಬಿತ್ತು. ಆವನ ಕಣ್ರಪ್ಪೆಗಳು ಚಲಿಸಲಿಲ್ಲ. ಮರೆಯಲಾರದಂತಹ ಮನೋರಮೆಯ ಮುಖರೂಪವು ಅವನ ಮನಸ್ಸಿನಲ್ಲಿ ನಾಟಿ ಹೋಯಿತು. ಮರದ ಕೊಂಬೆಯನ್ನು ಹಿಡಿದವನು ಮರದ ಕೊಂಬೆಯೇ ಆಗಿಹೋದನು. ಮನೋರಮೆಯು ತಲೆಯನ್ನು ಎಳೆದುಕೊಂಡು ರಥವು ಸ್ವಲ್ಪ ದೂರ ಹೋಗುವವರಿಗೂ ಅವನ ಪ್ರಜ್ಞೆಯು ಅವನ ಸ್ವಾಧೀನಕ್ಕೆ ಬರಲಿಲ್ಲ.

ಮನೋರಮೆಯ ಪಲಾಯನವನ್ನು ಅಲ್ಲಿನ ಅಧಿಕಾರಿಗಳಿಗೆ ತಿಳಿಸಿ ಆವಳನ್ನು ಹಿಡಿದು ತರಿಸುವೆನೆಂದು ಮರದಿಂದ ಇಳಿದನು. ಪುನಃ ಯೋಚಿಸಿ "ಸರ್ವಸ್ವವನ್ನು ಕಳೆದುಕೊಂಡು ಇವನಿಗೆ ಬುದ್ಧಿಭ್ರಮಣೆಯಾಗಿರುವುದೆಂದು ನನ್ನ ಮಾತನ್ನು ನಂಬಲಾರರು. ಇದೂ ಅಲ್ಲದೆ ದೇಶಭ್ರಷ್ಟನಾಗುವ ಶಿಕ್ಷೆಗೆ ಗುರಿಯಾಗಿ ಇನ್ನೂ ಸಿಂಹಳ ದೇಶದಲ್ಲೇ ಇರುವನೆಂದು ನನ್ನನ್ನೇ ಹಿಡಿದರೆ ಮುಂದೆ ಗತಿಯೇನು ?" ಎಂದು ಹಲವು ಬಗೆಯಾಗಿ ಯೋಚಿಸುತ್ತಿದ್ದನು. ಅಷ್ಟರಲ್ಲಿ ತನ್ನ ಸ್ನೇಹಿತನು ಕುಳಿತಿರುವ ದೋಣಿಯು ಬರುತ್ತಿರುವುದನ್ನು ಕಂಡು ದಡಕ್ಕೆ ಓಡಿದನು. ಸ್ನೇಹಿತನು ಇಳಿದು ಬಂದು ಹೋದ ಕಾರ್ಯವು ಜಯವಾಗಲಿಲ್ಲವೆಂದು ತಿಳಿಸಿದನು. ಆಗ ಹಿಂತಿರುಗಿ ಹೋಗುವ ದೋಣಿಯನ್ನು ಶುಂಡಾಲನು ತಡೆದು ಸ್ವಲ್ಪಹೊತ್ತು ಕಾದಿರುವಂತೆ ಹೇಳಿ ಸ್ನೇಹಿತನನ್ನು ಪ್ರತ್ಯೇಕವಾಗಿ ಕರೆದು ತಾನು ನೋಡಿದ್ದನ್ನು ಹೇಳಿ ಅವನನ್ನು ಹಿಂತಿರುಗಿ ಹೋಗಿ ಅರಮನೆಯಲ್ಲಿ ಈ ಸಂಗತಿಯನ್ನು ತಿಳಿಸಿ ಮುಂದಾಗ ಬೇಕಾದ ಕಾರ್ಯವನ್ನು ಜರುಗಿಸಬೇಕೆಂದು ಕೇಳಲು ಸ್ನೇಹಿತನು ಶುಂಡಾಲನ ಮಾತುಗಳನ್ನು ನಂಬಿಯೂ ನಂಬದೆಯೂ ಇಂತಹ ಕಾರ್ಯದಲ್ಲಿ ತಾನು ಪ್ರವೇಶಿಸಿದರೆ ಕಷ್ಟಕ್ಕೆ ಗುರಿಯಾದೇನೆಂಬ ಭೀತಿಯಿಂದ ಶುಂಡಾಲನನ್ನೇ ಹೊರಡುವಂತೆ ಹೇಳಿ ಖರ್ಚಿಗೆ ಬೇಕಾಗುವಷ್ಟು ಹಣವನ್ನು ಕೊಟ್ಟು ಕಳುಹಿಸಿದನು.

ಶುಂಡಾಲನು ಕೊಲಂಬುವನ್ನು ಸೇರಿ ಹುಚ್ಚು ಹಿಡಿದವನಂತೆ ಒಂದೇ ಓಟದಿಂದ ಓಡಿ ಅರಮನೆಯ ಹೊರವಳಯದಲ್ಲಿ ಕಾವಲಿರುವ ಸೈನಿಕರಿಗೆ

ಮನೋರಮೆಯ ಪಲಾಯನವನ್ನು ಘಂಟಾಘೋಷವಾಗಿ ಹೇಳಿ ತನ್ನನ್ನು ಗುರುಕಾರನ ಬಳಿಗೆ ಕರೆದುಕೊಂಡು ಹೋಗಿಬಿಡಬೇಕೆಂದು ಮೊರೆಯಿಟ್ಟು ಕೊಳ್ಳುತ್ತಿದ್ದನು. ಸೈನೀಕರು "ಇವನಿಗೆ ಹುಚ್ಚು ಹಿಡಿಯಿತೊ? ಇಲ್ಲವೇ ಆಯುಸ್ಸು ಮುಗಿದು ಇಲ್ಲಿಗೆ ಬಂದಿದ್ದಾನೋ? ಈ ಸಲ ಇವನ ತಲೆಯನ್ನು ತೆಗೆಯದೇ ಬಿಡರು" ಎಂದು ಶುಂಡಾಲನನ್ನು ಹಾಸ್ಯ ಮಾಡುತ್ತಿದ್ದರು.

ಆ ಸಮಯದಲ್ಲಿ ಅರಮನೆಯ ಹೊರವಳೆಯದ ಸಮೀಪದಲ್ಲಿ ಮಂಗಲೆಯು ಹೂವು ಮಾರಿಕೊಂಡು ಸಂಚರಿಸುತ್ತಿದ್ದಳು. ಅವಳು ಮನೋರಮೆಯ ವಿಷಯದಲ್ಲಿ ತನ್ನ ಯುಕ್ತಿಚಾತುರ್ಯವನ್ನೆಲ್ಲಾ ಪ್ರಯೋಗಿಸಿ ಸರಿಯಾದ ಏರ್ಪಾಡುಗಳನ್ನು ಮಾಡಿದ್ದರೂ ದೈವೀಕವಾಗಿ ಏನಾದರೂ ಅಸಂಭವವು ಉಂಟಾದರೆ ತನ್ನ ತಂತ್ರಕ್ಕೆ ಸಂಬಂಧಪಟ್ಟ ಪುರೋಹಿತನು ಮುಂತಾದವರಿಗೆ ಮರಣದಂಡನೆಯಾಗುವುದೆಂದು ತಿಳಿದು ಅವರನ್ನು ರಕ್ಷಿಸುವುದಕ್ಕಾಗಿ ಮನೋರಮೆಯೊಡನೆ ಹೊರಡದೆ ಅವರು ಸುರಕ್ಷಿತರಾದರೆಂದು ದೃಢಪಟ್ಟ ಮೇಲೆ ಹೋಗಬೇಕೆಂದು ಯೋಚಿಸಿ, ನಾನಾ ವೇಷಗಳಿಂದ ಅರಮನೆಯ ಸುತ್ತಮುತ್ತಲು ಸಂಚರಿಸುತ್ತ ಯಾವ ಹೊತ್ತಿಗೆ ಯಾವ ವಿದ್ಯಮಾನವು ನಡೆಯುವುದೋ ಎಂದು ಜಾಗರೂಕಳಾಗಿದ್ದಳು. ಶುಂಡಾಲನು ಓಡಿ ಬಂದುದನ್ನು ನೋಡಿ ಅನುಮಾನ ತೋರದಂತೆ ಹೂವು ಮಾರುವ ನೆವದಿಂದ ಸೈನೀಕರ ಸಮೀಪಕ್ಕೆ ಬಂದು, ಅವನು ಘಂಟಾಘೋಷವಾಗಿ ಹೇಳುತ್ತಿದ್ದುದನ್ನೆಲ್ಲಾ ಕೇಳಿ, ಅಲ್ಲಿಂದ ಹೊರಟು ಬೇಗಬೇಗನೆ ಪುರೋಹಿತನ ಮನೆಗೆ ಬಂದು ನಡೆದ ಅಸಂಭವವನ್ನು ತಿಳಿಸಿ, ಅವನಿಗೆ ಯಥೇಚ್ಛವಾಗಿ ಧನವನ್ನಿತ್ತು ಅವನೊಡನೆ ತಾನೂ ಪಲಾಯನವಂಗೈದು ರಾಮೇಶ್ವರವನ್ನು ಸೇರಿ ಅವನ ಪೂರ್ವೀಕರಿದ್ದ ದೇಶಕ್ಕೆ ಅವನನ್ನು ಕಳುಹಿಸಿ ಕೊಟ್ಟು ತಾನು ಕಳಿಂಗಪಟ್ಟಣದ ಮಾರ್ಗವನ್ನು ಹಿಡಿದು ಹೊರಟಳು.

ಇತ್ತ ಸೈನಿಕರು ಅಪ್ಪಣೆಯನ್ನು ಪಡೆದು ಶುಂಡಾಲನನ್ನು ಗುರುಕಾರನ ಬಳಿಗೆ ಕರೆದೊಯ್ದರು. ಅವನಿಗೆ ಶುಂಡಾಲನ ಮಾತಿನಲ್ಲಿ ಮೊದಲು ನಂಬಿಕೆ ತೋರಲಿಲ್ಲ. ಆದರೆ ತಾರಾದೇವಿಯ ಮೇಲ್ವಿಚಾರಣೆಯಲ್ಲಿ ಮನೋರಮೆಯನ್ನು ಸಾಗಿಸಿಕೊಂಡು ಹೋಗಬೇಕೆಂದಿದ್ದ ಸಮಯದಲ್ಲಿ ತಾನು ಆ ಗೃಹವನ್ನು ಪ್ರವೇಶಿಸಿದ ಕೂಡಲೇ ಅಲ್ಲಿದ್ದವರೆಲ್ಲರೂ ಬೆಚ್ಚಿಬಿದ್ದ ವಿಚಾರವು

ಮನಸ್ಸಿನಲ್ಲಿ ಪೊಳೆಯಲು ಶುಂಡಾಲನು ಹೇಳಿದ್ದು ನಿಜವಾಗಿರಬಹುದೆಂದು ಯೋಚಿಸಿ ಕೆಲವು ಮಂದಿ ಅರಮನೆ ಸೈನಿಕರನ್ನು ಕರೆತರಿಸಿ "ನೀವು ಮನೋರಮೆಯನ್ನು ಸಾಗಿಸಿಕೊಂಡು ಹೋದ ಪುರೋಹಿತನ ಮನೆಗೆ ಹೋಗಿ ಆಕೆಯ ಶವವು ಅಲ್ಲಿ ಇಲ್ಲದ ಪಕ್ಷದಲ್ಲಿ ಅಲ್ಲಿರುವವನ್ನೆಲ್ಲಾ ಸೆರೆಹಿಡಿದು ನೆರೆಹೊರೆಯಲ್ಲಿ ಸಂಗತಿಗಳನ್ನು ವಿಚಾರಿಸಿಕೊಂಡು ಬೇಗನೇ ಬರುವುದು" ಎಂದು ನೇಮಿಸಿ ಕಳುಹಿಸಿ ಈ ವಿಚಾರವನ್ನು ರಾಜಮಾತೆಗೆ ತಿಳಿಸಲು ಹೊರಟು ಮನಸ್ಸಿನಲ್ಲಿ "ಈ ತಂತ್ರವು ತಾರಾದೇವಿಗೆ ತಿಳಿದಿರಬೇಕೆಂದು ತೋರುವುದು. ಅವಳನ್ನು ಎಳೆದರೆ ತನಗೆ ಯಾವುದೂ ತಿಳಿಯದೆಂದು ತಿರಸ್ಕರಿಸಿ ನನ್ನ ಮೇಲೆ ಆಗ್ರಹಗೊಳ್ಳುವಳು. ಇದಲ್ಲದೆ ರಾಜನಿಗೆ ಪ್ರೀತಿ ಪಾತ್ರಳಾಗಿರುವುದರಿಂದ ಮುಂದೆ ನನಗೆ ಕೆಡಕನ್ನು ಉಂಟುಮಾಡುವಳು. ಆದ್ದರಿಂದ ಈ ಸಂದರ್ಭದಲ್ಲಿ ಅವಳ ಹೆಸರನ್ನೇ ಎತ್ತಬಾರದು" ಎಂದು ನಿರ್ಧರಿಸಿ ರಾಜಮಾತೆಯ ಬಳಿಗೆ ಹೋಗಿ ಶುಂಡಾಲನು ಹೇಳಿದ್ದನ್ನೆಲ್ಲಾ ತಿಳಿಸಿದನು. ಅವಳು ಅದನ್ನು ಕೇಳಿ ವಿಸ್ಮಿತಳಾದಳು.

ಅಷ್ಟರಲ್ಲಿ ಪುರೋಹಿತನ ಮನೆಗೆ ಹೋಗಿದ್ದ ಸೈನಿಕರು ರಾಜಮಾತೆಯ ಸನ್ನಿಧಿಗೆ ಬಂದು ಮನೋರಮೆಯನ್ನು ಇರಿಸಿಕೊಂಡು ಹೋಗಿ ಬರಿದಾಗಿ ಬಿದ್ದಿದ್ದ ಬಿದಿರಿನ ಚಟ್ಟವನ್ನು ಮುಂದಿರಿಸಿ, ಸಾಯಂಕಾಲವಾದ ಮೇಲೆ ಮುಸುಕನ್ನು ಹಾಕಿಕೊಂಡಿದ್ದ ಇಬ್ಬರು ಸ್ತ್ರೀಯರು ಪುರೋಹಿತನ ಮನೆಯಿಂದ ಹೊರಗೆ ಬಂದು ಒಂದು ಗಾಡಿಯಲ್ಲಿ ಕುಳಿತುಕೊಂಡುಹೋದರೆಂದೂ, ಮೂವ್ವರು ಪುರುಷರು ಅಶ್ವಾರೂಢರಾಗಿ ಮನೆಯ ಹಿಂಬಾಗದಿಂದ ಹೋದ ರೆಂದೂ, ಮನೆಯಲ್ಲಿದ್ದವರೆಲ್ಲಾ ಪಲಾಯನವಾಗಿರುವರೆಂದೂ ವಿಚಾರಿಸಿದ ಸಂಗತಿಗಳನ್ನು ಅರಿಕೆ ಮಾಡಿದರು. ಇದನ್ನೆಲ್ಲಾ ಕೇಳಿ ರಾಜಮಾತೆಯು ಆಗ್ರಹಗೊಂಡವಳಾಗಿ ಅರಮನೆಯ ರಾಹುತಪಡೆಯಲ್ಲಿ ಇಪ್ಪತ್ತು ಮಂದಿ ಸಮರ್ಥರನ್ನು ಆರಿಸಿ ಕರೆತರಿಸಿ, ವೇಗಗಮನವನ್ನುಳ್ಳ ಕುದುರೆಗಳನ್ನು ಏರಿ ರಾಮೇಶ್ವರದ ಮಾರ್ಗವನ್ನು ಅನುಸರಿಸಿ ಹೊರಟು ಅಲ್ಲಲ್ಲಿ ವಿಚಾರಿಸಿಕೊಂಡು ತಪ್ಪಿಸಿಕೊಂಡು ಹೋಗಿರುವ ಮನೋರಮೆಯನ್ನು ಹಿಡಿದುತರುವಂತೆ ಅವರಿಗೆ ಆಜ್ಞಾಪಿಸಿ ಕಳುಹಿಸಿಕೊಟ್ಟಳು.

ಅತ್ತ ನಮ್ಮ ಕಥಾನಾಯಕಿಯು ರಾತ್ರಿಯೆಲ್ಲಾ ಪ್ರಯಾಣ ಮಾಡಿ

ಬೆಳಗಾಗಲು ಒಂದು ಹಳ್ಳಿಯ ಸಮೀಪದಲ್ಲಿ ಒಂದು ಘಳಿಗೆ ತಂಗಿ ಕುದುರೆಗಳಿಗೆ ಹುಲ್ಲು ಹಾಕಿಸಿ ಮಧ್ಯಾಹ್ನ ಭೋಜನಕ್ಕೆ ಬೇಕಾದ ಸಾಮಗ್ರಿಯನ್ನು ತರಿಸಿಟ್ಟುಕೊಂಡು ಅಲ್ಪಸ್ವಲ್ಪ ವಿಶ್ರಾಂತಿಯನ್ನು ಪಡೆದು ಯಥಾಪ್ರಕಾರ ಪ್ರಯಾಣವನ್ನು ಬೆಳಸಿ ಹೊರಟಳು.

ಪ್ರಾತಃಕಾಲದಿಂದಲೂ ರಥವು ಬಯಲುಪ್ರದೇಶದಲ್ಲಿ ಹರಿದುಹೋಗುತ್ತಿತ್ತು. ಪ್ರತಾಪಕಂಠೀರವಾದಿಗಳು ಆಗಾಗ್ಗೆ ಹಿಂತಿರುಗಿ ನೋಡಿಕೊಂಡು ಅಂಗರಕ್ಷಕರಾಗಿ ಹೋಗುತ್ತಿದ್ದರು. ಬೆಳಗಾದಮೇಲೆ ಸುಮಾರು ೮–೧೦ ಘಳಿಗೆ ಸಮಯದಲ್ಲಿ ಅಂಗರಕ್ಷಕರು ಹಿಂತಿರುಗಿ ನೋಡಿದಾಗ ದಿಗಂತಪ್ರದೇಶದಲ್ಲಿ ಕಪ್ಪು ಚುಕ್ಕೆಗಳು ಬಹು ದೂರದಲ್ಲಿ ಚಲಿಸುತ್ತಿರುವಂತೆ ಇದ್ದುದನ್ನು ಕಂಡು ಬೆಚ್ಚಿದರು. ಕೂಡಲೆ ರಾಜನು ರಥದ ವೇಗವನ್ನು ಹೆಚ್ಚಿಸುವಂತೆ ಸಾರಥಿಗೆ ಕೈಸನ್ನೆಯಿಂದ ಆಜ್ಞಾಪಿಸಿ ಸಿಂಹಬಲ ವೀರಬಾಹುಗಳನ್ನು ಕುರಿತು "ಆ ಚಲಿಸುತ್ತಿರುವ ಚುಕ್ಕೆಗಳು ನಮ್ಮ ಕಡೆಯೇ ಬರುತ್ತಿರುವುವು ನಮ್ಮನ್ನು ಹಿಡಿಯಲು ಬರುತ್ತಿರುವ ರಾಹುತರೆಂದು ತೋರುವುದು. ಯಾವುದೂ ಇನ್ನು ಸ್ವಲ್ಪ ಹೊತ್ತಿನಲ್ಲಿ ತಿಳಿಯುವುದು" ಎಂದು ಹೇಳಿ ಹಿಂತಿರುಗಿ ನೋಡಿಕೊಂಡು ಹೋಗುತ್ತಿದ್ದರು. ಕಾಲುಘಳಿಗೆಯಲ್ಲಿ ಹಿಂಬಾಲಿಸುವವರು ೧೫–೨೦ ಮಂದಿಯಾಗಿರಬೇಕೆಂದು ನಿರ್ಧರವಾಯಿತು ಕೂಡಲೆ ಪ್ರತಾಪಕಂಠೀರವನು "ಇಷ್ಟು ಜನದೊಡನೆ ಪ್ರತಿಭಟಿಸಿ ನಿಂತು ಯುದ್ಧಮಾಡುವುದು ಅಸಾಧ್ಯಕಾರ್ಯವು. ಈ ರಥವನ್ನು ನೆಚ್ಚಿದರೆ ಮನೋರಮೆಯನ್ನು ರಕ್ಷಿಸುವುದಕ್ಕೆ ಆಗುವುದಿಲ್ಲ. ಈಕೆಯನ್ನು ನನ್ನ ಸಂಗಡ ಕುಳ್ಳಿರಿಸಿಕೊಳ್ಳುವೆನು. ವೀರಬಾಹುವೇ! ಕಾಮಿನಿಯನ್ನು ನೀನು ಕುಳ್ಳಿರಿಸಿಕೊ. ಮುಂದೆ ದೇವರು ಬಿಟ್ಟಂತಾಗಲಿ" ಎಂದು ರಥವನ್ನು ನಿಲ್ಲಿಸಿ ಸಂಭವಿಸಿರುವ ಆಪತ್ತನ್ನು ತಿಳಿಸಿ ಭಯಪಡಬೇಡಿರೆಂದು ಅಭಯವನ್ನಿತ್ತು ಆ ಸ್ತ್ರೀಯರನ್ನು ಕುದುರೆಗಳಮೇಲೆ ಕುಳ್ಳಿರಿಸಿಕೊಂಡು ಪಲಾಯನರಾದರು. ರಾಜನ ಕುದುರೆಯು ಉಳಿದ ಕುದುರೆಗಳಿಗಿಂತ ವೇಗದಲ್ಲಿ ಹೆಚ್ಚಾದುದರಿಂದಲೂ, ಹಿಂಬಾಲಿಸುವವರಿಗೆ ಮನೋರಮೆಯನ್ನು ಹಿಡಿಯಬೇಕೆಂಬ ಉದ್ದೇಶವೇ ಮುಖ್ಯವಾಗಿರುವುದರಿಂದಲೂ ಉಳಿದಿಬ್ಬರಿಗೂ ಮುಂದುಮುಂದಾಗಿಯೇ ರಾಜನು ಕುದುರೆಯನ್ನು ಓಡಿಸಿಕೊಂಡು ಹೋಗುತ್ತಿದ್ದನು.

ಎರಡುಘಳಿಗೆ ಹೊತ್ತಿನಲ್ಲಿ ಮುಂದೆ ದೊಡ್ಡ ಮರಗಳ ಕಾಡೊಂದು ಕಾಣಿಸಿತು. ಒಂದೇದಿಕ್ಕನ್ನು ಅನುಸರಿಸಿ ಎಲ್ಲರೂ ಹೋಗಬೇಕೆಂಬುದು ಅಸಾಧ್ಯವೆನಿಸಿತು. ಆದ್ದರಿಂದ ಮೂವರೂ ಮೂರು ದಿಕ್ಕನ್ನು ಹಿಡಿದು ಕಾಡಿನಲ್ಲಿ ಚದರಿಹೋದರು. ಸ್ವಲ್ಪಹೊತ್ತಿನಲ್ಲಿ ಕಾಡು ಕಳೆದು ರಾಜನು ಬಯಲುಪ್ರದೇಶದಲ್ಲಿ ಓಡುತ್ತಿರಲು ಅವನ ದಾರಿಗೆ ಅಡ್ಡಲಾಗಿ ಬಹುದೂರದ ವರೆಗೂ ಭೂಮಿಯು ಬಿರುಕುಬಿಟ್ಟು ಉಂಟಾದ ಒಂದು ಅಗಾಧವಾದ ಕೊರಕಲು ಕಾಣಿಸಿತು. ಕುದುರೆಯಿಂದ ದಾಟುವುದಕ್ಕೆ ಸಾಧ್ಯವಾಗುವಷ್ಟು ಅಗಲವಿರುವ ಸ್ಥಳವನ್ನು ಹುಡುಕಿಕೊಂಡು ರಾಜನು ಕೊರಕಲಿನ ಪಕ್ಕದಲ್ಲಿ ಹೊರಟನು.

ಇಷ್ಟರಲ್ಲಿ ರಾಹುತಪಡೆಯು ರಾಜನು ಮೊದಲಾದವರು ಕಾಡಿನಲ್ಲಿ ದಿಕ್ಕುದಿಕ್ಕಿಗೆ ಚದರಿಹೋದುದನ್ನು ಬಹುದೂರದಿಂದಲೇ ನೋಡಿ ಕಾಡನ್ನು ಸಮೀಪಿಸಿ ನಾಲ್ಕುನಾಲ್ಕುಮಂದಿ ಒಂದೊಂದು ಗುಂಪಾಗಿ ರಾಜನು ಹೋದ ಪ್ರದೇಶದಕಡೆ ನಾಲ್ಕು ದಿಕ್ಕಿಗೆ ಚದರಿ ಹೊರಟರು. ಈ ಗುಂಪುಗಳಲ್ಲಿ ಒಂದು ಕಾಡನ್ನು ಕಳೆದು ರಾಜನನ್ನು ದೂರದಲ್ಲಿ ಕಂಡು ಕುದುರೆಗೆ ಗುರಿಯಿಟ್ಟು ಬಾಣಗಳನ್ನು ಪ್ರಯೋಗಿಸಿ ಹಿಂಬಾಲಿಸಿ ಓಡಿದರು. ದೈವವಶಾತ್ ಯಾವ ಬಾಣವೂ ಕುದುರೆಗೆ ತಗಲಲಿಲ್ಲ. ರಾಜನು "ಒಬ್ಬನಿಗೆ ಇಬ್ಬರಾದರೂ ಸರಿ. ಇವರು ನಾಲ್ವರಿರುವರು. ಆದ್ದರಿಂದ ಇವರೊಡನೆ ಹೋರಾಡಿ ಗೆಲ್ಲುವುದು ಅಸಾಧ್ಯವು. ಮನೋರಮೆಯು ಇವರಕೈಗೆ ಸಿಕ್ಕುವುದಕ್ಕಿಂತಲೂ ಸಾವೇ ಲೇಸೆಂದಿರುವಳು. ಈಗ ನಾನು ಮಾಡಬೇಕೆಂದಿರುವ ಸಾಹಸ ಯತ್ನವು ನಡೆಗರೆ ಇಬ್ಬರೂ ಸುರಕ್ಷಿತರಾಗುವೆವು. ಇಲ್ಲದಿದ್ದರೆ ಇಬ್ಬರೂ ಮೃತರಾಗುವೆವು" ಎಂದು ಮನಸ್ಸಿನಲ್ಲಿ ಧೃಢಪಡಿಸಿಕೊಂಡು ದೇವರಮೇಲೆ ಭಾರವನ್ನಿಟ್ಟು ಕೊರಕಲಿಗೆ ಅಡ್ಡಲಾಗಿ ಕುದುರೆಯನ್ನು ಹಿಂದಕ್ಕೆ ಎಳೆದು ಚಮುಕಾಯಿಸಿದನು. ಕುದುರೆಯು ಒಂದೇ ದಾಟಿಗೆ ಸಾಧಾರಣವಾಗಿ ದಾಟಲಶಕ್ಯವಾದ ಕೊರಕಲನ್ನು ದಾಟಿ ವಾಯುವೇಗವನ್ನು ಅನುಸರಿಸಿ ಓಡಿತು. ರಾಹುತರು ರಾಜನಂತೆ ಅದೃಷ್ಟಪರೀಕ್ಷೆಯನ್ನು ಮಾಡಲು ಇಷ್ಟವಿಲ್ಲದೆ ದಾಟಲನುಕೂಲವಾದ ಸ್ಥಳವನ್ನು ಹುಡುಕಿಕೊಂಡು ಬಹುದೂರ ಹೋಗಿ ಅಡ್ಡ

ವಾಗಿ ಹರಿಯುವ ಒಂದು ದೊಡ್ಡ ಹೊಳೆಗೆ ಕೊರಕಲು ಚಾಚಿಕೊಂಡಿರುವು ದನ್ನು ಕಂಡು ನಿರಾಶೆಯಿಂದ ಹಿಂತಿರುಗಿದರು.

ರಾಜನು ಅಲ್ಲಿಂದ ಇಪ್ಪತ್ತುವೈಲಿ ದೂರದಲ್ಲಿರುವ ಒಂದು ಊರನ್ನು ಸೇರಿದನು. ಉಳಿದವರು ಅದೃಷ್ಟವಶಾತ್ ತಪ್ಪಿಸಿಕೊಂಡು ಅದೇ ಊರಿಗೆ ಬಂದರು. ನಂತರ ಸ್ತ್ರೀಯರಿಗೆ ಎರಡು ಕುದುರೆಗಳನ್ನು ಬೆಲೆಗೆ ತೆಗೆದು ಕೊಂಡು ಕಾಲವಿಳಂಬ ಮಾಡದೆ ಅಶ್ವಾರೂಢರಾಗಿ ಎಲ್ಲರೂ ಮುಂದೆ ಪ್ರಯಾಣಮಾಡಿದರು.

ಮಾರನೇದಿನ ಮಧ್ಯಾಹ್ನದಲ್ಲಿ ಸಿಂಹಳದೇಶದ ಎಲ್ಲೆಯನ್ನು ದಾಟಿ ಸುರಕ್ಷಿತರಾದೆವೆಂದು ಮುಂದೆ ನಿಧಾನವಾಗಿ ಪ್ರಯಾಣಮಾಡಿ ಮಾರನೇದಿನ ಬೆಳಿಗ್ಗೆ ಕಮಲಿನಿಯ ತಾಯಿ ತಂಗಿಯರಿರುವ ಹಳ್ಳಿಯನ್ನು ಸೇರಿ ಅವರ ಸತ್ಕಾರವನ್ನು ಕೈಕೊಂಡು ಅವಳ ಕ್ಷೇಮಸಮಾಚಾರವನ್ನು ತಿಳಿಸಿ, ಅಲ್ಲಿಂದ ಹೊರಟು ಸೂರ್ಯಾಸ್ತಮಾನವಾಗುವುದಕ್ಕೆ ಮುಂಚೆ ಕಳಿಂಗಪಟ್ಟದ ಕೋಟೆಯ ಸಮೀಪದಲ್ಲಿರುವ ತಿಟ್ಟಿನ ಭೂಮಿಯನ್ನು ಸೇರಿ ಪಟ್ಟಣವು ಗೋಚರವಾಗಲು ಅಲ್ಲೇ ನಿಂತು ಪಟ್ಟಣದ ಶೃಂಗಾರವನ್ನು ವರ್ಣಿಸುತ್ತಿದ್ದರು.

ಆ ಸಮಯದಲ್ಲಿ ಕೋಟೆಯ ಒಳಭಾಗದಲ್ಲಿರುವ ಕಾರಾಗೃಹದ ಗೋಪುರಪ್ರದೇಶದಿಂದ ಸೆರೆಮನೆಯಲ್ಲಿರುವವನೊಬ್ಬನು ಒಂದು ಬಲವಾದ ಹಗ್ಗದ ಕೊನೆಯನ್ನು ಬಂಧಿಸಿ ಅದರ ಮೂಲಕ ಇಳಿಯುತ್ತಿದ್ದನು. ಈ ಸಾಹಸ ಕೃತ್ಯವು ಪ್ರತಾಪಕಂಠೀರವಾದಿಗಳ ದೃಷ್ಟಿಪಥಕ್ಕೆ ಬೀಳಲು ಎಲ್ಲರೂ ದಿಟ್ಟಿಸಿ ನೋಡಿದರು. ಅವನ ವಯಸ್ಸು ಆಕಾರಾದಿಗಳನ್ನು ನೋಡಿ ದುಷ್ಟ ಬುದ್ಧಿಯೆಂದು ಊಹಿಸಿದರು ಅಷ್ಟರಲ್ಲಿ ಸಂಧ್ಯಾಕಾಲದ ಸೂರ್ಯಕಿರಣಗಳು ಅವನು ಒಂದು ಕಡೆಗೆ ತಿರುಗಿದ ಸಮಯದಲ್ಲಿ ಅವನ ಮುಖದಮೇಲೆ ಬೀಳಲು ದುಷ್ಟಬುದ್ಧಿಯೆಂದೇ ನಿರ್ಧರವಾಯಿತು. ಈ ದುಷ್ಟನು ತಪ್ಪಿಸಿ ಕೊಂಡು ಹೋಗದಂತೆ ಹಿಡಿಯುವುದಕ್ಕೋಸ್ಕರ ಕಾವಲಿನವರನ್ನು ಎಚ್ಚರಿ ಸಲು ವೀರಬಾಹುವನ್ನು ಕಳುಹಿಸಿ ದುಷ್ಟಬುದ್ಧಿಯ ಸಾಹಸಕೃತ್ಯವನ್ನು ಎಲ್ಲರೂ ನೋಡುತ್ತಿದ್ದರು.

ದುಷ್ಟಬುದ್ಧಿಯು ತನ್ನ ಸ್ನೇಹಿತರಿಂದ ಲಂಚವನ್ನು ಪಡೆದ ಕಾವಲಿ ನವರ ಸರದಿಯನ್ನು ನಿರೀಕ್ಷಿಸುತಲಿದ್ದು ಆ ದಿನ ಬೆಳಕಿರುವಾಗಲೇ ಅವಕಾಶ

ದೊರೆಯಲು ಈ ಕೃತ್ಯವನ್ನು ಕೈಕೊಂಡು ಸದ್ದಿಲ್ಲದಂತೆ ಗೋಪುರದಿಂದ ಇಳಿದು ಪಕ್ಕದಮನೆಗಳ ಮೇಲ್ಭಾವಣಿಯಮೇಲೆ ನಡೆದು ಅನುಕೂಲವಾದ ಸ್ಥಳದಲ್ಲಿ ಇಳಿದು ಕಂದಕವಲ್ಲಿ ಬಿದ್ದು ಮೆಲ್ಲಮೆಲ್ಲನೆ ಈಜಿಕೊಂಡು ಕಂದಕ ವನ್ನು ದಾಟಿ ಕೋಟೆಯನ್ನೇರಿ ಇಳಿದು ಸಮೀಪದಲ್ಲಿರುವ ಕಾಡಿನ ಕಡೆಗೆ ಓಡುತ್ತಿದ್ದನು.

ಇದನ್ನು ನೋಡಿ ಇವನನ್ನು ಹೀಗೆ ಬಿಡುವುದು ಅನುಚಿತವೆಂದು ರಾಜನು ಸಿಂಹಬಲನನ್ನು ಕರೆದುಕೊಂಡು ವೇಗವಾಗಿ ಕಾಡಿನಕಡೆ ಕುದುರೆ ಯನ್ನು ಓಡಿಸಿಕೊಂಡು ಹೋಗುತ್ತಿದ್ದನು. ಅಷ್ಟರಲ್ಲಿ ದುಷ್ಟಬುದ್ಧಿಯು ಕಾಡನ್ನು ಸೇರಿ ಅಶ್ವಾರೂಢರಾಗಿ ನಿಂತಿದ್ದ ಕರಾಳನು ಮತ್ತು ಭೀಷಣನು ತನಗೆಂದು ಸಿದ್ಧಪಡಿಸಿ ಹಿಡಿದುಕೊಂಡಿರುವ ಕುದುರೆಯನ್ನು ಏರಲು ಮೂವ್ವರೂ ಕುದುರೆಗಳನ್ನು ಓಡಿಸಿಕೊಂಡು ಹೋದರು. ಅವರನ್ನು ಹಿಂಬಾಲಿಸಿ ರಾಜನೂ ಸಿಂಹಬಲನೂ ಓಡಿದರು. ಕರಾಳನು ಕಲಿತು ಯುದ್ಧಮಾಡಲೆತ್ನಿಸಿ ನಿಂತು ರಾಜನಿಗೆ ಗುರಿಯಿಟ್ಟು ಬಾಣವನ್ನು ಪ್ರಯೋಗ ಮಾಡುತ್ತಿರುವ ಕ್ಷಣವೇ ಅವನ ಇಂಗಿತವನ್ನು ಮೊದಲೆ ಅರಿತ ರಾಜನು ಅವನ ಕುದುರೆಯನ್ನು ಗುರಿಕಟ್ಟಿ ಬಾಣಪ್ರಯೋಗ ಮಾಡಿಕೊಂಡು ಬೀಳಿಸಿದ್ದುದ ರಿಂದ ಎಂದೆಂದೂ ಗುರಿತಪ್ಪದ ಕರಾಳನ ಬಾಣವು ಇಟ್ಟ ಗುರಿಯನ್ನು ತಪ್ಪಿ ಬೇರೆ ಕಡೆಗೆ ಹೋಗಿ ನಿರರ್ಥಕವಾಯಿತು. ಕುದುರೆಯು ಬೀಳುವ ಸಮಯ ದಲ್ಲಿ ಕಾಲು ಸಿಕ್ಕಿಕೊಂಡು ಕರಾಳನು ಬಿದ್ದು ಮೂರ್ಛಿತನಾದನು.

ದುಷ್ಟಬುದ್ಧಿಯು ಯಾವಾಗಲೂ ಸ್ವಾರ್ಥಚಿಂತನೆಯಲ್ಲಿ ಅಗ್ರಗಣ್ಯ ನಾದುದರಿಂದ ತಾನು ತಪ್ಪಿಸಿಕೊಂಡರೆ ಸಾಕೆಂದು ತನ್ನ ಸ್ನೇಹಿತನ ಸಹಾ ಯಕ್ಕೆ ನಿಲ್ಲದೆ ಓಡಿಹೋಗುತ್ತಲಿದ್ದನು. ಭೀಷಣನು ಒಡೆಯನ ಸಹಾಯಕ್ಕೆ ನಿಲ್ಲಬೇಕೆಂದು ಎತ್ನಿಸಿದರೂ ಅವನ ಕುದುರೆಯು ಓಡಿಹೋಗುತ್ತಲಿದ್ದ ದುಷ್ಟಬುದ್ಧಿಯ ಕುದುರೆಯನ್ನೇ ಮುಷ್ಕರದಿಂದ ಹಿಂಬಾಲಿಸಿತು. ಆದ್ದರಿಂದ ಕರಾಳನು ಏಕಾಂಗಿಯಾದನು ಅವನು ಇಂಥಾವನೆಂದು ಗುರುತು ಅರಿಯದ ಕಾರಣ ರಾಜನು ಮತ್ತು ಸಿಂಹಬಲನು ಬಿದ್ದವನನ್ನು ಲಕ್ಷಿಸದೆ ಓಡಿಹೋಗುತ್ತ ಲಿರುವ ದುಷ್ಟನನ್ನು ಹಿಡಿಯಲು ಹಿಂಬಾಲಿಸಿದರು.

ಆ ಉನ್ನತಪ್ರದೇಶದಲ್ಲಿ ನಿಂತು ನೋಡುತ್ತಲಿದ್ದ ಸ್ತ್ರೀಯರು ಕರಾಳನು

ಬಿದ್ದು ಮೂರ್ಛಿತನಾದ ಕೂಡಲೆ ರಾಜಸಿಂಹ ಬಲರಲ್ಲಿ ಯಾರಿಗಾದರೂ ಅಪಾಯ ಸಂಭವಿಸಿತೋ ಎಂಬ ಶಂಕೆಯಿಂದ ಅಲ್ಲಿಂದ ಹೊರಟುಬಂದು ಬಿದ್ದಿರುವ ಮನುಷ್ಯನನ್ನು ನೋಡಿದಾಕ್ಷಣ ಕಾಮಿನಿಯು "ಹಾ! ಕರಾಳ" ಎಂದು ಸಂಭ್ರಾಂತಚಿತ್ತಳಾದಳು.

ಹಿಂದೆ ಕರಾಳನು ಮನೋರಮೆಯ ಉಂಗುರವನ್ನು ಅಪಹರಿಸಿದ ಕಾಲದಲ್ಲಿ ಅವನ ಮುಖವು ಕಾಣದಿದ್ದುದರಿಂದ ಈಗ ಅವಳು ಗುರುತರಿಯದೆ ಅವನನ್ನು ನೋಡಿ ರಾಜನಲ್ಲವೆಂದು ಸಮಾಧಾನಚಿತ್ತಳಾದಳು. ಆದರೆ ಕಾಮಿನಿಯಿಂದ ಕರಾಳನೆಂದು ತಿಳಿದಾಕ್ಷಣ ಭಯಾಶ್ಚರ್ಯಯುಕ್ತಳಾದಳು.

ಕಾಮಿನಿಯು ಅವನ ಮೂಗಿನ ಹತ್ತಿರ ತನ್ನ ಮುಖವನ್ನಿಟ್ಟು ಕೆಲವು ನಿಮಿಷಗಳವರಿಗೂ ಪರೀಕ್ಷಿಸಿ "ಬದುಕಿರುವನು! ಬದುಕಿರುವನು!" ಎಂದು ಹರ್ಷದಿಂದ ಕೂಗಿ ಹೇಳಿ ಮೈಯನ್ನೆಲ್ಲಾ ಸವರಿ ನೋಡಿ ರಕ್ತವು ಕಾಣದಿರಲು "ಘಾಯವೂ ಇಲ್ಲ. ಮೂರ್ಛೆ ಹೋಗಿರುವನು" ಎಂದಳು.

ಕರಾಳನು ಬದುಕಿರುವನೆಂದು ತಿಳಿದ ಆ ಕ್ಷಣದಿಂದಲೂ ಮನೋರಮೆಯು "ಇನ್ನೆಷ್ಟು ಶೀಘ್ರವಾಗಿ ಮೂರ್ಛೆ ತಿಳಿಯುವುದೊ? ಎದ್ದು ನಿನಗೆ ಏನು ಕೆಡಕನು ಮಾಡುವನೋ?" ಎಂದು ಕಳವಳಪಡುತ್ತಿದ್ದಳು. ಹೀಗಿರುವ ಅವಳ ಮನಸ್ಸನ್ನು ತಿಳಿದು ಕಾಮಿನಿಯು "ಇವನೂ ನಮ್ಮಂಥಾ ಪ್ರಾಣಿಯು. ಎಷ್ಟು ಕೆಟ್ಟವನಾಗಿದ್ದರೂ ಈ ಕುದುರೆಯು ಕೆಳಗೆ ಸಿಲುಕಿರುವ ಕಾಲನ್ನು ಬಿಡಿಸದೆ ಹೀಗೆಯೇ ಬಿಟ್ಟೆವಾದರೆ ಇದರ ಭಾರದಿಂದ ಮೃತನಾಗುವನು. ತಿಳಿದು ತಿಳಿದು ನಾವೇ ಕೊಂದಂತಾಗುವುದು" ಎಂದು ಮನೋರಮೆಯ ಭೂತದಯೆಯನ್ನು ಹೆಚ್ಚಿಸಿ ಅವಳನ್ನು ಸಹಾಯಕ್ಕೆ ಕರೆದುಕೊಂಡು ಕರಾಳನ ಕಾಲನ್ನು ಬಿಡಿಸಿದಳು. ಆದರೂ ಅವನು ಇನ್ನೂ ಮೂರ್ಛಾವಸ್ಥೆಯಲ್ಲಿಯೇ ಇದ್ದನು.

ಅಷ್ಟರಲ್ಲಿ ವೀರಬಾಹುವು ತಮ್ಮ ಕಡೆಗೆ ಬರುತ್ತಲಿರುವುದನ್ನು ಕಾಮಿನಿಯು ದೂರದಲ್ಲಿಯೇ ಕಂಡು ಮನೋರಮೆಯನ್ನು ಕುರಿತು "ಇವನ ಗುರುತು ಪರಿಚರ್ಯವು ವೀರಬಾಹುವಿಗೆ ತಿಳಿಯದು. ಇವನ ಹೆಸರನ್ನೇ ಅವನ ಎದುರಿಗೆ ತೆಗೆಯಬೇಡಿರಿ. ನೀವು ತಿಳಿದಂತೆ ಇವನಿಗೆ ಯಾವ ಕೆಡಕನ್ನೂ

ಮಾಡುವುದಿಲ್ಲವೆಂದು ಗತಿಸಿಹೋದ ಶುಕವಾಣಿಯು ಬಳಿಯಲ್ಲಿ ವಾಗ್ದಾನ ಮಾಡಿರುವಿರಿ" ಎಂದು ಸೂಚಿಸಿದಳು.

ವೀರಬಾಹುವು ದುಷ್ಟಬುದ್ಧಿಯ ದುಷ್ಕಾರ್ಯವನ್ನು ಕಾವಲಿನವರಿಗೆ ಎಚ್ಚರಿಸಿ ಹಿಂತಿರುಗಿ ರಾಜನು ಮೊದಲಾದವರನ್ನು ಬಿಟ್ಟು ಬಂದ ಸ್ಥಳವನ್ನು ಸೇರಿ, ಅಲ್ಲಿ ಯಾರನ್ನೂ ಕಾಣದೆ ಅವರನ್ನು ಹುಡುಕುತ್ತಾ ಇವರಿಬ್ಬರನ್ನು ಕಂಡು ಹತ್ತಿರಕ್ಕೆ ಬಂದು ಮನೋರಮೆಯನ್ನು ಕುರಿತು "ಮಹಾರಾಣಿಯೆ, ಇವನು ಯಾರು? ರಾಜನು—" ಎಂದು ಮುಗಿಸುವುದರೊಳಗಾಗಿ "ರಾಜನು ಸಿಂಹಬಲನು ಕಾರಾಗೃಹದಿಂದ ತಪ್ಪಿಸಿಕೊಂಡು ಓಡಿಹೋಗುತ್ತಲಿದ್ದ ದುಷ್ಟ ಬುದ್ಧಿಯನ್ನು ಹಿಡಿಯಲು ಹಿಂಬಾಲಿಸಿ ಹೋದರು. ಅವನ ಜೊತೆಗೆ ಇನ್ನೂ ದುಷ್ಟರಿರುವರು. ಪರಸ್ಪರ ಜಗಳವಾಗಬಹುದು" ಎಂದು ಕಾಮಿನಿಯು ತನ್ನ ಅಭಿಪ್ರಾಯಸೂಚಿತವಾದ ಉತ್ತರವನ್ನು ಕೊಡಲು ವೀರಬಾಹುವಿನಿಂದ ರಾಜನಿಗೆ ಬೆಂಬಲವಾಗುವುದೆಂದೂ, ಅವನು ಅಲ್ಲಿ ನಿಲ್ಲುವುದು ಕಾರಣಾಂತರ ವಾಗಿ ಕಾಮಿನಿಗೆ ಇಷ್ಟವಿಲ್ಲವೆಂದೂ ತಿಳಿದು ಅವಳು ತನಗೆ ಮಾಡಿದ ಉಪಕಾರಕ್ಕೆ ಅವಳ ಮನಸ್ಸಿಗೆ ಈಗ ವಿರೋಧವಾಗಿ ನಡೆದು ಕೃತಘ್ನಳಾಗ ಬಾರದೆಂಬ ವಿವೇಕದಿಂದ ಮನೋರಮೆಯು ವೀರಬಾಹುವಿಗೆ ರಾಜನು ಹೋದ ದಿಕ್ಕನ್ನು ತೋರಿಸಿ ಅಪ್ಪಣೆಯನ್ನಿತ್ತು ಕಳುಹಿಸಿದಳು.

ಅವನು ಹೋದ ಕೂಡಲೇ ಕಾಮಿನಿಯು "ಇವನು ಇಂಥವನೆಂದು ವೀರಬಾಹುವಿಗೆ ತಿಳಿದಪಕ್ಷದಲ್ಲಿ ಇಲ್ಲಿಯೇ ನಿಂತು ಇವನನ್ನು ಅಧಿಕಾರಿಗಳಿಗೆ ಒಪ್ಪಿಸುವುದಕ್ಕೆ ಏರ್ಪಾಡುಗಳನ್ನು ಮಾಡುತ್ತಿದ್ದನು. ಆ ದುರಾದೃಷ್ಟಳಾದ ಗತಿಸಿದ ಶುಕವಾಣಿಗೆ ನಾನು ಆಪ್ತಳು. ಅವಳಲ್ಲಿದ್ದ ಅಭಿಮಾನಕ್ಕಾಗಿಯೇ ನಾನು ಇವನ ವಿಷಯದಲ್ಲಿ ಹೇಗೆ ಆಚರಿಸುವುದು. ಈಗ ನಿಮ್ಮಿಂದ ಒಂದು ಕೆಲಸವು ಆಗಬೇಕಾಗಿರುವುದು" ಎಂದು ಬೇಡಿಕೊಳ್ಳಲು ಮನೋರಮೆಯು "ನನ್ನ ಮಾನ, ನನ್ನ ಸೌಖ್ಯ, ಕೊನೆಗೆ ನನ್ನ ಪ್ರಾಣವನ್ನೇ ಉಳಿಸಿದ ನಿನಗೆ ಯಾವುದನ್ನು ಇಲ್ಲವೆಂದು ಹೇಳುತ್ತೇನೆಯೆ? ಬೇಕಾದುದನ್ನು ಕೇಳು" ಎಂದು ಭರವಸೆಯನ್ನೀಯಲು ಕಾಮಿನಿಯು "ಹಾಗಾದರೆ ಇಲ್ಲಿಗೆ ಹತ್ತಿರ ವಿರುವ ಅಂಗಡಿಗಳಲ್ಲಿ ಶೈತ್ಯೋಪಚಾರಕ್ಕೆ ಬೇಕಾದ ಸಾಮಗ್ರಿಯಗಳನ್ನು

ತೆಗೆದುಕೊಂಡು ಬನ್ನಿ. ನಾನು ಇವನ ಬಳಿಯಲ್ಲಿ ಕಾದಿರುವೆನು" ಎಂದು ಹೇಳಿ ಮನೋರಮೆಯನ್ನು ಊರಿಗೆ ಕಳುಹಿಸಿದಳು.

ಅವಳು ಕಣ್ಣಿಗೆ ಮರೆಯಾದ ಕೂಡಲೇ ಕಾಮಿನಿಯು ಕಷ್ಟಪಟ್ಟು ಕರಾಳನನ್ನು ಎತ್ತಿ ತನ್ನ ಕುದುರೆಯ ಮೇಲೆ ಅಡ್ಡಲಾಗಿ ಇರಿಸಿ ಕುದುರೆಯನ್ನು ನಡೆಸಿಕೊಂಡು ಸಮೀಪದಲ್ಲಿರುವ ಕಾಡನ್ನು ಹೊಕ್ಕು ಅಲ್ಲಿ ಒಂದು ಸಣ್ಣ ತೊರೆಯ ಮಗ್ಗುಲಿನಲ್ಲಿ ಇಕ್ಕಟ್ಟಾಗಿ ಬೆಳೆದ ಮರಗಳ ನೆರಳಿನ ಆಸರೆಯಲ್ಲಿ ಚಿಗುರೆಲೆಗಳನ್ನು ಕಿತ್ತು ಹಾಸಿ ಕರಾಳನನ್ನು ಕುದುರೆಯಿಂದ ಇಳಿಸಿ ಅದರ ಮೇಲೆ ಮಲಗಿಸಿ ಅವನ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಅವನ ಕವಚದಲ್ಲಿದ್ದ ಕೈವಸ್ತ್ರವನ್ನು ಪಕ್ಕದಲ್ಲಿ ಹರಿಯುವ ನೀರಿನಲ್ಲಿ ಅದ್ದಿ ಶೈತ್ಯೋಪಚಾರವನ್ನು ಮಾಡುತ್ತಿದ್ದಳು. ಅವಳ ಉಪಚಾರಕ್ಕೆ ಸಹಾಯ ವಾಗಿ ಆಗ ಆಕಾಶದಲ್ಲಿ ಸ್ವಲ್ಪವೂ ಮೋಡವಿಲ್ಲದೆ ಬೆಳದಿಂಗಳು ಮನೋಹರ ವಾಗಿ ಬೆಳಗುತ್ತಿತ್ತು. ತಂಗಾಳಿಯು ಮಂದವಾಗಿ ಬೀಸುತ್ತಿತ್ತು.

ನಿಧಾನವಾಗಿ ಕರಾಳನು ಕಣ್ಣು ಬಿಡಲಾರಂಭಿಸಿದನು. ನಂತರ ತೇಗಿ ತೇಗಿ ನಿಟ್ಟುಸುರು ಬಿಡುತ್ತಾ ಕನವರಿಸುತ್ತಿದ್ದನು. ಮೊದಲು ಮೊದಲು ಕನವರಿಸಿದ ಮಾತುಗಳು ಅರ್ಥವಾಗದಿದ್ದರೂ ಬರುತ್ತ ಬರುತ್ತ ತಡವರಿಸಿ ತಡವರಿಸಿ ಉಚ್ಚರಿಸಲ್ಪಡುತ್ತಿದ್ದರೂ ಒಂದಕ್ಕೊಂದು ಸಮಂಜಸವಾದ ಅಭಿಪ್ರಾಯ ಸೂಚಕವಾದವು. ಇದರಿಂದ ಮನೋರಮೆಯನ್ನು ಕಳವು ಮಾಡಿದ ಸಂದರ್ಭದಲ್ಲಿ ನಡೆದ ವಿಷಯಗಳು ಮತ್ತು ಧನಕೋಟಿಯನ್ನು ಕೊಲ್ಲಲು ಕರಾಳನು ಯೋಚಿಸಿರಲಿಲ್ಲವೆಂಬುದು ಭೀಷಣನು ಅಕಸ್ಮಾತ್ ತನಗೆತಿಳಿಸದೆ ಕೊಂದುದಕ್ಕಾಗಿ ತಾನು ಪಶ್ಚಾತ್ತಾಪದಿಂದ ಮರುಗುವನೆಂಬ ಸಂಗತಿಗಳು ತಿಳಿಯಬಂದುವು. ಆಮೇಲೆ ಅಲ್ಪ ಸ್ವಲ್ಪ ಪ್ರಜ್ಞೆಯುಂಟಾಗಿ, "ನನಗೇನು ಸಂಭವಿಸಿದೆ? ನಾನೆಲ್ಲಿರುವೆನು? ಇದೇನು ಕಾರಾಗೃಹವೊ? ನನ್ನ ಕೈಕಾಲುಗಳಲ್ಲಿ ಸಂಕೋಲೆಗಳಿರುವವೊ?" ಎಂದು ಹೇಳಿಕೊಳ್ಳುತ್ತಿರಲು ಕಾಮಿನಿಯು "ನೀನು ಸ್ವತಂತ್ರನಾಗಿರುವೆ" ಎಂದು ಮೃದುಮಧುರ ಸ್ವರದಿಂದ ಉತ್ತರವಿತ್ತಳು. ಕರಾಳನು "ನನ್ನ ಶುಕವಾಣಿಯ ಕಂಠಸ್ವರವೊ ಈ ವಿಧ—" ಎನ್ನುವಷ್ಟರಲ್ಲಿ ಕಾಮಿನಿಯು "ಅವಳದಲ್ಲ. ಅವಳು ಗತಿಸಿ ಹೋಗಿರುವುದನ್ನು ನೀನೇ ತಿಳಿದಿರುವೆ" ಎಂದು ಬಹು ಗೂಢಸ್ವರದಿಂದ

ಅವನಿಗೆ ತಿಳಿಯುವಂತೆ ಹೇಳಲು ಕರಾಳನು "ಅಹುದು. ಆ ನನ್ನ ಪ್ರಾಣ ಪದಕವು ಈ ಲೋಕವನ್ನೂ ನನ್ನನ್ನೂ ಬಿಟ್ಟು ಹೋಗಿರುವುದು" ಎಂದು ತಡವರಿಸಿ ಹೇಳಿದನು.

ನಂತರ, ಸ್ವಲ್ಪ ಹೊತ್ತಿನ ಮೇಲೆ ಪ್ರಜ್ಞೆಯು ಹೆಚ್ಚುತ್ತಾ ಬರಲು ಕರಾಳನು "ಇದು ಯಾರು ನನ್ನೊಡನೆ ಮಾತನಾಡುತ್ತಿರುವುದು? ಅಥವಾ ಇದು ಸ್ವಪ್ನವೊ? ಇದೇನು ನಿಜವಾಗಿಯೂ ಮೃದುಮಧುರವಾದ ಸ್ತ್ರೀ ಸ್ವರವೊ? ಅಥವಾ ನನ್ನ ಬುದ್ಧಿಭ್ರಮಣೆಯೋ?" ಎಂದು ಕೇಳುತ್ತಿರಲು, ಕಾಮಿನಿಯು "ಸುರಕ್ಷಿತವಾದ ಸ್ಥಳಕ್ಕೆ ನಿನ್ನನ್ನು ತಂದು ಉಪಚರಿಸುತ್ತಿರುವ ಗತಿಸಿದ ಶುಕವಾಣಿಯ ಆಪ್ತಸ್ನೇಹಿತಳು ನಾನು" ಎಂದು ಉತ್ತರವಿತ್ತಳು. ಕರಾಳನು "ನಿನ್ನ ಹೆಸರು ಪರಿಚಯವನ್ನು ಹೇಳು. ಕಷ್ಟ ಕಾಲದಲ್ಲಿ ಒದಗಿದವಳೆಂದು ಇನ್ನು ಮುಂದೆ ನಿನ್ನನ್ನು ಸ್ಮರಿಸಿಕೊಳ್ಳುವೆನು" ಎಂದು ದೈನ್ಯೋಕ್ತಿಯಿಂದ ಕೇಳಲು, ಕಾಮಿನಿಯು "ನಾನು ಬಹು ದೂರ ದೇಶದವಳು. ಚಿಕ್ಕಂದಿನಿಂದಲೂ ಕಳಿಂಗಪಟ್ಟಣ ಪ್ರಾಂತ್ಯದಲ್ಲೇ ಬೆಳೆದವಳಾದರೂ ನನ್ನ ಜನ್ಮಭೂಮಿಯ ನಿವಾಸಿಗಳಂತೆ ನಾನು ಕಪ್ಪುದೇಹದವಳು. ನನ್ನ ಹೆಸರನ್ನು ತಿಳಿಯುವುದರಿಂದ ನಿನಗೆ ಯಾವ ಪ್ರಯೋಜನವೂ ಉಂಟಾಗಲಾರದು" ಎಂದು ಉತ್ತರವೀಯಲು ಕರಾಳನು "ಆಹಾ! ಈಗ ಗೊತ್ತಾಯಿತು. ಜನಗಳ ಎದುರಿನಲ್ಲಿ ಕಳ್ಳಕರಾಳನು ನಿನ್ನ ಹೆಸರನ್ನು ಹೇಳಿದರೆ ನಿನಗೆ ಅವಮಾನವೆಂದು ಎಣಿಸಿರಬಹುದು" ಎಂದು ಸ್ವಲ್ಪ ಕಠಿಣೋಕ್ತಿಯಿಂದ ಹೇಳಿದನು. ಆಮೇಲೆ ಬಹಳ ಹೊತ್ತಾಗಿ ಕರಾಳನಿಗೆ ಪೂರ್ಣಪ್ರಜ್ಞೆಯೂ ಚೈತನ್ಯವೂ ಉಂಟಾಗಲು ಕಾಮಿನಿಯನ್ನು ಕುರಿತು "ಮುಂದೆ ನಿನಗೆ ಯಾವುದಾವರೂ ಕಷ್ಟಬಂದ ಕಾಲದಲ್ಲಿ ನಾನು ಸಮೀಪದಲ್ಲಿ ಇರುವ ಸಂಭವವಿದ್ದು ನೀನು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲು ನಿನ್ನ ಗುರುತನ್ನು ತಿಳಿದಿರುವುದಕ್ಕಾಗಿಯಾದರೂ ನಿನ್ನ ಮುಖವನ್ನು ಚೆನ್ನಾಗಿ ನೋಡುವುದಕ್ಕೆ ಅವಕಾಶವನ್ನು ಕೊಡಬಾರದೇ?" ಎಂದು ಬಹು ದೈನ್ಯೋಕ್ತಿಯಿಂದ ಕೇಳಲು ಕಾಮಿನಿಯು ಎದ್ದು ನಿಂತಳು. ಕರಾಳನೂ ಕುಂಟಿಕೊಂಡು ಎದ್ದು ನಿಂತನು.

ಸ್ವಲ್ಪಹೊತ್ತು ಕಾಮಿನಿಯನ್ನು ದಿಟ್ಟಿಸಿ ನೋಡಿ ಕರಾಳನು ಮನಸ್ಸಿನಲ್ಲಿ

ಯಾವುದೋ ಒಂದು ಬಲವತ್ತರವಾದ ಅನುಮಾನವು ಹೊಳೆದಂತಾಗಲು ಇದ್ದಕ್ಕಿದ್ದಂತೆ ಅವಳ ಕೈಯನ್ನು ಹಿಡಿದು ಬೆಳದಿಂಗಳಲ್ಲಿ ಎಳೆದು ನಿಲ್ಲಿಸಿ ಕೈಬಿಟ್ಟು ದೃಷ್ಟಿಸಿ ನೋಡಿ ಹರ್ಷೋನ್ನತಚಿತ್ತನಾಗಿ ಬುದ್ಧಿಭ್ರಮಣೆ ಯಾದಂತಾಗಿ ಸ್ತಂಭೀಭೂತನಾಗಿ ನಿಂತಲ್ಲಿಯೇ ನಿಂತು ಸದ್ದಿಲ್ಲದೆ ಜರಿದು ಹೋಗುತ್ತಿರುವ ಕಾಮಿನಿಯನ್ನು ನೋಡುತ್ತಲಿದ್ದನು. ಅವಳು ತಪ್ಪಿಸಿ ಕೊಂಡು ಮರಗಳ ಮಧ್ಯದಲ್ಲಿ ದೂರಿಕೊಂಡು ಕಣ್ಣಿಗೆ ಕಾಣದಂತೆ ಮರೆ ಯಾದಳು. ಆದರೂ ಅವನಿಗೆ ಚಲಿಸುವದಕ್ಕಾಗಲಿಲ್ಲ. ಸ್ವಲ್ಪಹೊತ್ತಾದ ಮೇಲೆ ಬುದ್ಧಿಯು ಸ್ವಾಧೀನಕ್ಕೆ ಬರಲು ಸಮೀಪದಲ್ಲಿ ಮೇಯುತ್ತಿದ್ದ ಕಾಮಿ ನಿಯ ಕುದುರೆಯನ್ನು, ನೀರಿನಲ್ಲಿ ನೆನಸಿ ತನ್ನನ್ನು ಉಪಚರಿಸುತ್ತಿದ್ದ ಕೈವಸ್ತ್ರ ವನ್ನೂ, ಚಿಗುರೆಲೆಹಾಸಿಗೆಯನ್ನೂ ನೋಡಿ ಇಷ್ಟೆಲ್ಲಾ ಸ್ವಪ್ನವಲ್ಲವೆಂದು ತಿಳಿದು ಕಾಲು ನೋವಾಗಿದ್ದರೂ ಗಣಿಸದೆ ಮರಗಳ ಮಧ್ಯದಲ್ಲಿ ಆಕಡೆ ಈಕಡೆ ಹುಚ್ಚ ನಂತೆ ನುಗ್ಗಿ ಓಡಾಡಿ ಕಾಮಿನಿಯನ್ನು ಕಾಣದೆ ಅವಳ ಕುದುರೆಯನ್ನೇರಿ ನಾಲ್ಕಾಕಡೆ ಅವಳನ್ನು ಹುಡುಕುತ್ತಿದ್ದನು. ಇಷ್ಟರಲ್ಲಿಯೇ ಅವಳು ಸಮೀಪ ದಲ್ಲಿದ್ದ ಹಳ್ಳಿಯಲ್ಲಿ ಒಂದು ಮನೆಯನ್ನು ಸೇರಿ ಅವಿತುಕೊಂಡಿದ್ದಳು. ಆದುದರಿಂದ ಕರಾಳನ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡಳು.

ಅತ್ತ ಭೀಷಣನು ತಪ್ಪಿಸಿಕೊಂಡನು. ದುಷ್ಟಬುದ್ಧಿಯು ಹಿಡಿಯಲ್ಪಟ್ಟನು. ಅಷ್ಟರಲ್ಲಿ ವೀರಬಾಹುವು ಬಂದು ಮನೋರಮೆಯನ್ನು ಕಾಮಿನಿಯನ್ನು ತಾನು ಕಂಡು ಬಂದ ಸಂಗತಿಯನ್ನು ಹೇಳಿದನು. ಮೂರ್ಛಿತನಾದ ಆ ದುರುಳನ ಹತ್ತಿರ ಅವರನ್ನು ವೀರಬಾಹುವು ಬಿಟ್ಟು ಬಂದುದು ಅನುಚಿತವೆಂದೂ, ಮೂರ್ಛೆತಿಳಿದಮೇಲೆ ಆ ಸ್ತ್ರೀಯರಿಗೆ ಏನು ಅವಮಾನವನ್ನು ಮಾಡುವನೋ ಎಂಬ ಶಂಕೆಯಿಂದ ದುಷ್ಟಬುದ್ಧಿಯನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಒಪ್ಪಿಸಿ ಬರುವಂತೆ ಸಿಂಹಬಲವೀರಬಾಹುಗಳಿಗೆ ನೇಮಿಸಿ, ರಾಜನು ಸ್ತ್ರೀಯರಿದ್ದ ಸ್ಥಳಕ್ಕೆಬಂದು ಅವರನ್ನು ಕಾಣದೆ ದಾರಿತಪ್ಪಿ ಬಂದಿರಬಹುದೆಂದು ಬೇರೆ ಕಡೆಗೆ ತಿರುಗುವ ಸಮಯದಲ್ಲಿ ಸತ್ತುಬಿದ್ದಿದ್ದ ಕುದುರೆಯನ್ನು ನೋಡಿ ತನ್ನ ಕುದುರೆಯು ಬೆದರಲು ಕೆಳಗೆ ಬಿದ್ದು ಉರುಳಿ ಮೂರ್ಛಿತನಾದನು.

ಅಷ್ಟುಹೊತ್ತಿಗೆ ಮನೋರಮೆಯು ಶೈತ್ಯೋಪಚಾರ ಸಾಮಗ್ರಿಯುಗಳನ್ನು ತಂದು ಕಾಮಿನಿಯನ್ನು ಕಾಣದೆ ರಾಜನ ಬಳಿಯಲ್ಲಿ ನಿಂತಿದ್ದ ಕುದುರೆಯನ್ನು

ಕಾಮಿನಿಯದೆಂದು ಭಾವಿಸಿ ತನ್ನ ಕುದುರೆಯಿಂದಿಳಿದು ನೋಡುವಲ್ಲಿ ರಾಜನೆಂದು ತಿಳಿದು ಶೋಕವ್ಯಾಕುಲಿತಳಾಗಿ ಉಸಿರಾಡುವದನ್ನು ಪರೀಕ್ಷಿಸಿ ನೋಡಿ ಬದುಕಿರುವನೆಂದು ಹರ್ಷಿತಳಾಗಿ ಮೈಯೆಲ್ಲಾ ಸವರಿ ನೋಡಿ ಘಾಯವಿಲ್ಲದಿರಲು ಸಮಾಧಾನಚಿತ್ತಳಾಗಿ ಶೈತ್ಯೋಪಚಾರವನ್ನು ಮಾಡತೊಡಗಿದಳು.

ಕರಾಳನಂತೆ ಕಾಲು ಸಿಲುಕಿಕೊಳ್ಳದೆ ಉರುಳಿಬಿದ್ದವನಾದ್ದರಿಂದ ರಾಜನು ಶೀಘ್ರದಲ್ಲಿಯೇ ಮೂರ್ಛೆತಿಳಿದೆದ್ದು ಮನೋರಮೆಯನ್ನು ಕಂಡು ದುಷ್ಟಬುದ್ಧಿಯನ್ನು ಹಿಂಬಾಲಿಸಿಹೋದದ್ದು ಮೊದಲು ತಾನು ಮೂರ್ಛಿತನಾಗುವವರೆಗೂ ನಡೆದುದನ್ನು ಹೇಳಿದನು. ಮನೋರಮೆಯು ರಾಜನ ಬಳಿಯಲ್ಲಿ ನಿಂತಿದ್ದ ಕುದುರೆಯು ಕಾಮಿನಿಯದಲ್ಲವೆಂದು ತಿಳಿಯಬರಲು ರಾಜನು ತಮ್ಮಿಬ್ಬರನ್ನು ಬಿಟ್ಟುಹೋದ ವೇಳೆಯಿಂದ ನಡೆದುದನ್ನೆಲ್ಲಾ ತಿಳಿಸಿದಳು.

ಮೂರ್ಛಿತನಾಗಿ ಬಿದ್ದ ದುರಳನು ಕರಾಳನೆಂದು ಹೇಳಿದುದನ್ನು ಕೇಳಿ ರಾಜನು ವಿಸ್ಮಿತನಾದನು. ಅವನು ಕಾಮಿನಿಗೆ ಯಾವ ಕೇಡುಕನ್ನು ಉಂಟುಮಾಡುವನೋ ಎಂದು ಇಬ್ಬರೂ ವ್ಯಾಕುಲಿತರಾದರು. ಮೂರ್ಛೆಯಿಂದ ತಿಳಿದೆದ್ದರೂ ರಾಜನಿಗೆ ಎಡದಕಾಲು ಉಳುಕಿರುವದರಿಂದಲೂ ಕುದುರೆಗಳೆಲ್ಲಾ ಬಹು ಕಷ್ಟಪಟ್ಟಿರುವದರಿಂದಲೂ, ಸಿಂಹಬಲನು ವೀರಬಾಹುವು ಸುತ್ತಿ ಸುತ್ತಿ ಬಹಳ ಬಳಲಿರುವುದರಿಂದಲೂ, ಒಂದು ವೇಳೆ ಶ್ರಮಪಟ್ಟಾದರೂ ಕಾಮಿನಿಯನ್ನು ರಕ್ಷಿಸಬೇಕೆಂದರೆ ಯಾವ ಕಡೆಗೆ ಹುಡುಕಿಕೊಂಡು ಹೋಗಬೇಕೆಂಬುವದು ಗೊತ್ತುಬಾರದಿರುವದರಿಂದಲೂ, ಅವಳನ್ನು ರಕ್ಷಿಸಲು ಸಾಧ್ಯವಾಗದೆ ರಾಜನು ಮನೋರಮೆಯು ಬಂದು ಧನಕೋಟಿಯ ಭವನವನ್ನು ಸೇರಿ ಮದನಿಕೆ, ಚೂತಲತಿಕೆ ಮೊದಲಾದ ಆಪ್ತ ಜನಕ್ಕೆ ಆನಂದವನ್ನು ಉಂಟುಮಾಡಿದರು.

ಕಾಮಿನಿಯು ಬಹಳ ಹೊತ್ತಿನವರಿಗೂ ಅವಿತುಕೊಂಡಿದ್ದು ಆ ಹಳ್ಳಿಯ ಪಟೇಲನಲ್ಲಿ ಬಿಡುವಾಗಿದ್ದ ಕುದುರೆಯನ್ನು ಹೆಚ್ಚು ಬೆಲೆ ಕೊಟ್ಟು ತೆಗೆದುಕೊಂಡು ಅದನ್ನು ಏರಿ ಬಹು ಜಾಗರೂಕತೆಯಿಂದ ಬಂದು ಧನಕೋಟಿಯ ಭವನವನ್ನು ಸೇರಿ ರಾಜನನ್ನು ಮನೋರಮೆಯನ್ನು ಕಾಣಿಸಿಕೊಳ್ಳಲು ಅವರು ಸಂತೋಷಚಿತ್ತರಾದರು.

ಭೋಜನಾನಂತರ ಕಾಮಿನಿಯು ತಾನು ಕಾಣದೆ ಹೋಗಿರಲು ಕೆಲವು ಸಂಗತಿಗಳನ್ನು ಕಲ್ಪಿಸಿ ಕಾರಣವನ್ನು ಹೇಳಿದಳು. ಹೇಗೆಂದರೆ—ಮನೋ

ರಮೆಯು ಶೈತ್ಯೋಪಚಾರ ಸಾಮಗ್ರಿಯಗಳನ್ನು ತರಲು ಊರಿಗೆ ಹೋದ ಸ್ವಲ್ಪ ಹೊತ್ತಿನಲ್ಲಿ ನಾಲ್ಕುಮಂದಿ ಅಶ್ವಾರೂಢರು ಬಂದು ಮೂರ್ಛಿತನಾಗಿರುವ ಮನುಷ್ಯನನ್ನು ಕಾಮಿನಿಯು ಉಪಚರಿಸುತ್ತಿರುವುದನ್ನು ಕಂಡು ಅವನನ್ನು ನೋಡಿ ಕರಾಳನೆಂದು ಗುರುತು ಹಿಡಿದರು. ಅವರು ಅವನ ಸೈನಿಕ ಜನರು. ಆದಕಾರಣ ತಮ್ಮ ಒಡೆಯನನ್ನು ಎತ್ತಿ ಒಂದು ಕುದುರೆಯ ಮೇಲೆ ಇರಿಸಿ ಕೊಂಡು ಕರಾಳನಿಗೆ ಅವಳು ಯಾವ ವಿಧವಾಗಿಯೋ ಮೋಸಮಾಡಬೇಕೆಂ ದಿದ್ದಳೆಂದು ಒಬ್ಬನು, ಕರಾಳನು ಮೃತನಾದರೆ ಅವನು ಈ ಗತಿಗೆ ಬರಲು ಕಾರಣವನ್ನು ಅವಳಿಂದ ತಿಳಿಯಬಹುದೆಂದು ಮತ್ತೊಬ್ಬನು, ತಮ್ಮ ತಮ್ಮಲ್ಲಿ ಮಾತನಾಡಿಕೊಂಡು ಅವಳು ಎಷ್ಟು ವಿಧವಾಗಿ ಮೊರೆಯಿಟ್ಟು ಬೇಡಿ ಕೊಂಡರೂ ಕೇಳದೆ ಅವಳ ಕುದುರೆಯಮೇಲೆ ಅವಳನ್ನೂ ಏರಿಸಿ ಬಲಾತ್ಕಾರ ದಿಂದ ಕರೆದುಕೊಂಡು ಹೋಗಿ ಸಮೀಪದ ಕಾಡಿನಲ್ಲಿರುವ ಒಂದು ಸಣ್ಣ ತೊರೆಯ ಪಕ್ಕದಲ್ಲಿ ಕರಾಳನನ್ನು ಮಲಗಿಸಿ ಶೈತ್ಯೋಪಚಾರವನ್ನು ಮಾಡಿ ದರು. ಕರಾಳನಿಗೆ ಅಲ್ಪ ಸ್ವಲ್ಪ ಪ್ರಜ್ಞೆಯು ಬಂದು ಕನವರಿಸುತ್ತಿರುವಾಗ ಕರಾಳನಿಗೆ ತಿಳಿಯದೆ ಧನಕೋಟಿಯನ್ನು ಭೀಷಣನೆಂಬುವನು ಕೊಂದ ನೆಂದೂ, ಈ ಕೊಲೆಯಲ್ಲಿ ಮಾತ್ರ ದುಷ್ಟಬುದ್ಧಿಯು ಕರಾಳನು ನಿರಪರಾಧಿ ಗಳೆಂದೂ, ಈ ಕ್ರೂರಕೃತ್ಯಕ್ಕಾಗಿ ಕರಾಳನು ಪಶ್ಚಾತ್ತಾಪದಿಂದ ಮರುಗುವ ನೆಂದೂ ತಿಳಿಯಬಂದಿತು. ಈ ಮಾತುಗಳನ್ನೆಲ್ಲಾ ಕಾಮಿನಿಯು ಕೇಳಿದ್ದ ರಿಂದ ಜನರ ಮುಂದೆ ಹೇಳಿಬಿಡುವಳೆಂದು ಕರಾಳನ ಸೈನಿಕರು ಅವಳನ್ನು ಕೊಲ್ಲಬೇಕೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಸ್ವಲ್ಪ ಹೊತ್ತಾದ ಮೇಲೆ ಕರಾಳನಿಗೆ ಸಂಪೂರ್ಣವಾಗಿ ಪ್ರಜ್ಞೆಯು ಬಂದು ತನ್ನನ್ನು ಉಪಚರಿಸಿ ಉಪಕಾರ ಮಾಡಿದಳೆಂದು ಸೈನಿಕರ ಪ್ರಯತ್ನವನ್ನು ತಪ್ಪಿಸಿ ಅವಳು ಕೇಳಿದ್ದು ಮೊದಲಾದುವನ್ನು ಯಾರ ಮುಂದೆಯೂ ಹೇಳುವುದಿಲ್ಲವೆಂಬ ಪ್ರಮಾಣವನ್ನು ಅವಳಿಂದ ತೆಗೆದುಕೊಂಡು ಅವಳಿಗೆ ಪ್ರಾಣದಾನ ಮಾಡಿ ಕಳುಹಿಸಿದನು. ಅವಳ ಕುದುರೆಯು ಸ್ವಲ್ಪ ದೂರ ಬಂದು ಮುಂದಕ್ಕೆ ಅಡಿಯಿಡದೆ ಬಿದ್ದು ಮುಷ್ಕರ ಹಿಡಿಯಿತು. ಆದುದರಿಂದ ಇನ್ನು ಅಲ್ಲೇ ಇದ್ದರೆ ಮುಂದೇನು ಅಪಾಯ ಸಂಭವಿಸುವುದೋ ಎಂದು ಸಮೀಪದ ಹಳ್ಳಿಯ ಪಟೇಲನಲ್ಲಿ ಒಂದು ಕುದುರೆಯನ್ನು ಬೆಲೆಗೆ ಪಡೆದು ಏರಿಕೊಂಡು ಬಂದಳು.

ಇದನ್ನೆಲ್ಲಾ ಕೇಳಿ ರಾಜನು "ಹೀಗಿದ್ದಲ್ಲಿ ದುಷ್ಟಬುದ್ಧಿಯು ನಿಜವಾದ ಸಂಗತಿಯನ್ನು ಹೇಳಿ ತಾನು ಯಾತಕ್ಕೆ ತಪ್ಪಿಸಿಕೊಳ್ಳಬಾರದಾಗಿತ್ತು ?" ಎಂದು ಕೇಳಲು, ಕಾಮಿನಿಯು "ಅವನ ಅಂತರಂಗವು ಈ ವಿಧವಾಗಿರ ಬಹುದೆಂದು ನನಗೆ ತೋರುವುದು. ಹೇಗೆಂದರೆ–ಧನಕೋಟಿಯ ಕೊಲೆಯಲ್ಲಿ ತಾನು ನಿರಪರಾಧಿಯೆಂದು ದೃಢಪಡಿಸಬೇಕಾದರೆ ಈ ರಾಣಿಯನ್ನು ಕಳವು ಮಾಡಿದುದರಲ್ಲಿ ಅವನು ಸಹಾಯಕನಾಗಿದ್ದನೆಂಬ ಸಂಗತಿಯನ್ನು ಹೇಳಿಯೇ ತೀರಬೇಕು. ಇದರಿಂದ ಒಂದು ತಪ್ಪು ಹೋಗಿ ಬೇರೊಂದು ತಪ್ಪು ಅವನ ಮೇಲೆ ಹೊರುವುದು. ಈ ತಪ್ಪಿತಕ್ಕೂ ಕೂಡ ಇಲ್ಲಿನ ಶಾಸನ ವಿಧಿಯ ಪ್ರಕಾರ ಮರಣದಂಡನೆಯನ್ನು ವಿಧಿಸುವರು. ಇದರಿಂದ ಈ ಶಿಕ್ಷೆಯು ತಪ್ಪುವುದೆ ಒಂದುವೇಳೆ ಅವನೇ ಕೊಲೆ ಮಾಡಿದವನೆಂಬುವದನ್ನು ನಿರ್ಧರಿಸು ವುದು ಬಹು ಕಷ್ಟವಾಗಿರುವುದರಿಂದ ಅಪರಾಧವು ಅವನ ಮೇಲೆ ಹೊರದೇ? ಹೋಗುವ ಸಂಭವವೂ ಇರುವುದು. ನಿಜವನ್ನು ಹೇಳಿದನಾದರೆ ಮುಂದಲ ವಿಚಾರಣೆಯಿಲ್ಲದೆ ಅವನು ಒಪ್ಪಿಕೊಳ್ಳುವುದರಿಂದಲೇ ಮರಣದಂಡನೆಯನ್ನು ವಿಧಿಸುವರು. ನಿಜವನ್ನು ಹೇಳದೆ ಸುಮ್ಮನಿದ್ದರೆ ಕರಾಳನು ಸಹಾಯಪರ ನಾಗುವನು. ವಿ ಚಾ ರ ಣೆ ಮುಗಿಯುವವರಿಗೂ ಕಾರಾಗೃಹವಾಸದಲ್ಲಿ ತಾನಿರುವ ಕಾಲದಲ್ಲಿ ಕರಾಳನು ಬಿಡಿಸುವನೆಂಬ ಭರವಸೆಯೂ ಇದ್ದಿರ ಬಹುದು" ಎಂದು ಎತ್ತರವೀಯಲು, ರಾಜನು "ಹೀಗೆ ಕೊಲಪಾತಕನಲ್ಲ ವೆಂದು ತಿಳಿದ ಮೇಲೆ ಅವನು ಎಂಥ ದುಷ್ಟನಾದರೂ ಮರಣದಂಡನೆಯಿಂದ ಅವನನ್ನು ಬಿಡಿಸುವುದು ನಮ್ಮ ಧರ್ಮವಾಗಿದೆ" ಎಂದು ಹೇಳಿ ನಮ್ಮ ಕಥಾನಾಯಕನು ತನ್ನ ಸುಗುಣಸ್ವಭಾವವನ್ನು ತೋರ್ಪಡಿಸಿದನು. ಅದಕ್ಕೆ ಕಾಮಿನಿಯು "ಈ ರಾಣಿಗೆ ಕೇಡನ್ನು ಉಂಟುಮಾಡಿ ತಪ್ಪಿತಸ್ಥನಾಗಿರು ವನು. ಆ ತಪ್ಪನ್ನು ಇವರು ಮನ್ನಿಸುವ ಪಕ್ಷದಲ್ಲಿ ಅವನಿಗೆ ಮರಣ ದಂಡನೆಯು ತಪ್ಪಿ ಅಲ್ಪಸ್ವಲ್ಪ ಶಿಕ್ಷೆಯಾಗಬಹುದು. ಒಂದು ಸಮಯ ಬಿಟ್ಟೇಬಿಡಬಹುದು. ಈ ರೀತಿ ಮನ್ನಿಸಿ ಮರಣದಂಡನೆಯನ್ನು ತಪ್ಪಿಸು ವುದು ಇಲ್ಲಿನ ಶಾಸನವಿಧಿಗೆ ಅಂಗೀಕಾರವಾಗಿದೆ. ಆದ್ದರಿಂದ ಅವನನ್ನು ರಕ್ಷಿಸುವುದು ಇವರ ಕೈಯಲ್ಲಿದೆ" ಎಂದು ಹೇಳಲು ಮನೋರಮೆಯು "ಒಂದು ಪ್ರಾಣಿಯ ಜೀವಸಂರಕ್ಷಣೆಯು ನನ್ನಿಂದಲೇ ಆಗಬೇಕಾಗುವ

ಪಕ್ಷದಲ್ಲಿ ಅವನು ಎಂತಹ ಕೆಡಕನ್ನು ನನಗೆ ಮಾಡಿದ್ದರೂ ಅವನನ್ನು ಮನ್ನಿಸಿದ್ದೇನೆ. ಇದನ್ನು ಎಲ್ಲಿ ಕೇಳಿದರೂ ಹೇಳುವೆನು" ಎಂದು ತನ್ನ ಕರುಣಾರ್ದ್ರಹೃದಯ ಸ್ವಭಾವವನ್ನು ತೋರ್ಪಡಿಸಿದಳು. ನಂತರ ಈ ವಿಷಯವಾಗಿ ಸ್ವಲ್ಪಹೊತ್ತು ಚರ್ಚಿಸಿ ತಮ್ಮ ತಮ್ಮ ಶಯನಗೃಹಾಭಿಮುಖ ರಾದರು.

ಮಾರನೇದಿನ ಬೆಳಿಗ್ಗೆ ರಾಜನು ನ್ಯಾಯಾಧಿಪತಿಯ ಬಳಿಗೆ ಹೋಗಿ ಧನಕೋಟಿಯ ಕೊಲೆಯಲ್ಲಿ ದುಷ್ಟಬುದ್ಧಿಯು ನಿರಪರಾಧಿಯೆಂಬುವುದು ಮೊದಲಾದುದನ್ನು ತಿಳಿಸಿ ಬಂದನು.

ಅದೇ ದಿನ ಬೆಳಿಗ್ಗೆ ಕಾಮಿನಿಯು ಕಾರಾಗೃಹದ ಬಳಿಯನ್ನೈದು ಕಾವಲಿನವರಿಗೆ ಲಂಚ ಕೊಟ್ಟು ವಶಪಡಿಸಿಕೊಂಡು ಒಳಹೊಕ್ಕು ದುಷ್ಟ ಬುದ್ಧಿಯನ್ನು ಸೇರಿಸಿದ್ದ ಕೊಠಡಿಗೆ ಹೋಗಿ ಅವನನ್ನು ಕಂಡು "ಎಲೈ, ದುಷ್ಟಬುದ್ಧಿ! ನಿನ್ನ ಸಂಗತಿಯನ್ನೆಲ್ಲಾ ನಾನು ಬಲ್ಲೆ. ಮನೋರಮೆಯನ್ನು ನಿನ್ನ ಸಹಾಯದಿಂದ ಕಳವು ಮಾಡಿಕೊಂಡು ಹೋಗಿ ಅವಳ ಅಣ್ಣಂದಿರೆಂದು ಹೇಳಿಕೊಂಡು ಶುಂಡಾಲನಿಗೆ ಅವಳನ್ನು ಮಾರಿದವರು ಕರಾಳನು ಮತ್ತು ಭೀಷಣನು. ಭೀಷಣನೇ ಧನಕೋಟಿಯನ್ನು ಕೊಂದವನು. ಈ ದಿನ ಮಧ್ಯಾಹ್ನ ನಡೆಯುವ ವಿಚಾರಣೆಯಲ್ಲಿ ಮನೋರಮೆಯನ್ನು ಕಳವುಮಾಡಿದ ವಿಷಯದಲ್ಲಿ ನೀನು ಸಹಾಯಕನಾಗಿದ್ದುದನ್ನು ಒಪ್ಪಿಕೊಂಡರೆ ನಿನಗೆ ಬಿಡುಗಡೆಯಾಗುವುದು" ಎಂದು ತಾನು ಇದನ್ನೆಲ್ಲಾ ತಿಳಿದುದಕ್ಕೆ ಕಾರಣ ವನ್ನು ಕೊಡದೆ ಹೇಳಲು, ದುಷ್ಟಬುದ್ಧಿಯು "ಕೊಲೆಯಲ್ಲಿ ನಿರಪರಾಧಿ ಯೆಂದು ನಿಜವಾದ ಸಂಗತಿಯನ್ನು ಹೇಳಿದ ಮಾತ್ರಕ್ಕೆ ಮರಣದಂಡನೆಯು ತಪ್ಪಿಹೋಗುವುದೇ? ಮನೋರಮೆಯ ಕಳವಿಗೆ ಸಹಾಯಕನೆಂಬ ತಪ್ಪಿತಕ್ಕೂ ಅದೇ ಶಿಕ್ಷೆಯಾಗುವುದು. ಇಲ್ಲಿನ ಶಾಸನವಿಧಿಯು ನಿನಗೆ ತಿಳಿಯದು. ಆದ್ದರಿಂದ ಹೀಗೆ ಹೇಳುವೆ" ಎಂದು ಉತ್ತರವೀಯಲು, ಕಾಮಿನಿಯು "ಇದನ್ನು ನಾನು ತಿಳಿದೇ ಇರುವೆನು. ಇದಕ್ಕಾಗಿ ನಿನ್ನ ತಪ್ಪನ್ನು ಕ್ಷಮಿಸುವಂತೆ ಮನೋರಮೆಯನ್ನು ಒಡಂಬಡಿಸಿರುವೆನು. ಆದರೆ ನಿನಗೆ ಇನ್ನೊಂದು ನಿರ್ಬಂಧವಿರುವುದು. ಏನೆಂದರೆ, ನೀನು ವಿಚಾರಣೆಯ ಕಾಲದಲ್ಲಿ ಭೀಷಣನ ಹೆಸರನ್ನು ಹೇಗೆ ಹೇಳಿದರೂ ಹೇಳಬಹುದು. ಕರಾಳನ

ಹೆಸರನ್ನು ಮಾತ್ರ ಅರಿತು ಮರೆತಾದರೂ ಉಚ್ಚರಿಸಬಾರದು. ಕರಾಳ ನೆಂಬುವುದಕ್ಕೆ ಬದಲಾಗಿ ನಿನಗೆ ತೋರುವ ಮತ್ಯಾವ ಹೆಸರನ್ನಾದರೂ ಹೇಳಿಕೊಳ್ಳಬಹುದು. ಇದಕ್ಕೆ ವಿರೋಧವಾಗಿ ನೀನು ನಡೆದೆಯಾದರೆ ನಿನಗೆ ಲಭಿಸಿರುವ ಕ್ಷಮಾಪಣೆಯು ತಪ್ಪಿಹೋಗಿ ಮರಣದಂಡನೆಯು ಉಂಟಾಗುವುದು" ಎಂದು ಹೇಳಲು, ದುಷ್ಟಬುದ್ಧಿಯು "ನೀನು ನನ್ನ ಭಾಗದ ದೇವರೇ ಸರಿ. ನನಗೆ ಪ್ರಾಣದಾನವನ್ನು ಕೊಟ್ಟೆ. ನೀನು ಹೇಳಿದಂತೆ ಸ್ವಲ್ಪವೂ ವ್ಯತ್ಯಾಸ ಬಾರದಂತೆ ನಡೆದುಕೊಳ್ಳುವೆನು" ಎಂದು ಕಾಮಿನಿಯ ಕಾಲಿಗೆ ಬಿದ್ದು ನಮಸ್ಕರಿಸಿದನು. ಕಾಮಿನಿಯು ಅಭಯವನ್ನಿತ್ತು ಬಂದು ಧನ ಕೋಟಿಯ ಭವನವನ್ನು ಸೇರಿದಳು.

ಆ ದಿನ ಮಧ್ಯಾಹ್ನ ವಿಚಾರಣೆಯು ಮುಗಿದು ದುಷ್ಟಬುದ್ಧಿಯು ಬಿಡುಗಡೆಯಾದನು. ಅವನು ನಿರ್ಗತಿಕನಾಗಿರುವುದನ್ನು ತಿಳಿದು ರಾಜನು ಬದುಕಿಕೊಳ್ಳುವುದಕ್ಕೆ ಅವನಿಗೆ ಬಂಡವಾಳವನ್ನು ಕೊಟ್ಟು ಕಳುಹಿಸಿದನು.

ಧನಕೋಟಿಯು ಮಕ್ಕಳು ಮೊಮ್ಮಕ್ಕಳು ಮೊದಲಾಗಿರಲು ದೊಡ್ಡ ಕುಟುಂಬಿಗನಾಗಿದ್ದನು. ಮರಣಕಾಲದಲ್ಲಿ ಅವರಲ್ಲಿ ಯಾರೂ ಅವನ ಭವನದಲ್ಲಿ ವಾಸಿಸುತ್ತಿರಲಿಲ್ಲ ಕೆಲವರು ಸುತ್ತುಮುತ್ತಿನ ಪ್ರಾಂತ್ಯದಲ್ಲಿದ್ದರು. ಉಳಿದವರು ದೂರದೇಶದಲ್ಲಿದ್ದರು. ಮರಣಾನಂತರ ಹತ್ತಿರವಿದ್ದ ಮಕ್ಕಳು ಮೊಮ್ಮಕ್ಕಳು ಪ್ರೇತಸಂಸ್ಕಾರಕ್ಕೆ ಬಂದೊದಗಿದರು. ದೂರದಲ್ಲಿದ್ದವರು ಒಂದೆರಡು ದಿನಗಳಾದಮೇಲೆ ಬಂದು ಸೇರಿದರು. ಮೃತಸಂಸ್ಕಾರಗಳು ಮುಂತಾದ್ದು ಮುಗಿದಮೇಲೆ ಎಲ್ಲರೂ ಅವರವರ ಸ್ವಸ್ಥಾನಗಳಿಗೆ ತೆರಳಿದರು. ಧನಕೋಟಿಯ ಮಕ್ಕಳಲ್ಲಿ ಆಸ್ತಿಯು ಹಂಚಿಕೆಯಾಗಿ ಭವನವೂ ಮತ್ತು ಅದರಲ್ಲಿದ್ದ ಸಕಲ ವಸ್ತುಗಳು ಜ್ಯೇಷ್ಠಪುತ್ರನ ಪಾಲಿಗೆ ಬಂದಿತು. ಅವನು ಬಹು ವರ್ಷಗಳಿಂದ ದೂರದೇಶದಲ್ಲಿ ನೆಲೆಗೊಂಡಿದ್ದನು. ಆದುದರಿಂದ ಕಳಿಂಗಪಟ್ಟಣದಲ್ಲಿ ವಾಸವಾಗಿರಲು ಅವನಿಗೆ ಇಷ್ಟವಿರಲಿಲ್ಲ. ಆದಕಾರಣ ತನಿಗೆ ಬಂದ ಆಸ್ತಿಯನ್ನು ಮಾರಿಬಂದ ಹಣವನ್ನು ಕಳುಹಿಸಿಕೊಡುವಂತೆ ಪುರಪಾಲಕನಲ್ಲಿ ಏರ್ಪಾಡು ಮಾಡಿಕೊಂಡು ತನ್ನ ಸ್ಥಳಕ್ಕೆ ಹೊರಟು ಹೋದನು. ಧನಕೋಟಿಯ ಕೊಲೆಯಾದ ಮಾರನೆದಿನವೇ ಪುರಾಧಿಕಾರಿಗಳಲ್ಲಿ ಒಬ್ಬನು ನೇಮಿತನಾಗಿ ಭವನದ ಆಸ್ತಿ ಮೊದಲಾದ್ದನ್ನು ಲೆಖ್ಖಮಾಡಿಸಿ

ಗೃಹಿಣಿಯ ಪರಾಮರಿಕೆಗೆ ಒಪ್ಪಿಸಿ ಕಾಗದ ಪತ್ರಗಳನ್ನೆಲ್ಲಾ ತನ್ನ ವಶದಲ್ಲಿ ಭದ್ರಪಡಿಸಿ ಇಟ್ಟುಕೊಂಡಿದ್ದನು.

ಸಾವು ಸಂಸ್ಕಾರಗಳಿಗೆ ಬಂದಿದ್ದವರೆಲ್ಲಾ ಹೊರಟುಹೋದ ಮಾರನೇ ದಿನ ಮನೋರಮಾದಿಗಳು ಕಳಿಂಗಪಟ್ಟಣವನ್ನು ಸೇರಿದ್ದು. ಗೃಹಿಣಿಯು ಮೊದಲಿನಂತೆ ಅವರನ್ನು ಪುರಸ್ಕರಿಸಿದಳು.

ದುಷ್ಟಬುದ್ಧಿಯನ್ನು ಮರಣದಂಡನೆಯಿಂದ ಬಿಡಿಸಿದ ದಿನ ಸಾಯಂ ಕಾಲವೇ ರಾಜನು ಧನಕೋಟಿಯ ಕಾಗದಪತ್ರಗಳನ್ನು ಇರಿಸಿಕೊಂಡಿರುವ ಅಧಿಕಾರಿಯ ವಾಸಸ್ಥಾನವನ್ನು ಗೃಹಿಣಿಯಿಂದ ಕೇಳಿ ತಿಳಿದುಕೊಂಡು ಅವನ ಬಳಿಗೆ ಹೋಗಿ ತನ್ನ ಹೆಸರಿನ ವಿಳಾಸಕ್ಕಾಗಲಿ ಮನೋರಮೆಯು ಹೆಸರಿನ ವಿಳಾಸಕ್ಕಾಗಲಿ ಯಾವುದಾದರೂ ಲಕೋಟೆಗಳು ಇರುವವೇ ಎಂದು ವಿಚಾರಿಸಿ ಇಲ್ಲವೆಂಬ ಉತ್ತರವನ್ನು ಕೇಳಿ ಅಲ್ಲಿಂದ ಹೊರಟು ಖಿನ್ನನಾಗಿ ಬಂದು ಮನೋರಮೆಯು ಒಬ್ಬಳೇ ತನ್ನ ಕೊಠಡಿಯಲ್ಲಿರುವ ಸಮಯವನ್ನು ಕಾದು ಕೊಂಡಿದ್ದು ಅವಕಾಶ ದೊರೆಯಲು ಅವಳ ಕೊಠಡಿಯನ್ನು ಪ್ರವೇಶಿಸಿ ಸುಖಾಸನದಲ್ಲಿ ಕುಳಿತು ತಾನು ಅಧಿಕಾರಿಯ ಬಳಿಗೆ ಹೋಗಿಬಂದ ಸಂಗತಿ ಯನ್ನು ತಿಳಿಸಿ "ಧನಕೋಟಿಯ ಕಾಗದಪತ್ರಗಳಲ್ಲಿ ಲಕ್ಷ್ಮೀನಿಲಯದ ವಿಷಯವಾಗಿ ಯಾವ ಕಾಗದವೂ ದೊರೆಯದಿರುವುದು. ಆ ರಹಸ್ಯವು ಇಲ್ಲಿಂದೀಚೆಗೆ ನಾಶ—" ಎನ್ನುವಷ್ಟರಲ್ಲಿ ಬಾಗಿಲನ್ನು ಮೆಲ್ಲನೆ ತಳ್ಳಿಕೊಂಡು ಕಾಮಿನಿಯು ಪ್ರವೇಶಿಸುತ್ತಿರುವುದನ್ನು ನೋಡಿ ಅಷ್ಟಕ್ಕೆ ಆ ಮಾತನ್ನು ನಿಲ್ಲಿಸಿ ಬಿಟ್ಟನು. ಆ ಕಾಮಿನಿಯನ್ನು ಸುಖಾಸನದಲ್ಲಿ ಕುಳ್ಳಿರಿಸಿ ತಾವಿಬ್ಬರೂ ನಾಳೆ ಪ್ರಯಾಣ ಹೊರಟು ಕಮಲಿನಿ ತಾಯಿ ಇರುವ ಹಳ್ಳಿಯಲ್ಲಿ ಎರಡುದಿನ ತಂಗಿದ್ದು ರಾಧಾಪುರಕ್ಕೆ ಹೋಗುವರೆಂದು ತಿಳಿಸಿ ತಮ್ಮಿಂದ ಕಾಮಿನಿಗೆ ಯಾವ ಸಹಾಯವಾಗಬೇಕಾದರೂ ಮಾಡಿಕೊಡುವರೆಂದು ಹೇಳಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿದರು. ಅವಳು ಕಳಿಂಗಪಟ್ಟಣದಲ್ಲಿ ಇನ್ನು ಕೆಲವು ದಿನಗಳವರಿಗೆ ತಾನು ಇರಬೇಕಾದ ಕಾರ್ಯವಿರುವುದರಿಂದ ಅದನ್ನು ತೀರಿಸಿಕೊಂಡು ಅವರಬಳಿಗೆ ಬಂದು ಸೇರುವಳೆಂದು ತನ್ನಿಷ್ಟವನ್ನು ತಿಳಿಸಿದಳು.

ಮಾರನೇದಿನ ಬೆಳಿಗ್ಗೆ ಮನೋರಮೆಯು, ರಾಜನು ಪರಿವಾರದೊಡನೆ ಪ್ರಯಾಣ ಹೊರಟರು.

ಇತ್ತ ಕಾಮಿನಿಯು ಭವನದಲ್ಲಿ ಇಷ್ಟಬಂದಕಡೆ ವಿಹರಿಸುತ್ತಿರುವುದಕ್ಕೆ ಗೃಹಿಣಿಯ ಅನುಮತಿಯನ್ನು ಉಪಾಯಾಂತರದಿಂದ ಪಡೆದು ಅವಳ ಆತಿಥ್ಯ ದಲ್ಲಿ ಇದ್ದುಕೊಂಡಳು. ಹಗಲೆಲ್ಲಾ ಒಂದೊಂದು ಕೊಠಡಿಯನ್ನು ಪ್ರವೇಶಿಸಿ ಅಲ್ಲಿರುವ ವಿನೋದ ವಸ್ತುಗಳನ್ನು ನೋಡುವ ನೆವದಿಂದ ಧನಕೋಟಿಯ ಕಾಗದಪತ್ರಗಳನ್ನು ಹುಡುಕುವಳು. ರಾತ್ರಿಯಾಗಿ ಎಲ್ಲರೂ ನಿದ್ರಿಸಿದಮೇಲೆ ಅನುಮಾನಕ್ಕೆ ಆಸ್ಪದವಾಗದಂತೆ ತಾನಿರುವ ಕೊಠಡಿಯಲ್ಲಿ ಶೇಖರಿಸಿಟ್ಟ ಬೀಗದ ಕೈಗೊಂಚಲನ್ನು ತೆಗೆದುಕೊಂಡು ಆ ಕೊಠಡಿಯನ್ನು ಬಿಟ್ಟು ಇತರ ಕೊಠಡಿಗಳಲ್ಲಿರುವ ಪೆಟ್ಟಿಗೆಗಳನ್ನು ಗೊಂಚಲಿನ ಬೀಗದಕೈಗಳ ಸಹಾಯ ದಿಂದ ತೆಗೆದು ಅಮೂಲ್ಯವಾದ ಆಭರಣಗಳು ಮುತ್ತು ರತ್ನಗಳು ಮೊದಲಾದ ವಸ್ತುಗಳು ಯಾವುದಿದ್ದರೂ ಅವುಗಳಿಗೆ ಕಿಂಚಿತ್ತಾದರೂ ಆಶೆಪಡದೆ ಕಾಗದ ಪತ್ರಗಳಿಗಾಗಿ ಹುಡುಕುವಳು. ರಾತ್ರಿಯನ್ನೆಲ್ಲಾ ಈರೀತಿ ಕಳೆದು ಸೂರ್ಯೋ ದಯಕ್ಕೆ ಮುಂಚಿತವಾಗಿ ತನ್ನ ಕೊಠಡಿಯಲ್ಲಿರುವಳು.

ಹೀಗೆ ಮೂರುದಿನಗಳು ಕಳೆದವು. ನಾಲ್ಕನೇದಿನ ಬೆಳಿಗ್ಗೆ ಕಾಮಿನಿಯು ತನ್ನ ಕೊಠಡಿಯ ಕಿಟಕಿಯ ಹತ್ತಿರ ಕುಳಿತು ಒಂದು ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಮನಸ್ಸಿನಲ್ಲೇ ಓದುತ್ತಿದ್ದಳು. ಆ ಸಮಯದಲ್ಲಿ ಕಪ್ಪುಬಣ್ಣದ ದೇಹವನ್ನುಳ್ಳವನಾಗಿ ಬಿಳಿ ಅಂಗಿಯನ್ನು ಕಪ್ಪು ಚಡ್ಡಿಯನ್ನು ಉಟ್ಟುಕೊಂಡು ತಲೆಗೆ ನೂಲಿನ ಕೆಂಪು ವಸ್ತ್ರವನ್ನು ಸುತ್ತಿಕೊಂಡಿರುವ ಒಬ್ಬ ಮನುಷ್ಯನು ಗೃಹಿಣಿಯನ್ನು ಕೇಳಿಕೊಂಡು ಬರಲು ಅವಳು ಒಳಗಿನಿಂದ ಬಂದು ಕಾಮಿನಿಯು ಕುಳಿತಿದ್ದ ಕಿಟಕಿಯ ಎದುರಿನಲ್ಲಿರುವ ಹಜಾರದಲ್ಲಿ ಅವನೊಡನೆ ನಿಂತು ಮಾತನಾಡುತಿದ್ದಳು. ಕಾಮಿನಿಯು ಅವನನ್ನು ನೋಡಿ ದರೂ ನೋಡದವಳಂತೆ ಪುಸ್ತಕದಲ್ಲಿಯೇ ದೃಷ್ಟಿಯನ್ನಿಟ್ಟಿರುವಳಂತೆ ನಟಿಸಿ ದಳು. ಗೃಹಿಣಿಯು ಅವನಿಗೆ ಹೇಳಬೇಕಾದ್ದನ್ನು ಹೇಳಿ ಕಳುಹಿಸಿ ಮನೆ ಯೊಳಗೆ ಬರುವಷ್ಟರಲ್ಲಿ ಕಾಮಿನಿಯು ಎದ್ದುಹೋಗಿ ಅವಳನ್ನು ಕಂಡು "ಈಗ ಬಂದುಹೋದವನು ಯಾರು ?" ಎಂದು ಉದಾಸೀನೋಕ್ತಿಯಿಂದ ಕೇಳಲು ಗೃಹಿಣಿಯು "ಭವನದ ಉದ್ಯಾನವನದ ರಾತ್ರೆ ಕಾವಲಿನವನು ಕಾಯಿ ಲೆಯಾಗಿ ಮಲಗಿ ನಾಲ್ಕು ದಿವಸಗಳಾದವು. ಅಂದಿನಿಂದಲೂ ಹಗಲು ಕಾವಲಿ ನವನೇ ರಾತ್ರಿಯೂ ಕಾಯುತ್ತಾ ಬಹು ಕಷ್ಟವಾಗಿರುವದೆಂದು ಗೊಣಗುಟ್ಟಿ

ತ್ತಿರುವನು. ಇದಕ್ಕಾಗಿ ಇಲ್ಲಿನ ವರ್ತಮಾನಪತ್ರಿಕೆಗಳ ಮೂಲಕ ರಾತ್ರಿ ಕಾವಲುಗಾರನು ಬೇಕೆಂದು ತಿಳಿಸಿದ್ದೆನು. ಈಗ ಬಂದುಹೋದವನು ರಾತ್ರಿ ಕಾವಲಿನ ಕೆಲಸದಲ್ಲಿರುವುದಕ್ಕೆ ಒಪ್ಪಿ ಬಂದಿದ್ದವನು" ಎಂದು ಉತ್ತರ ವೀಯಲು, ಕಾಮಿನಿಯು "ಅವನಿಗೆ ಸಂಬಳವನ್ನು ಗೊತ್ತುಮಾಡಿ ಕಳುಹಿಸಿದಿರಲ್ಲವೆ?" ಎನಲು, ಗೃಹಿಣಿಯು "ಇನ್ನೂ ಇಲ್ಲ. ಅವನನ್ನು ಕಳುಹಿಸಿ ಕೊಟ್ಟ ವರ್ತಕನಲ್ಲಿ ಅವನ ನಡವಳಿಕೆಯನ್ನು ವಿಚಾರಿಸಿ ಕೆಲಸಕ್ಕೆ ಇಟ್ಟು ಕೊಳ್ಳಬೇಕೆಂದು ಯೋಚಿಸಿ ಅವನನ್ನು ಸಾಯಂಕಾಲಕ್ಕೆ ಬರುವಂತೆ ಹೇಳಿ ಕಳುಹಿಸಿರುವೆನು" ಎಂದು ಹೇಳಿದಳು.

ಆ ದಿನ ಸಾಯಂಕಾಲ ಆ ಕೆಲಸಗಾರನು ಗೃಹಿಣಿಯನ್ನು ಬಂದು ಕಾಣುವ ಹಜಾರದಲ್ಲಿ ಕಾಮಿನಿಯು ಸುಖಾಸನವನ್ನು ಹಾಕಿಸಿ ಕುಳಿತು ಕೈಯಲ್ಲಿ ಪುಸ್ತಕವನ್ನು ಹಿಡಿದು ಮನಸ್ಸಿನಲ್ಲೇ ಓದುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿ ಆ ಕೆಲಸಗಾರನು ಬರಲು ಗೃಹಿಣಿಯು ಒಳಗಿನಿಂದ ಬಂದು ಅವನಿಗೆ ಸಂಬಳವನ್ನು ಗೊತ್ತುಮಾಡಿ ರಾತ್ರಿ ಕಾವಲಿನ ಕೆಲಸದ ವಿಧಾನವನ್ನು ತಿಳಿಸಿ ಬಿಲ್ಲು, ಬಾಣ, ಬತ್ತಳಿಕೆಗಳನ್ನು ಕೊಟ್ಟು ಆ ದಿನ ರಾತ್ರಿಯಿಂದಲೇ ಕೆಲಸದಲ್ಲಿರುವಂತೆ ನೇಮಿಸಿ ಭವನದ ಉದ್ಯಾನವನಕ್ಕೆ ಕಳುಹಿಸಿದಳು.

ಗೃಹಿಣಿಯು ಅವನೊಡನೆ ಮಾತನಾಡುತ್ತಿರುವ ವೇಳೆಯಲ್ಲಿ ಕಾಮಿನಿಯು ಪುಸ್ತಕದಲ್ಲೇ ಗಮನವಿಟ್ಟಂತೆ ನಟಿಸಿ ಅವನನ್ನು ನೋಡಿಕೊಂಡಳು.

ಸೂರ್ಯಾಸ್ತಮಾನವಾದ ಕೂಡಲೆ ಕಾಮಿನಿಯು ಭೋಜನವನ್ನು ತೀರಿಸಿ ಕೊಂಡು ತಲೆ ನೋಯುವದೆಂಬ ನೆವವನ್ನು ಹೇಳಿ ತನ್ನ ಕೊಠಡಿಗ ಹೋಗಿ ಮಲಗಿಕೊಳ್ಳುವೆನೆಂದು ಗೃಹಿಣಿಗೆ ತಿಳಿಸಿ ಯಾರಿಗೂ ತಿಳಿಯದಂತೆ ಭವನದ ಉದ್ಯಾನವನವನ್ನು ಹೊಕ್ಕು ಗಿಡಗಳ ಪೊದರಿನಲ್ಲಿ ಅವಿತುಕೊಂಡು ಹೊಸದಾಗಿ ನೇಮಿಸಲ್ಪಟ್ಟ ಕೆಲಸಗಾರನ ಚಲನೆಯನ್ನು ವಿಲೋಕಿಸುತ್ತಿದ್ದಳು. ಅವನು ಹಗಲು ಕಾವಲಿನವನನ್ನು ಕಳುಹಿಸಿಕೊಟ್ಟು ಉದ್ಯಾನವನದ ಹಿಂಭಾಗವ ದೊಡ್ಡ ಬಾಗಿಲಿಗೆ ಬೀಗ ಹಾಕಿ ಭದ್ರಪಡಿಸಿ ಬಿಲ್ಲನ್ನು ಕೈಯಲ್ಲಿ ಹಿಡಿದು ಕೊಂಡು ನಾಲ್ಕಾರುಸಲ ಉದ್ಯಾನವನವನ್ನೆಲ್ಲಾ ಪಹರೆಕೊಟ್ಟು ಯಾರೂ ಇಲ್ಲವೆಂದು ತಿಳಿದು ಆಯುಧಶಾಲೆಗೆ ಹೋಗಿ ಒಂದು ಕೈಕೊಡಲಿಯನ್ನು ತೆಗೆದು ಕೊಂಡು ಬಂದು ಕಾಮಿನಿಯು ಅವಿತುಕೊಂಡಿರುವ ಪೊದರಿನ ಕಡೆಗೆ ಬರುತ್ತಿ

ದ್ದನು. ಅವಳು ನಡುವಿನಲ್ಲಿದ್ದ ಕೈಕಠಾರಿಯನ್ನು ಒರೆಯಿಂದ ತೆಗೆದು ಕೈಯಲ್ಲಿ ಹಿಡಿದುಕೊಂಡು ತೋಳನು ಟಗರಿನಮೇಲೆ ಬಿದ್ದು ಹಿಡಿಯಲೆತ್ನಿಸುತ್ತಿರುವಂತೆ ಸನ್ನದ್ಧಳಾದಳು. ಕಾವಲಿನವನು ಅವಳಿದ್ದ ಪೊದರಿಗೆ ನಾಲ್ಕು ಮಾರು ದೂರದಲ್ಲಿರುವ ಮತ್ತೊಂದು ಪೊದರಿನ ಬಳಿಯನ್ನು ಸೇರಿ ನಿಂತನು. (ಈ ಪೊದರಿನ ಹತ್ತಿರವೇ ಧನಕೋಟಿಯು ಕೊಲ್ಲಲ್ಪಟ್ಟಿದ್ದು.) ಸುತ್ತಲೂ ನೋಡಿ ಯಾರೂ ಇಲ್ಲವೆಂದು ತಿಳಿದು ಪೊದರಿನೊಳಗೆ ಹೊಕ್ಕು ಬಿಲ್ಲನ್ನು ಕೆಳಗಿಟ್ಟು ಕೈಕೊಡಲಿಯಿಂದ ನೆಲವನ್ನು ಅಗೆಯಲಾರಂಭಿಸಿದನು. ಇದನ್ನೆಲ್ಲಾ ನೋಡಿ ಕಾಮಿನಿಯು ಸ್ವಲ್ಪವೂ ಸದ್ದಿಲ್ಲದಂತೆ ಪಕ್ಕದ ಪೊದರನ್ನು ಹೊಕ್ಕು ಕಾವಲಿನವನ ಹಿಂದೆ ಎರಡು ಮಾರು ದೂರದಲ್ಲಿ ನಿಂತು ಕೈಕಠಾರಿಯನ್ನು ಹಿಡಿದಿರುವ ಬಲಗೈಯನ್ನು ಮೇಲಕ್ಕೆ ಎತ್ತಿ ಸಿದ್ಧಳಾದಳು. ಅಷ್ಟರಲ್ಲಿ ಅವನು ಅಗೆದ ಗುಣಿಯಲ್ಲಿ ಏನನ್ನೋ ಕಂಡು ಹರ್ಷಸೂಚಕವಾದ ಧ್ವನಿಯಿಂದ ಅದನ್ನು ತೆಗೆಯಲು ಬಗ್ಗಿದನು. ಆ ಕ್ಷಣವೇ ಕಾಮಿನಿಯು ಹಾರಿಬಂದು ಅವನ ಬೆನ್ನುಮೇಲಿನ ಕವಚವನ್ನು ಎಡಗೈಯಿಂದ ಬಲವಾಗಿ ಹಿಡಿದೆಳೆದು ಕೈಕಠಾರಿಯಿಂದ ಅವನನ್ನು ತಿವಿದು ಕೊಲ್ಲುವ ಭಾವದಲ್ಲಿ ಬಲಗೈಯನ್ನು ಎತ್ತಿ ಬಹು ರೋಷಗೊಂಡು "ಒಂದು ಮಾತನ್ನಾಡಿದರೆ ಇಗೊ ಈ ಕಠಾರಿಗೆ ಆಹುತಿಯಾಗುವೆ. ನಿನ್ನನ್ನು ನಾನು ಬಲ್ಲೆ. ನೀನು ದುಷ್ಟಬುದ್ಧಿಯಲ್ಲವೇ?" ಎಂದು ಗದರಿಸಿದಳು. ಆ ದುಷ್ಟನು ಭಯದಿಂದ ನಡುಗಿ ಮಾತನಾಡಲಾರದೆ ಕುಳಿತು ಮುಖವನ್ನೆತ್ತಿ ದೀನದೃಷ್ಟಿಯಿಂದ ಕಾಮಿನಿಯನ್ನು ನೋಡುತ್ತಿದ್ದನು.

ಒಬ್ಬ ಸ್ತ್ರೀಯಳು ಇಂತಹ ಅಸಾಧಾರಣವಾದ ಶಕ್ತಿ ಪ್ರಭಾವವನ್ನು ಒಬ್ಬ ಪುರುಷನಮೇಲೆ ತೋರಿಸುವ ಸಮಯದಲ್ಲಿ ತಾನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕೆಂಬ ಬುದ್ಧಿಯೂ ಕೂಡ ಆ ಪ್ರಭಾವದ ಎದುರಿನಲ್ಲಿ ಅಣಗಿಹೋಗುವದು. ಈ ರೀತಿ ಒಬ್ಬ ಪುರುಷನು ಆಕಸ್ಮಿಕವಾಗಿ ಬಂದು ಗದರಿಸಿದ್ದ ಪಕ್ಷದಲ್ಲಿ ದುಷ್ಟಬುದ್ಧಿಯು ಕಾರಾಗೃಹದಿಂದ ತಪ್ಪಿಸಿಕೊಂಡು ಹೋದ ಕಾಲದಲ್ಲಿ ತೋರಿಸಿದ ಪ್ರಯತ್ನಶಕ್ತಿಯನ್ನು ಈ ಸಮಯದಲ್ಲಿ ತೋರಿಸುತ್ತಿದ್ದನು. ಆದರೆ ಕಾಮಿನಿಯ ಶಕ್ತಿ ಪ್ರಭಾವಕ್ಕೆ ಈಗ ಅವನು ಅಧೀನನಾಗಿರುವುದೇನೂ ಆಶ್ಚರ್ಯವಲ್ಲ. ಹೇಗೆಂದರೆ: ಮರಣದಂಡನೆಯಿಂದ ಅವನನ್ನು ತಪ್ಪಿಸುವುದಕ್ಕಾಗಿ ಕಾರಾಗೃಹದಲ್ಲಿರುವಾಗ ಬಂದು ಕಾಣಿಸಿಕೊಂಡಳು.

ಅವನಿಗೆ ತಿಳಿದೂ ತಿಳಿಯದೆಯೂ ಇರುವ ಅನೇಕ ವಿಷಯಗಳನ್ನು ಬಲ್ಲಳೆಂದು ಕಂಡುಬಂದಿತು. ಇದನ್ನೆಲ್ಲಾ ಅವಳು ತಿಳಿದಬಗೆ ಹೇಗೆ ಎಂದು ಆಶ್ಚರ್ಯ ಪಡುತ್ತಿದ್ದನು. ಹೀಗೆ ಅವಳನ್ನು ಸುತ್ತಿದ ಮಾರ್ಗದಿಂದಲೇ ಅವಳ ವಿಷಯ ದಲ್ಲಿ ಅಕಾರಣವಾದ ಅಂಜಿಕೆಯೊಂದು ಆಗಲೇ ಅವನ ಮನಸ್ಸಿನಲ್ಲಿ ತುಂಬಿತ್ತು. ಕಾವಲಿನ ಕೆಲಸಕ್ಕೆ ಸೇರಬೇಕೆಂದು ಭವನಕ್ಕೆ ಬಂದ ವೇಳೆಯಲ್ಲಿ ಅವಳು ಭವನದಲ್ಲಿರುವಳೆಂದು ಅವನು ಎಣಿಸಿರಲಿಲ್ಲ. ಆದರೆ ಅವಳನ್ನು ನೋಡಿದಾಗ ವೇಷಧಾರಿಯಾಗಿ ಬಂದಿರುವನೆಂಬ ಅನುಮಾನವಿಲ್ಲದೆ ಅವನನ್ನು ಗಮನಿಸಲಿಲ್ಲ. ಬಹು ದಿವಸದಿಂದ ಅವನನ್ನು ಬಲ್ಲ ಗೃಹಿಣಿಯು, ಹಗಲಿನ ಕಾವಲಿನವನು ಮುಂತಾದವರು ಯಾರೂ ಅವನನ್ನು ಕಂಡುಹಿಡಿಯಲಾರದೆ ಹೋದರು. ಹೀಗಿರುವಲ್ಲಿ ಒಂದೆರಡುಸಲ ಮಾತ್ರ ಅವನನ್ನು ನೋಡಿದ್ದ ಕಾಮಿನಿಯು ವೇಷಧಾರಿಯಾಗಿದ್ದರೂ ಅವನನ್ನು ಕಂಡುಹಿಡಿಯುವುದೆಂದರೆ ಅವನಿಗೆ ಆಶ್ಚರ್ಯವಾಯಿತು. ಆದ್ದರಿಂದ ಅವಳಿಗೆ ಅಸಾಧಾರಣವಾದ ಶಕ್ತಿ ಸಾಮರ್ಥ್ಯಗಳು ಇರುವವೆಂದು ಅವನಿಗೆ ತೋರಿಬಂದಿತು. ಇದಲ್ಲದೆ ಇದ್ದಕ್ಕೆ ಇದ್ದಂತೆ ಅವನನ್ನು ಹಿಡಿದೆಳೆದುದರಲ್ಲಿ ತೋರಿಸಿದ ಅವಳ ಕ್ರೂರ ಶಕ್ತಿಯೂ ಧೈರ್ಯವೂ ಕಠಾರಿಯನ್ನು ಹಿಡಿದುಕೊಂಡು ತೋರಿಸುವ ಅವಳ ರೋಷವೇ ಮುಂತಾದ ಭಾವವು ಅಪರಾಧಿಯಾದ ಅವನಿಗೆ ಭಯವನ್ನುಂಟುಮಾಡಿತು.

ನಂತರ ಕಾಮಿನಿಯು "ನಾನು ಹೇಳುವಂತೆ ಕೇಳಬೇಕು. ಇಲ್ಲದಿದ್ದರೆ ಇಗೊ ಈ ಕಠಾರಿಯ ಅಲಗಿನಲ್ಲಿ ವಿಷವಿದೆ. ಶರೀರದಮೇಲೆ ಇದರಿಂದ ಒಂದು ಗೀರು ಬಿದ್ದರೂ ಮರಣ ತಪ್ಪದು" ಎಂದು ಹೇಳಿ ಅವನಿಗೆ ಪ್ರಾಣಾ ಪಾಯವನ್ನು ಹುಟ್ಟಿಸಿ, ಗುಣಿಯಲ್ಲಿ ಕಂಡ ಲಕೋಟೆಗಳನ್ನು ಅವನಿಂದ ಎತ್ತಿಸಿ ಎಡಗೈಯಿಂದ ತೆಗೆದುಕೊಂಡು ನಡುವಿನಲ್ಲಿ ಭದ್ರಪಡಿಸಿ ಗುರುತರಿಯ ದಂತೆ ಗುಣಿಯನ್ನು ಮುಚ್ಚಿಸಿ, ಅವನನ್ನು ಕುರಿತು "ಈ ಲಕೋಟೆಗಳು ನಿನ್ನ ವಶಕ್ಕೆ ಹೇಗೆ ಬಂದವು ಹೇಳು ನಾನು ಅನೇಕ ವಿಷಯಗಳನ್ನು ತಿಳಿದಿರುವೆನು. ಈಗ ಕೇಳಿರುವ ಪ್ರಶ್ನೆಯ ಉತ್ತರವೂ ಕೂಡ ನನಗೆ ತಿಳಿ ದಿರುವುದು. ಆದರೆ ನಿನ್ನ ನಿಜವನ್ನು ಪರೀಕ್ಷಿಸುವುದಕ್ಕೋಸ್ಕರ ಕೇಳಿರುವೆನು. ಸುಳ್ಳನ್ನು ಹೇಳಿದೆಯಾದರೆ ಇಗೊ ಇದನ್ನು ನೋಡಿದೆಯಾ" ಎಂದು ಕಠಾರಿ ಯನ್ನು ಝಳಪಿಸಲು ದುಷ್ಟಬುದ್ಧಿಯು ಎಲ್ಲಿ ಪ್ರಾಣಾಪಾಯ ಸಂಭವಿಸುವುದೊ

ಎಂಬ ಭಯದಿಂದ ಮುಂಡಿಯೂರಿ ಕೈಗಳನ್ನು ಜೋಡಿಸಿ ದೈನ್ಯಭಾವದಿಂದ "ಮಹಾತಾಯಿ ನನ್ನನ್ನು ಕೊಲ್ಲಬೇಡ! ಕೊಲ್ಲಬೇಡ! ನಿಜವನ್ನು ಹೇಳುವೆನು. ನನ್ನ ಯಜಮಾನನು ಘಾತಿಸಲ್ಪಟ್ಟ ಕಾಲದಲ್ಲಿ ವ್ಯಸನದಿಂದ ಅವನಮೇಲೆ ಬಿದ್ದು ಶೋಕಿಸುತ್ತಿರುವಲ್ಲಿ ಯೋಚನೆಯೊಂದು ಹೊಳೆದು ಆತನು ಯಾವಾಗಲೂ ಜೋಪಾನವಾಗಿ ನಡುವಿನಲ್ಲಿಟ್ಟಿದ್ದ ಬೀಗದಕೈಯನ್ನು ತೆಗೆದುಕೊಂಡು ಆತನ ಶಯನಗೃಹದಲ್ಲಿದ್ದ ಪೆಟ್ಟಿಗೆಯನ್ನು ತೆರೆದು ಈ ಲಕೋಟೆಯನ್ನು ತೆಗೆದು ಓದುವುದಕ್ಕೂ ಆ ಸಂದರ್ಭದಲ್ಲಿ ಅವಕಾಶ ದೊರೆಯದೆ ಇವುಗಳನ್ನು ತಂದು ಈ ಸ್ಥಳದಲ್ಲಿ ಹೂತಿಟ್ಟು ಹೊರಟ ಎರಡು ಕ್ಷಣಗಳಲ್ಲಿ ಪ್ರತಾಪಕಂಠೀರವಾದಿಗಳಿಂದ ಹಿಡಿಯಲ್ಪಟ್ಟೆನು" ಎಂದು ನಿಜವನ್ನು ಸ್ವಲ್ಪವೂ ಮರೆಮಾಚದೆ ಹೇಳಿದನು. ಅವನು ಇದನ್ನು ಹೇಳುತ್ತಿರುವ ಸಮಯದಲ್ಲಿ ಅವನಿಗೆ ತಿಳಿಯಬಾರದಂತೆ ಅವನ ಮುಖಭಾವವನ್ನು ಪರೀಕ್ಷಿಸುತ್ತಿದ್ದು ನಿಜವನ್ನೇ ಹೇಳಿದನೆಂದು ನಂಬಿ ಅವನನ್ನು ಪ್ರಾಣದಿಂದ ಉಳಿಸಿದಳು. ಹಾಗಿಲ್ಲದೆ ಲಕ್ಷ್ಮೀನಿಲಯದ ರಹಸ್ಯವು ಅವನಿಗೆ ತಿಳಿದಿದೆ ಎಂದು ತೋರಿದ್ದಪಕ್ಷದಲ್ಲಿ ಆ ಕ್ಷಣವೇ ಆ ಸ್ಥಳದಲ್ಲಿಯೇ ಅವನನ್ನು ತನ್ನ ಕಠಾರಿಗೆ ಆಹುತಿ ಕೊಡುತ್ತಿದ್ದಳು

ಅನಂತರ ಅವನನ್ನು ಕುದುರೆ ಲಾಯಕ್ಕೆ ಕರೆದುಕೊಂಡು ಹೋಗಿ ಕೆಲಸಕ್ಕೆ ಬಾರದ ಒಂದು ಮುದಿಕುದುರೆಯನ್ನು ತೋರಿಸಿ ಅದಕ್ಕೆ ಜೀನು ಹಾಕಿಸಿ ಅದರಮೇಲೆ ಹತ್ತುವಂತೆ ಹೇಳಿ ಅವನನ್ನು ಕುರಿತು "ಎಲ ದುಷ್ಟ! ನೀನು ಸನ್ಮಾರ್ಗಿಯಾಗಿ ಬದುಕಲೆಂದು ಕರುಣದಿಂದ ನಿನಗೆ ಸಂಭವಿಸುವ ಮರಣದಂಡನೆಯಿಂದ ಬಿಡಿಸಿದೆನು. ಆದರೂ ಯಥಾಪ್ರಕಾರ ನಿನ್ನ ದುರ್ಮಾರ್ಗವನ್ನು ಬಿಡದೆ ವೇಷಧಾರಿಯಾಗಿ ಬಂದಿರುವೆ. ಈಗ ನಿನ್ನನ್ನು ಕೊಲ್ಲದೆ ಉಳಿಸಿರುವೆನು. ಸೂರ್ಯೋದಯಕ್ಕೆ ಮುಂಚಿತವಾಗಿ ಕಳಿಂಗಪಟ್ಟಣಪ್ರಾಂತ್ಯದ ಎಲ್ಲೆಯನ್ನು ನೀನು ಬಿಟ್ಟುಹೋಗಿರಬೇಕು. ಬೆಳಗಾದಮೇಲೆ ರಾತ್ರಿ ಕಾವಲಿನವನು ಲಾಯದಲ್ಲಿ ಕುದುರೆಯನ್ನು ಕಳವು ಮಾಡಿಕೊಂಡು ಹೋದನೆಂಬ ಕಳ್ಳತನವು ನಿನ್ನಮೇಲೆ ಹೊರಬೇಕು. ಇದರಿಂದ ಈ ವೇಷದಲ್ಲಿ ನೀನು ಈ ಪ್ರಾಂತ್ಯಕ್ಕೆ ಹಿಂತಿರುಗಿ ಬರುವುದಕ್ಕಾಗುವುದಿಲ್ಲ. ವೇಷವನ್ನು ಕಳೆದು ಹಾಕಿ ಬಂದರೆ ರಾತ್ರಿ ಕಾವಲಿನವನೂ ದುಷ್ಟಬುದ್ಧಿಯೂ ಒಬ್ಬನೇ ಎಂದು ನಾನು ಪ್ರಸಿದ್ಧಪಡಿಸುವೆನು. ಆಗ ದುಷ್ಟಬುದ್ಧಿಯು ಕಳ್ಳನೆಂದು ಹಿಡಿಯು

ವರು. ಆದ್ದರಿಂದ ನಿನ್ನ ಹೆಸರಿಗೆ ಕಳ್ಳತನವು ಹೊರದಂತೆ ಈ ದೇಶವನ್ನು ಬಿಟ್ಟುಹೋಗು. ಪ್ರತಾಪಕಂಠೀರವನು ನಿನಗೆ ಯತೇಚ್ಛವಾಗಿ ಹಣವನ್ನು ಕೊಟ್ಟಿರುವನು. ಯಾವದಾವದೊಂದು ದೇಶವನ್ನು ಸೇರಿ ಸನ್ಮಾರ್ಗಿಯಾಗಿ ಬಾಳು. ಎಲ್ಲಿದ್ದರೂ ಆ ಕರಾಳನ ಸಹವಾಸದಲ್ಲಿರುವದಿಲ್ಲವೆಂದು ಪ್ರಮಾಣ ಮಾಡಿಕೊಡು" ಎಂದು ಜವನಲ್ಲಿ ಪ್ರಮಾಣ ಮಾಡಿಸಿಕೊಂಡು ಉದ್ಯಾನವನದ ಬಾಗಿಲುಗಳ ಬೀಗದಕೈಗಳನ್ನು ಅವನಿಂದ ತೆಗೆದುಕೊಂಡು ಹಿಂಭಾಗದ ಬಾಗಿಲನ್ನು ತೆರೆದು ಕಳುಹಿಸಿಕೊಟ್ಟು ಬಾಗಿಲನ್ನು ಬೀಗಹಾಕಿ ಭದ್ರಪಡಿಸಿ ಯಾರಿಗೂ ತಿಳಿಯದಂತೆ ಬಂದು ತನ್ನ ಕೊಠಡಿಯನ್ನು ಸೇರಿ ಬಾಗಿಲನ್ನು ಹಾಕಿಕೊಂಡು ಆ ಲಕೋಟೆಗಳನ್ನು ಬಿಚ್ಚಿ ನೋಡುತ್ತಿದ್ದಳು.

ಅವು ಪ್ರತಾಪಕಂಠೀರವನಿಗೂ ಮನೋರಮೆಗೂ ಕೊಡುವಂತೆ ಧನ ಕೋಟಿಯು ಬರೆದಿಟ್ಟಿದ್ದ ಲಕೋಟೆಗಳು. ಅವುಗಳಲ್ಲಿದ್ದ ಸಂಗತಿಗಳನ್ನೆಲ್ಲಾ ಓದಿನೋಡಿ ಕಾಮಿನಿಯು ಆನಂದ ಬಾಷ್ಪಗಳನ್ನು ಸುರಿಸಿದಳು. ಮಲಗ ವುದಕ್ಕೆ ಹೊದರೆ ನಿದ್ರೆಬಾರದು. ಒಂದುಸಲ ಸಂತೋಷದಿಂದ ಕುಣಿದಾಡು ವಳು. ಒಂದುಸಲ ನಿಂತು ನಗುತ್ತಿರುವಳು. ಒಂದುಸಲ ಹಾಸಿಗೆಯ ಮೇಲೆ ಹೊರಳುತ್ತಿರುವಳು. ಈ ರೀತಿ ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ಕೊನೆಗೆ ಆನಂದ ಚೇಷ್ಟೆಗಳ ಆಯಾಸದಿಂದ ನಿದ್ರೆಯು ಆವರಿಸಿಕೊಂಡಿತು. ಲಕೋಟೆಗಳು ತೆರೆದು ಬಿದ್ದಿದ್ದವು. ಬೆಳಗಾಗಿ ನಾಲ್ಕಾರು ಘಳಿಗೆಗಳಾದರೂ ಎಚ್ಚರವಾಗಿರಲಿಲ್ಲ. ನಿದ್ರೆಯೆಲ್ಲಾ ಸುಖಸ್ವಪ್ನವೇ ಆಗಿತ್ತು. ತಲೆನೋವೆಂದು ಗೃಹಿಣಿಯಲ್ಲಿ ಹೇಳಿದ್ದಳಷ್ಟೆ. ಅವಳ ತಲೆನೋವು ಹೇಗಿರುವುದೆಂದು ವಿಚಾರಿ ಸುವದಕ್ಕಾಗಿ ಬಂದು ಬಾಗಿಲನ್ನು ತಟ್ಟಿದಳು. ಕಾಮಿನಿಯು ಎಚ್ಚರವಾಗಿ ಸಡಗರಿಸಿಕೊಂಡು ಎದ್ದು ಲಕೋಟೆಗಳನ್ನು ಭದ್ರಪಡಿಸಿ ಬಂದು ಬಾಗಿಲನ್ನು ತೆರೆದಳು. ನೆನ್ನೆ ನಟಿಸಿದ ತಲೆನೋವು ಈದಿನ ನಿಜವಾಗಿಯೂ ಬಂದಿತ್ತು. ಗೃಹಿಣಿಯು ಸ್ವಲ್ಪಹೊತ್ತು ಇದ್ದು ವಿಚಾರಿಸಿಕೊಂಡು ಹೋದಳು.

ಆ ದಿನ ಮಧ್ಯಾಹ್ನ ಭೋಜನಾನಂತರ ಮನಸ್ಸು ಸ್ಥಿಮಿತಕ್ಕೆ ಬರಲು ಕಾಮಿನಿಯು ತನ್ನ ಕೊಠಡಿಯೊಳು ಕುಳಿತು ತನ್ನಷ್ಟಕ್ಕೆ ತಾನು "ಪ್ರತಾಪ ಕಂಠೀರವನಿಗಾಗಿಯೂ ಮನೋರಮೆಗಾಗಿಯೂ ಧನಕೋಟಿಯು ಈ ಲಕೋಟೆಗಳನ್ನು ಬರೆದಿಟ್ಟನು. ಇಬ್ಬರೂ ಗುಣಶಾಲಿಗಳು. ಅವರಲ್ಲಿ ನನಗೂ

ಪಕ್ಷಪಾತವಿರುವದು. ಅವರಿಗೆ ಮೋಸಮಾಡಿ ನಾನೊಬ್ಬಳೇ ಈ ರಹಸ್ಯವನ್ನು ಇಟ್ಟುಕೊಳ್ಳುವದು ಯುಕ್ತವಲ್ಲ. ಪೂರ್ವಪದ್ಧತಿಗನುಸಾರವಾಗಿ ಮೂವರಾಗುವೆವು. ಮನೋರಮೆಯು ನಾನು ಹಿಂದುಗಳು. ಪ್ರತಾಪ ಕಂಠೀರವನೂ ಕೂಡ ಹಿಂದೂ ಮತಾವಲಂಬಿ ಯಾಗುವೆನೆಂದು ನಿರ್ಧರಿಸಿಕೊಂಡಿರುವನು. ಆದ್ದರಿಂದ ಎಲ್ಲವೂ ಸಮಂಜಸವಾಗಿರುವುದು" ಎಂದು ಹೇಳಿಕೊಂಡು ಗೃಹಿಣಿಯನ್ನು ಕುರಿತು "ಇಲ್ಲಿ ನನ್ನ ಕೆಲಸವು ಮುಗಿಯಿತು ಇನ್ನು ನನ್ನ ಊರಿಗೆ ಹೋಗುವೆನು" ಎಂದು ತಿಳಿಸಿ ಮಾರನೇದಿನ ಪ್ರಯಾಣ ಮಾಡಿ ರಾಧಾ ಪುರಕ್ಕೆ ಹೊರಟಳು.

ಕಾಮಿನಿಯು ಸ್ವಾರ್ಥತೆಯನ್ನು ಬಿಟ್ಟು ಮನೋರಮೆಯನ್ನು ಮತ್ತು ರಾಜನನ್ನು ರಹಸ್ಯಭಾಗಿಗಳಾಗಿ ಮಾಡಿಕೊಳ್ಳಬೇಕೆಂದು ತನ್ನಷ್ಟಕ್ಕೆ ತಾನು ಹೇಳಿಕೊಂಡ ಅಭಿಲಾಷೆಯಲ್ಲಿ ಪರೋಪಕಾರವೇ ಪ್ರಧಾನವಲ್ಲ. ಸ್ವಕಾರ್ಯವು ಒಂದು ಇತ್ತು. ಅದು ಅವಳ ಬಾಯಿಂದ ಹೊರಡದಿದ್ದರೂ ಮನಸ್ಸಿನ ಒಂದು ಮೂಲೆಯಿಂದ ಗೋಪ್ಯವಾಗಿ ಅಡಗಿತ್ತು. ಅದೇನೆಂದರೆ: ಲಕ್ಷ್ಮೀನಿಲಯದ ಬಾಗಿಲನ್ನು ಸೇರಬೇಕಾದರೆ ಮಾರ್ಗದಲ್ಲಿ ಅನೇಕ ಕಾಡ್ದೊರೆಗಳನ್ನೂ ಅಗಾಧವಾದ ಹಳ್ಳಗಳನ್ನೂ ದಾಟಬೇಕು. ಮಾರ್ಗವು ಅಲ್ಲಲ್ಲಿ ಇಕ್ಕಟ್ಟಾಗಿರುವುದು ಸ್ವಲ್ಪ ಜಾರಿದರೆ ತೀರಿತು. ಕೆಳಗಿರುವ ಹಳ್ಳದಲ್ಲಿಯೋ ಕೆರೆಯಲ್ಲಿಯೋ ಬಿದ್ದು ಪ್ರಾಣವನ್ನು ಒಪ್ಪಿಸಬೇಕಾಗುವುದು. ಇದಲ್ಲದೆ ಪ್ರೌಢೆಯಾದ ಅಬಲೆಯನ್ನು ಕಾಡಿನಲ್ಲಿ ಪುರುಷನು ಯಾರಾದರೂ ಕಂಡರೆ ಬಿಡುವನೇ? ಆದಕಾರಣ ಪುರುಷಸಹಾಯವಿಲ್ಲದೆ ಅಂತಹ ಪ್ರದೇಶವನ್ನು ದಾಟಿಹೋಗುವುದು ಅಸಾಧ್ಯವು. ಪ್ರತಾಪಕಂಠೀರವನು ಧೈರ್ಯಶಾಲಿಯಾಗಿಯೂ ವಿತರಣಶಾಲಿಯಾಗಿಯೂ ಇರುವುದರಿಂದ ಮೊಟ್ಟಮೊದಲು ಲಕ್ಷ್ಮೀನಿಲಯವನ್ನು ಸೇರುವುದಕ್ಕೆ ಅವನ ಸಹಾಯವು ಇದ್ದೇ ತೀರಬೇಕು. ಈ ಕಾರಣಗಳಿಂದ ಅವರಿಬ್ಬರನ್ನು ರಹಸ್ಯಭಾಗಿಗಳಾಗಿ ಮಾಡಿಕೊಳ್ಳಬೇಕೆಂದು ಎಣಿಸಿದಳು.

ಕಾಮಿನಿಯು ಕಳಿಂಗಪಟ್ಟಣವನ್ನು ಬಿಟ್ಟು ಬರುತ್ತಿರಲು ಮಧ್ಯಾಹ್ನ ಸಮಯಕ್ಕೆ ಒಂದಹಳ್ಳಿಯ ಸುತ್ತಮುತ್ತನಲ್ಲಿ ಕೆಲವು ಡೇರೆಗಳು ಗೋಚರವಾದವು. ಹಳ್ಳಿಗೆಬಂದ ವಿಚಾರಿಸಲು ಅಲ್ಲಿಗೆ ಬಂದು ಇಳಿದಿರುವ ಪದ್ಮರಾಜನ ಸೈನಿಕರ ಡೇರೆಗಳೆಂದು ತಿಳಿಯಬಂದಿತು. ಅಷ್ಟರಲ್ಲಿ ಸಿಂಹಬಲನು

ವೀರಬಾಹುವು ಒಂದು ಮನೆಯಿಂದ ಹೊರಟು ಮಾತನಾಡಿಕೊಂಡು ಬರುತ್ತಿರಲು ಕಾಮಿನಿಯನ್ನು ಕಂಡು ಅಕಸ್ಮಾತ್ತಾಗಿ ಸಂಧಿಸಿದುದಕ್ಕೆ ಸಂತೋಷಪಟ್ಟು ಅವಳನ್ನು ಕಮಲಿನಿಯ ತಾಯಿಮನೆಗೆ ಕರೆದುಕೊಂಡುಹೋಗಿ ಮನೋರಮೆಯ ಬಳಿಯಲ್ಲಿ ಬಿಟ್ಟರು. ಅವಳನ್ನು ಕಂಡು ಅವರು ಸಂತೋಷಪಟ್ಟು ತಾವು ಹಳ್ಳಿಯಲ್ಲಿ ಇಷ್ಟು ದಿವಸಗಳವರಿಗೂ ನಿಲ್ಲುವುದಕ್ಕೆ ಕಾರಣವನ್ನು ಹೇಳಿದರು ಏನೆಂದರೆ:—ಪ್ರತಾಪಕಂಠೀರವನು ತನ್ನ ಕ್ಷೇಮಸಮಾಚಾರವನ್ನು ಆಗಾಗ್ಯೆ ಅಂಚೆಯಮೂಲಕ ಪದ್ಮರಾಜನಿಗೆ ತಿಳಿಸುತ್ತಿದ್ದನು. ಆದರೆ ಮನೋರಮೆಯು ಕಳುವಾದಂದಿನಿಂದಲೂ ಆ ರೀತಿ ತಿಳಿಸುತ್ತಿರಲು ಅವಕಾಶ ಉಂಟಾಗಲಿಲ್ಲ ಸ್ವೀಕೃತ ಪುತ್ರನ ಸಮಾಚಾರವು ಇದ್ದಕ್ಕೆ ಇದ್ದಂತೆಯೇ ನಿಂತುಹೋದುದನ್ನು ಕಂಡು ಶತೃಗಳಬಲೆಗೇನಾದರೂ ಸಿಕ್ಕಿ ಬಿದ್ದನೋ ಎಂದು ಪದ್ಮರಾಜನು ಮನಸ್ಸಿನಲ್ಲಿ ಕಳವಳ ಪಟ್ಟು ಸೈನ್ಯ ಸಮೇತನಾಗಿ ಅವನನ್ನು ಹುಡುಕಿಕೊಂಡು ಕಳಿಂಗಪಟ್ಟಣಕ್ಕಾಗಿ ಹೊರಟು ಬರುತ್ತಾ ಆ ಹಳ್ಳಿಯ ಸಮೀಪದಲ್ಲಿ ಬಳಿಗ್ಯೆ ಬರ್ಹಿಪ್ರದೇಶಕ್ಕೆ ಹೋಗಿದ್ದ ವೀರಬಾಹುವನ್ನು ಕಂಡು ಮಗನ ವಿಷಯವಾಗಿ ವಿಚಾರಿಸಿ ಅವನೊಡನೆ ಬಂದು ರಾಜನನ್ನು ನೋಡಿ ಆಲಂಗಿಸಿಕೊಂಡು ಆನಂದಪಟ್ಟನು ಸೈನ್ಯವು ಬಹುದೂರದಿಂದ ವಿಶ್ರಾಂತಿಯಿಲ್ಲದೆ ಬಂದುದರಿಂದ ಆ ಹಳ್ಳಿಯಲ್ಲಿ ಕೆಲವುದಿನಗಳಿದ್ದು ಹಿಂತಿರುಗಿ ಹೋಗಬೇಕೆಂದು ಇಳಿದುಕೊಂಡನು.

ಭೋಜನಾನಂತರ ಕಾಮಿನಿಯು ರಾಜನನ್ನು ಮನೋರಮೆಯನ್ನು ಪ್ರತ್ಯೇಕವಾಗಿ ಕರೆದು ಕುಳ್ಳಿರಿಸಿಕೊಂಡು ತಾನು ಧನಕೋಟಿಯ ಭವನದಲ್ಲಿ ಇಳಿದಿದ್ದ ಕೊಠಡಿಯ ಮೂಲೆಯಲ್ಲಿ ಯಾತಕ್ಕಾಗಿಯೋಹೋಗಿ ನಿಂತ ಸಮಯದಲ್ಲಿ ನೆಲವು ಬಿರಕುಬಿಟ್ಟು ನೆಲಮಾಳಿಗೆಯೊಂದು ಗೋಚರಿಸಲು ಅದರಲ್ಲಿ ಏನಿದೆಯೋ ನೋಡಬೇಕೆಂಬ ಕೌತುಕದಿಂದ ದೀಪವನ್ನು ಹಚ್ಚಿಸಿ ಅದರ ಬೆಳಕಿನಲ್ಲಿ ಪರೀಕ್ಷಿಸಲು ಆ ಲಕೋಟೆಗಳು ದೊರೆತವೆಂದೂ, ಅವುಗಳನ್ನು ಒಡೆದು ನೋಡಿ ತಿಳಿಯಬಂದ ಸಂಗತಿಗಳನ್ನು ಕಂಡು ಬಹು ಆಶ್ಚರ್ಯಪಟ್ಟು, ರಾಜನಿಗೂ ಮನೋರಮೆಗೂ ಅದನ್ನು ಒಪ್ಪಿಸಬೇಕೆಂದು ರಾಧಾಪುರಕ್ಕೆ ಹೊರಟುಬರುತ್ತಿರಲು ಅವರನ್ನು ಸಂಧಿಸಿದೆನೆಂದು ಹೇಳಿ ಆ ಲಕೋಟೆಗಳನ್ನು ಅವರಿಗೆ ಒಪ್ಪಿಸಿದಳು.

ಮೂರನೇ ದಿನ ಬೆಳಿಗ್ಗೆ ಎಲ್ಲರೂ ಸೇರಿ ಹೊರಟು ನಾಲ್ಕಾರು ದಿನಗಳಲ್ಲಿ ರಾಧಾಪುರವನ್ನು ಸೇರಿದರು. ರಾಜನು ತಂದೆಯು ಬಳಿಯನ್ನೈದಿ ಹಿಂದೂ ಮತಾವಲಂಬಿಯಾಗಬೇಕೆಂಬ ತನ್ನಿಚ್ಛೆಯನ್ನು ಸಕಾರಣವಾಗಿ ತಿಳಿಸಲು ಪದ್ಮರಾಜನು ಮನಸ್ಸಿನಲ್ಲಿ "ನಮ್ಮ ದೇಶದಲ್ಲಿ ಮುಕ್ಕಾಲುಪಾಲು ಜನರೆಲ್ಲಾ ಹಿಂದುಗಳು. ಇವನು ಹುಟ್ಟಿದ್ದೂ ಹಿಂದೂಮತದಲ್ಲಿ. ಮನೋರಮೆಯು ಇವನಿಗೆ ಅನುರೂಪಳಾದ ವಧುವು. ಇವರಿಬ್ಬರಿಗೂ ಹತ್ತಿರ ಬಂಧುತ್ವ ವಿರುವುದು. ಇದಲ್ಲದೆ ನಾನು ನೋಡಿದ್ದರಲ್ಲಿ ಇವರಿಗೆ ಪರಸ್ಪರ ಅನುರಾಗವೂ ಇರುವುದು. ಮನೋರಮೆಯನ್ನು ಬೌದ್ಧಮತಕ್ಕೆ ಎಳೆಯುವುದು ನಮ್ಮಿಂದಾ ಗುವುದಿಲ್ಲ. ನಾನು ಪ್ರತಿಭಟಿಸಿದರೆ ಇವರ ಸುಖಸಂತೋಷಗಳಿಗೆ ಕೊರತೆ ಯನ್ನು ತಂದಂತಾಗುವುದು. ಇದು ಯುಕ್ತವಲ್ಲ. ಯಾವ ಮತವಾದರೇನು? ನನ್ನ ಮಗನು ಸುಖವಾಗಿ ಧರ್ಮಿಷ್ಟನಾಗಿದ್ದರೆ ಸಾಕು" ಎಂದು ಸ್ವಲ್ಪ ಹೊತ್ತು ಯೋಚಿಸಿ ಅನುಮತಿಯನ್ನಿತ್ತು ನಡೆಯತಕ್ಕ ಸಂಸ್ಕಾರಗಳಲ್ಲಿ ತಾನೂ ಎದುರಿನಲ್ಲಿದ್ದನು.

ಮಾರನೆಯ ದಿನ ರಾಜನು ಮನೋರಮೆ ಕಾಮಿನಿಯರನ್ನು ಕರೆದು ಕೊಂಡು ರಾಧಾಪುರವನ್ನು ಗೋಪ್ಯವಾಗಿ ಬಿಟ್ಟು ಲಕ್ಷ್ಮೀನಿಲಯಾಭಿಮುಖ ವಾಗಿ ಹೊರಟರು.

ಇತ್ತ ದುಷ್ಟಬುದ್ಧಿಯು ತಾನು ಇಳಿದಿದ್ದ ಸ್ಥಳಕ್ಕೆ ಹೋಗಿ ಕಾವಲು ಗಾರನ ವೇಷವನ್ನು ತೆಗೆದುಹಾಕಿ ತಾನಿಟ್ಟಿದ್ದ ಹಣವನ್ನು ತೆಗೆದುಕೊಂಡು ಕುದುರೆಯನ್ನೇರಿ ವ್ಯಸನಾಕ್ರಾಂತನಾಗಿ ಲಗಾಮುವನ್ನು ಸಡಿಲವಾಗಿ ಬಿಟ್ಟು ಯಾವ ದಿಕ್ಕಿಗೆ ಹೋಗಬೇಕೆಂಬುದೂ ತೋರದೆ ಚಿಂತೆಯಲ್ಲಿ ಮಗ್ನನಾಗಿರಲು ಕುದುರೆಯು ಪಶ್ಚಿಮದಿಕ್ಕನ್ನನುಸರಿಸಿ ಹೋಗುತ್ತಿತ್ತು. ಬೆಳಕು ಹರಿಯು ವಷ್ಟರಲ್ಲಿ ಕಳಿಂಗಪಟ್ಟಣ ಪ್ರಾಂತ್ಯದ ಎಲ್ಲೆಯನ್ನು ದಾಟಿ ಬಂದಿದ್ದನು. ಬೆಳಗಾದ ನಾಲ್ಕು ಘಳಿಗೆಯಾದ ಮೇಲೆ ಕುದುರೆಯು ಪಶ್ಚಿಮಘಟ್ಟಗಳ ತಪ್ಪಲಿನ ಸಮೀಪದಲ್ಲಿರುವ ಅರಣ್ಯ ಮಾರ್ಗವನ್ನು ಹಿಡಿದು ಸ್ವಲ್ಪ ದೂರ ಹೋಗಿ ದಾರಿಯು ಕವಲು ಒಡೆದಿರಲು ಆ ಬೆಟ್ಟಗಳ ಕಡೆಗೆ ಹೋಗುವ ಮಾರ್ಗವನ್ನೇ ಹಿಡಿಯಿತು. ಆಗ ದುಷ್ಟಬುದ್ಧಿಯು "ಇದೇನು? ಗೊಂಡಾ ರಣ್ಯಕ್ಕೆ ತೆಗೆದುಕೊಂಡು ಹೋಗುವುದು" ಎಂದು ಎಡಗಡೆಗೆ ಹೋಗುವ

ಮಾರ್ಗಕ್ಕೆ ಕುದುರೆಯನ್ನು ತಿರುಗಿಸಿದನು. ಆದರೂ ಕುದುರೆಯು ತಾನು ಹೋದ ಮಾರ್ಗದಲ್ಲಿಯೇ ಹೋಗಬೇಕೆಂದು ಮುಷ್ಕರದಿಂದ ತಿರುಗಿಸಿದ ದಾರಿಯನ್ನು ಬಿಟ್ಟು ನೇರವಾಗಿ ಮೊದಲಿನ ಮಾರ್ಗವನ್ನೇ ಹಿಡಿಯಿತು. ಈ ಬಗೆಯಾದ ಕುದುರೆಯ ಚರ್ಯವನ್ನು ನೋಡಿ ದುಷ್ಟಬುದ್ಧಿಯು "ಇದೇನು? ಇದು ಹೀಗೆ ಪಟ್ಟುಹಿಡಿಯುವುದು" ಎಂದು ಅದನ್ನು ಚೆನ್ನಾಗಿ ನೋಡಿ "ಆಹ! ಇದು ನನ್ನ ಯಜಮಾನನ ಕುದುರೆಯು ಲಕ್ಷ್ಮೀನಿಲಯಕ್ಕೆ ಹೋಗುವ ಗೂಢ ಪ್ರಯಾಣಕ್ಕೆ ಮಾತ್ರ ಈ ಕುದುರೆಯನ್ನು ಏರಿ ಹೊರಡುತ್ತಿದ್ದನು. ಈ ಪ್ರಾಣಿಗಳು ವಾಡಿಕೆಯಾದ ಮಾರ್ಗಗಳನ್ನು ಅನುಸರಿಸುವವೆಂದು ಕೇಳಿರುವೆನು. ಇದಕ್ಕೆ ಸರಿಯಾಗಿ ನಾನು ಕಳಿಂಗಪಟ್ಟಣದಿಂದ ಹೊರಡುವಾಗ ಯಾವ ದಿಕ್ಕಿಗೂ ಇದನ್ನು ನಾನು ತಿರಗಿಸದಿದ್ದರೂ ತಾನಾಗಿಯೇ ಈ ಪ್ರಾಂತ್ಯಕ್ಕೆ ಬಂದಿರುವುದು. ನನಗೆ ಪುಣ್ಯವಿದ್ದರೆ ಈ ಕುದುರೆಯ ಮೂಲಕ ಲಕ್ಷ್ಮೀನಿಲಯವನ್ನು ಯಾತಕ್ಕೆ ಸೇರಬಾರದು? ದೈವಕಟಾಕ್ಷವು ನನಗೆ ಒದಗಿರುವುದು. ಇದಕ್ಕೆ ದೃಷ್ಟಾಂತವು ಈ ಕುದುರೆಯು ದೊರಕಿದುದೇ ಅಲ್ಲವೆ?" ಎಂದು ಹರ್ಷಚಿತ್ತನಾಗಿ ಲಗಾಮನ್ನು ಯಥಾಪ್ರಕಾರ ಸಡಿಲವಾಗಿ ಬಿಟ್ಟು ಹೊರಟನು. ಕುದುರೆಯು ತನಗೆ ಗೊತ್ತಾಗದ ಮಾರ್ಗವನ್ನು ಹಿಡಿಯಿತು.

ಬರುತ್ತ ಬರುತ್ತ ಕಾಡು ಭಯಂಕರವಾಯಿತು. ಕುದುರೆಯು ಅಗಾಧವಾದ ಕಣಿವೆಗಳ ಪಕ್ಕದಲ್ಲಿಯೂ ಬೆಟ್ಟಗುಟ್ಟಗಳ ಮಧ್ಯದಲ್ಲಿಯೂ ಆ ಪ್ರದೇಶವನ್ನೆಲ್ಲಾ ಚೆನ್ನಾಗಿ ತಿಳಿದಿರುವ ಮಾನವನಂತೆ ಬಹು ಎಚ್ಚರಿಕೆಯಿಂದ ಹೋಗುತ್ತಿತ್ತು, ಕೆಲವೆಡೆಗಳಲ್ಲಿ ನೀರಿನಲ್ಲಿಳಿದು ತೊರೆಗಳನ್ನು ದಾಟಿತು. ಇಂತಹ ಮಹತ್ತರವಾದ ಕಾಡಿನಲ್ಲಿ ಸ್ವಲ್ಪವೂ ಭಯವಿಲ್ಲದೆ ಬಹು ಜಾಗರೂಕತೆಯಿಂದ ನಡಿಯುತ್ತಿರುವ ಕುದುರೆಯನ್ನು ನೋಡಿದ ದುಷ್ಟಬುದ್ಧಿಯ ಮನಸ್ಸಿನಲ್ಲಿ ಆನಂದವು ತುಂಬಿ ತುಳುಕಲು "ಲಕ್ಷ್ಮೀನಿಲಯವು ನನ್ನ ಸ್ವಾಧೀನವಾಯಿತು. ನನ್ನ ಸ್ವಾಧೀನವಾಯಿತು" ಎಂದು ಹುಚ್ಚನಂತೆ ಅರಚಿಕೊಂಡನು. ಸುತ್ತಮುತ್ತಲೂ ಇರುವ ಗುಟ್ಟಬೆಟ್ಟಗಳಿಂದ ಮಾರ್ಧ್ವನಿಯುಂಟಾಗಲು ಪಕ್ಷಿಮೃಗಾದಿಗಳು ಬೆಚ್ಚಿ ಕಲಕಲರವವು ಹುಟ್ಟಿ ಪ್ರತಿಧ್ವನಿಗಳಿಂದ ಅಲ್ಲೋಲಕಲ್ಲೋಲವಾಯಿತು.

ಮಧ್ಯಾಹ್ನ ಸಮಯಕ್ಕೆ ಕುದುರೆಯು ಒಂದು ದೊಡ್ಡ ಬಂಡೆಯ ಕಡೆಗೆ ತಿರುಗಿ ಅದನ್ನು ಸೇರಿ ಮಧ್ಯದಲ್ಲಿ ಉದ್ದಕ್ಕೂ ಕತ್ತರಿಸಿದ್ದ ಬಹು ಇಕ್ಕಟ್ಟಾದ ದಾರಿಯಲ್ಲಿ ಹೊರಟು ಆಚೆ ಕಡೆಗೆ ಹೋಗಿ ಅಲ್ಲಿರುವ ಹಸುರು ಹುಲ್ಲಿನ ಮೈದಾನದಲ್ಲಿ ತನ್ನಿಷ್ಟಕ್ಕೆ ತಾನೇ ನಿಂತಿತು. ದುಷ್ಟಬುದ್ಧಿಯು ಕಳಿಂಗಪಟ್ಟಣ ಸಿಪಾಯಿಗಳಂತೆ ಅಶ್ವಶಾಸ್ತ್ರದಲ್ಲಿ ಗಟ್ಟಿಗನಾದುದರಿಂದ ಆ ಸ್ಥಳವು ಮೊದಲು ಮೊದಲು ತಂಗುವ ಸ್ಥಳವಿರಬೇಕೆಂದು ತಿಳಿದು ಕುದುರೆಯಿಂದ ಇಳಿದು ಜೀನನ್ನು ತೆಗೆದು ಹಾಕಿ ಅದನ್ನು ಮೇಯುವುದಕ್ಕೆ ಬಿಟ್ಟು ಆ ಪ್ರದೇಶದಲ್ಲಿ ಬೆಳದಿದ್ದ ಹಣ್ಣುಹಂಪಲುಗಳನ್ನು ತಿಂದು ಆ ಪಕ್ಕದಲ್ಲಿ ಹರಿಯುತ್ತಿದ್ದ ತೊರೆಯಲ್ಲಿ ನೀರು ಕುಡಿದು ತೃಪ್ತನಾಗಿ ಒಂದು ಮರದ ನೆರಳಿನಲ್ಲಿ ವಿಶ್ರಾಂತಿಗೊಳ್ಳುತ್ತಿದ್ದನು. ರಾತ್ರಿ ನಿದ್ರೆಗೆಟ್ಟವನಾದರೂ ಹಲವು ವಿಧವಾದ ಯೋಚನೆಗಳಿಂದ ನಿದ್ರೆ ಹತ್ತಲಿಲ್ಲ. ಒಂದು ಘಳಿಗೆಯಾದಮೇಲೆ ಕುದುರೆಯು ಹುಲ್ಲುಮೇದು ತಾನಾಗಿಯೇ ತೊರೆಯನ್ನು ಸೇರಿ ನೀರು ಕುಡಿದು ಬಂದು ಅವನ ಬಳಿಯಲ್ಲಿ ನಿಂತಿತು. ಅವನು ಜೀನು ಹಾಕಿ ಏರಿಕೊಳ್ಳಲು ಮುಂದಕ್ಕೆ ಹೊರಟಿತು.

ಸೂರ್ಯಾಸ್ತಮಾನವಾಗುವುದಕ್ಕೆ ನಾಲ್ಕು ಘಳಿಗೆ ಇರುವ ವೇಳೆಯಲ್ಲಿ ಒಂದು ಸಣ್ಣ ಬೆಟ್ಟದ ತಪ್ಪಲನ್ನು ಸೇರಿ ಅಲ್ಲಿರುವ ಒಂದು ಗುಹೆಯನ್ನು ನೋಡಿ ಸಂತೋಷಪಟ್ಟಂತೆ ಖುರಪುಟಗಳನ್ನು ತಟ್ಟಿಕೊಂಡು ಹೂಂಕರಿಸಿ ನಿಂತಿತು. ಅದರ ಇಂಗಿತವನ್ನು ತಿಳಿದು ದುಷ್ಟಬುದ್ಧಿಯು ಇಳಿದನು. ಕೂಡಲೆ ಕುದುರೆಯು ಗುಹೆಯನ್ನು ಹೊಕ್ಕಿತು. ಅವನು ಅದನ್ನು ಹಿಂಬಾಲಿಸಿದನು. ಹೋಗುತ್ತ ಹೋಗುತ್ತ ಗುಹೆಯಲ್ಲಿ ಗಾಢಾಂಧಕಾರವು ಆವರಿಸಿತು. ಆದರೂ ಅವನು ಕುದುರೆಯ ಖುರಪುಟ ಧ್ವನಿಯನ್ನು ಅನುಸರಿಸಿ ಮುಂದರಿಯುತ್ತಿದ್ದನು. ಸ್ವಲ್ಪ ದೂರ ಹೋದ ಮೇಲೆ ಆ ಧ್ವನಿಯು ಕೇಳಿಸದೆ ಹೋಗಲು ಅಲ್ಲಿಯೇ ನಿಂತು ಕಿವಿಗೊಟ್ಟು ಕೇಳಿದನು. ನೀರಿನ ಪ್ರವಾಹವು ಧುಮುಕಿ ಬೀಳುವ ಶಬ್ದವು ಕೇಳಬಂದಿತು. ಒಂದೆರಡು ಕ್ಷಣದಲ್ಲಿ ಕುದುರೆಯು ನೀರನ್ನು ಹೀರಿ ಕುಡಿಯುವ ಧ್ವನಿಯು ಸಮೀಪದಲ್ಲಿಯೇ ಕೇಳಿಸಿತು. ಹೀಗೆಯೇ ಹೋದರೆ ಮುಂದೆ ಗುಹೆಗೆ ಅಡ್ಡಲಾಗಿ ನೀರಿನ ಮಡುವು ಏನಾದರೂ ಇರುವ ಪಕ್ಷದಲ್ಲಿ ಆಪತ್ತು ಸಂಭವಿಸುವುದೆಂದು ದುಷ್ಟಬುದ್ಧಿಯು

ಬಹು ಜಾಗರೂಕತೆಯಿಂದ ಗುಹೆಯ ಒಕ್ಕಡೆಯನ್ನು ಒಂದೊಂದು ಹೆಜ್ಜೆಗೂ ಕೈಯನಿಟ್ಟು ಸವರಿಕೊಂಡು ಮುಂದೆ ಹೋಗಲಾರಂಭಿಸಿದನು. ಹೀಗೆ ನಾಲ್ಕಾರು ಹೆಜ್ಜೆಗಳನ್ನಿಟ್ಟು ಪಕ್ಕವನ್ನು ಸವರುವುದಕ್ಕೆ ಕೈಯನ್ನು ಇಟ್ಟ ಕೂಡಲೇ ಶೀತತಟ್ಟಿದಂತಾಗಿ ಹಾವೆಂದು ಹೆದರಿ ಹಿಂಜರಿದುಬಿದ್ದನು. ಹಾವಾಗಿದ್ದರೆ ಬುಸುಗುಟ್ಟುವ ಶಬ್ದವು ಬರುತ್ತಲಿತ್ತು. ಅಂತಹ ಶಬ್ದವು ಯಾವದೂ ಇಲ್ಲದೆ ಪ್ರವಾಹಧ್ವನಿಯು ಮಾತ್ರ ಕೇಳಿಸುತ್ತಿರಲು ದುಷ್ಟಬುದ್ಧಿಯು ಸಮಾಧಾನಚಿತ್ತನಾಗಿ ಮುಟ್ಟಿದ ವಸ್ತುವು ಲೋಹದಂತೆ ತಣ್ಣಗೆ ಇದ್ದಿತಲ್ಲದೆ ಹಾವನ್ನು ಮುಟ್ಟಿದರೆ ತೋರುವ ಶೈತ್ಯವನ್ನು ಉಂಟಾಗಿರಲಿಲ್ಲವೆಂದು ಸ್ವಲ್ಪ ಹೊತ್ತು ಪರಿಗಣಿಸಿ ಧೈರ್ಯವನ್ನು ಅವಲಂಬಿಸಿ ಕೈಚಾಚಿ ಕೈಯಲ್ಲಿ ಹಿಡಿಯಲನುಕೂಲವಾದ ಕಬ್ಬಿಣದ ಪೆಟ್ಟಿಗೆಯೊಂದನ್ನು ತೆಗೆದನು. ಅದರ ಒಂದು ಪಾರ್ಶ್ವದಲ್ಲಿ ಕನ್ನಡಿಯನ್ನಿಟ್ಟು ಕೀಲಿಸಿತ್ತು. ಅದರ ಒಳಗಡೆ ಒಂದು ಕೈದೀವಿಗೆಯು ಇತ್ತು. ಇದಕ್ಕೆ ತಕ್ಕಂತೆ ದೀಪವನ್ನು ಹಚ್ಚುವ ಸಾಮಗ್ರೀಯಗಳು ಇರಬೇಕೆಂದು ಊಹಿಸಿ ಕೈ ಚಾಚಿ ಸವರಲು ಒಂದು ಗೂಡಿನಲ್ಲಿ ಚಕಮುಕಿಕಲ್ಲು, ಹತ್ತಿ, ಎಣ್ಣೆ ಇವು ದೊರಕಿದವು. ಅವುಗಳ ಸಹಾಯದಿಂದ ದೀಪವನ್ನು ಹಚ್ಚಿ ಗೂಡಿನಲ್ಲಿ ನೋಡಲು ಕೆಲವು ಆಹಾರ ಪದಾರ್ಥಗಳಿದ್ದವು. ಅವನು ದೊರಕಿದುದನ್ನೆಲ್ಲಾ ತೆಗೆದುಕೊಂಡು ದೀವಿಗೆಯ ಬೆಳಕಿನಲ್ಲಿ ಮುಂದೆ ನಾಲ್ಕಾರು ಗಜ ದೂರಹೋಗಲು ಅಲ್ಲಿ ಗುಹೆಗೆ ಅಡ್ಡಲಾಗಿ ಬಿರಕುಬಿಟ್ಟು ಎಡಪಾರ್ಶ್ವದಲ್ಲಿ ಎರಡುಗಜಗಳ ಹಿಂದೆ ನೀರು ಧುಮುಕಿ ಬಿದ್ದು ಗುಹಾಪ್ರದೇಶದಲ್ಲಿ ಅಡ್ಡಲಾಗಿ ಆಳವಿಲ್ಲದೆ ಹರಿಯುತ್ತಿತ್ತು. ಆ ನೀರಿನ ದಾರಿಯನ್ನು ಧಾಟಿ ಅವನು ಗುಹಾಂತ್ಯವನ್ನು ಮುಟ್ಟಿನೋಡಲು ಮುಂದಿರುವ ಬಯಲಿನಲ್ಲಿ ಕುದುರೆಯು ಹುಲ್ಲು ಮೇಯುತಿತ್ತು.

ಆ ರಾತ್ರಿ ಕುದುರೆಯನ್ನು ಗುಹೆಯಲ್ಲಿ ತನ್ನಹತ್ತಿರ ಕಟ್ಟಿಹಾಕಿ ಮಲಗಿ ನಿದ್ರೆ ಮಾಡಿದನು. ಬೆಳಗಾದ ಮೇಲೆ ಕುದುರೆಯನ್ನು ಏರಿ ಮುಂದೆ ಹೊರಟನು. ಮಧ್ಯಾಹ್ನ ಸಮಯಕ್ಕೆ ಮತ್ತೊಂದು ಬೆಟ್ಟದ ತಪ್ಪಲನ್ನು ಸೇರಿ ಕುದುರೆಯು ಯಥಾಪ್ರಕಾರ ಹೂಂಕರಿಸಿ ನಿಂತಿತು. ದುಷ್ಟಬದ್ಧಿಯು ಕುದುರೆಯಿಂದ ಇಳಿದನು. ಎದುರಿಗೆ ಯಾವಗುಹೆಯೂ ತೋರಿಬರಲಿಲ್ಲ. ಅದೂ ಒಂದು ತಂಗುವ ಸ್ಥಳವೆಂದು ತಿಳಿದು ಕುದುರೆಯನ್ನು ಅವನು ಮೇಯುವುದಕ್ಕೆ ಬಿಟ್ಟು ಹಿಂದೆ ಗುಹೆಯಲ್ಲಿ ದೊರೆತ ಪದಾರ್ಥಗಳನ್ನು ತಿಂದು ನೀರು

ಕುಡಿದು ತೃಪ್ತನಾಗಿ ವಿಶ್ರಾಂತಿಗೊಂಡನು: ಸ್ವಲ್ಪ ಹೊತ್ತಾಗಲು ಯಥಾ ಪ್ರಕಾರ ಜೀನುಹಾಕಿ ಕುದುರೆಯನ್ನು ಹತ್ತಿದನು. ಅದು ಬೇರೆ ದಾರಿಯಲ್ಲಿ ಹೋಗದೆ ಬಂದ ದಾರಿಯನ್ನು ಹಿಡಿಯಿತು. ಬಂದದಾರಿಯಲ್ಲಿ ಸ್ವಲ್ಪ ದೂರ ಹೋಗಿ ಮುಂದೆ ಬೇರೆದಾರಿಯನ್ನು ಹಿಡಿಯುವುದೇನೋ ಎಂದು ಸುಮಾರು ಎರಡು ಮೈಲಿಗಳ ದೂರ ಹೋದನು. ಆದರೂ ಕುದುರೆಯು ಬೇರೆ ದಾರಿಯಲ್ಲಿ ಹೋಗಲಿಲ್ಲ. ಆದುದರಿಂದ ಈ ಎರಡನೆ ಬೆಟ್ಟದವರೆಗೆ ಮಾತ್ರ ಕುದುರೆಯು ಬರುವ ದಾರಿಯೆಂದು ತಿಳಿದು ಹಿಂತಿರುಗಿ ಬಂದು ಒಂದು ಮರದ ನೆರಳಿನಲ್ಲಿ ಕುದುರೆಯನ್ನು ಕಟ್ಟಿ ಹಸರು ಹುಲ್ಲನ್ನು ಕಿತ್ತು ತಂದು ಹಾಕಿ ದುಷ್ಟ ಬುದ್ಧಿಯು ಅದರ ಹತ್ತಿರದಲ್ಲಿ ಕುಳಿತು ಯೋಚಿಸಲಾರಂಭಿಸಿದನು.

ಹೊತ್ತು ಕಳೆಯುತ್ತಾ ಬಂದಿತು. ಸಾಯಂಕಾಲವಾಯಿತು. ಸೂರ್ಯಾಸ್ತ ಮಾನವೂ ಆಯಿತು. ಕೊನೆಗೆ ನಕ್ಷತ್ರಗಳೂ ಉದ್ಭವಿಸಿದವು. ಕುದುರೆಯು ಕಟ್ಟಿದ್ದ ಸ್ಥಳದಲ್ಲಿಯೇ ಮಲಗಿತು. ಮಧ್ಯರಾತ್ರಿಯೂ ಆಯಿತು. ಚಂದ್ರನು ಹುಟ್ಟಿದನು. ಇಷ್ಟಾದರೂ ದುಷ್ಟಬುದ್ಧಿಯು ಕಣ್ಣು ಬಿಟ್ಟುಕೊಂಡು ಯೋಚ ನೆಯಲ್ಲೇ ಕುಳಿತಿದ್ದನು. ತಂಗಾಳಿಯು ಬೀಸಲಾರಂಬಿಸಿತು. ಸ್ವಲ್ಪ ಹೊತ್ತಿನಲ್ಲಿ ಯೋಚನೆಗಳಿಂದ ಕುದಿದು ತುಂಬಿ ತುಳಕಾಡುತ್ತಿದ್ದ ಅವನ ತಲೆಗೆ ತಂಪುತಟ್ಟಲು ಹಾಗೆಯೇ ಮೊಳಕೈಯನ್ನೂರಿ ಮಲಗಿ ನಿದ್ರಿಸಿದನು.

ಬೆಳಗಾಯಿತು. ಬಿಸಿಲು ಹತ್ತಿತು ಬಿಸಿಲಿನ ಚುರುಕು ತಗುಲಿತು. ಅವನು ಎಚ್ಚರವಾದನು. ಕುದುರೆಗೆ ಆರೈಕೆ ಗೈದನು. ತಾನುಂಡು ತೃಪ್ತ ನಾದನು. ವಿಶ್ರಾಂತಿಗೆ ನೆರಳಿನಲ್ಲಿ ಕುಳಿತನು. ನಿದ್ರೆ ಹತ್ತಿತು ಮಲಗಿದನು.

ಸೂರ್ಯಾಸ್ತಮಾನವಾಗುವುದಕ್ಕೆ ನಾಲ್ಕು ಘಳಿಗೆ ಮುಂಚಿತವಾಗಿ ಎಚ್ಚರವಾಗಲು ಎದ್ದು ಕುಳಿತು ಲಕ್ಷ್ಮೀನಿಲಯದ ಇರವು ಮೊದಲು ತನಗೆ ತಿಳಿದುಬಂದ ಸಂದರ್ಭವನ್ನು ಸ್ಮರಿಸಿಕೊಂಡನು. ಅವನಿಗೆ ತಿಳಿಯ ಬಂದದು ಹೇಗೆಂದರೆ: ಒಂದುದಿನ ದನಕೋಟಿಯು ಶಯನಗೃಹದಲ್ಲಿ ಕುಳಿತು ಪ್ರತಾಪ ಕಂಠೀರವ ಮನೋರಮೆಯರಿಗಾಗಿ ಲಕ್ಷ್ಮೀನಿಲಯದ ಇರವನ್ನು ಅದರ ವರ್ಣನೆಯನ್ನು, ಅದನ್ನು ಪ್ರವೇಶಿಸುವ ವಿಧಾನ ಮುಂತಾದುದನ್ನು ಬರೆ ಯುತ್ತಲಿದ್ದು ನೀರಡಿಕೆ ಯುಂಟಾಗಲು ಬರೆದುದನ್ನು ಮುಚ್ಚಿಡುವುದಕ್ಕೆ ಮರೆತು ನೀರುಕುಡಿಯುವುದಕ್ಕಾಗಿ ಭೋಜನ ಗೃಹಕ್ಕೆ ಹೋದನು. ಆ ಸಮಯದಲ್ಲಿ ಆವುದೋ ಕಾರ್ಯಕ್ಕಾಗಿ ಯಜಮಾನನ ಅಪ್ಪಣೆಯನ್ನು ಅವಸರ

ವಾಗಿ ಪಡೆಯು ಬೇಕಾದ ಆವಶ್ಯವುಂಟಾಗಲು ದುಷ್ಟಬುದ್ಧಿಯು ಬೇಗನೆ ಬಂದು ಧನಕೋಟಿಯ ಶಯನ ಗೃಹವಂ ಹೊಕ್ಕನು. ಅಲ್ಲಿ ಯಜಮಾನನ್ನು ಕಾಣದೆ ದುಷ್ಟನಾದ ಕಾರಣ ದುರ್ಬುದ್ಧಿಯಿಂದ ಬರೆದಿಟ್ಟಿರುವುದನ್ನು ಬಗ್ಗಿ ನೋಡಲು ಮೊದಲನೆ ಪಂಕ್ತಿಯಲ್ಲಿ ಲಕ್ಷ್ಮೀನಿಲಯವೆಂಬ ಪದವು ಮೊದಲು ಅವನ ದೃಷ್ಟಿಗೆ ಬಿದ್ದಿತು. ನಂತರ ಕೌತುಕದಿಂದ ಹಾಗೆಯೇ ಬಗ್ಗಿಕೊಂಡು ಕಾಗದವನ್ನು ಕದಲಿಸದೆ ಓದಿಕೊಳ್ಳಲಾರಂಭಿಸಿದನು. ಓದುತ ಓದುತ ಕೌತುಕವು ಹೆಚ್ಚುತ್ತಬಂದಿತು. ಲಕ್ಷ್ಮೀನಿಲಯದ ವರ್ಣನೆಯನ್ನೆಲ್ಲಾ ಓದಿ ಮುಗಿಸಿ ಅದನ್ನು ಪ್ರವೇಶಿಸುವ ವಿಧಾನವನ್ನು ಇನ್ನೇನು ಓದಬೇಕೆಂದಿರವಷ್ಟ ರಲ್ಲಿ ಧನಕೋಟಿಯು ಬರುತ್ತಿರುವನೆಂಬ ಸೂಚನೆಯನ್ನು ತಿಳಿದು, ಆಗತಾನೆ ಅಲ್ಲಿಗೆ ಬಂದು ಯಜಮಾನನನ್ನು ಕಾಣದೆ ಅಲ್ಲಿಂದ ಹೊರಡುತ್ತಿರುವ ಭಾವ ನೆಯನ್ನು ನಟಿಸಿ, ಬರೆದಿಟ್ಟಿದ್ದ ಕಾಗದವನ್ನು ತಾನು ಓದಿದೆನೆಂಬ ಅನುಮಾ ನವು ಯಜಮಾನನ ಮನಸ್ಸಿನಲ್ಲಿ ಸ್ವಲ್ಪವಾದರೂ ಹುಟ್ಟದಂತೆ ಆಚರಿಸಿ ತನ್ನ ಅವಸರದ ಕಾರ್ಯಕ್ಕೆ ಅಪ್ಪಣೆಯನ್ನು ಪಡೆದು ಹೊರಟುಹೋದನು.

ಅಂದಿನಿಂದಲೂ ಹೇಗಾದರೂ ಪ್ರಯತ್ನಪಟ್ಟು ಲಕ್ಷ್ಮೀನಿಲಯದ ವಿಚಾರವನ್ನು ಆಮೂಲಾಗ್ರವಾಗಿ ಅರಿತನಾದರೆ ಮಹದೈಶ್ವರ್ಯವಂತನಾಗಿ ಇಹಲೋಕದಲ್ಲಿಯೇ ಇಂದ್ರಭೋಗವನ್ನು ಅನುಭವಿಸುವನೆಂಬ ಅತ್ಯಾಸಕ್ತಿ ಯು ಅವನ ಮನಸ್ಸಿನಲ್ಲಿ ನಾಟಿಹೋಯಿತು. ಇದಕ್ಕಾಗಿ ತನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡಲಾರಂಭಿಸಿದನು. ಯಜಮಾನನ ಚಲನೆಗಳನ್ನು ಅವನಿಗೆ ತಿಳಿಯದಂತೆ ಹೊಂಚುಕಾಯುತ್ತಲೂ; ಇತರರಲ್ಲಿ ಅವನು ಸಂಭಾ ಷಿಸುವುದನ್ನು ಹೊರಗಡೆ ಗಮನಿಸದಿರುವನಂತೆ ತೋರ್ಪಡಿಸಿಕೊಂಡು ಅತ್ಯಾದರದಿಂದ ಕಿವಿಗೊಟ್ಟು ಕೇಳುತ್ತಲೂ; ರಾತ್ರಿಕಾಲದಲ್ಲಿ ಯಾರಿಗೂ ತಿಳಿ ಯದಂತೆ ಯಜಮಾನನ ಶಯನಗೃಹದ ಬಳಿಯಲ್ಲಿ ನಿದ್ರೆಕೆಟ್ಟು ಕಳ್ಳನಂತೆ ಅಡಗಿಕೊಂಡಿರುತ್ತಲೂ; ಸಮಯವನ್ನು ಕಾಯುತ್ತಿದ್ದನು. ಹೀಗಿದ್ದರೂ ತನ್ನ ಸೇವಕಾಗ್ರಣಿಯು ಲಕ್ಷ್ಮೀನಿಲಯದ ರಹಸ್ಯವನ್ನು ತಿಳಿದುಕೊಳ್ಳಲು ಕಾಯುತ್ತಿರುವನೆಂಬ ಅನುಮಾನವು ಎಳ್ಳಿನಷ್ಟಾದರೂ ಧನಕೋಟಿಯ ಮನಸ್ಸಿಗೆ ತಟ್ಟಲಿಲ್ಲ.

ಇದಕ್ಕೆ ನೆರವಾಗಿ ದುಷ್ಟಬುದ್ಧಿಯಲ್ಲಿ ಅವನಿಗಿದ್ದ ಪಕ್ಷಪಾತವೂ ಒಂದು ಸೇರಿಕೊಂಡಿತ್ತು. ದುಷ್ಟಬುದ್ಧಿಗೂ ಕೂಡ ತನ್ನ ಯಜಮಾನನಲ್ಲಿ ಪ್ರೇಮ

ವಿತ್ತು ಹೀಗೆ ಪರಸ್ಪರ ಪ್ರೀತಿಯಿರಲು ಕಾರಣವೇನೆಂದರೆ: ಧನಕೋಟಿಯು ಯವ್ವನಸ್ಥನಾಗಿದ್ದ ಕಾಲದಲ್ಲಿ ಅವನಿಗೆ ಕುದುರೆ ಸವಾರಿಯನ್ನು ಕಲಿಸಿಕೊಡುವುದಕ್ಕಾಗಿಯೂ ಸೇವೆಗಾಗಿ ಅವನ ತಂದೆಯಿಂದ ಅಶ್ವಸಾಧನೆಯನ್ನು ಸೇವಕನಾಗಿದ್ದುಕೊಂಡು ಕಲಿತು ಗಟ್ಟಿಗನಾದ ಒಬ್ಬ ಸೇವಕನು ನಿಯಮಿಸಲ್ಪಟ್ಟನು. ಅವನು ಸೇವಕನಾಗಿದ್ದರೂ ಧನಕೋಟಿಯನ್ನು ಎಡಬಿಡದೆ ಆಪ್ತಸ್ನೇಹಿತನಂತೆ ಇದ್ದುಕೊಂಡು ತಾನು ಯಜಮಾನನಲ್ಲಿ ಕಲಿತ ವಿದ್ಯೆಯನ್ನು ಯಜಮಾನನ ಮಗನಿಗೆ ಕಲಿಸಿಕೊಟ್ಟನು. ಆ ಸೇವಕನಿಗೆ ವೃದ್ಧಾಪ್ಯದಲ್ಲಿ ದುಷ್ಟಬುದ್ಧಿಯು ಹುಟ್ಟಿದನು. ಈ ಪಾಪಿಯು ಜನಿಸಿದ ಎರಡುತಿಂಗಳಲ್ಲಿ ಇವನ ತಾಯಿಯು ಪರಲೋಕಗತಳಾದಳು. ಆರುತಿಂಗಳಲ್ಲಿ ತಂದೆಯು ಸ್ವರ್ಗಸ್ಥನಾದನು. ಅವನಿಗೂ ಧನಕೋಟಿಗೂ ಪರಸ್ಪರವಾಗಿ ಬೆಳದಿದ್ದ ಪ್ರೇಮಾತಿಶಯದಿಂದ ಧನಕೋಟಿಯು ಅನಾಥನಾದ ಮಗುವನ್ನು ಆರೈಕೆಗೈಸಿ ತನ್ನ ಭವನದಲ್ಲೇ ಇಟ್ಟುಕೊಂಡು ಸಾಕಿ ಸಲಹಿ ದೊಡ್ಡವನಾದಮೇಲೆ ಭವನದ ಸೇವಕರಿಗೆಲ್ಲಾ ಮೇಲ್ಪಟ್ಟ ಸೇವಕಾಗ್ರಣಿಯಾಗಿ ನೇಮಿಸಿದನು.

ಈ ಕಾರಣಗಳಿಂದಲೇ ಧನಕೋಟಿಗೂ ದುಷ್ಟಬುದ್ಧಿಗೂ ಪರಸ್ಪರ ಪ್ರೇಮವಿರುವಂತಾಯ್ತು ದುಷ್ಟಬುದ್ಧಿಯು ಎಷ್ಟೇ ದುಷ್ಟನಾದರೂ ಯಜಮಾನನಿಗೆ ಕೇಡೆಣಿಸುವುದಕ್ಕೆ ಮಾತ್ರ ಹಿಂಜರಿಯುತ್ತಿದ್ದನು. ಇದಕ್ಕೆ ದುಷ್ಟಾಂತರವೇನೆಂದರೆ: ಹಿಂದೆ ಕಥಾಪ್ರಾರಂಭದಲ್ಲಿ ಅವನು ಕರಾಳನನ್ನು ಕಂಡು ಮಾತನಾಡುತಿದ್ದ ಸಂದರ್ಭದಲ್ಲಿ ಧದಕೋಟಿಯನ್ನು ಸೆರೆಹಿಡಿದು ನಿರ್ಭಂದಪಡಿಸಿದರೆ ರಹಸ್ಯವನ್ನು ಹೇಳುವೆನೆಂದ ಕರಾಳನ ಅಭಿಪ್ರಾಯವನ್ನು ಕಾರಣಾಂತರವಾಗಿ ಮುರಿದುಬಿಟ್ಟನು. ಅಕಸ್ಮಿಕವಾಗಿ ಧನಕೋಟಿಯು ಕೊಲ್ಲಲ್ಪಟ್ಟ ಮರುಕ್ಷಣವೇ ದುಃಖವು ದುಷ್ಟಬುದ್ಧಿಯ ಮನಸ್ಸನ್ನೆಲ್ಲಾ ತುಂಬಿ ತುಳಕಲು ಯಾವುದೊಂದನ್ನೂ ಲಕ್ಷಿಸದೆ ಶವದಮೇಲೆ ಬಿದ್ದು ಹೊರಳಿ ಶೋಕಿಸಿದನು. ಇದರಿಂದಲೆ ಅಲ್ಲವೆ ಕಾಲವಿಳಂಬವಾಗಿ ಅವನು ಪ್ರತಾಪ ಕಂಠೀರವಾಧಿಗಳ ಕೈಯಲ್ಲಿ ಸಿಕ್ಕಿಬಿದ್ದುದು.

ಧನಕೋಟಿಗೆ ಕೇಡಣಿಸಲು ಅವನಿಗೆ ಮನಸ್ಸಿರಲಿಲ್ಲವೆಂದು ತಿಳಿಸಿದವಷ್ಟೆ ಹಾಗಾದರೆ ಬರೆದಿಟ್ಟಿದ್ದ ಕಾಗದಗಳನ್ನು ಅಪಹರಿಸುವದಕ್ಕಲ್ಲವೆ ಅವನು ಸಮಯುವನ್ನು ಕಾಯುತ್ತಿದ್ದುದು? ಹಾಗೆ ಅಪಹರಿಸಿದ್ದ ಪಕ್ಷದಲ್ಲಿ ಅದರಿಂದ ಧನಕೋಟಿಗೆಮನೋವ್ಯಾಕುಲವು ಉಂಟಾಗುವದಿಲ್ಲವೆ? ಇದಕ್ಕೆ ತಾನು

ಕಾರಣನಾಗುವದರಿಂದ ದುಷ್ಟಬುದ್ಧಿಯು ಕೆಡುಕನ್ನುಂಟುಮಾಡಿದಂತಾಗಲಿಲ್ಲವೆ? ಎಂಬೀಪ್ರಶ್ನೆಗಳು ಬರಬಹುದು. ಆದರೆ ದುಷ್ಟಬುದ್ಧಿಯ ದುರ್ಗುಣಗಳಲ್ಲಿ ಆತ್ಮಸಂರಕ್ಷಣೆಯಿಂದ ಕೂಡಿದ ಸ್ವಾರ್ಥತೆಯು ಮುಖ್ಯವಾದದ್ದು. ಆದ್ದರಿಂದ ಆಕಾಗದವನ್ನು ಯಜಮಾನನಿಗೆ ತಿಳಿಯದಂತೆ ಅಪಹರಿಸಿ ಅದರಂತೆ ಒಂದು ಪ್ರತಿಯನ್ನು ಬರೆದಿಟ್ಟುಕೊಂಡು ಕಳವುಮಾಡಿದ ಕಾಗದವನ್ನು ಮೊದಲಿದ್ದ ಸ್ಥಾನದಲ್ಲಿ ಇರಿಸಿಬಿಡಬೇಕೆಂದು ಯೋಚಿಸಿದ್ದನು.

ಹೀಗಿರಲು ಒಂದುದಿನ ಧನಕೋಟಿಯು ದುಷ್ಟಬುದ್ಧಿಯನ್ನು ಪ್ರತ್ಯೇಕವಾಗಿ ಕರೆದು " ಈಗ ನಿನಗೊಂದು ರಹಸ್ಯವಾದ ಕೆಲಸವನ್ನು ನೇಮಿಸಬೇಕೆಂದಿರುವೆನು. ಇದು ಬಹುನಂಬಿಕೆಯಾದದು. ನಾನು, ನೀನು, ಇನ್ನಿಬ್ಬರನ್ನು ಬಿಟ್ಟು ಮತ್ತ್ಯಾರಿಗೂ ತಿಳಿಯಬಾರದು." ಎಂದು ಹೇಳುತ್ತಾ ದುಷ್ಟಬುದ್ಧಿಯ ಮುಖಭಾವವನ್ನು ಪರೀಕ್ಷಿಸುತ್ತಿರಲು ಅವನು ಯಜಮಾನನ ಇಂಗಿತವನ್ನರಿತು " ಅಯ್ಯ ! ತಾಯಿತಂದೆಗಳ ಮುಖವನ್ನು ನಾನುಕಾಣೆನು. ನನಗೆ ತಂದೆಯೂ ತಾಯಿಯೂ ನೀವೆ ಎಂದು ತಿಳಿದಿರುವೆನು. ಬಾಲ್ಯದಿಂದಲೂ ಸಾಕಿದ ನಿಮಗೆ ನನ್ನ ಗುಣದೋಷಗಳು ತಿಳಿದಿರುವುದಿಲ್ಲವೆ? ನನಿಗೆ ಬುದ್ಧಿ ಬಂದಾರಭ್ಯ ಎಂದಾದರೂ ನಿಮಗೆ ದ್ರೋಹವನ್ನು ಮನಸ್ಸಿನಲ್ಲಾದರೂ ಭಾವಿಸಿದುದನ್ನು ನಾನು ಕಂಡರಿಯೆನು. ನನ್ನ ಕೃತ್ಯಗಳಲ್ಲಿ ಯಾವುದಾದರೂ ದೋಷವನ್ನು ಕಂಡಿರುವಿರಾ ? ಇದಕ್ಕೆ ಹಿಂದೆ ಎಂಥಹ ಮುಖ್ಯವಾದ ಕೆಲಸಗಳನ್ನೂ ಕೂಡ ನನ್ನಿಂದಲೇ ಮಾಡಿಸಿರುವಿರಿ. ಹೀಗಿರುವಲ್ಲಿ ನೀವು ನನ್ನನ್ನು ಪರೀಕ್ಷಿಸುವುದೆಂದರೆ ನನ್ನ ಮನಸ್ಸಿಗೆ ಆಶ್ಚರ್ಯವೂ ಆಯಾಸವೂ ಸಹ ಉಂಟಾಗಿದೆ " ಎಂದು ತಾನು ಬಹು ಯೋಗ್ಯನೆಂದು ಆ ಮುದುಕನನ್ನು ಮರುಳುಗೊಳಿಸಲು ; ಅವನು " ಈ ಕೆಲಸವು ಇಷ್ಟುದಿನ ನೀನು ನಡಿಸಿದಂಥಹಕೆಲಸವಲ್ಲ. ಆದಕಾರಣ ಆ ರೀತಿ ಹೇಳಿದೆನು. ಮನಸ್ಸಿನಲ್ಲಿ ಆಯಾಸಪಡಬೇಡ. ಸಮಾಧಾನ ಚಿತ್ತನಾಗು." ಎಂದು ಹೇಳಿ ಎಲ್ಲಾ ವಿಧದಲ್ಲಿಯೂ ಒಂದೇಸಮನಾದ ಎರಡು ಉಂಗುರಗಳನ್ನು, ವಿಳಾಸಗಳನ್ನು ಬರೆದಿರುವ ಕಾಗದಗಳನ್ನು ಕವಚದಿಂದ ತೆಗೆದು ದುಷ್ಟಬುದ್ಧಿಯ ಕೈಯಲ್ಲಿ ಕೊಟ್ಟು ಅವನನ್ನು ಕರೆದು ಪಿಸುಮಾತಿನಲ್ಲಿ " ಈ ದಿನ ಮಧ್ಯರಾತ್ರಿಯಲ್ಲಿ ನೀನು ಅಶ್ವಾರೂಢನಾಗಿ ಇಲ್ಲಿಂದ ಹೊರಟು ರಾಧಾಪುರವನ್ನು ಸೇರಿ ನಿನ್ನ ಯುಕ್ತಿ ಸಾಹಸಗಳನ್ನು ಸಮಯಬಂದರೆ ಧನವನ್ನೂ ವ್ಯಯಮಾಡಿ ಅರಸನನ್ನು

ಏಕಾಂಗಿಯಾಗಿರುವ ಸಮಯದಲ್ಲಿ ಕಂಡು ಒಂದು ಉಂಗುರವನ್ನು ಮಾತ್ರ ಕೊಟ್ಟು ನನ್ನ ಹೆಸರು ಪ್ರಸಿದ್ಧಿಯನ್ನು ಆತನಲ್ಲಿ ವರ್ಣಿಸಿ ಹೇಳಿ ಆತನ ವಿಳಾಸಕ್ಕೆ ಇರುವ ಕಾಗದವನ್ನು ಕೊಟ್ಟು ಮಹತ್ತರವಾಗಿ ಮುಖ್ಯವಾದ ಒಂದುಕಾರ್ಯಕ್ಕಾಗಿ ಆತನುಗೋಪ್ಯವಾಗಿ ಹೊರಟು ಇಲ್ಲಿಗೆ ಬಂದು ನನ್ನನ್ನು ಕಾಣಬೇಕೆಂಬ ಸಂಗತಿಯನ್ನು ತಿಳಿಸಿ, ಬರುವಂತೆ ಒಡಂಬಡಿಸಿ, ಅಲ್ಲಿಂದ ನೀನು ಮುಂದೆ ಪ್ರಯಾಣಹೊರಟು ಕೇರಳದೇಶವನ್ನು ಸೇರಿ ಕೇರಳಾಧಿಪಳಾದ ಮನೋರಮೆಯಲ್ಲಿಯೂ ಇದೇರೀತಿಹೇಳಿ ಕಾರ್ಯನಿರ್ವಾಹ ಮಾಡಿಕೊಂಡು ಬರುವನಾಗು. ಈ ಸಂದರ್ಭದಲ್ಲಿ ಒಬ್ಬರವಿಷಯವನ್ನು ಮತ್ತೊಬ್ಬರಿಗೆ ಕಿಂಚಿತ್ತಾದರೂ ತಿಳಿಸಬೇಡ. ಬಹುಜಾಗರೂಕತೆಯಿಂದ ನಡಿಸಬೇಕು. ನೀನು ಬಂದನಂತರ ನಿನಗೆ ವಿವಾಹವನ್ನು ಮಾಡಿಸಿ ಬದುಕುವುದಕ್ಕೆ ಬಂಡವಾಳವನ್ನು ಕೊಡುವೆನು." ಎಂದು ಹೇಳಿ ಕಳುಹಿಸಿದನು.

ದುಷ್ಟಬುದ್ಧಿಯು ಕಳಿಂಗಪಟ್ಟಣವನ್ನು ಬಿಟ್ಟು ಹೊರಟು ಮಾರ್ಗಮಧ್ಯದಲ್ಲಿ ಒಂದುಹಳ್ಳಿಯಲ್ಲಿ ಇಳಿದುಕೊಂಡು ಉಪಾಯದಿಂದ ಆ ಕಾಗದಗಳನ್ನು ಬಿಚ್ಚಿನೋಡಿದನು. ಪ್ರತಾಪ ಕಂಠೀರವನಿಗೆಂದು ಇದ್ದ ಕಾಗದದಲ್ಲಿ ಅವನ ಪೂರ್ವ ಚರಿತ್ರೆಯನ್ನು ಕಾಗದದಲ್ಲಿ ಬರೆದು ತಿಳಿಸಬಾರದಂಥಹ ಕೆಲವು ಗೂಢವಾದ ವಿಷಯಗಳನ್ನು ಹೊರಟುಬಂದರೆ ಎದುರಿನಲ್ಲಿ ಧನಕೋಟಿಯು ತಿಳಿಯಪಡಿಸುವನೆಂಬ ಸಂಗತಿಯು; ಮನೋರಮೆಗೆ ಎಂದು ಇದ್ದ ಕಾಗದದಲ್ಲಿ ಅವಳ ಪಿತಾಮಹನಾದ ವಜ್ರಮಕುಟನಿಗೆ ಧನಕೋಟಿಯು ಆಪ್ತಸ್ನೇಹಿತನಾಗಿದ್ದನೆಂದು ಎದುರಿನಲ್ಲಿ ಬಂದರೆ ಮಹದೈಶ್ವರ್ಯ ಸಂಪತ್ಸಮೃದ್ಧಿಯಿಂದ ಕೂಡಿರುವುದಾಗಿಯೂ ಮನುಷ್ಯ ಪ್ರಯತ್ನಕ್ಕೆ ಭೇದಿಸಲಸಾಧ್ಯವಾದುದಾಗಿಯೂ ಇರುವ ಲಕ್ಷ್ಮೀನಿಲಯವೆಂಬ ಸ್ಥಳವನ್ನು ಪ್ರವೇಶಿಸುವ ರಹಸ್ಯಮಾರ್ಗವನ್ನು ವಜ್ರಮಕುಟನ ಇಚ್ಛಾನುಸಾರವಾಗಿ ಅವಳಿಗೆ ತಿಳಿಯಪಡಿಸುವನೆಂಬ ಸಂಗತಿಯು; ಧನಕೋಟಿಯೆಂಬ ಸೂಜಿಕಾಂತದ ಕಲ್ಲಿಗೆ ಸೂಜಿಗಳೆಂಬ ಅವರಿಬ್ಬರನ್ನು ಆಕರ್ಷಿಸುವಂತೆ ಇದ್ದವು.

ಈ ಸಂಗತಿಗಳನ್ನು ದುಷ್ಟಬುದ್ಧಿಯು ಓದಿ ಕಾಗದಗಳನ್ನು ಮೊದಲಿದ್ದಂತೆ ಸರಿಮಾಡಿ ಇಟ್ಟುಕೊಂಡು ಮನಸ್ಸಿನಲ್ಲಿ, "ಈ ಬರೆದಿರುವ ಸಂಗತಿಗಳನ್ನು ನೋಡಿದರೆ ಮನೋರಮೆಯು ಬಂದ ಒಡನೆಯೇ ಲಕ್ಷ್ಮೀನಿಲಯದ ಸಂಬಂಧವಾದ ಕಾಗದವನ್ನು ಆಯ್ಯಸು ಅವಳಲ್ಲಿ ಒಪ್ಪಿಸುವನು. ಅದನ್ನು

ಅವಳು ತನ್ನ ಊರಿಗೆ ತೆಗೆದುಕೊಂಡು ಹೋಗವಳು. ಇದರಿಂದ ನನಗೆ ಆ ರಹಸ್ಯವು ತಿಳಿಯುವ ಸಂಬಂಧವು ತಪ್ಪಿಹೋಗುವುದು.'' ಎಂದು ಸ್ವಲ್ಪ ಹೊತ್ತು ಯೋಚಿಸಿ, ಆವುದೋ ಒಂದು ಅಭಿಪ್ರಾಯವು ಹೊಳೆಯಲು "ಇರಲಿ. ಇದಕ್ಕೆ ಹೀಗೆಮಾಡುವೆನು." ಎಂದುಹೇಳಿಕೊಂಡು ಮುಂದಕ್ಕೆ ಪ್ರಯಾಣಬೆಳಸಿದನು.

ಮೂರನೇ ದಿನ ಬೆಳಿಗ್ಗೆ ನಾಲ್ಕಾರು ಘಳಿಗೆ ಹೊತ್ತಿನಲ್ಲಿ ಕರಾಳನಿರುವ ಸ್ಥಳವನ್ನು ಸೇರಿ ಅವನ ಆತಿಥ್ಯದಲ್ಲಿದ್ದನು.

ಇದಕ್ಕೆ ನಾಲ್ಕೈದುವರುಷಗಳಹಿಂದೆ ಅವುದೊ ಒಂದು ಸಂದರ್ಭದಲ್ಲಿ ದುಷ್ಟಬುದ್ಧಿಗೂ ಕರಾಳನಿಗೂ ಸ್ನೇಹವುಂಟಾಗಿ ಬೆಳೆದು ಬಂದಿತು. ಕರಾಳನು ಆಗಾಗ್ಯೆ ವೇಷಧಾರಿಯಾಗಿ ಕಳಿಂಗಪಟ್ಟಣಕ್ಕೆ ಬಂದು ದೇಶಾಂತರದಿಂದ ವ್ಯಾಪಾರಕ್ಕಾಗಿ ಬಂದು ಹೋಗುವ ವರ್ತಕರ ಸುಳುವು ಮುಂತಾದುದನ್ನು ತಿಳಿದುಕೊಂಡುಹೋಗಿ ಅವರು ಪ್ರಯಾಣಮಾಡುವ ಮಾರ್ಗದಲ್ಲಿ ಅಡಗಿದ್ದು ಕೊಳ್ಳೇ ಹೊಡೆಯುತ್ತಿದ್ದನು. ಧನಕೋಟಿಯು ಬಹುದೊಡ್ಡ ವ್ಯಾಪಾರಿ ಯಾದುದರಿಂದ ಅವನಲ್ಲಿಗೆ ಬಂದುಹೋಗುವ ಅನೇಕವ್ಯಾಪಾರಿಗಳ ವಿಷಯ ವನ್ನು ತಿಳಿಯುವುದಕ್ಕೆ ದುಷ್ಟಬುದ್ಧಿಯಿಂದ ಕರಾಳನಿಗೆ ಬಹಳ ಸಹಾಯ ವಾಗಿತ್ತು. ಇದಲ್ಲದೆ ದುಷ್ಟಬುದ್ಧಿಯು ಯಜಮಾನನ ವ್ಯಾಪಾರ ಕಾರ್ಯ ಗಳಿಗಾಗಿ ದೇಶಾಂತರಗಳಿಗೆ ಹೋಗುವಾಗಲು ಹಿಂತಿರುಗಿ ಬರುವಾಗಲೂ ಕರಾಳನ ಬೆಟ್ಟದ ಭವನದಲ್ಲಿ ಒಂದೊಂದು ದಿನ ತಂಗಿ ದೇಶಾಂತರಗಳ ವ್ಯಾಪಾರಿಗಳ ಚಲನಾಚಲನೆ ಮುಂತಾದುದನ್ನು ತಿಳಿದುಕೊಂಡು ಕರಾಳನಿಗೆ ಆಗಾಗ್ಯೆ ದುರ್ಬೋಧನೆಯನ್ನು ಮಾಡುತ್ತಿದ್ದನು.

ಈಗ, ಭೋಜನಾನಂತರ ದುಷ್ಟಬುದ್ಧಿಯು ಕರಾಳನೊಡನೆ ಪ್ರತ್ಯೇ ಕವಾಗಿ ಕುಳಿತು ಲಕ್ಷ್ಮೀನಿಲಯದ ಪ್ರಸ್ತಾಪವನ್ನು ತೆಗೆದು ಆ ನಿಲಯದ ವರ್ಣನೆ ಮೊದಲಾದುದನ್ನು ಅದರ ಇರವು ತನಗೆ ತಿಳಿದುಬಂದ ಬಗೆಯನ್ನು ಹೇಳಿ ಕರಾಳನಿಗೆ ಆಶೆಯನ್ನು ಹುಟ್ಟಿಸಿ, "ಎಲೈಯ್ಯಾ ಮಿತ್ರನೆ, ನೀನು ಇಷ್ಟಪಟ್ಟರೆ ಇಂಥಹ ಅಸದೃಶ್ಯವಾದ ಐಶ್ವರ್ಯವು ನಿನ್ನ ವಶವಾಗುವುದು." ಎನಲು ಕರಾಳನು ನಕ್ಕು, "ಇದೇನು ಹೀಗೆ ಹೇಳುವೆ ? ಐಶ್ವರ್ಯವು ಪ್ರಾಪ್ತಿ ಸುವುದಾದರೆ ವಿರಕ್ತನಿಗಲ್ಲದೆ ನನ್ನಂಥಹ ಸಂಸಾರಿಗೆ ಇಷ್ಟವಿರುವುದಿಲ್ಲವೆಂದ ರೇನು ?. ಎಂದು ಕೇಳಿದನು. ಅದಕ್ಕೆ ದುಷ್ಟಬುದ್ಧಿಯು, "ಕಷ್ಟವಿಲ್ಲದೆ

ಸುಖವುಂಟಾಗುವುದಿಲ್ಲನೆಂದು ನಿನಗೆ ತಿಳಿದಿದೆ. ಆದಕಾರಣ ಈಗ ನಾನು ಹೇಳುವ ರೀತಿ ಸ್ವಲ್ಪ ಕಷ್ಟವನ್ನು ವಹಿಸಿ ಕಾರ್ಯನಿರ್ವಾಹವನ್ನು ಮಾಡುವೆಯಾದರೆ ನೀನೂ, ನಿನ್ನ ಪತ್ನಿಯೂ, ನಿನ್ನ ಸ್ನೇಹಿತನಾದ ನಾನೂ ಕೂಡ ಇಹಲೋಕದಲ್ಲಿಯೇ ಇಂದ್ರಭೋಗವನ್ನು ಪಡೆಯುವುದಕ್ಕೆ ಮಾರ್ಗವಾಗುವುದು" ಎಂದು ಕರಾಳನಲ್ಲಿ ಮೊಳಕೆದೋರಿದ್ದ ಆಶೆಯನ್ನು ಮರವಾಗಿ ಬೆಳಸಿಬಿಡಲು ಕರಾಳನು, "ನನ್ನ ಯುಕ್ತಿ, ಶಕ್ತಿ, ಸಾಮರ್ಥ್ಯಗಳನ್ನೂ ನನ್ನ ಆಳ್ವಿಕೆಯಲ್ಲಿ ಎಷ್ಟುಮಂದಿ ಕಿರಾತರು ಇರುವರೆಂಬುದು ಮೊದಲಾದ ನನ್ನ ವಿಷಯವೆಲ್ಲಾ ನಿನಗೆ ಚೆನ್ನಾಗಿ ತಿಳಿದಿರುವುದು. ಮನುಷ್ಯಪ್ರಯತ್ನಕ್ಕೆ ಮೀರದ ಎಂಥಹ ಕಷ್ಟಕಾರ್ಯವನ್ನಾದರೂ ನೆರವೇರಿಸುವೆನು. ಅದೇನು ? ಹೇಳು" ಎಂದು ಕೇಳಲು ತಾನು ಹೊರಟ ಕಾರ್ಯವನ್ನು ಸವಿಸ್ತಾರವಾಗಿ ಹೇಳಿ ತಾನು ತಂದ ಕಾಗದಗಳನ್ನು ಹಳ್ಳಿಯಲ್ಲಿ ಬಿಚ್ಚಿದಂತೆ ಬಿಚ್ಚಿತೋರಿಸಿ ಯಥಾಪ್ರಕಾರವಾಗಿ ಸರಿಮಾಡಿ ಇಟ್ಟುಕೊಂಡು, "ಈ ಸಂಗತಿಗಳಿಂದಲೂ, ನನ್ನ ಯಜಮಾನನ ಬಾಯಿಂದ ಹೊರಟ ಕೆಲವು ಮಾತುಗಳಿಂದಲೂ, ಈ ಉಂಗುರಗಳ ವಿಷಯದಿಂದಲೂ, ಆತನು ಪ್ರತಾಪಕಂಠೀರವನನ್ನಾದರೂ ಮನೋರಮೆಯುಳನ್ನಾದರೂ ಇದು ವರಿಗೂ ನೋಡಿ ಗುರುತರಿಯನೆಂದು ಚೆನ್ನಾಗಿ ತಿಳಿಯಬರುವುದು. ನೀನೂ, ನಿನ್ನ ಪತ್ನಿಯೂ ವಯಸ್ಸಿನಲ್ಲಿ ಪ್ರತಾಪಕಂಠೀರವ ಮನೋರಮೆಯರಿಗೆ ಸರಿಸುಮಾರು ಸಮನಾಗಿರುವಿರಿ. ಅವರಿಬ್ಬರಿಗೆ ಬದಲಾಗಿ ನೀವಿಬ್ಬರು ಹೋಗಿ ಅವರ ಹೆಸರನ್ನು ಹೇಳಿ ನನ್ನ ಯಜಮಾನನ್ನು ಕಾಣಿಸಿಕೊಂಡು ಬಹು ಜಾಗರೂಕತೆಯಿಂದ ಅನುಮಾನ ತೋರದಂತೆ ನಡೆದುಕೊಳ್ಳುವಿರಾದರೆ ಈ ರಹಸ್ಯವು ನಿಮ್ಮ ಪಾಲಾಗುವುದು. ನಾನೂ ಭವನದಲ್ಲಿದ್ದುಕೊಂಡು ನಿಮಗೆ ಸಹಾಯಕನಾಗುವೆನು." ಎಂದು ಹೇಳಿ ಅವನ ಮಾತನ್ನು ಮುಗಿಸುವುದಕ್ಕೆ ಮುಂಚಿತವಾಗಿ ಕರಾಳನು, "ಇದೊಂದು ಬಹು ಕಷ್ಟವಾದ ಕೆಲಸವೋ ? ನೀನು ತಂದಿರುವ ಉಂಗುರಗಳನ್ನು ಕಾಗದಗಳನ್ನು ನನ್ನಕೈಯಲ್ಲಿ ಕೊಡು. ಈ ತಂತ್ರವನ್ನು ಆಯಾಸವಿಲ್ಲದಂತೆ ಜರಗಿಸುವೆನು. ಎಂದು ಬಹುಬರವಸೆಯಿಂದ ಹೇಳಲು; ದುಷ್ಟಬುದ್ಧಿಯು, "ಇಷ್ಟು ಸುಲಭವೆಂದು ತಿಳಿದುಕೊಂಡಿರುವಿಯೋ ? ನೀವಿಬ್ಬರೂ ಯಜಮಾನನ ಬವನದಲ್ಲಿರುವ ಕಾಲದಲ್ಲಿ ದೇಶಾಂತರ ವ್ಯಾಪಾರಿಗಳಿಂದ ಪ್ರತಾಪಕಂಠೀರವನೂ ಮನೋರಮೆಯು

ಅವರವರ ರಾಜ್ಯಗಳಲ್ಲಿ ಇರುವರೆಂಬ ಸಂಗತಿಯನ್ನು ಆತನು ತಿಳಿದು ನಿಮ್ಮ ಜೊತೆಯಲ್ಲಿ ನಾನೂ ಸಿಕ್ಕಿಬೀಳುವ ಸಂಗತಿಯು ಬಂದರೆ ನಾವು ತಪ್ಪಿಸಿಕೊಳ್ಳುವುದಕ್ಕೆ ಅದೀತೆ? ಆದಕಾರಣ ಈ ಉಂಗುರಗಳನ್ನು ಮತ್ತು ಕಾಗದಗಳನ್ನು ಅವರಿಬ್ಬರಿಗೂ ಸಲ್ಲಿಸಿಬಿಟ್ಟು ನೀನಿರುವ ಪ್ರದೇಶದ ದಾರಿಯನ್ನೇ ಕಳಿಂಗಪಟ್ಟಣವನ್ನು ಸೇರುವುದಕ್ಕೆ ಮಾರ್ಗವೆಂದು ಹೇಳಿ ಬರುವೆನು. ಅವರಿಬ್ಬರು ಒಬ್ಬರನ್ನರಿಯದೆ ಒಬ್ಬರು ಪ್ರತ್ಯೇಕವಾಗಿ ಉಂಗುರಗಳನ್ನು ಸಂಗಡ ತೆಗೆದುಕೊಂಡು ಬರುವರು. ಮಾರ್ಗಮಧ್ಯದಲ್ಲಿ ಅವರನ್ನು ಹಿಡಿದು ಉಂಗುರಗಳನ್ನು ಕಸುಗೊಂಡು ನಿನ್ನ ಭವನದಲ್ಲಿ ಸೆರೆಹಾಕಿ ಮುಂದಲ ಕೆಲಸವನ್ನು ನಡೆಸಿದರೆ ಅಭ್ಯಂತರವಿಲ್ಲದೆ ನೆರವೇರುವುದು" ಎಂದು ಹೇಳಿದನು. ನಂತರ ಸ್ವಲ್ಪ ಹೊತ್ತಿನವರೆಗೂ ಈ ತಂತ್ರಕ್ಕೆ ಆಗಬೇಕಾದ ಸಾಧನಸಂಪತ್ತಿಯ ವಿಷಯವಾಗಿ ಸ್ನೇಹಿತರಿಬ್ಬರು ಚರ್ಚಿಸಿ, ದುಷ್ಟಬುದ್ಧಿಗೋಸ್ಕರ ಅಣಿಮಾಡಿದ್ದ ಶಯನಗೃಹಕ್ಕೆ ಅವನನ್ನು ಕರಾಳನು ಕರೆದುಕೊಂಡುಹೋಗಿ ಬಿಟ್ಟು ಬಂದು ತನ್ನ ಶಯನಗಾರವನ್ನು ಹೊಕ್ಕು ನಡೆದ ಸಂಗತಿಗಳನ್ನೆಲ್ಲಾ ಶುಕವಾಣಿಗೆ ತಿಳಿಸಿ ಸುಖಸಂತೋಷಾತಿಶಯದಿಂದ ಕೂಡಿದ ಆ ರಾತ್ರಿಯನ್ನು ಕಳೆದು ಮಾರನೇ ದಿನ ಬೆಳಿಗ್ಗೆ ದುಷ್ಟಬುದ್ಧಿಯನ್ನು ಆದರಪೂರ್ವಕವಾಗಿ ಕಳುಹಿಸಿ ಕೊಟ್ಟನು.

ಇತ್ತ ದುಷ್ಟಬುದ್ಧಿಯು ಲಕ್ಷ್ಮೀನಿಲಯದ ಸಮೀಪದಲ್ಲಿ ಬಿಟ್ಟು ಬಂದೆವಷ್ಟೆ. ಹಿಂತಿರುಗಿ ಅವನಲ್ಲಿಗೆ ಹೋಗುವ.

ಹಿಂದೆ ಧನಕೋಟಿಯು ಶಯನಗೃಹವನ್ನು ಹೊಕ್ಕು ಯಜಮಾನನನ್ನು ಕಾಣದೆ ಅಲ್ಲಿ ಬರೆದಿಟ್ಟಿದ್ದ ಲಕ್ಷ್ಮೀನಿಲಯದ ಸಂಬಂಧವಾದ ಕಾಗದವನ್ನು ಬಗ್ಗಿನಿಂತು ಓದಿಕೊಂಡ ವರ್ಣನೆ ಮೊದಲಾದುದನ್ನು ಈ ಸಮಯದಲ್ಲಿ ಅವನ ಸ್ಮರಣಾಶಕ್ತಿಯನ್ನೆಲ್ಲಾ ಪ್ರಯೋಗಿಸಿ ಮನಸ್ಸಿಗೆ ತಂದುಕೊಳ್ಳುತ್ತಿದ್ದನು. ಕುದುರೆಯ ಸಹಾಯದ್ದಿಂದ ಅವನು ಇದುವರೆಗೂ ನೋಡಿಕೊಂಡು ಬಂದ ಮಾರ್ಗದ ಕುರುಹು ಹೊರತು ಮಿಕ್ಕ ಕಾಡಿನ ವರ್ಣನೆಯನ್ನೆಲ್ಲಾ ಓದಿದುದಕ್ಕೆ ಸರಿಯಾಗಿತ್ತು. ಅದುದರಿಂದ ಇದುವರೆಗೂ ಬಂದ ದಾರಿಯು ಆ ನಿಲಯದ ಸಮೀಪವನ್ನು ಸಾರುವ ಮಾರ್ಗವೆಂಬುದರಲ್ಲಿ ಯಾವ ಸಂಶಯವೂ ತೋರಬರಲಿಲ್ಲ. ಕೊನೆಗೆ ಆ ಶಯನಗೃಹವನ್ನು ಬಿಟ್ಟುಬರುವ ಸಮಯದಲ್ಲಿ ಅವನ ದೃಷ್ಟಿಗೆ ಬಿದ್ದ ಆ ಕಾಗದದ ಕೊನೆಯಪಜ್ತಿಯನ್ನು ಈ ಸಮಯ

ದಲ್ಲಿ ಬಹು ಕಷ್ಟಪಟ್ಟು ಸ್ಮರಣೆಗೆ ತಂದುಕೊಂಡನು. ಆ ಪಜ್ಞಿಯು ' ಸ್ವಲ್ಪ ದೂರದಲ್ಲಿ ಬೆಟ್ಟದಪಕ್ಕವನ್ನು ಅನುಸರಿಸಿ ತ್ರಿಕೋಣದಕಲ್ಲು ಮಧ್ಯದಲ್ಲಿ ಹೂತಿರುವ ಪೊದ ' ಎಂದಿತ್ತು ಇದಕ್ಕೆ ' ಮೈ ' ಎಂಬ ಅಕ್ಷರವನ್ನು ಮೊದ ನಲ್ಲಿಯೂ ; ' ರು ' ಎಂಬದನ್ನು ಕೊನೆಯಲ್ಲಿಯೂ ಸೇರಿಸಿ. ಕವಚದಲ್ಲಿದ್ದ ಕಾಗದವನ್ನು ತೆಗೆದು ಹಸುರೆಲೆಗಳ ರಸದಿಂದ ಆಪಜ್ಞಿಯನ್ನು ಬರೆದಿಟ್ಟು ಕೊಂಡು ಆ ಸ್ಥಳದಿಂದ ಒಂದುಸಲ ಉತ್ತರಕ್ಕೆ ಎರಡು ಮೈಲಿ, ದಕ್ಷಿಣಕ್ಕೆ ಎರಡು ಮೈಲಿ ಮತ್ತೊಂದುಸಲ ಮೂರು ಮೂರು ಮೈಲಿಯ ಪ್ರಕಾರ ಒಂದೊಂದುಸಲ ಒಂದೊಂದು ದಿಕ್ಕಿಗೆ ಒಂದೊಂದು ಮೈಲಿಯನ್ನು ಹೆಚ್ಚಿಸಿ ಆ ಪೊದರನ್ನು ಹುಡುಕುತ್ತಲಿದ್ದನು.

ಆ ಬೆಟ್ಟವನ್ನು ಸೇರಿದ ಎರಡನೇದಿನ ಸಾಯಂಕಾಲ ಸೂರ್ಯಾಸ್ತ ಮಾನವಾಗುವ ಸಮಯದಲ್ಲಿ ಆ ಸ್ಥಳದಿಂದ ದಕ್ಷಿಣಕ್ಕೆ ಎಂಟು ಮೈಲಿದೂರ ದಲ್ಲಿ ತ್ರಿಕೋಣದ ಕಲ್ಲನ್ನುಳ್ಳ ಪೊದರು ಸಿಕ್ಕಿತು. ಹಾವು ಚೇಳು ಮುಂತಾದ ದುಷ್ಟಪ್ರಾಣಿಗಳಿರುವುದೇನೋ ಎಂದು ಒಂದು ಮರದಕೊಂಬೆಯನ್ನು ಕಿತ್ತು ಕೊಂಡು ಆ ಪೊದರಿನ ಸುತ್ತಲೂ ತಟ್ಟಿ ಜಾಗರೂಕತೆಯಿಂದ ಗಿಡಗಳನ್ನು ತಳ್ಳಿಕೊಂಡು ಒಳಹೊಕ್ಕನು. ನಾಲ್ಕಾರುಮಾರು ದೂರಹೊಗಲು ಗಾಢಾಂ ಧಕಾರದಿಂದ ಆವರಿಸಿದ್ದ ಗುಹೆಯೊಂದು ಗೋಚರವಾಗಲು ಅದರಲ್ಲಿ ಹೋಗು ವುದಕ್ಕೆ ಹೆದರಿ ಮೊದಲಿದ್ದ ಸ್ಥಳಕ್ಕೆ ಹಿಂತಿರುಗಿ ಬಂದು ದೀವಿಗೆಯನ್ನು ತೆಗೆದು ಕೊಂಡುಹೋಗಿ ಹಚ್ಚಿಸಿ ಕೈಯಲ್ಲಿ ಹಿಡಿದು ಒಂದೊಂದು ಹೆಜ್ಜೆಯಾಗಿ ಇಡುತ್ತ ಗುಹೆಯನ್ನು ಹೊಕ್ಕನು. ಹೋಗುತ್ತಾ ಹೋಗುತ್ತಾ ಎತ್ತರದಲ್ಲಿಯೂ ಅಗಲ ದಲ್ಲಿಯೂ ಹೆಚ್ಚುತ್ತಾ ಬಂದಿತು. ಸುಮಾರು ೫೦ ಗಜಗಳ ಪ್ರಮಾಣದಲ್ಲಿ ಎಡಗಡೆಗೆ ಒಂದು ಸಣ್ಣ ದೇವಾಲಯವೂ ಅದರ ಪಕ್ಕದಲ್ಲಿ ಒಂದು ದೊಡ್ಡಗೂಡಿನಲ್ಲಿ ಹಿಂದೆ ದಾಟಿಬಂದ ಗುಹೆಯಲ್ಲಿ ಇರಿಸಿದ್ದಂತಹ ಪದಾರ್ಥ ಗಳು ಅಲ್ಲಿಗಿಂತ ಇಲ್ಲಿ ಹೆಚ್ಚಾಗಿದ್ದವು. ಈ ಚಿನ್ಹೆಗಳಿಂದ ಇದು ಲಕ್ಷ್ಮೀನಿಲ ಯಕ್ಕೆ ಹೋಗುವ ಮಾರ್ಗವೆಂದು ನಿರ್ಧಾರವಾಯಿತು. ಅಲ್ಲಿಂದ ಮುಂದೆ ೫೦ ಗಜಗಳ ದೂರದಲ್ಲಿ ಗುಹಾದ್ವಾರವು ಅಂತ್ಯವಾಯಿತು. ಕೊನೆಯಲ್ಲಿ ನಿಂತು ಮೇಲೆ, ಕೆಳಗೆ, ಪಕ್ಕಗಳಲ್ಲಿ ಎಲ್ಲಿನೋಡಿದರೂ ಯಾವ ಚಿನ್ಹೆಯೂ ದೊರೆಯಲಿಲ್ಲ.

ನಂತರ ಸ್ವಲ್ಪಯೋಚಿಸಿ ಯಾವುದೂ ತೋರದೆ " ಇರಲಿ ನಾಳೆ ಇದಕ್ಕೆ

ತಕ್ಕುದನ್ನು ಮಾಡುವೆನು " ಎಂದು ತನ್ನಷ್ಟಕ್ಕೆ ತಾನು ಹೇಳಿಕೊಂಡು ಗೂಡಿನಲ್ಲಿ ದೊರಕಿದ ಪದಾರ್ಥಗಳನ್ನೆಲ್ಲಾ ಹೊರಗೆ ತೆಗೆದುಕೊಂಡುಬಂದು ತಿಂದು ನೀರುಕುಡಿದು ಆ ಗುಹೆಯಲ್ಲಿ ರಾತ್ರಿಯನ್ನು ಕಳೆದನು. ಮಾರನೇ ದಿನ ಗುಹಾಂತ್ಯದಲ್ಲಿ ಗೂಢದ್ವಾರಗಳಿರಬಹುದೆಂದು ನೆಲವನ್ನು ಕಟ್ಟಿಗೆಯಿಂದ ಅದುಮಲಾರಂಭಿಸಿದನು. ಕೈತಾಕುವ ಪ್ರದೇಶವನ್ನೆಲ್ಲಾ ಅದುಮಿನೋಡಿ ಹೊರಗೆಹೋಗಿ ಮರದಕೊಂಬೆಗಳನ್ನಷ್ಟು ಮುರಿದುತಂದು ಕಲ್ಲಿನಿಂದ ಗುಹೆಯಲ್ಲಿ ತೂತುಕೊರೆದು ರೆಂಬೆಗಳನ್ನು ನೆಟ್ಟು ಅವುಗಳ ಮೂಲಕ ಹತ್ತಿ ಗುಹಾಂತ್ಯದ ಪಕ್ಕಗಳಲ್ಲಿಯೂ ಮೇಲ್ಭಾಗದಲ್ಲಿಯೂ ಅದುಮಿ ಶ್ರಮಪಟ್ಟನು.

ಮಹದೈಶ್ವರ್ಯವನ್ನು ಹೊಂದಲಿಚ್ಛಿಸುವ ಯಾವ ಮಾನವನು ತಾನೆ ಈ ರೀತಿ ಶ್ರಮಪಡಲಾರನು.?

ದುಷ್ಟಬುದ್ಧಿಯು ಬಂದು ಐದಾರು ದಿವಸಗಳಾದವು. ಆದರೂ ಲಕ್ಷ್ಮೀನಿಲಯದ ಬಾಗಿಲು ಗೋಚರವಾಗದೆ ಪೇಚಾಡುತ್ತಿದ್ದನು. ಗೂಢದ್ವಾರದ ವಿಚಾರವು ನಿಷ್ಫಲವಾಗಲು ಹೊರಗೆಬಂದು ಒಂದು ಮರದ ನೆರಳಿನಲ್ಲಿ ಮಲಗಿ ಮೊಳಕೈಯನ್ನೂರಿ ತಲೆಯನ್ನಿಟ್ಟು, ಕಾಲು ಚಾಚಿಕೊಂಡು ಯೋಚಿಸಲಾರಂಬಿಸಿದನು.

ಹೀಗೆಯೇ ಯೋಚಿಸುತ್ತಿರಲು ಒಂದು ಅಭಿಪ್ರಾಯವು ಮನಸ್ಸಿನಲ್ಲಿ ಹೊಳೆದು ಬೆಚ್ಚಿಬಿದ್ದವನಂತೆ ಎದ್ದು ಕುಳಿತು " ಆಹಾ! ಅವಳು ಲಕೋಟೆಗಳಿಂದ ರಹಸ್ಯವನ್ನೆಲ್ಲಾ ತಿಳಿದುಕೊಂಡಿರುವಳು. ಇನ್ನು ಈ ಪ್ರಾಂತ್ಯಕ್ಕೆ ಬಾರದೆ ಮನಸ್ಸನ್ನು ತಡೆಯಲಾರಳು. ಒಬ್ಬಳೇಬಂದರೆ ಅಹ! ನನ್ನ ಹಗೆಯನ್ನು ಹೇಗೆ ತೀರಿಸಿಕೊಳ್ಳುವೆನೋ? " ಎಂದು ಹಲ್ಲುಕಡಿದು " ಒಂದು ವೇಳೆ ಮನೋರಮೆಯಳಿಗೂ ಪ್ರತಾಪಕಂಠೀರವನಿಗೂ ತಿಳಿಸಿ ಅವರನ್ನು ನೇರವಾಗಿ ಕರೆದುಕೊಂಡು ಬಂದು ನಾನು ಇಲ್ಲಿರುವುದನ್ನು ಕಂಡರೆ ಅವಳಿಂದ ನನಿಗೆ ಪ್ರಪಂಚವು ಶೂನ್ಯವಾಗುವ ಸಂಭವವು ತಪ್ಪುವುದೇಇಲ್ಲ. ಕುದುರೆಯ ಕಾರಣವನ್ನು ಹೇಳಿದರೂ ಕೇಳುವುದಿಲ್ಲ ನಾನು ಲಕೋಟೆಗಳನ್ನು ಓದಿ ನೋಡಲಿಲ್ಲವೆಂದು ಭವನದ ಉದ್ಯಾನವನದಲ್ಲಿ ಹೇಳಿದುದುಸ್ಸುಳ್ಳೆಂದು ನಂಬುವಳು. ಆದ್ದರಿಂದ ನಾನು ಇಲ್ಲಿರುವುದು ಅನುಚಿತ." ಗುಹಾಂತ್ಯದಲ್ಲಿ ಮರದ ರಂಬೆಗಳಿದ್ದರೆ ಅನುಮಾನಕ್ಕೆ ಆಸ್ಪದವಾಗುವುದು. ಎಂದು ಎದ್ದು ಮರದ ರಂಬೆಗಳನ್ನೆಲ್ಲಾ ಹೊರಗೆತಂದು ಜಲಪ್ರವಾಹದಲ್ಲಿ ಹಾಕಿ ತೂತು

ಕೊರೆದಿದ್ದ ಸ್ಥಳವನ್ನೆಲ್ಲಾ ಸರಿಯಾಗಿ ಮುಚ್ಚಿ ಮೊದಲಿದ್ದಂತೆ ಸರಿಮಾಡಿ ತನ್ನ ಕುದುರೆಯನ್ನು ತಂದು ಅಲ್ಲಿಗೆ ಮುನ್ನೂರುಗಜಗಳ ದೂರದಲ್ಲಿರುವ ದೊಡ್ಡದೊಡ್ಡ ಮರಗಳಗುಂಪಿನ ಮಧ್ಯದಲ್ಲಿ ಅದನ್ನು ಕಟ್ಟಿಹಾಕಿ ಅತ್ಯುನ್ನತವಾದ ಒಂದು ಮರವನ್ನು ಏರಿ ಕುಳಿತು ಹಗಲನ್ನೆಲ್ಲಾ ಕಾಮಿನಿಯು ಬರುವದನ್ನು ನಿರೀಕ್ಷಿಸಿ ನೋಡುತ್ತಿದ್ದನು.

ಮಾರನೇದಿನ ಮಧ್ಯಾಹ್ನ ಪ್ರತಾಪಕಂಠೀರವನು, ಮನೋರಮೆಯು, ಕಾಮಿನಿಯು ಇವರು ಮುವ್ವರು ಬರುತ್ತಿರುವುದನ್ನು ದೂರದಿಂದಲೇ ನೋಡಿ ದುಷ್ಟಬುದ್ಧಿಯು ಮರದಿಂದ ಇಳಿದು ಕುದುರೆಯನ್ನು ಒಂದು ಮರದ ಪೊದರಿನಲ್ಲಿ ಬಚ್ಚಿಟ್ಟು ಎಲೆಗಳಮಧ್ಯದಲ್ಲಿ ಅವಿತುಕೊಂಡು ನಿಂತು ಅವರ ಗಮನವನ್ನು ನೋಡುತ್ತಿದ್ದನು. ಅವರು ತ್ರಿಕೋಣದ ಕಲ್ಲಿನಪೊದರನ್ನು ಸೇರಿ ಒಳ ಹೊಕ್ಕರು. ಒಂದೆರಡು ನಿಮಿಷಗಳಲ್ಲಿ ದುಷ್ಟಬುದ್ಧಿಯು ಸದ್ದಿಲ್ಲದಂತೆ ಓಡಿ ಬಂದು ಪೊದರನ್ನು ಹೊಕ್ಕು ಅಡಗಿಕೊಂಡು ಅವರ ಚಲನೆಯನ್ನು ನೋಡುತ್ತಿದ್ದನು. ಅವರು ಜೊತೆಯಲ್ಲಿ ತಂದಿದ್ದ ದೀಪವನ್ನು ಹತ್ತಿಸಿ ಗುಹೆಯನ್ನು ಹೊಕ್ಕು ಹೋಗಿ ದೇವಾಲಯವನ್ನುಸೇರಿ ದೇವರನ್ನು ಪೂಜಿಸಿ ಹೊರಗೆ ಬಂದು ಒಂದೆಡೆಯಲ್ಲಿ ಕುಳಿತು ತಂದಿದ್ದ ಆಹಾರ ಪದಾರ್ಥಗಳನ್ನು ಭುಂಜಿಸಿ ಸ್ವಲ್ಪಹೊತ್ತು ವಿಶ್ರಾಂತಿಗೊಂಡು, ಪುನಃ ದೇವಾಲಯವನ್ನು ಹೊಕ್ಕರು. ಎರಡು ಮೂರು ಕ್ಷಣವಾದಮೇಲೆ ಗುಡಿಯೊಳಗಿನಿಂದ ಒಂದು ಕಠೋರವಾದ ಶಬ್ಧವು ಕೇಳಬಂದಿತು. ಆಕ್ಷಣವೇ ಗುಹಾಂತ್ಯದ ಎಡಗಡೆ ಪಾರ್ಶ್ವದಲ್ಲಿ ಬಿರಕು ಬಿಟ್ಟು ಸಣ್ಣದೊಂದು ಮಾರ್ಗವು ಗೋಚರವಾಯಿತು. ಆ ಮುವ್ವರು ಆದನ್ನು ಹೊಕ್ಕು ನಡೆದರು. ಒಂದೆರಡುಕ್ಷಣಗಳಲ್ಲಿ ಮತ್ತೊಂದು ದೊಡ್ಡ ಶಬ್ಧವು ಗುಡಿಯಲ್ಲಿ ಉಂಟಾಗಿ ಆಕ್ಷಣವೆ ಬಿರಕು ಮುಚ್ಚಿಕೊಂಡು ಆ ಸ್ಥಳವು ಮೊದಲಿದ್ದಂತೆ ಸ್ವಲ್ಪವೂ ಕುರಹು ಕಾಣದಂತಾಯಿತು. ಈ ಆಶ್ಚರ್ಯವನ್ನು ನೋಡಿ ಬೆರಗಾದ ದುಷ್ಟಬುದ್ಧಿಯು ಸ್ವಲ್ಪ ಹೊತ್ತಿನವರೆಗೂ ಸುಮ್ಮನಿದ್ದು ಪೊದರನ್ನು ಬಿಟ್ಟು ಹೊರಟು ಕೈದೀವಿಗೆಯನ್ನು ತೆಗೆದುಕೊಂಡು ಬಂದು ಹತ್ತಿಸಿ ಗುಹೆಯನ್ನು ಹೊಕ್ಕು ದೇವಾಲಯವನ್ನು ಪ್ರವೇಶಿಸಿ ಅಲ್ಲಿದ್ದ ವಿಗ್ರಹ ಮೊದಲಾದುದನ್ನೆಲ್ಲಾ ಪರೀಕ್ಷಿಸಿನೋಡಿ ಯಾವ ಗೂಢಕಾರ್ಯದ ಸೂಚನೆಯೂ ಕೂಡ ತೋರದಿರಲು ಬಹಳ ವ್ಯಾಕುಲಪಟ್ಟನು.

ಸ್ವಲ್ಪ ಹೊತ್ತಾದಮೇಲೆ ಮನಸ್ಸಿನಲ್ಲಿ ಏನೋ ಒಂದು ವಿಚಾರವು

ಹೊಳೆಯಲು ಹೆದರಿ ಗುಹೆಯನ್ನು ಬೇಗನೆ ಬಿಟ್ಟು ಹೊರಗೆ ಬಂದು ಕುದುರೆ ಮಾರ್ಗದ ಕೊನೆಯ ಸ್ಥಳವನ್ನು ಕುರಿತು ಹೊರಟು ಅಲ್ಲಿಗೆ ಹೋಗಿ ಮೂರು ಕುದುರೆಗಳು ಮರಗಳಲ್ಲಿ ಕಟ್ಟಲ್ಪಟ್ಟು ಹಸರು ಹುಲ್ಲನ್ನು ಮೇಯುತ್ತಿರುವುದನ್ನು ಕಂಡು "ಇದರಿಂದ ಇವರು ಈ ದಿನ ಸಾಯಂಕಾಲದೊಳಗಾಗಿಯೇ ಲಕ್ಷ್ಮೀನಿಲಯದಿಂದ ಹಿಂತಿರುಗಿ ಬರುವರೆಂದು ತಿಳಿಯುವುದು. ಇವರು ಹೋದಮೇಲೆ ನನ್ನ ಮುಂದಿನ ಪ್ರಯತ್ನಗಳನ್ನು ಮಾಡುವುದು ಕ್ಷೇಮಕರವು" ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ತಾನು ಅಡಗಿಕೊಳ್ಳುವ ಸ್ಥಳವನ್ನು ಕುರಿತು ಹೊರಟನು.

ಸ್ವಲ್ಪ ದೂರ ಹೋಗುವಷ್ಟರಲ್ಲಿ ಗೋಚರರಾದ ಅಶ್ವಾರೂಢರಿಬ್ಬರನ್ನು ದೂರದಿಂದಲೇ ನೋಡಿ ಒಂದು ಮರದ ಮರೆಯಲ್ಲಿ ನಿಂತು ನೋಡುತ್ತಿದ್ದನು. ಅವನ ಚರ್ಯವನ್ನು ಬಹು ದೂರದಲ್ಲಿ ಗಮನಿಸಿದ ಅಶ್ವಾರೂಢರಲ್ಲಿ ಒಬ್ಬನು ಜೊತೆಯಲ್ಲಿರುವವನನ್ನು ಕರೆದುಕೊಂಡು ದುಷ್ಟಬುದ್ಧಿಯ ಕಡೆಗೆ ಬರುತ್ತಿದ್ದನು. ಅವರು ಸಮೀಪಗತರಾಗಲು ಕರಾಳನು ಭೀಷಣನು ಎಂದು ತಿಳಿದು ಅವರನ್ನು ಸಂಧಿಸುವುದಕ್ಕೆ ಇಷ್ಟವಿಲ್ಲದಿದ್ದರೂ ಇನ್ನು ಅವರ ಗಮನಕ್ಕೆ ಬೀಳದೆ ತಪ್ಪಿಸಿಕೊಳ್ಳುವುದು ಅಸಾಧ್ಯವೆಂದು ಎಣಿಸಿ ಮುಂದೆ ಬಂದು "ಏನಯ್ಯಾ ಮಿತ್ರನೇ, ಸುಖವಾಗಿ ವರ್ಧಿಸುವೆಯಾ?" ಎಂದು ಕುಶಲ ಪ್ರಶ್ನೆಯನ್ನು ಕೇಳಲು "ಇದೇನು ನೀನು ಇಲ್ಲಿರುವೆ?" ಎಂದು ಕರಾಳನು "ನೀನು ಬಿಡುಗಡೆಯಾಗಿ ಸ್ವತಂತ್ರನಾದ ಸಂಗತಿಯನ್ನು ತಿಳಿದೆವು. ಆದರೂ ಈ ಪ್ರಾಂತ್ಯದಲ್ಲಿ ನಿನ್ನನ್ನು ಸಂಧಿಸುವೆವೆಂದು ಎಣಿಸಿರಲಿಲ್ಲ" ಎಂದು ಭೀಷಣನು ಕೇಳಿ ಕುದುರೆಯಿಂದ ಇಳಿಯುವಷ್ಟರಲ್ಲಿ ಸ್ವಕಾರ್ಯ ಧುರಂದರರಲ್ಲಿ ಅಗ್ರಗಣ್ಯನಾದ ದುಷ್ಟಬುದ್ಧಿಯು ನಿಜದ ಸಂಗತಿಯನ್ನು ತಿಳಿಸಬಾರದೆಂದು ನಿರ್ಧರಿಸಿ "ಬಿಡುಗಡೆಯಾದರೇನು? ಅನಾಥನಾಗಿ ನಿರ್ಗತಿಕನಾದ ನಾನು ಈ ಕಾಡನ್ನಲ್ಲದೆ ಮತ್ತಾವ ಸ್ಥಳವನ್ನು ಸೇರಲಿ?" ಎಂದು ಉತ್ತರವಿತ್ತನು.

ನಂತರ ಮರಗಳ ಗುಂಪಿನಲ್ಲಿ ದುಷ್ಟಬುದ್ಧಿಯು ಇರಿಸಿರುವ ಆಹಾರ ಪದಾರ್ಥಗಳನ್ನು ತರಲು ಭೀಷಣನು ಕಳುಹಿಸಲ್ಪಟ್ಟನು. ಸ್ನೇಹಿತರಿಬ್ಬರು ಒಂದು ಮರದ ನೆರಳಿನಲ್ಲಿ ಕುಳಿತುಕೊಂಡರು. ಕರಾಳನು ಸಂಭಾಷಣೆಯನ್ನು ಪ್ರಾರಂಭಿಸಿ "ನೀನು ಬಿಡುಗಡೆಯಾಗುವುದಕ್ಕೆ ಮಾಡಿದ ಪ್ರಯತ್ನಗಳನ್ನೆಲ್ಲಾ

ಸವಿಸ್ತಾರವಾಗಿ ಹೇಳು" ಎಂದು ಕೇಳಲು ದುಷ್ಟಬುದ್ಧಿಯು "ಕೊಲಂಬುವಿನಿಂದ ಮನೋರಮೆಯನ್ನು ಸಂರಕ್ಷಿಸಿ ತಂದ ಕಾಮಿನಿಯೆಂಬ ಸ್ತ್ರೀಯಳ ಹೆಸರನ್ನು ಕೇಳಿರುವೆಯಲ್ಲವೆ. ಅವಳಿಂದಲೇ ನನಗೆ ಬಿಡುಗಡೆಯಾದುದು" ಎಂದು ಅವಳು ಕಾರಾಗೃಹಕ್ಕೆ ಬಂದು ಅವನನ್ನು ಕಂಡು ಹೇಳಿದುದನ್ನೆಲ್ಲಾ ತಿಳಿಸಲು, ಕರಾಳನು ಕೇಳಿ "ನನ್ನ ಸಂಗಡ ಸೇರಬಾರದೆಂದು ಪ್ರಮಾಣ ಮಾಡಿಸಿಕೊಂಡಳೆಂದು ಹೇಳಿದೆಯಲ್ಲ. ಇದು ನಿಜವೊ? ಅಲ್ಲವೆ, ನನ್ನ ಸಹವಾಸವನ್ನು ಬಿಟ್ಟುಬಿಡಬೇಕೆಂಬ ನಿನ್ನ ಕುಯುಕ್ತಿಯೋ?" ಎಂದು ಸ್ವಲ್ಪ ರೋಷಗೊಂಡವನಾಗಿ ಕೇಳಲು ದುಷ್ಟಬುದ್ಧಿಯು ಆ ಸಂಗತಿಯು ನಿಜವೆಂದು ಪ್ರಮಾಣವಿಟ್ಟು ಹೇಳಲು ಕರಾಳನು ಇರಬಹುದೆಂದು ನಂಬಿ, ಸೌಮ್ಯನಾಗಿ "ಹಿಂದೆ ಯಾವಾಗಲಾದರೂ ಈ ಕಾಮಿನಿಯನ್ನು ನೋಡಿರುವೆಯಾ? ಅವಳು ಯಾರೆಂದು ನಿನಗೆ ಗೊತ್ತುಂಟಿ?" ಎಂದು ಕೇಳಲು ದುಷ್ಟಬುದ್ಧಿಯು "ಹಿಂದೆ ಯಾವಾಗಲೂ ಇವಳನ್ನು ಕಂಡರಿಯೆನು. ಅವಳು ಯಾರೆಂಬ ವಿಷಯದಲ್ಲಿ ಅವಳ ಹೆಸರು ಕಾಮಿನಿಯು" ಎಂದು ಉತ್ತರ ವೀಯಲು, ಕರಾಳನು ನಸುನಗೆಯಿಂದ "ಅದು ನನಗೆ ಮೊದಲೇ ಗೊತ್ತು. ನೀನು ಹೇಳಬೇಕಾಗಿಲ್ಲ ಅದಿರಲಿ. ಈಗ ಅವಳು ಎಲ್ಲಿರುವಳೆಂಬ ಸಂಗತಿಯು ನಿನಗೆ ತಿಳಿದಿರುವುದೆ?" ಎಂದು ಕೇಳಿದನು. ಅದಕ್ಕೆ ದುಷ್ಟಬುದ್ಧಿಯು "ಇದನ್ನು ಕೇಳುವುದಕ್ಕೆ ನಿನಗೆ ಇರುವ ಉದ್ದೇಶವೇನು? ಅದನ್ನು ಮೊದಲು ಹೇಳು."

ಎಂದು ಕೇಳಿ ಮನಸ್ಸಿನಲ್ಲಿ "ಇವನ ತಾತ್ಪರ್ಯವು ಅವಳಿಗೆ ವಿರುದ್ಧವಾಗಿರುವುದಾದರೆ, ಇಲ್ಲಿಂದ ಅವಳು ಕಳಿಂಗಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಅವಳನ್ನು ನಿಗ್ರಹಿಸುವಂತೆ ಇವನನ್ನು ಪ್ರೇರೇಪಿಸಿ ಆ ಪೀಡೆಯನ್ನು ನನ್ನ ಕಾರ್ಯಕ್ಕೆ ಅಡ್ಡಿಯಾಗಿರದಂತೆ ತೊಲಗಿಸುವೆನು. ಅವಳಿಗೆ ಇಷ್ಟನಾಗಿದ್ದ ಪಕ್ಷದಲ್ಲಿ ಅವಳ ನೆಲೆಯನ್ನು ಹೇಳುವುದರಿಂದ ನನಗೆ ಕೇಡುಂಟಾದೀತು. ಅವಳು ನನ್ನ ಮೇಲೆ ಕೆಟ್ಟದ್ದನ್ನು ಹೇಳಿ ಇವನನ್ನು ನನಗೆ ವಿರೋಧಿಯಾಗಿ ಮಾಡಿಯಾಳು. ಇವನ ಹಗೆಯು ಬಹು ಕ್ರೂರವಾದುದು. ಇದನ್ನು ಯಾವ ಬುದ್ಧಿವಂತನೂ ಬಯಸಲಾರನು. ಆದ್ದರಿಂದ ಅವಳಲ್ಲಿ ಇವನಿಗೆ ಪಕ್ಷಪಾತವು ಇರುವುದಾದರೆ ಅವಳ ಸಂಗತಿಯನ್ನು ಹೇಳುವುದಿಲ್ಲ" ಎಂದು ನಿರ್ಧರಿಸಿಕೊಳ್ಳುತ್ತಿರಲು ಕರಾಳನು "ಪ್ರಾಣದಾನ ಮಾಡಿದವಳೆಂದು

ಕೃತಜ್ಞನಾಗಿ ಅವಳಿಗೆ ನಾನು ವಿರೋಧಿಯಾಗಿರಬಹುದೆಂದು ನೀನು ಅನುಮಾನಪಟ್ಟು ನನ್ನ ಉದ್ದೇಶವನ್ನು ಕೇಳಿದುದು ನ್ಯಾಯವೇ ಸರಿ. ಅವಳ ಒಂದು ತಲೆಕೂದಲಿಗಾದರೂ ನಾನು ಹಾನಿಯನ್ನು ತರುವವನಲ್ಲ. ನಿರ್ಭಯನಾಗಿ ಅವಳ ಇರುವನ್ನು ತಿಳಿಸುವನಾಗು" ಎಂದು ಕೇಳಲು, ದುಷ್ಟಬುದ್ಧಿಯು "ನಿಜವಾಗಿಯೂ ಅವಳ ನೆಲೆಯನ್ನು ನಾನರಿಯೆನು" ಎಂದು ಉತ್ತರವೀಯಲು, ಕರಾಳನು "ಹಾಗಾದರೆ ನನ್ನ ಉದ್ದೇಶವನ್ನು ನೀನು ಕೇಳುವುದಕ್ಕೆ ಕಾರಣವೇನು" ಎಂದು ಅನುಮಾನದಿಂದ ದುಷ್ಟಬುದ್ಧಿಯ ಮುಖವನ್ನು ದೃಷ್ಟಿಸಲು, ಅವನು "ನಾನು ಅವಳಿಗೆ ಕೃತಜ್ಞನಾಗಿರಬೇಕೆಂದು ನೀನೆ ಈಗ ಹೇಳಿದೆಯಲ್ಲ. ಅದಕ್ಕಾಗಿಯೇ ಕರಾಳನು ಕಾರಣಾಂತರದಿಂದ ಕಾಮಿನಿಗೆ ಹಗೆಯಾಗಿರುವನೋ ಏನೋ ಎಂಬ ಭೀತಿಯಿಂದ ಆ ರೀತಿ ನಿನ್ನನ್ನು ಕೇಳಿದೆನು" ಎಂದು ಹೇಳಿದ ಕಾರಣವನ್ನು ಕರಾಳನು ಕೇಳಿ ಒಪ್ಪಿಕೊಂಡನು.

ನಂತರ ದುಷ್ಟಬುದ್ಧಿಯು "ಈ ಪ್ರಾಂತ್ಯದಲ್ಲಿ ನೀನು ಸಂಚರಿಸುತ್ತಿರಲು ಕಾರಣವೇನು ?" ಎಂದು ಕೇಳಲು ಕರಾಳನು "ನನ್ನ ವಿಚಾರವನ್ನು ಹೇಳುವೆನು ಕೇಳು. ಇದೊ ಈ ಕಡೆ" ಎಂದು ದಕ್ಷಿಣದಿಕ್ಕನ್ನು ತೋರಿಸಿ "ಮೂರು ಗಾವುದದಲ್ಲಿ ನನ್ನ ಸೈನಿಕಜನರು ಇಳಿದಿರುವರು. ಅವರು ಚಾರುದತ್ತನನ್ನು ಬಿಟ್ಟು ನನ್ನನ್ನು ಬಂದು ಸೇರಿದವರು. ಮೊದಲಿದ್ದಂತೆ ಈಗಲೂ ನನಗೆ ವಿಧೇಯರಾಗಿರುವರು. ಅವನ ಪಡೆಯಲ್ಲಿ ಕಳೆದುಳಿದವರು ಕಳಿಂಗಪಟ್ಟಣದ ಸೈನಿಕರಿಂದ ಕೊಲ್ಲಲ್ಪಟ್ಟರೆಂದು ವರ್ತಮಾನ ಬಂದಿದೆ. ಆ ನೀಚನು ತನ್ನನ್ನು ಅನುಸರಿಸಿದ ಒಬ್ಬನೇಒಬ್ಬ ಕಿರಾತನನ್ನು ಕೂಡಿಕೊಂಡು ಬಂದು ಈ ಪ್ರಾಂತ್ಯದಲ್ಲಿ ಅಡಗಿರುವನೆಂದು ತಿಳಿದುಬಂದಿರುವುದರಿಂದ ಅವನನ್ನು ಹುಡುಕಿ ಹಿಡಿಯುವದಕ್ಕಾಗಿ ಇಲ್ಲಿ ಸಂಚರಿಸುತ್ತಿರುವೆನು. ನಾನು ಇಲ್ಲಿ ಸಂಚರಿಸುವುದಕ್ಕೆ ಕಾರಣವನ್ನು ಕೇಳಿದೆಯಲ್ಲ. ಈಗ ನೀನು ಯಾತಕ್ಕಾಗಿ ಇಲ್ಲಿಯವರೆಗೂ ಬಂದಿರುವೆ ? ಓಹೋ ! ಗೊತ್ತಾಯಿತು" ಎಂದು ಕಿರುನಗೆಯಿಂದ "ಐಶ್ವರ್ಯನಿಲಯವನ್ನು ಹುಡುಕಿಕೊಂಡು ಬಂದಿರುವೆಯೊ ?" ಎಂದು ಹಾಸ್ಯದಿಂದ ಕೇಳುವಷ್ಟರಲ್ಲಿ ಹತ್ತಿರ ಶಬ್ದವಾಗಲು ಉತ್ತರದಿಕ್ಕಿನ ಕಡೆಗೆ ನೋಡಿ "ಪ್ರಮಾದ ಪ್ರಮಾದ ! ಆ ಕುದುರೆಗೆ ಜೀನು ಹಾಕು" ಎಂದು ಎದ್ದು ಓಡಿ ತನ್ನ ಕುದುರೆಗೆ ಜೀನು ಹಾಕುತ್ತಿದ್ದನು. ದುಷ್ಟಬುದ್ಧಿಯು ಭೀಷಣನ ಕುದುರೆ

ಯನ್ನು ಸಿದ್ಧಪಡಿಸುತ್ತಿದ್ದನು. ಆಹಾರಪದಾರ್ಥಗಳನ್ನು ತೆಗೆದುಕೊಂಡು ಸಮೀಪಗತನಾಗುತ್ತಿದ್ದ ಭೀಷಣನು ಉತ್ತರದಿಕ್ಕಿನಲ್ಲಿ ತೋರಿದ ಆಪತ್ತನ್ನು ಕಂಡು ಓಡಿಬಂದನು. ಕರಾಳನು ಕುದುರೆಯನ್ನು ಏರಿದನು. ಆ ಕ್ಷಣವೇ ದುಷ್ಟಬುದ್ಧಿಯು ಕುದುರೆಯನ್ನು ಏರಿದನು. ಆ ಕ್ಷಣವೇ ದುಷ್ಟಬುದ್ಧಿಯು ಕುದುರೆಯನ್ನು ಏರುವಷ್ಟರಲ್ಲಿ ಅವನನ್ನು ನೂಕಿ ಭೀಷಣನು ತನ್ನ ಕುದುರೆ ಯನ್ನು ಏರಿದನು. ಕುದುರೆಗಳನ್ನು ಚಮಕಾಯಿಸಿ ಕರಾಳನು ಭೀಷಣನು ಪಲಾಯನರಾದರು. ದುಷ್ಟಬುದ್ಧಿಯು ಯತ್ನವಿಲ್ಲದೆ ನಿಂತನು.

ಈ ಪ್ರಮಾದವೇನೆಂದರೆ: ಈಚೆಗೆ ಕರಾಳನು ಕೊಂಕಣರಾಜ್ಯವನ್ನು ಹೊಕ್ಕು ಹಾವಳಿ ಮಾಡಲಾರಂಭಿಸಿದ್ದನು. ಆ ಚೋರಾಗ್ರಣಿಯನ್ನು ಹೇಗಾ ದರೂ ನಿಗ್ರಹಿಸಬೇಕೆರಿದು ಕೊಂಕಣಿಯರ ಅಶ್ವಸೈನ್ಯದಲ್ಲಿ ಗಟ್ಟಿಗರಾದ ನೂರು ಜನ ರಾಹುತರು ನೇಮಿಸಲ್ಪಟ್ಟು ಹತ್ತುಹತ್ತುಮಂದಿ ಒಂದೊಂದು ಗುಂಪಾಗಿ ನಾಲ್ಕಾಕಡೆ ಸುತ್ತಿ ಕರಾಳನನ್ನೂ ಅವನ ಕಿರಾತರನ್ನೂ ಹುಡುಕುತ್ತಿದ್ದರು. ಈ ಗುಂಪುಗಳಲ್ಲಿ ಒಂದು ದುಷ್ಟಬುದ್ಧಿಯೊಡನೆ ಮಾತನಾಡುತ್ತ ಕುಳಿತಿದ್ದ ಕರಾಳನನ್ನು ಬಹು ದೂರದಲ್ಲಿಯೇ ಕಂಡು ಬಾಣಗಳನ್ನು ಪ್ರಯೋಗಿಸಿ ಕೊಂಡು ವೇಗವಾಗಿ ಅವನಕಡೆಗೆ ಬರುತ್ತಲಿತ್ತು. ಮರಗಳ ಆಸರೆಯಲ್ಲಿ ಇದ್ದುದರಿಂದ ಸ್ನೇಹಿತರಿಬ್ಬರಿಗೂ ಯಾವ ಬಾಣವೂ ತಗಲಲಿಲ್ಲ. ಬಾಣಗಳು ನಿರರ್ಥಕವಾಗಿ ಮರಗಳನ್ನು ತಾಗಿ ಉಂಟಾದ ಶಬ್ದವನ್ನು ಕೇಳಿದಕೂಡಲೆ ಕರಾಳನು ಉತ್ತರದಿಕ್ಕಿನಕಡೆಗೆ ತಿರುಗಿ ನೋಡಿ ಆ ರೀತಿ ದುಷ್ಟಬುದ್ಧಿಯನ್ನು ಎಚ್ಚರಿಸಿ ನಂತರ ಭೀಷಣನೊಡನೆ ಪಲಾಯನನಾಗಿ ತಪ್ಪಿಸಿಕೊಂಡು ಓಡಿ ಹೋದನು.

ಆ ರಾಹುತರು ಬಂದು ದುಷ್ಟಬುದ್ಧಿಯನ್ನು ಹಿಡಿದರು. ಓಡಿಹೋ ದವರು ತನಗೆ ಪರಿಚಯಸ್ಥರಲ್ಲವೆಂದು ಆಕಸ್ಮಿಕವಾಗಿ ಸಂಧಿಸಿದವರೆಂದು ಮೊದಲಾದ ದುಷ್ಟಬುದ್ಧಿಯ ಯಾವ ಕುಯುಕ್ತಿಯ ಮಾತೂ ಅವರಲ್ಲಿ ನಡಿಯದೆಹೋಯಿತು. ಅವರು ಮರಗಳ ಗುಂಪಿನಲ್ಲಿದ್ದ ಅವನ ಕುದುರೆ ಯನ್ನು ತಂದು ಅದರಮೇಲೆ ಅವನನ್ನು ಕುಳ್ಳಿರಿಸಿ ಸೆರೆಹಿಡಿದು ಕೊಂಕಣ ದೇಶಾಭಿಮುಖವಾಗಿ ಹೊರಟರು.

ಎರಡು ದಿನ ಪ್ರಯಾಣಮಾಡಿ ಮೂರನೇದಿನ ಬೆಳಿಗ್ಗೆ ಸೂರ್ಯೋದಯಕ್ಕೆ

ಸರಿಯಾಗಿ ಕೊಂಕಣದೇಶದ ಎಲ್ಲೆಯಲ್ಲಿ ಕೊಂಕಣದುರ್ಗವೆಂಬ ಬೆಟ್ಟದ ತಪ್ಪಲನ್ನು ಸೇರಿದರು.

ಎಲ್ಲೆಯಿಂದಾಚೆ ಇರುವ ಪ್ರದೇಶಗಳನ್ನು ಆಳುತ್ತಿರುವ ಹಸ್ತಿನಾವತಿಯ ಸಾಮಂತರಾಜರ ಪ್ರೇರೇಪಣೆಗೆ ಒಳಪಟ್ಟು ಎಲ್ಲೆಕಟ್ಟಿನ ಪ್ರಾಂತ್ಯದ ಕೊಂಕಣ ಪ್ರಜೆಗಳು ದಂಗೆಯೆದ್ದಿದ್ದರು. ಕೊಂಕಣರಾಜನು ಸೈನ್ಯಸಮೇತನಾಗಿ ಬಂದು ಅವರ ಪುಂಡನ್ನು ಅಡಗಿಸಿ ದಂಗೆಯೇಳುವುದಕ್ಕೆ ಕಾರಣಗಳನ್ನು ವಿಚಾರಿಸುವುದಕ್ಕಾಗಿ ಆ ದುರ್ಗದಲ್ಲಿ ಇಳಿದುಕೊಂಡಿದ್ದನು.

ದುಷ್ಟಬುದ್ಧಿಯನ್ನು ಹಿಡಿದುಕೊಂಡು ಬಂದ ರಾಹುತರು ತಮ್ಮ ರಾಜನ ಸನ್ನಿಧಿಗೆ ಅವನನ್ನು ಕರೆದುಕೊಂಡು ಹೋಗಿ ನಿಲ್ಲಿಸಿ ಅವರಲ್ಲಿ ಮುಖ್ಯಸ್ಥನು "ಮಹಾಪ್ರಭೂ! ಕರಾಳನನ್ನು ಹಿಡಿದುತರುವುದಕ್ಕೋಸ್ಕರ ಹೋಗಿದ್ದ ರಾಹುತಪಡೆಯಲ್ಲಿ ನಾವು ಕೆಲವರು ಆ ಕಳ್ಳನನ್ನು ಪಶ್ಚಿಮಘಟ್ಟಗಳ ಪ್ರಾಂತ್ಯದಲ್ಲಿ ನಾವು ಹುಡುಕುತ್ತಿರಲು, ಹರಕು ಬಟ್ಟೆಗಳನ್ನು ಉಟ್ಟಿದ್ದ ಒಬ್ಬ ಮನುಷ್ಯನು ನಮ್ಮನ್ನು ಸಂಧಿಸಿ ಕರಾಳನು ಇರುವ ಸ್ಥಳವನ್ನು ತಾನು ತೋರಿಸುವೆನೆಂದು ಹೇಳಿದನು. ನಮ್ಮನ್ನು ಬಲೆಗೆ ಸಿಕ್ಕಿಸಿಕೊಳ್ಳಬೇಕೆಂದು ಶತ್ರುವು ಕಳುಹಿಸಿದ ಗೂಢಚಾರನಾಗಿರಬೇಕೆಂದು ಅವನನ್ನು ಬಗೆಬಗೆಯಾಗಿ ವಿಚಾರಿಸಿದೆನು. ಅವನಿಗೂ ಕರಾಳನಿಗೂ ವೈಷಮ್ಯವಿರುವುದೆಂದು ತಿಳಿಯು ಬಂದಿತು. ಇದರಿಂದ ಅವನ ಮಾತಿನಲ್ಲಿ ನಂಬಿಕೆಯಿಟ್ಟು ಸಂಗಡ ಕರೆದು ಕೊಂಡು ಹೊರಟೆವು. ಅವನು ಕರಾಳನನ್ನು ಬಹು ದೂರದಿಂದಲೇ ತೋರಿಸಿ, ನಮ್ಮನ್ನು ಬಿಟ್ಟು ಓಡಿಹೋಗಿ ಗಿಡಮರಗಳ ಮೂಲಕ ತಪ್ಪಿಸಿ ಕೊಂಡನು. ಕರಾಳನನ್ನು ಸಂಧಿಸುವುದಕ್ಕೆ ಇಷ್ಟವಿಲ್ಲದೆ ಅವನು ಓಡಿ ಹೋದುದನ್ನು ನೋಡಿದರೆ ಕರಾಳನಂತೆ ಅವನೂ ಕೂಡ ಒಬ್ಬ ಕಳ್ಳನಾಗಿರಬೇಕೆಂದು ತೋರುವುದು. ಕರಾಳನನ್ನು ಹಿಡಿದ ಬಳಿಕ ಅವನಿಂದ ತಾನೂ ಕೂಡ ಕಳ್ಳನೆಂದು ನಮಗೆ ತಿಳಿಯುಬಂದರೆ ತನ್ನನ್ನೂ ಸಹ ಬಿಡದೆ ಹಿಡಿಯುವರೆಂಬ ಭೀತಿಯಿಂದ ಅವನು ಆ ವಿಧವಾಗಿ ಆಚರಿಸಿದನೆಂದು ಕಾಣುವುದು. ನಂತರ ಬಾಣಗಳನ್ನು ಪ್ರಯೋಗಿಸಿಕೊಂಡು ಕರಾಳನಿಗೆ ಅಭಿಮುಖವಾಗಿ ಅಶ್ವಗಳನ್ನು ಓಡಿಸಿದೆವು. ಅವನು ಬಾಣಗಳನ್ನು ತಪ್ಪಿಸಿಕೊಂಡು ಅಶ್ವಾರೂಢನಾದನು. ಅವನ ಜೊತೆಯಲ್ಲಿ ಇವನೂ ಕೂಡ ಸನ್ನದ್ಧನಾಗಿ ಕುದುರೆಯನ್ನು ಏರುವಷ್ಟರಲ್ಲಿ ಒಬ್ಬ ಕಿರಾತನು ಓಡಿ ಬಂದು ಇವನನ್ನು

ನೂಕಿ ತಾನು ಏರಿದನು. ಕರಾಳನು ಮತ್ತು ಆ ಕಿರಾತನು ಪಲಾಯನರಾಗಿ ಗಿಡಮರಗಳ ಮೂಲಕ ತಪ್ಪಿಸಿಕೊಂಡರು" ಎಂದು ಹೇಳಿ ಅಪಜಯಕ್ಕಾಗಿ ಮುಖವನ್ನು ಬಾಗಿಸಿಕೊಂಡು ನಿಂತನು.

ಇಷ್ಟನ್ನೆಲ್ಲಾ ಕೇಳಿದ ಕೊಂಕಣ ರಾಜನು "ಎಲೈ, ರಾಹುತನೇ! ನಿನ್ನ ಕೈಯಲ್ಲಾದ ಪ್ರಯತ್ನಗಳನ್ನೆಲ್ಲಾ ಮಾಡಿರುವೆ. ಅಪಜಯವಾದುದಕ್ಕೆ ಚಿಂತೆಯಿಲ್ಲ. ಇವನನ್ನು ಕರಾಳನ ಜೊತೆಯಲ್ಲಿ ನೋಡಿದ ಸಮಯದಲ್ಲಿ ಏನು ಮಾಡುತ್ತಿದ್ದನು? ಹೇಳುವನಾಗು" ಎಂದು ಕೇಳಲು, ಆ ರಾಹುತನು "ಮಹಾಪ್ರಭೂ! ನಾವು ದೂರದಲ್ಲಿ ಕಂಡ ಕಾಲದಲ್ಲಿ ಇವನು ಕರಾಳನೊಡನೆ ಮಿತ್ರಸಂಭಾಷಣೆಯಲ್ಲಿದ್ದನು. ಇವನನ್ನು ಹಿಡಿದ ನಂತರ ಕುಯುಕ್ತಿಯಿಂದ ಮಾತನಾಡಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟನು. ಇವನ ಮಾತಿನಲ್ಲಿ ನಂಬಿಕೆಯನ್ನಿಡದೆ ಪ್ರಭುಗಳ ವಿಚಾರಣೆಗೆ ಹಿಡಿದು ತಂದಿದ್ದೇವೆ. ಇನ್ನು ಸ್ವಾತಂತ್ರ್ಯಕ್ಕೆ ಬಿಡುವುದಕ್ಕೂ ಶಿಕ್ಷಿಸುವುದಕ್ಕೂ ದೇವರ ಚಿತ್ತವಿದ್ದಂತೆ ನಡೆಸಬಹುದು" ಎಂದು ವಿಜ್ಞಾಪಿಸಿದನು.

ನಂತರ ವಿಚಾರಣೆಯು ಜರುಗಿ ಕೊಂಕಣರಾಜನು "ಇವನು ಮರಣ ದಂಡನೆಗೆ ಅರ್ಹನೇ ಸರಿ. ಆದರೆ ಇನ್ನೂ ಯವ್ವನಸ್ಥನಾಗಿರುವನು ಆದುದರಿಂದ ಆ ಹಸ್ತಿನಾವತಿಯ ಗೂಢಚಾರನ ಜೊತೆಯಲ್ಲಿ ಮರಣಾವಧಿ ಇವನನ್ನು ದುರ್ಗದ ಸೆರೆಯಲ್ಲಿ ಹಾಕಿ" ಎಂದು ಆಜ್ಞಾಪಿಸಿ, ಒಂದೆರಡು ದಿನಗಳಿದ್ದು ದಂಗೆಯಾಗುವುದಕ್ಕೆ ಉಂಟಾದ ಕಾರಣಗಳನ್ನು ತಿಳಿದುಕೊಂಡು ಮನಸ್ಸಿನಲ್ಲಿ ರೋಷಗೊಂಡು ಕುದಿದವನಾಗಿ "ಆಗಲಿ! ರಾಜಧಾನಿಯನ್ನು ಸೇರಿ ಇದಕ್ಕೆ ತಕ್ಕದನ್ನು ಯೋಚಿಸುವೆನು" ಎಂದು ಹೇಳಿಕೊಂಡು ಸೈನ್ಯ ಸಮೇತನಾಗಿ ಕೊಂಕಣ ರಾಜಧಾನಿಗೆ ಅಭಿಮುಖನಾಗಿ ಹೊರಟನು.

ಇತ್ತ ದುಷ್ಟಬುದ್ಧಿಯನ್ನು ರಾಹುತರು ಕರೆದುಕೊಂಡು ಹೋಗಿ ದುರ್ಗಾಧಿಪತಿಯಲ್ಲಿ ಒಪ್ಪಿಸಿ ತಮ್ಮ ರಾಜನು ವಿಧಿಸಿದ ಶಿಕ್ಷೆಯನ್ನು ತಿಳಿಸಿ ಕರಾಳನನ್ನು ಹಿಡಿಯುವ ಕಾರ್ಯಕ್ಕಾಗಿ ಹೊರಟುಹೋದರು. ದುಷ್ಟಬುದ್ಧಿಯು ದುರ್ಗದ ಸೆರೆಮನೆಗೆ ಒಯ್ಯಲ್ಪಟ್ಟನು.

ಕೊಂಕಣ ದುರ್ಗವು ಒಂದು ಸಣ್ಣ ಬೆಟ್ಟವಾಗಿತ್ತು. ಬೆಟ್ಟವೆಲ್ಲಾ ಬಹು ಎತ್ತರವಾದ ಮತ್ತು ವಿಸ್ತಾರವಾದ ಒಂದೇ ಬಂಡೆಯಾಗಿತ್ತು. ಈ ಬಂಡೆಯ ಮೇಲ್ಭಾಗವನ್ನು ಕೊರೆದು ಸುತ್ತಲೂ ಕೋಟೆಯನ್ನು ಕಟ್ಟಿದ್ದರು. ಕೋಟೆ

ಯೊಳಗೆ ಏಳು ಸುತ್ತಿನ ಚದುರಗಳಿದ್ದವು. ಒಂದೊಂದು ಚದರದ ನಾಲ್ಕು ಪಾರ್ಶ್ವದಲ್ಲಿಯೂ ಸಾಲುಮನೆಗಳಿದ್ದವು. ಒಳಗಡೆ ಕೊನೆಯ ಚದರದ ಮಧ್ಯದಲ್ಲಿ ಭದ್ರವಾಗಿಯೂ, ಭವನದ ಆಕಾರದಲ್ಲಿ ಕಟ್ಟಲ್ಪಟ್ಟುದಾಗಿಯೂ, ನೆಲಸಮಕ್ಕೆ ಮೇಲೆ ಮೂರು ಅಂತಸ್ತನ್ನು ಕೆಳಗೆ ಮೂರು ಅಂತಸ್ತನ್ನು ಉಳ್ಳದ್ದಾಗಿಯೂ ಇರುವ ಒಂದು ಕಲ್ಲು ಕಟ್ಟಡವು ಬೆಟ್ಟದ ಸುತ್ತು ಮುತ್ತಿನ ಪ್ರದೇಶದಲ್ಲಿ ಬಹು ದೂರದವರಿಗೂ ಕಾಣಿಸುವಷ್ಟು ಎತ್ತರವನ್ನುಳ್ಳದ್ದಾಗಿ ಶೋಭಿಸುತ್ತಲಿತ್ತು. ಆದರ ಮೇಲ್ಭಾಗದಲ್ಲಿ ಧ್ವಜಸ್ತಂಭವು ನಾಟಲ್ಪಟ್ಟಿತ್ತು. ಕೊಂಕಣರಾಜನು ಆ 'ದುರ್ಗದಲ್ಲಿ ಇರುವಾಗ ಭೇದಿಸಲಶಕ್ಯವಾದ ಆ ದುರ್ಗವನ್ನು ಶತ್ರುಗಳು ಮುತ್ತಿದರೆ ತಲ್ಲಣಗೊಳ್ಳಬೇಕಾಗುವುದೆಂದು ಅವರನ್ನು ಹೆದರಿಸುತ್ತಿರುವುದೋ ಎನ್ನುವಂತೆ ರಾತ್ರಿಯೂ ಹಗಲೂ ಧ್ವಜಪತಾಕೆಯು ಗಾಳಿಯ ಹೊಡೆತದಿಂದ ಚಲಿಸುತ್ತಿರುವುದು. ಯುದ್ಧ ಕಾಲದಲ್ಲಿ ಆ ಕಟ್ಟಡವನ್ನೆಲ್ಲಾ ಯುದ್ಧ ಸಾಮಗ್ರಿಯಿಂದ ತುಂಬಿ ಬಹು ಜಾಗರೂಕತೆಯಿಂದ ಕಾಯುವರು.

ಇದಕ್ಕೆ ಹಿಂದೆ ಎಂಟು ವರುಷಗಳಿಂದಲೂ ಯಾವ ಶತ್ರುಬಾಧೆಯೂ ತಟ್ಟದೆ ಕೊಂಕಣ ರಾಜ್ಯವೆಲ್ಲಾ ನೆಮ್ಮದಿಯ ಸುಖವನ್ನು ಅನುಭವಿಸುತ್ತಲಿತ್ತು. ನಾಲ್ಕಾರು ತಿಂಗಳಿಂದ ಈಚೆಗೆ ಈ ನೆಮ್ಮದಿಗೆ ತಲೆನೋವು ಉಂಟಾಗಲಾರಂಭವಾಗಿ ಅಣಗಿಸಿದ ದಂಗೆಯೇ ಮುಂದಿನ ಕಲಹಗಳಿಗೆ ಆದಿಕಾರಣವಾಗಿ ಪರಿಣಮಿಸುವಂತಾಯಿತು.

ಆದಿರಲಿ, ದುಷ್ಟಬುದ್ಧಿಯು ಸೆರೆಮನೆಗೆ ಒಯ್ಯಲ್ಪಟ್ಟನೆಂನು ಹೇಳಿದೆವಷ್ಟೆ. ಅವನನ್ನು ದುರ್ಗಾಧಿಪತಿಯ ಆಳುಗಳು ಆ ಕಲ್ಲುಕಟ್ಟಡದ ಕೆಳಭಾಗದ ಕೊನೆಯ ಅಂತಸ್ಥಿನಲ್ಲಿರುವ ಹಸ್ತಿನಾಪತಿಯ ಗೂಢಚಾರನ ಜೊತೆಯಲ್ಲಿ ಬಿಟ್ಟು, ಹೊದಿಯುವುದಕ್ಕೆ ಕಂಬಳಿಯನ್ನು ಅವರಿಬ್ಬರಿಗೆ ಆಹಾರವನ್ನು ಕೊಟ್ಟು ಬಂದು ಕಟ್ಟಡದ ದೊಡ್ಡ ದ್ವಾರವನ್ನು ಮುಚ್ಚಿ ಬೀಗಹಾಕಿಕೊಂಡು ಹೋದರು.

ಅವರು ಹೋದಕೂಡಲೇ ದುಷ್ಟಬುದ್ಧಿಯು ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸಿ ಆಹಾರವನ್ನು ಭುಂಜಿಸದೆ ಬಹಳ ಹೊತ್ತಿನವರೆಗೂ ಹೆಂಗಸಿನಂತೆ ಅಳುತ್ತಿದ್ದನು. ಜೊತೆಯಲ್ಲಿರುವ ಕಾರಾಗೃಹವಾಸಿಯನ್ನೂ ಕೂಡ ಗಮನಿಸದೆ ತನ್ನ ವ್ಯಸನದಲ್ಲಿಯೇ ಮಗ್ನನಾಗಿದ್ದನು. ಸಾಯಂಕಾಲ ಸಮ

ಯಕ್ಕೆ ಸ್ವಲ್ಪ ಸಮಾಧಾನಚಿತ್ತನಾಗಲು ಅದನ್ನು ತಿಳಿದು ಆ ಕಾರಾಗೃಹ ವಾಸಿಯು ಅವನನ್ನು ಮಾತನಾಡಿಸಿ "ಎಲೈ ದುಃಖಿಸಬೇಡ. ಸಮಾಧಾನ ಚಿತ್ತನಾಗು. ಒಬ್ಬರಿಗೊಬ್ಬರು ಹೊಸಬರಾದರೂ ನಮ್ಮಿಬ್ಬರನ್ನು ವಿಧಿಯು ಜೊತೆಗಾರರನ್ನಾಗಿಮಾಡಿರುವನು. ಆದುದರಿಂದ ಬಹುದಿನಗಳ ಸ್ನೇಹಿತರಂತೆ ಇದ್ದು ಒಬ್ಬನ ದುಃಖವನ್ನು ಮತ್ತೊಬ್ಬನು ಭಾಗಿಸಿಕೊಂಡಿರಬೇಕು. ಇದರಿಂದ ಆಪತ್ತಿನವೇಳೆಯಿಂದ ಪ್ರಾಪ್ತವಾದ ದುಃಖವು ಮನಸ್ಸಿನಲ್ಲಿ ಮಾಡಿರುವ ಹುಣ್ಣನ್ನು ಆರಿಸುವದಕ್ಕೆ ಅನುಕೂಲವಾಗುವುದು. ಹಾಗೆ ಮಾಡದಿದ್ದರೆ ಈಗ ಒದಗಿರುವ ದುಃಖವು ಅಭಿವೃದ್ಧಿಯಾಗಿ ಮನೋವ್ಯಾಧಿಯು ಹೆಚ್ಚುವದಕ್ಕೆ ಅವಕಾಶವಾಗುವದು. ಆದ್ದರಿಂದ ನೀನು ಯಾರೆಂಬುದನ್ನೂ ಈ ಶಿಕ್ಷೆಗೆ ಗುರಿಯಾಗಲು ನೀನು ಮಾಡಿದ ತಪ್ಪೇನೆಂಬುದನ್ನೂ ಹೇಳುವನಾಗು." ಎಂದು ಉಪಶಾಂತಿಗೈದನು.

ನಂತರ ಸ್ವಲ್ಪ ಹೊತ್ತಿನಮೇಲೆ ದುಷ್ಟಬುದ್ಧಿಯು ಸಮಾಧಾನಚಿತ್ತನಾಗಿ "ಅಯ್ಯಾ ದುಃಖಭಾಗಿಯೇ ಕೇಳು. ನಾನು ಕಳಿಂಗಪಟ್ಟಣ ನಿವಾಸಿಯು. ಧನಕೋಟಿಯೆಂಬ ದೊಡ್ಡ ವರ್ತಕನಲ್ಲಿ ಸೇವಕಾಗ್ರಣಿಯ ಕೆಲಸದಲ್ಲಿದ್ದೆನು. ಯಜಮಾನನ ಮರಣಾನಂತರ ಅಲ್ಪಸ್ವಲ್ಪ ಮಿಗಿಸಿದ್ದ ಬಂಡವಾಳದಿಂದ ಒಂದುಚಿಲ್ಲರೆ ಅಂಗಡಿಯನ್ನಿಟ್ಟುಕೊಂಡು ಜೀವನಮಾಡಿಕೊಂಡಿದ್ದೆನು ಒಂದುದಿವಸ ನನಿಗೂ ನನ್ನಂಥಹ ಇನ್ನೊಬ್ಬ ವ್ಯಾಪಾರಿಗೂ ಒಂದುವಿಷಯದಲ್ಲಿ ವಾಕ್ಕಲಹದಿಂದ ಕೈಕಲಹವುಂಟಾಗಿ ಅವನನ್ನು ನೆತ್ತಿಯ ಮೇಲೆ ಬಲವಾಗಿ ನನ್ನಕೈಯಲ್ಲಿದ್ದ ಕಟ್ಟಿಗೆಯಿಂದ ಹೊಡೆದೆನು. ಆ ಕ್ಷಣವೇ ಅವನು ಮೂರ್ಛಿತನಾದನು. ಅಷ್ಟರಲ್ಲಿಯೇ ಅಲ್ಲಿ ನೆರೆದಿದ್ದ ದೊಂಬಿಯನ್ನು ಚದುರಿಸುವುದಕ್ಕೆಂದು ಬಂದಿದ್ದ ತಳವಾರರಲ್ಲಿ ಕೆಲವರು ಜ್ಞಾನಶೂನ್ಯನಾಗಿ ಬಿದ್ದಿದ್ದ ಆ ವ್ಯಾಪಾರಿಯನ್ನು ಚಿಕಿತ್ಸಾಲಯಕ್ಕೆ ಸಾಗಿಸಿಕೊಂಡು ಹೋದರು. ಉಳಿದವರು ನನ್ನನ್ನು ಹಿಡಿದು ನ್ಯಾಯಾಸ್ಥಾನಕ್ಕೆ ಕರೆದುಕೊಂಡು ಹೋದರು. ಅವನು ಆದಿನ ಮಧ್ಯಾನ್ಹವೇ ಕಾಲವಾದನು. ಆದಕಾರಣ ನಾನು ಮರಣದಂಡನೆಗೆ ಗುರಿಯಾದೆನು ಆದರೂ ನನ್ನ ಯವ್ವನದ ವಯಸ್ಸನ್ನು ಪರಿಗಣಿಸಿ ನಾನು ದೇಶಭ್ರಷ್ಟನಾಗಿ ಹೋಗಬೇಕೆಂಬ ಶಿಕ್ಷೆಯನ್ನು ವಿಧಿಸಿದನು. ವ್ಯಸನದಲ್ಲಿ ದಿಕ್ಕುತೋರದೆ ಬಂದು ನಾನು ಪಶ್ಚಿಮ ಘಟ್ಟಗಳ ತಪ್ಪಲಿನ ಗೊಂಡಾರಣ್ಯದಲ್ಲಿರಲು ಇಬ್ಬರು ಕಿರಾತರನ್ನು ಸಂಧಿಸಿ ಅವರಲ್ಲಿ ಒಬ್ಬ

ನೊಡನೆ ಮಾತನಾಡುತ್ತಾ ಮರದ ನೆರಳಿನಲ್ಲಿ ಕುಳಿತಿದ್ದೆನು. ಆಗ ಕೊಂಕಣ ದೇಶದ ರಾಹುತರ್ರು ಕಾಣಿಸಿಕೊಂಡರು. ಆ ಸಮಯದಲ್ಲಿ ಸ್ವಲ್ಪದೂರದಲ್ಲಿದ್ದ ಮರಗಳಗುಂಪಿನಲ್ಲಿ ನಾನು ಇರಿಸಿದ್ದ ಆಹಾರ ಪದಾರ್ಥಗಳನ್ನು ತರಲು ಹೋಗಿದ್ದ ಒಬ್ಬ ಕಿರಾತನು ಅವುಗಳನ್ನು ತೆಗೆದುಕೊಂಡು ಬಂದು ಸಮೀಪಸ್ತ ನಾಗುತ್ತಿದ್ದನು. ರಾಹುತರನ್ನು ಕಂಡಾಕ್ಷಣವೇ ನನ್ನ ಬಳಿಯಲ್ಲಿದ್ದ ಕಿರಾತನು ಪಲಾಯನನಾಗಲು ಅಶ್ವಾರೂಢನಾದನು. ಅವರು ಬಂದ ರಭಸ ವನ್ನು ನೋಡಿ ಕಳ್ಳರೇನೋ ಎಂದುಭಯಪಟ್ಟು ನಾನೂ ಕೂಡ ಪಲಾಯನ ನಾಗಲು ಪ್ರಯತ್ನಪಟ್ಟು, ನನ್ನ ಕುದುರೆಯು ಆ ಸಮಯದಲ್ಲಿ ಮರಗಳ ಗುಂಪಿನಲ್ಲಿ ಕಟ್ಟಲ್ಪಟ್ಟಿದ್ದರಿಂದ ಮತ್ತೋರ್ವ ಕಿರಾತನ ಕುದುರೆಯನ್ನು ಏರ ಲೆತ್ನಿಸಿದೆನು. ಅಷ್ಟರಲ್ಲಿ ಆ ಕಿರಾತನು ಓಡಿಬಂದು ನನ್ನನ್ನು ನೂಕಿ ತನ್ನ ಕುದುರೆಯನ್ನು ಏರಲು ಕಿರಾತರಿಬ್ಬರೂ ತಪ್ಪಿಸಿಕೊಂಡು ಓಡಿದರು. ಯತ್ನ ವಿಲ್ಲದೆ ನಿಂತ ನನ್ನನ್ನು ರಾಹುತರುಬಂದು ಹಿಡಿದರು. ಅನಂತರ ಅವರ ಸಂಭಾಷಣೆಯಿಂದ ಆ ಕಿರಾತರಲ್ಲಿ ಒಬ್ಬನು ಕರಾಳನೆಂದು ನನಗೆ ತಿಳಿಯು ಬಂದಿತು" ಎಂದು ಅವನನ್ನು ಸೆರೆಯಲ್ಲಿ ತಂದುಬಿಟ್ಟ ಪರಿಯಂತರ ನಡೆದ ಸಂಗತಿಯನ್ನು ಹೇಳಿದನು. ಮರಣಾವಧಿ ಕಾರಾಗೃಹದಲ್ಲಿ ವಾಸಮಾಡುವ ವಿಧಿಯು ಪ್ರಾಪ್ತವಾಗಿದ್ದರೂ ಲಕ್ಷ್ಮೀನಿಲಯದ ಸಂಗತಿಯನ್ನು ತಿಳಿಸದೆ ಕಥೆಯನ್ನು ಕಲ್ಪಿಸಿಹೇಳಿದುದನ್ನು ನೋಡಿದರೆ ಇದರಿಂದ ಆ ದುಷ್ಟನಿಗೆ ಆ ನಿಲಯದ ವಿಚಾರವಾಗಿ ಇದ್ದ ಆಶೆಯ ಪ್ರಮಾಣವನ್ನು ಇಷ್ಟೆಂದು ಊಹಿ ಸುವುದಕ್ಕೆ ಸಾಧ್ಯವೆ ?

ನಂತರ ಆ ಕಾರಾಗೃಹವಾಸಿಯು ದುಷ್ಟಬುದ್ಧಿಯನ್ನು ಕುರಿತು "ಎಲೈ, ಯುವಕನೆ, ಕೊಂಕಣರಾಜನು ನಿನ್ನ ಯವ್ವನದ ಪ್ರಾಯವನ್ನು ನೋಡಿ ಮರಣದಂಡನೆಯನ್ನು ವಿಧಿಸಲಿಲ್ಲವೆಂದು ಹೇಳಿದೆಯಷ್ಟೆ, ನನ್ನನ್ನಾ ದರೋ ವೃದ್ಧನೆಂದು ಮರಣದಂಡನೆಗೆ ಗುರಿಮಾಡದೆ ಬಿಟ್ಟನು. ನಾವು ಸಿಕ್ಕಿ ಬಿದ್ದ ಸಂದರ್ಭಗಳನ್ನು ಪರ್ಯಾಲೋಚಿಸಿದರೆ ನಾವು ಮರಣದಂಡನೆಗೆ ಅರ್ಹರಲ್ಲವೆಂದು ಹೇಗೆ ಹೇಳುವುದಕ್ಕಾಗುವುದು ? ಆದಕಾರಣ ನಮ್ಮನ್ನು ಪ್ರಾಣದಿಂದ ಉಳಿಸಿದ ಆರಾಜನು ಕರುಣಾಶಾಲಿ ಎಂದೇ ಹೇಳಬೇಕು. ಅದಿರಲಿ. ಪ್ರಕೃತದಲ್ಲಿ ನಿನ್ನ ವಿಚಾರವನ್ನು ತಿಳಿಸಿರುವೆಯಲ್ಲವೆ. ಇನ್ನು ನನ್ನ ವಿಚಾರವನ್ನುಕೇಳಲು ನಿನಗೆ ಕೌತುಕವಿರಬಹುದು. ಹಾಗಾದರೆ ಕೇಳು ಹೇಳು

ವೆನು. ಹಸ್ತಿನಾವತಿಯ ಅರಸನಾದ ಶೂರಸೇನನ ಅಷ್ಟ ಮಂತ್ರಿಗಳಲ್ಲಿ ನಾನು ಒಬ್ಬನು. ನನ್ನ ಸ್ನ ದೇವದತ್ತನೆಂದು ಕರೆಯುವರು. ಈ ಮಂತ್ರಿ ಪದವು ನಮ್ಮ ವಂಶಪಾರಂಪರ್ಯದಿಂದ ಬಂದುದು ಈಗ್ಯೆ ಐದು ವರುಷಗಳ ಹಿಂದೆ ಅಷ್ಟಮಂತ್ರಿಗಳೂ ರಾಜನೂ ಸೇರಿ ಶತೃಗಳ ಬಲಾಬಲಗಳನ್ನು ತಿಳಿಯಬೇಕೆಂಬ ವಿಷಯವನ್ನು ಕುರಿತು ಗೂಢವಾಗಿ ಒಂದೆಡೆಯಲ್ಲಿ ಕುಳಿತು ಮಂತ್ರಾಲೋಚನೆಯನ್ನು ಮಾಡಿದೆವು. ಚಿತ್ರ ಬರೆಯುವುದರಲ್ಲಿ ನಾನು ಗಟ್ಟಿಗನೆನಿಸಿಕೊಂಡು ದಕ್ಷಿಣದೇಶದಲ್ಲಿ ವಾಡಿಕೆಯಾದ ಭಾಷೆಗಳನ್ನು ಮಾತನಾಡಲು, ಓದಲು, ಬರೆಯಲು ಚೆನ್ನಾಗಿ ತಿಳಿದಿದ್ದೆನು. ಆದುದರಿಂದ ಗೂಢಚಾರನಾಗಿ ದಕ್ಷಿಣದೇಶಕ್ಕೆಹೊರಟು ಶತೃರಾಜ್ಯಗಳಲ್ಲಿ ಸಂಚರಿಸಿಕೊಂಡಿದ್ದು ಅವರ ಬಲವಾದ ಕೋಟೆ ಕೊತ್ತಳ ಮೊದಲಾದುವುಗಳ ಚಿತ್ರವನ್ನು ಬರೆದು ಸಾಮಂತರಾಜ್ಯಗಳಲ್ಲಿ ಸಂಚರಿಸುತ್ತಿರುವ ನಮ್ಮ ಸೈನಿಕರವಶಕ್ಕೆ ಕೊಡುತ್ತಾ ಇದ್ದು ಕಾರ್ಯವು ನೆರವೇರಿದ ನಂತರ ಹಿಂದಿರುಗಬೇಕೆಂದು ಗೊತ್ತಾಯಿತು. ನನ್ನಂತೆಯೇ ಇನ್ನೂ ಮೂವರು ಮಂತ್ರಿಗಳು ಗೂಢಚಾರರಾಗಿ ಪೂರ್ವ, ಪಶ್ಚಿಮ, ಉತ್ತರ ದಿಗ್ದೇಶಗಳಿಗೆ ಹೊರಟರು. ನಾನು ವಿಂಧ್ಯಪರ್ವತಗಳ ದಕ್ಷಿಣಭಾಗದ ತಪ್ಪಲುಗಳಲ್ಲಿ ಸ್ಥಾಪಿತವಾಗಿರುವ ಶತೃಗಳ ರಾಜ್ಯದಲ್ಲಿ ಸಂಚರಿಸಿ ಕಾರ್ಯನಿರ್ವಾಹದಲ್ಲಿ ಜಯಶೀಲನಾದೆನು. ಮುಂದೆ ದಕ್ಷಿಣಕ್ಕೆ ಇಳಿದು ಕೊಂಕಣರಾಜ್ಯವನ್ನು ಹೊಕ್ಕು ಎರಡುಕೋಟೆಗಳ ಚಿತ್ರವನ್ನು ಬರೆದು ನಮ್ಮವರಲ್ಲಿ ಒಪ್ಪಿಸಿದೆನು. ನಂತರ ಈ ದುರ್ಗದಬಳಿಯನ್ನು ಸೇರಿ ತಪ್ಪಲಿನಲ್ಲಿರುವ ಮೈದಾನದಲ್ಲಿ ಕುಳಿತು ಈ ಬೆಟ್ಟವನ್ನು ಮತ್ತು ಕೋಟೆಯನ್ನು ಬರೆಯುತ್ತಿದ್ದೆನು. ಇಲ್ಲಿನ ಕಾವಲಿನವರಲ್ಲಿ ಒಬ್ಬನು ಎಲ್ಲಿಗೋ ಹೋಗಿದ್ದು ಹಿಂತಿರುಗಿ ಬರುತ್ತಾ ನನ್ನ ಬರವಣಿಗೆಯನ್ನು ನೋಡಿ ನನ್ನ ಬಳಿಯಲ್ಲೇ ನಿಂತನು. ಈ ದುರ್ಗವು ಒಂದು ಮೂಲೆಯಲ್ಲಿರುವುದರಿಂದ ಇಲ್ಲಿನ ನಿವಾಸಿಗಳು ಚಿತ್ರಪಟವನ್ನು ಎಂದೂ ನೋಡಿದವರಲ್ಲವೆಂದು ತಿಳಿಯುವುದು. ಆದ್ದರಿಂದ ಕೋಟೆ ಕೊತ್ತಳ ಮೊದಲಾದುದು ಬಟ್ಟೆಯಮೇಲೆ ಒಂದೊಂದು ತಾನಾಗಿಯೆ ಸಣ್ಣದಾಗಿ ಬಂದು ಕುಳಿತಿರುವುದೋ ಎನ್ನುವಂಥಹ ಸ್ಫುಟವಾದ ನಕ್ಷೆಯನ್ನು ಅವನು ನೋಡಿ ಸಂತೋಷಾಶ್ಚರ್ಯಗಳಿಂದ ಕೂಡಿದವನಾಗಿ ತನಗೆ ಒಂದು ಪಠವನ್ನು ಬರೆದುಕೊಡುವಂತೆ ಕೇಳಿಕೊಂಡನು. ನಾಲ್ಕಾಣೆಯನ್ನು ತೆಗೆದುಕೊಂಡು ಒಂದು ಸಣ್ಣ ಕಾಗದದಲ್ಲಿ ಈ

ಕೋಟೆ ಕೊತ್ತಲುಗಳನ್ನು ಬರೆದುಕೊಟ್ಟೆನು. ಅವನು ಅದನ್ನು ತೆಗೆದು ಕೊಂಡು ಹೋಗಿ ತನ್ನ ಸ್ನೇಹಿತರು ಮೊದಲಾದವರಿಗೆ ತೋರಿಸಲು ಅವರು ಸಂತೋಷಾಶ್ಚರ್ಯಗಳಿಂದ ನನ್ನಲ್ಲಿಗೆ ಬಂದು ಪ್ರತಿಯೊಬ್ಬನೂ ನಾಲ್ಕಾಣೆ ಯಂತೆ ಕೊಟ್ಟು ಅನೇಕ ಪಠಗಳನ್ನು ಬರೆಸಿಕೊಂಡು ಹೋದರು. ಆಗ ಇಲ್ಲಿನವರಿಗೆ ನಾನು ಇಂಥಾವನೆಂದಾಗಲಿ ನನ್ನ ಉದ್ದೇಶವು ಇಂಥದು ಎಂದಾ ಗಲಿ ಅಲ್ಪಸ್ವಲ್ಪವೂ ಅನುಮಾನ ಹುಟ್ಟುವುದಕ್ಕಾದರೂ ಆಸ್ಪದ ಕೊಡದಂತೆ ಬಹು ಜಾಗರೂಕನಾಗಿದ್ದೆನು. ನಂತರ ಈ ಪ್ರದೇಶವನ್ನು ಬಿಟ್ಟು ಸಮೀಪ ದಲ್ಲಿರುವ ಸಾಮಂತ ರಾಜ್ಯಾಭಿಮುಖವಾಗಿ ಹೊರಟೆನು. ಕೊಂಕಣದ ಎಲ್ಲೆ ಕಟ್ಟೆನ ಹತ್ತಿರ ನಮ್ಮ ಸೈನಿಕರು ಇಳಿದಿರಲು ಅವರನ್ನು ಸಂಧಿಸಿ ಮುಖಂಡನ ವಶಕ್ಕೆ ಇಲ್ಲಿನ ಕೋಟೆಕೊತ್ತಲಗಳ ಚಿತ್ರವನ್ನು ಕೊಟ್ಟೆನು. ಅವನು ಅದನ್ನು ನೋಡುತ್ತಾ ಅದರ ವಿಷಯವಾಗಿ ನನ್ನನ್ನು ಕುರಿತು ಮಾತನಾಡುತ್ತಾ ನಾವಿಬ್ಬರೂ ಕುಳಿತಿರಲು, ಸಮೀಪದಲ್ಲಿ ಇಳಿದಿದ್ದ ಕೊಂಕಣ ಸೈನಿಕರಲ್ಲಿ ಓರ್ವನು ಮಾಡಿದ ಕುಚೇಷ್ಟೆಯನ್ನು ಸಹಿಸದೆ ನಮ್ಮ ಸೈನಿಕರಲ್ಲಿ ಕೆಲವರು ಅವನನ್ನು ಚನ್ನಾಗಿ ಹೊಡೆದು ಕಳುಹಿಸಿದರು. ಈ ಸಂದರ್ಭವು ಮಾತ ನಾಡುತ್ತಾ ಕುಳಿತಿದ್ದ ನಮ್ಮಿಬ್ಬರಿಗೆ ತಿಳಿಯದಂತೆ ನಡೆಯಿತು. ಸ್ವಲ್ಪಹೊತ್ತಿ ನಲ್ಲಿಯೇ ನಮ್ಮ ಪಡೆಗೆ ಹತ್ತರಷ್ಟು ಕೊಂಕಣ ಪಡೆಯು ಬಂದು ಇದ್ದಕ್ಕೆ ಇದ್ದಂತೆ ನಮ್ಮನ್ನು ಮುತ್ತಿತು. ಈ ಗಲಭೆಯಲ್ಲಿ ಚಿತ್ರಪಠವು ಕಾಣದೆ ಹೋಯಿತು. ನಮ್ಮವರಲ್ಲಿ ಅನೇಕರು ಹತರಾದರು. ನಮ್ಮ ಸೈನಿಕರಲ್ಲಿ ಒಬ್ಬನನ್ನೂ ನನ್ನನ್ನೂ ಸಹ ಹಿಡಿದರು. ಕಾಣದೇಹೋದ ಚಿತ್ರಪಠವು ಕೊಂಕಣೀಯರಲ್ಲಿ ಒಬ್ಬನ ಕೈಗೆ ಸಿಕ್ಕಲು ಅದನ್ನು ತಂದು ತನ್ನ ಮುಖಂಡ ನಲ್ಲಿ ಒಪ್ಪಿಸಿದನು. ಸೆರೆಸಿಕ್ಕಿದ ನಮ್ಮಿಬ್ಬರನ್ನು ಇಲ್ಲಿಗೆ ಸಾಗಿಸಿದರು. ಮಾರನೇ ದಿನ ಘಾಯದ ನೋವನ್ನು ಸಹಿಸಲಾರದೆ ನಮ್ಮ ಸೈನಿಕನು ಮೃತನಾದನು. ನಂತರ ನಾಲ್ಕು ಐದು ದಿನಗಳಲ್ಲಿ ಕೊಂಕಣರಾಜನು ಇಲ್ಲಿಗೆ ಬರಲು ನನ್ನ ವಿಚಾರಣೆಯು ಜರುಗಿತು. ಹಸ್ತಿನಾವತಿಯ ಗೂಢಚಾರನೆಂಬ ತಪ್ಪನ್ನು ಹೊರಿಸಿ ಜನ್ಮಾವಧಿ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು. ಇದೇ ನನ್ನ ವೃತ್ತಾಂತವು" ಎಂದು ಹೇಳಿದನು.

ನಂತರ ದುಷ್ಟಬುದ್ಧಿಯು ಅವುದೋ ಒಂದನ್ನು ಮನಸ್ಸಿನಲ್ಲಿ ಯೋಚಿಸಿ "ಈ ಕಟ್ಟಡದ ವಿಷಯವಾಗಿಯೂ ನಮಗೆ ಆಗುವ ಆಪೈಕೆಯ ವಿಧಾನವನ್ನು

ದಯವಿಟ್ಟು ಹೇಳುವನಾಗು" ಎಂದು ಕೇಳಲು ದೇವದತ್ತನು "ನಿನಗೂ ನನಗೂ ನಡುವೆ (ದಯವಿಟ್ಟು) ಎಂಬ ಮಾತು ಕೂಡದು. ಇದರಿಂದ ನಮ್ಮಿಬ್ಬರ ಪರಸ್ಪರ ಅನುಕೂಲಕ್ಕೆ ಅಡಚನೆಯಾಗಬಹುದು. ಬಹು ದಿವಸದಿಂದ ನಡೆದುಬಂದ ಆಪ್ತಸ್ನೇಹಿತರಂತೆ ನಾವಿಬ್ಬರೂ ಇರಬೇಕೆಂದು ನಾನು ಮೊದಲೇ ಹೇಳಿದುದನ್ನು ಮರೆತುಬಿಟ್ಟಂತೆ ತೋರುವುದು" ಎನಲು, ದುಷ್ಟಬುದ್ಧಿಯು "ಮರೆಯಲಿಲ್ಲ, ಮರೆಯಲಿಲ್ಲ" ಎಂದು ಭರವಸೆಯನ್ನು ಕೊಟ್ಟನು. ಅದನ್ನು ಕೇಳಿ ದೇವದತ್ತನು "ಹಾಗಾದರೆ ಕೇಳು. ಈ ಕಟ್ಟಡ ದಲ್ಲಿ ನೆಲಸಮಕ್ಕೆ ಮೇಲೆ ಮೂರು ಅಂತಸ್ತು, ಕೆಳಗೆ ಮೂರು ಅಂತಸ್ತು ಇವೆ. ಇಷ್ಟಕ್ಕೆಲ್ಲಾ ಹೊರಗಡೆಯಿಂದ ಭದ್ರಪಡಿಸಿ ಬೀಗ ಹಾಕುವುದಕ್ಕೆ ಒಂದೇ ಒಂದು ದೊಡ್ಡ ಬಾಗಿಲು ಇರುವುದು. ಒಂದು ಅಂತಸ್ತಿನಿಂದ ಮತ್ತೊಂದು ಅಂತಸ್ತಿಗೆ ಹೋಗುವುದಕ್ಕೆ ದ್ವಾರಗಳೂ ಮೆಟ್ಟಲುಗಳೂ ಇವೆ. ಈ ಕಟ್ಟಡದ ಒಳಗಡೆ ಯಾವ ಅಂತಸ್ತಿನಲ್ಲಿಯಾದರೂ ನಾವು ಇರಬಹುದು. ಆದರೆ ರಾತ್ರಿಹೊತ್ತು ಮೇಲಿನ ಅಂತಸ್ತುಗಳಲ್ಲಿ ಗಾಳಿ ಹೊಡೆತವು ಹೆಚ್ಚಾಗಿರುವುದ ರಿಂದ ಚಳಿಗಾಗಿ ಈ ಕೊನೆಯ ಅಂತಸ್ತನ್ನು ನಾನು ಮಲಗುವ ಮನೆಯಾಗಿ ಮಾಡಿಕೊಂಡಿದೇನೆ. ಇದಲ್ಲದೆ ಈಗ ಚಳಿಗಾಲವಾಗಿರುವುದರಿಂದ ಈ ಸ್ಥಳವೇ ಹಗಲಿನಲ್ಲಿಯೂ ಅನುಕೂಲವಾಗಿದೆ. ಮೇಲಿನ ಅಂತಸ್ತುಗಳಲ್ಲಿ ದೊಡ್ಡ ಕಿಟಿಕಿಗಳಿರುವುದರಿಂದ ಬೇಸಿಗೆಯಲ್ಲಿ ಅಲ್ಲಿ ವಾಸಮಾಡುವುದು ಸುಖಕರವು. ಮೇಲ್ಗಡೆಯಲ್ಲಿರುವ ಮೊದಲನೇ ಅಂತಸ್ತಿನ ಮೇಲ್ಭಾಗದಲ್ಲಿ ಧ್ವಜವನ್ನು ನಾಟಿರುವ ಸ್ಥಳಕ್ಕೆಹೋಗುವುದಕ್ಕೆ ಮೆಟ್ಟಲುಗಳೂ ಇವೆ. ಬಹು ಶಕೆಯಾದರೆ ಮೇಲ್ಭಾಗದಲ್ಲಿ ಹೋಗಿ ಗಾಳಿಯಲ್ಲಿ ವಿಶ್ರಾಂತಿಗೊಳ್ಳಬಹುದು. ಇನ್ನು ನಮಗೆ ಆಗುವ ಆವೈಕೆಯನ್ನು ಹೇಳುವೆನು ಕೇಳು. ದಿನಕ್ಕೆ ಎರಡುಹೊತ್ತು ಭೋಜನ ಆಹಾರವನ್ನು ಈ ಕಟ್ಟಡದ ಕಾವಲುಗಾರನು ತಂದುಕೊಡುವನು. ಪ್ರತಿ ಧಿನವೂ ಮೈತೊಳೆದುಕೊಳ್ಳುವುದಕ್ಕೆ ಅನುಕೂಲವನ್ನು ಮಾತ್ರ ಮಾಡಿಲ್ಲ. ಆದರೆ ನೆಲಸಮದ ಅಂತಸ್ತಿನಲ್ಲಿ ಬಟ್ಟೆಗಳನ್ನು ಒಗೆದುಕೊಳ್ಳುವುದಕ್ಕೆ ಕಲ್ಲೂ ನೀರು ಕಾಯಿಸುವುದಕ್ಕೆ ಒಲೆಯೂ, ಭಾಂಡವೂ ಇರುವವು. ವಾರಕ್ಕೆ ಒಂದಾವರ್ತಿ ಒಬ್ಬ ಮುದುಕಿಯು ಬಂದು ಬಟ್ಟೆಗಳನ್ನು ಒಗೆದುಕೊಳ್ಳು ವುದಕ್ಕೆ ನೀರನ್ನು ಒದಗಿಸಿಕೊಟ್ಟು ಭಾಂಡದಲ್ಲಿ ನೀರು ಕಾಯಿಸಿ ಎಣ್ಣೆಯನ್ನು ತಂದುಕೊಡುವಳು. ಎಣ್ಣೆಯನ್ನು ಒತ್ತಿಕೊಂಡರೆ ನೀರೆರದುಬಿಟ್ಟು ಹೋಗು

ವಳು. ಮಲಮೂತ್ರ ವಿಸರ್ಜನೆಗೆ ಮೇಲಿನ ಮೊದಲನೇ ಅಂತಸ್ತಿನಲ್ಲಿ ಒಂದು ಸಣ್ಣ ದ್ವಾರವಿರುವುದು. ಆರುತಿಂಗಳಿಗೊ ಒಂದು ವರುಷಕ್ಕೊ ಒಂದಾವರ್ತಿ ಉಟ್ಟಿದ್ದ ಬಟ್ಟೆಗಳು ಹರಿದುಹೋಗಿದ್ದರೆ ಹೊಸ ಬಟ್ಟೆಗಳನ್ನು ಕೊಡುವರು. ಸ್ವಾತಂತ್ರವನ್ನು ತಪ್ಪಿಸಿ ಸೆರೆಯಲ್ಲಿಟ್ಟಿದ್ದರೂ ಆರೋಗ್ಯವಾಗಿರುವುದಕ್ಕೆ ಅನುಕೂಲಗಳನ್ನು ಏರ್ಪಡಿಸಿರುವ ಆ ಕೊಂಕಣರಾಜನಪ್ನು ಕೃಪಾಶಾಲಿಯೆಂದೇ ಹೇಳಬೇಕು. ವೃಥಾ ಹಿಂಸೆಯನ್ನು ಕೊಡುವುದು ಆತನ ಮನೋಧರ್ಮಕ್ಕೆ ವಿರುದ್ಧವಾಗಿರಬೇಕೆಂದು ತೋರುವುದು" ಎಂದು ಹೇಳಿ ಮುಗಿಸಿದನು.

ಇದನ್ನೆಲ್ಲಾ ಕೇಳಿ ದುಷ್ಟಬುದ್ಧಿಯು ಹರ್ಷಿತನಾಗಿ "ನಾವು ಇಬ್ಬರೂ ಸಾಹಸಪಟ್ಟರೆ ಇಲ್ಲಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವದಿಲ್ಲವೆ?" ಎಂದು ಕೇಳಲು ದೇವದತ್ತನು "ನಾನು ಇಲ್ಲಿಗೆ ಬಂದಾರಭ್ಯದಿಂದ ತಪ್ಪಿಸಿಕೊಳ್ಳುವುದಕ್ಕೆ ನಿನ್ನಂತೆಯೇ ಬಗೆಬಗೆಯಾಗಿ ಯೋಚಿಸಿ ಯಾವ ಯತ್ನವೂ ಸಾಗುವದಿಲ್ಲವೆಂದು ನಿರ್ಧರಿಸಿ ತಿಳಿದು ಸುಮ್ಮನಾಗಿರುವೆನು. ಈಗ ನೀನು ಯೋಚಿಸಿರುವ ಸಾಹಸವೇನು? ಸ್ವಲ್ಪ ಹೇಳು ನೋಡುವ" ಎಂದು ಕೇಳಿದನು. ಅದಕ್ಕೆ ದುಷ್ಟಬುದ್ಧಿಯು "ಪ್ರತಿದಿನವೂ ಆಹಾರವನ್ನು ತಂದುಕೊಟ್ಟು ಹೋಗುವ ಕಾವಲಿನ ಆಳನ್ನು ಮೇಲೆ ಬಿದ್ದು ಘಾತಿಸಿಬಿಟ್ಟು ಓಡಿಹೋಗಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲವೆ?" ಎಂದು ಕೇಳಲು, ದೇವದತ್ತನು "ಈ ಕಾವಲಿನವನನ್ನೇನೋ ಕೊಂದುಬಿಡಬಹುದು. ಆದರೆ ನೆಲಸಮದ ಅಂತಸ್ತಿನವರಿಗೂ ಇವನ ಜೊತೆಯಲ್ಲಿ ಬಂದು ಒಳಗೆ ಹೋದ ಆಳು ಹೊರಗೆ ಬರುವವರಿಗೂ ಹೊರಬಾಗಿಲಿನಲ್ಲಿ ಕಾದು ನಿಂತಿರುವ ಮತ್ತೊಬ್ಬ ಕಾವಲಿನವನು ಇರುವನು. ನಿನ್ನ ಯೋಚನೆಯಂತೆ ಇವನನ್ನೂ ಕೂಡ ಘಾತಿಸಬೇಕು. ಅಲ್ಲಿಂದ ಕೋಟೆಯನ್ನು ಸೇರುವುದಕ್ಕೆ ಆರು ಚದರಗಳಲ್ಲಿರುವ ಮನೆಗಳನ್ನು ಯಾರೂ ಅರಿಯದಂತೆ ಸುತ್ತಿಸುತ್ತಿ ದಾಟಿಹೋಗಬೇಕು. ನಂತರ ಮೆಟ್ಲುಗಳಿರುವ ಒಂದೇ ಮಾರ್ಗವನ್ನು ಹೊರತು ಕೋಟೆಯನ್ನು ಹತ್ತುವುದಕ್ಕೆ ಮತ್ತೆ ಯಾವ ದಾರಿಯೂ ಇರುವುದಿಲ್ಲ. ಅಲ್ಲಿ ಬಿಚ್ಚುಕತ್ತಿಯನ್ನು ಹಿಡಿದು ರಾತ್ರಿಯೂ ಹಗಲೂ ಕಾವಲುಕೊಡುತ್ತಿರುವ ಸೈನಿಕಮಂದಿರವು ಒಂದು ಇರುವುದು. ಕೋಟೆಯ ಮೇಲ್ಭಾಗದಲ್ಲಿ ಮೆಟ್ಲಿನ ಮಾರ್ಗದ ಪಕ್ಕದಲ್ಲಿ ಮತ್ತೊಂದು ಕಾವಲಿನ ಸೈನಿಕಮಂದಿರವು ಇರುವುದು. ಅಲ್ಲಿಂದ ಬೆಟ್ಟದ ತಪ್ಪಲಿಗೆ ಇಳಿದುಹೋಗುವುದಕ್ಕೆ ಮೆಟ್ಲಿನ ದಾರಿಯು ಒಂದೇ ಇರುವುದು.

ತಪ್ಪಲಿನಲ್ಲಿ ಇನ್ನೊಂದು ಸೈನಿಕಮಂದಿರವು ಇರುವುದು. ಇಷ್ಟನ್ನೆಲ್ಲಾ ವಂಚಿಸಿ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಾದೀತೆ ನೀನೇ ಯೋಚಿಸು" ಎಂದು ಹೇಳಿದನು.

ಇದನ್ನೆಲ್ಲಾ ಕೇಳಿದ ದುಷ್ಟಬುದ್ಧಿಯ ಮನಸ್ಸು ನಿರಾಶೆಯಲ್ಲಿ ಮುಳುಗಿ ಪಾತಾಳಕ್ಕೆ ಇಳಿದುಹೋಯಿತು. ಯಾವದೊಂದೂ ತೋರದೆ ಅವನು ಮೌನದಿಂದ ಕುಳಿತನು.

ಎರಡು ಕ್ಷಣಗಳಾದನಂತರ ದೇವದತ್ತನು ಕನಿಕರದಿಂದ "ಅಯ್ಯಾ ಮಿತ್ರನೆ ನೀನು ನನಗಿಂತಲೂ ಪುಣ್ಯಶಾಲಿಯೆಂದೇ ಹೇಳಬೇಕು. ಹೇಗೆಂದರೆ: ನಾನು ಇಲ್ಲಿ ಸೆರೆಬಿದ್ದ ಪ್ರಾರಂಭದಲ್ಲಿ ನನ್ನ ವ್ಯಸನಕ್ಕೆ ಪಾರವೇ ಇರಲಿಲ್ಲ. ಬಹಳ ದಿವಸಗಳವರಿಗೂ ನನ್ನಲ್ಲಿಯೇ ನಾನು ಕೊರಗಿ ಕರಗಿ ನಾನಾಗಿಯೇ ಸಮಾಧಾನವನ್ನು ತಂದುಕೊಂಡು ಕಾಲವನ್ನು ಕಳೆಯುತ್ತಾ ಬಂದಿರುವೆನು. ನೀನು ಮಾಡಿದ ದುಡುಕಿನ ಯೋಚನೆಯಂತೆ ನಾನು ನನ್ನ ಮನದಲ್ಲಿ ಯೋಚಿಸಿದೆನು. ಆದರೆ ಮಂತ್ರಿಪದವಿಯಲ್ಲಿದ್ದು ಕಾರ್ಯಾಕಾರ್ಯ ವಿವೇಚನೆಯನ್ನು ಬಲ್ಲವನಾದುದರಿಂದಲೂ ಬುದ್ಧಿಸಾಹಸವನ್ನು ಅನುಸರಿಸಿ ಕಾರ್ಯಸಾಹಸವು ನಡೆದರೆ ಫಲಪ್ರದಾಯಕವೆಂಬ ವಿಷಯವನ್ನು ಅನೇಕವೇಳೆ ಅನುಭವಪೂರ್ವಕವಾಗಿ ತಿಳಿದಿರುವೆನಾದುದರಿಂದಲೂ ಮನದಲ್ಲಿ ದುಡುಕಿದುದನ್ನು ಬುದ್ಧಿಯಿಂದ ತಡೆದೆನು. ಮನಸ್ಸಿನಲ್ಲಿ ತೋರಿದಂತೆಯೇ ಆಚರಿಸಿದ್ದರೆ ಈಗಿರುವ ಅನುಕೂಲಗಳು ತಪ್ಪಿಹೋಗಿ ಹಿಂಸೆಗೆ ಗುರಿಮಾಡಲ್ಪಟ್ಟಿದ್ದರೆ ಈ ರೀತಿ ನಿನಗೆ ಸಮಾಧಾನವನ್ನು ಹೇಳುವ ಪ್ರಾಪ್ತಿಯೂ ತಪ್ಪಿಹೋಗುತ್ತಲಿತ್ತು. ನಮ್ಮಿಬ್ಬರನ್ನು ಬೇರೆಬೇರೆ ಇಡಿಸುತ್ತಿದ್ದರು" ಎಂದು ಹೇಳಿ ದುಷ್ಟಬುದ್ಧಿಯನ್ನು ಸಮಾಧಾನಪಡಿಸಿದನು.

ಹೀಗೆಯೇ ಒಂದು ವಾರವು ಕಳೆಯಿತು. ಅಲ್ಲಿಗೆ ದುಷ್ಟಬುದ್ಧಿಯು ವ್ಯಸನವನ್ನು ಬಿಟ್ಟು ಬಂದಿರುವ ದುರವಸ್ಥೆಯಲ್ಲಿ ಸಮಾಧಾನಚಿತ್ತನಾಗಿ ದೇವದತ್ತನೊಡನೆ ಆಪ್ತಭಾವದಲ್ಲಿ ಇರುವುದೇ ಮೇಲೆಂದು ಆ ರೀತಿ ಆಚರಿಸಲಾರಂಭಿಸಿದನು. ಮಜ್ಜನಸ್ನಾನದ ದಿನವು ಬರಲು ಕಾವಲಿನ ಆಳುಗಳು ಮೊದಲಿದ್ದ ಭಾಂಡವನ್ನು ತೆಗೆದುಕೊಂಡು ಹೋಗಿ ಆದಕ್ಕಿಂತಲೂ ದೊಡ್ಡದಾದ ಬೇರೊಂದು ಭಾಂಡವನ್ನು ತಂದು ಇರಿಸಿದರು. ವಾಡಿಕೆಯಾಗಿ ಬರುತ್ತಿದ್ದ ಮುದುಕಿಯು ಬಂದು ಬಟ್ಟೆಗಳನ್ನು ಒಗೆಯುವುದಕ್ಕೆ ನೀರನ್ನು

ತಂದು ಹವಣಿಸಿದಳು. ದುಷ್ಟಬುದ್ಧಿಯು ತನ್ನ ಬಟ್ಟೆಗಳೊಡನೆ ದೇವದತ್ತನ ಬಟ್ಟೆಗಳನ್ನು ಒಗೆಯುತ್ತಿದ್ದನು. ಮುದುಕಿಯು ನೀರು ಕಾಸುತ್ತಾ ಕುಳಿತಿದ್ದಳು. ದೇವದತ್ತನು ಸಮೀಪದಲ್ಲಿ ಕುಳಿತು ಅವಳೊಡನೆ ಮಾತನಾಡುತ್ತಾ ಹೊರಗಿನ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದನು. ನೀರು ಕಾದನಂತರ ಎಣ್ಣೆಯನ್ನು ತಂದುಕೊಟ್ಟು ಇಬ್ಬರಿಗೂ ನೀರೆರೆದು ಮುದುಕಿಯು ಹೊರಟು ಹೋದಳು. ಸ್ವಲ್ಪಹೊತ್ತಿನಮೇಲೆ ಕಾವಲಿನ ಆಳು ಭೋಜನಾಹಾರವನ್ನು ತಂದುಕೊಟ್ಟು ಹೊರಟುಹೋದನು.

ನಂತರ ಎರಡು ವಾರಗಳು ಕಳೆದುವು. ಈ ಮಧ್ಯೆ ಅವರಿಬ್ಬರಲ್ಲಿ ಸ್ನೇಹಭಾವವು ಹೆಚ್ಚುತ್ತಾ ಬಂದಿತು. ಹೀಗಿರಲು ಒಂದು ದಿನ ದುಷ್ಟಬುದ್ಧಿಯು ಮಾತಿನ ಮೇಲೆ ಮಾತು ಬಂದು ನಿಜವಾದ ಸಂಗತಿಗಳನ್ನು ದೇವದತ್ತನಿಗೆ ತಿಳಿಸಿದನು. ಅದನ್ನೆಲ್ಲಾ ಕೇಳಿ ದೇವದತ್ತನು "ಅಯ್ಯಾ, ಮಿತ್ರನೇ! ನೀನು ಮರೆಮಾಡದಂತೆಯೇ ನಾನೂ ಕೂಡ ಅನೇಕ ಸಂಗತಿಗಳನ್ನು ನಿನಗೆ ತಿಳಿಸದೆ ಇರುವೆನು. ಈ ಲಕ್ಷ್ಮೀನಿಲಯದ ಇರವನ್ನೂ ನಾನೂ ಬಲ್ಲೆನು. ಈ ಪ್ರಾಂತ್ಯಗಳಿಗೆ ಬರಲು ನನಗೆ ಸ್ವಾಮಿಕಾರ್ಯದ ಉದ್ದೇಶವು ಒಂದೇ ಇರಲಿಲ್ಲ. ಅದರೊಡನೆ ಸ್ವಕಾರ್ಯವೂ ಇದ್ದಿತು. ಅದನ್ನು ಹೇಳುವೆನು ಕೇಳು ನನ್ನ ತಂದೆಗೆ ನಾನು ಒಬ್ಬನೇ ಮಗನು. ನನಗೆ ಐದುವರುಷ ವಯಸ್ಸಿನಲ್ಲಿ ತಂದೆಯು ಕಾಲವಾದನು. ನನ್ನ ಚಿಕ್ಕಪ್ಪನು ವಿದ್ಯಾಬುದ್ಧಿಯನ್ನು ಕಲಿಸಿ ಸರ್ಕಾರದ ಚಾಕರಿಗುಲ್ಲಿಟ್ಟು ರಾಜಕೀಯ ಸಂಬಂಧವಾದ ವಿಷಯಗಳನ್ನು ನನಗೆ ಬೋಧಿಸುತ್ತಿದ್ದನು. ಆತನು ಪರಮ ದಯಾಳುವು. ದೈವಪಾರಾಯಣಚಿತ್ತನು. ದಾನಕರ್ಣನು. ಆದುದರಿಂದ ಆತನಲ್ಲಿದ್ದ ಅಪರಿಮಿತ ಐಶ್ವರ್ಯವು ಕೆಲವು ವರುಷಗಳಲ್ಲಿ ಮುಗಿದುಹೋಗಿ ಆತನು ತಿರುಕನಂತಾಗಿ ನನ್ನ ಪೋಷಣೆಯಲ್ಲಿ ಇರುತ್ತಿದ್ದನು ಆತನಿಗಿದ್ದ ಒಬ್ಬ ಮಗನು ತೀರಿಹೋಗಲು ತೀರ್ಥಯಾತ್ರೆಯನ್ನು ಮಾಡಿ ಪುತ್ರಶೋಕವನ್ನು ಶಮನಮಾಡಿಕೊಳ್ಳುವೆನೆಂದು ಉತ್ತರದೇಶದ ಅನೇಕ ಪುಣ್ಯಕ್ಷೇತ್ರಗಳನ್ನು ಸುತ್ತಿಬಂದು ದಕ್ಷಿಣದೇಶಾಭಿಮುಖವಾಗಿ ಹೊರಟು ಎರಡು ವರ್ಷಗಳನಂತರ ಹಿಂತಿರುಗಿ ಬಂದು ಇದ್ದಕ್ಕೆ ಇದ್ದಂತೆಯೇ ಮಹದೈಶ್ವರ್ಯವಂತನಾಗಿ ಯಥಾಪ್ರಕಾರ ದಾನಧರ್ಮ ಕಾರ್ಯಗಳಲ್ಲಿ ನಿರತನಾದನು. ಎಷ್ಟುದಾನಖರ್ಚಾದರೂ ಆತನ ಐಶ್ವರ್ಯವು ಕುಂದಲಿಲ್ಲ. ನಾನು ಈ ಪ್ರಾಂತ್ಯಕ್ಕೆ ಬರುವದಕ್ಕೆ ಒಂದು

ವರುಷದ ಹಿಂದೆ ಆತನು ಕಾಯಿಲೆ ಬಿದ್ದು ಅವಸಾನ ಕಾಲವು ಪ್ರಾಪ್ತಿಸಲು ನನ್ನನ್ನು ಹತ್ತಿರಕ್ಕೆ ಕರೆದು ಉಳಿದವರನ್ನು ದೂರಕ್ಕೆ ಹೋಗುವಂತೆ ಹೇಳಿ ಲಕ್ಷ್ಮೀನಿಲಯದ ವಿಷಯವನ್ನು ವರ್ಣಿಸಿ ಹೇಳುತ್ತಿದ್ದನು. ಆ ನಿಲಯವನ್ನು ಪ್ರವೇಶಮಾಡುವ ವಿಧಾನವನ್ನು ಹೇಳಲಾರಂಭಿಸುವಷ್ಟರಲ್ಲಿ ಪ್ರಾಣವು ಕಂಠ ಗತವಾಯಿತು. ನಂತರ ಶಬ್ದರಹಿತವಾದ ಕೆಲವು ಮಾತುಗಳನ್ನಾಡಿ ಪರ ಲೋಕಗತನಾದನು. ಈ ವಿಷಯವನ್ನು ನಾನು ಮೊದಲೇ ಅರಿಯದವ ನಾಗಿದ್ದರೆ ಲಕ್ಷ್ಮೀನಿಲಯದ ಸಂಗತಿಯ ಪರವಾಗಿ ನೀನು ಹೇಳಿದುದನ್ನು ನಂಬುತ್ತಿರಲಿಲ್ಲ. ಆ ಗುಡಿಯಲ್ಲಿ ಆವುದೋ ಒಂದು ಕೀಲನ್ನು ಮೊದಲು ಕಳಚುವಾಗಲೂ ನಂತರ ಮುಚ್ಚುವಾಗಲೂ ಆ ವಿಧವಾದ ಶಬ್ದವುಂಟಾಗಿರ ಬೇಕು. ಇರಲಿ, ನಾವಿಬ್ಬರೂ ಹೋಗಿ ಅದನ್ನು ಪರೀಕ್ಷಿಸಿದರೆ ಗೊತ್ತಾಗು ವುದು" ಎಂದು ಹೇಳಿದನು.

ಈ ಕೊನೆಯಲ್ಲಿ ಹೇಳಿದ ಮಾತಿನ ಧ್ವನಿಯನ್ನು ತಿಳಿದವನಾಗಿ ದುಷ್ಟ ಬುದ್ಧಿಯು ಸಂತೋಷಾಶ್ಚರ್ಯದಿಂದ "ಅಯ್ಯಾ ಮಿತ್ರನೆ! ನೀನು ಕೊನೆಯಲ್ಲಿ ಹೇಳಿದುದನ್ನು ನೋಡಿದರೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಮಾರ್ಗವನ್ನು ಹುಡುಕಿರುವೆಯೆಂಬ ಭರವಸೆಯನ್ನು ಸೂಚಿಸುವುದು. ನನ್ನನ್ನು ಬಿಡಿಸಿ ಕಾಪಾಡುವವನಾಗು. ನನ್ನ ಜೀವಮಾನವಿರುವವರಿಗೂ ನಿನಗೆ ಕೃತಜ್ಞನಾಗಿರುವೆನು" ಎಂದು ಲವಲವಿಕೆಯಿಂದ ಮಾತನಾಡಲು ದೇವ ದತ್ತನು "ಅಯ್ಯಾ, ಸಮಾಧಾನಚಿತ್ತನಾಗು. ಆತುರಪಡಬೇಡ. ಆತುರ ಗಾರನಿಗೆ ಬುದ್ಧಿ ಕಡಿಮೆ ಎಂಬ ಮಾತನ್ನು ಕೇಳಿರುವೆ. ಯಾವ ಕಾರ್ಯವನ್ನು ಸಮಾಧಾನಚಿತ್ತದಿಂದ ಸಾವಧಾನವಾಗಿ ಯೋಚಿಸಿ ಮಾಡಬೇಕು. ನನ್ನ ಸಂಗಡ ಬಾ. ನಾನು ಹುಡಿಕಿರುವ ದಾರಿಯನ್ನು ತೋರಿಸುತ್ತೇನೆ" ಎಂದು ದುಷ್ಟಬುದ್ಧಿಯನ್ನು ಕರೆದುಕೊಂಡು ಮೇಲಿನ ಕೊನೇ ಅಂತಸ್ತಿಗೆ ಹೋಗಿ ಅಲ್ಲಿ ಮಲಮೂತ್ರ ವಿಸರ್ಜನೆಗೆಂದು ಇರುವ ಹಾಸುಕಲ್ಲಿನ ಮಧ್ಯದಲ್ಲಿರುವ ದ್ವಾರದ ಬಳಿಯಲ್ಲಿ ಸೇರಿ "ಆ ಎರಡು ಮೂಲೆಗಳನ್ನು ಹಿಡಿದು ಈ ಕಲ್ಲನ್ನು ಎತ್ತು" ಎಂದು ಎತ್ತಿಸಿ ಕಲ್ಲನ್ನು ತಾನು ಹಿಡಿದುಕೊಂಡು "ಇಗೋ, ಇಲ್ಲಿ ಬಗ್ಗಿ ನೋಡು. ಈ ದ್ವಾರವು ಎಷ್ಟು ಅಗಲವಿದೆ ಹೇಳು" ಎಂದು ಕೇಳಲು ದುಷ್ಟಬುದ್ಧಿಯು "ಇಬ್ಬರು ನುಗ್ಗಿ ಹೋಗುವಷ್ಟು ಅಗಲವಾಗಿದೆ. ಆದರೆ ಉದ್ದಕ್ಕೂ ಇಷ್ಟೇ ಅಗಲವಿರುವುದೆ?" ಎಂದು ಕೇಳಿದನು. ಅದಕ್ಕೆ ದೇವ

ದತ್ತನು "ಇರಲಿ. ಇದರ ವಿವರವನ್ನು ಹೇಳುವೆನು. ಮೊದಲು ಇದನ್ನು ಮುಚ್ಚುವ" ಎಂದು ಇಬ್ಬರೂ ಸೇರಿ ಕಲ್ಲಿನ ಮೂಲೆಗಳನ್ನು ಹಿಡಿದು ಅದನ್ನು ಯಥಾಸ್ಥಾನದಲ್ಲಿ ಇರಿಸಿದರು.

ಆಮೇಲೆ ದೇವದತ್ತನು ದುಷ್ಟಬುದ್ಧಿಯನ್ನು ಮೇಲ್ಭಾಗಕ್ಕೆ ಕರೆದು ಕೊಂಡು ಹೋಗಿ ಧ್ವಜಸ್ತಂಭವನ್ನು ನೆಟ್ಟಿರುವ ಸ್ಥಳದ ಸಮೀಪದಲ್ಲಿರುವ ಒಂದು ಕಬ್ಬಿಣದ ರಾಟಳೆ ಯಂತ್ರವನ್ನು ತೋರಿಸಿ "ಇದೋ, ಈ ರಾಟಳೆ ಯನ್ನು ನೋಡಿದೆಯಾ? ಇದರಲ್ಲಿ ಮೂರುಮೊಳ ಪ್ರಮಾಣದಷ್ಟು ಮೇಲೆ ಕಾಣಿಸುತ್ತಿದೆಯಷ್ಟೆ. ಉಳಿದ ಒಂದು ಮೊಳ ಪ್ರಮಾಣದಷ್ಟು–ಇಗೋ! ಬಗ್ಗಿ ನೋಡು. ಈ ಮೇಲ್ಭಾಗದ ನೆಲದಲ್ಲಿ ಕೊರೆದಿರುವ ಗುಣಿಯಲ್ಲಿ ಇರುವುದು. ಈ ಕೊನೆಯ ಅಂತಸ್ತಿನ ಮೇಲ್ಛಾವಣಿ ಗೋಡೆಯ ಮಂದವನ್ನು ನೋಡಿದರೆ ಈ ಹಳ್ಳಕ್ಕೂ, ಆ ಗೋಡೆಗೂ ನಡುವೆ ೨–೩ ಅಂಗಲ ದಪ್ಪ ವಿರುವದೆಂದು ತೋರುವುದು. ಇದನ್ನು ಕುರುಹು ಕಾಣದಂತೆ ಗಾರೆಯಿಂದ ಮುಚ್ಚಿರುವರು. ಧ್ವಜಪತಾಕೆಯನ್ನು ಹತ್ತಿಸುವುದಕ್ಕಾಗಿ ಈ ರಾಟಳೆಯನ್ನು ಇಟ್ಟಿರುವರು. ಯುದ್ಧ ಕಾಲದಲ್ಲಿ ಸಮಯ ಒದಗಿದರೆ ಈ ರಾಟಳೆಗೆ ಬಲವಾದ ಹಗ್ಗಗಳನ್ನು ಕಟ್ಟಿ ಒಂದು ಸಲಕ್ಕೆ ಇಬ್ಬರಂತೆ ಸೈನಿಕರು ಕೆಳಗೆ ನೋಡಿದೆಯಲ್ಲ ಈ ದ್ವಾರದಿಂದ ನೆಲಸಮದವರಿಗೂ ಇಳಿದು ಅಲ್ಲಿರುವ ಪಾರೆ ಕಲ್ಲನ್ನು ಪಕ್ಕದಲ್ಲಿರುವ ರಂಧ್ರಕ್ಕೆ ಎಳೆದು ನೂಕಿದರೆ ಮೆಟ್ಟಿಲುಗಳನ್ನುಳ್ಳ ಸುರಂಗವು ಗೋಚರಿಸವುದು. ಇದು ಹೋಗುತ್ತ ಹೋಗುತ್ತ ಎರಡಾಗಿ ಕವಲು ಒಡೆಯುವುದು. ಒಂದು ಬೆಟ್ಟದ ತಪ್ಪಲಿಗೆ ಸ್ವಲ್ಪ ದೂರದಲ್ಲಿರುವ ಒಂದು ಪೊದರಿನಲ್ಲಿ ಅಂತ್ಯವಾಗುವುದು. ಅಲ್ಲಿ ಯಾವಾಗಲೂ ಕಾವಲಿರುವ ಸೈನಿಕ ಮಂದಿರವು ಸಮೀಪದಲ್ಲಿರುವುದು. ಮತ್ತೊಂದು ಈ ದುರ್ಗದ ಕೋಟೆಯ ಒಳಪಾರ್ಶ್ವಕ್ಕೆ ಹೋಗುವುದು. ಇದರ ಕೊನೆಯನ್ನು ಹಲಗೆ ಯಿಂದ ಮುಚ್ಚಿ ಮೇಲೆ ತಿಳುವಾಗಿ ನೆಲಸಮಕ್ಕೆ ಸರಿಯಾಗಿ ಗುರುತು ಕಾಣದಿರುವಂತೆ ಮಣ್ಣನ್ನು ಹಾಕಿರುವರು. ಈ ಸುರಂಗದ ವಿಷಯವನ್ನು ನಮಗೆ ನೀರೆರೆಯುವ ಮುದುಕಿಯಿಂದ ತಿಳಿದೆನು. ದುರ್ಗಗಳನ್ನು ಕಟ್ಟಿಸುವ ವಿಧಾನದಲ್ಲಿ ನನಗಿರುವ ಅನುಭವದಿಂದ ಮಿಕ್ಕ ವಿಷಯಗಳನ್ನು ಊಹಿಸಿ ನಾನಾ ಭಾಗಗಳನ್ನು ಸಾವಧಾನವಾಗಿ ಬುದ್ಧಿಕೌಶಲ್ಯವನ್ನು ಪ್ರಯೋಗಿಸಿ ತಿಳಿದುಕೊಂಡೆನು. ಮುದುಕಿಯನ್ನು ವಶಪಡಿಸಿಕೊಂಡುದು ಮೊದಲಾದ

ಸಂಗತಿಗಳನ್ನು ರಾತ್ರಿ ಮಲಗುವ ಮನೆಯಲ್ಲಿ ಹೇಳುವೆನು" ಎಂದು ಹೇಳಿ ಸೂರ್ಯಾಸ್ತಮಾನವಾಗುತ್ತಿರಲು ದುಷ್ಟಬುದ್ಧಿಯನ್ನು ಕರೆದುಕೊಂಡು ಕೆಳಗೆ ಇಳಿದು ಬಂದನು.

ದುಷ್ಟಬುದ್ಧಿಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನ ಮನಸ್ಸಿನಲ್ಲಿ ಕುತೂಹಲವು ತುಂಬಿತುಳುಕುತ್ತಲಿತ್ತು. ಆದರೂ ಮನಸ್ಸನ್ನು ತಡೆದುಕೊಂಡು ಮಲಗುವ ಸಮಯವನ್ನು ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದನು.

ಸ್ವಲ್ಪಹೊತ್ತಿನ ಮೇಲೆ ಕಾವಲಿನ ಆಳು ಆಹಾರವನ್ನು ತಂದುಕೊಟ್ಟು ಹೋದನು. ಇಬ್ಬರಿಗೂ ಭೋಜನವೂ ಆಯಿತು. ದೇವದತ್ತನು ನಿದ್ರೆ ಬರುವುದೆಂದು ಮಲಗಿಕೊಂಡನು ದುಷ್ಟಬುದ್ಧಿಯು ಆಶ್ಚರ್ಯದಿಂದ ತನ್ನ ಮನಸ್ಸಿನಲ್ಲಿ "ಇದೇನು? ಇವನು ಇನ್ನೂ ಕೆಲವು ಸಂಗತಿಗಳನ್ನು ರಾತ್ರಿಗೆ ತಿಳಿಸುವೆನೆಂದು ಹೇಳಿ ಈಗ ಮಲಗಿಕೊಂಡಿರುವನು. ನನಗಾದರೋ ಕುತೂಹಲವು ಕ್ಷಣಕ್ಷಣಕ್ಕೂ ಹೆಚ್ಚುತ್ತಲೇ ಇರುವುದು. ಇವನನ್ನು ಎಬ್ಬಿಸಿ ಕೇಳುವುದು ಸರಿಯಲ್ಲ" ಎಂದು ಸ್ವಲ್ಪಹೊತ್ತು ಚಿಂತಿಸಿ ನಿದ್ರೆ ಹತ್ತಲು ಮಲಗಿ ನಿದ್ರಿಸುತ್ತಿದ್ದನು.

ಮಧ್ಯರಾತ್ರಿಯಾಯಿತು. ದೇವದತ್ತನು ಎದ್ದು ದುಷ್ಟಬುದ್ಧಿಯನ್ನು ಎಬ್ಬಿಸಿ ದೀಪವನ್ನು ಹತ್ತಿಸಿ ಅದನ್ನು ಅಲ್ಲಿಯೇ ಬಿಟ್ಟು ಅವನನ್ನು ಜೊತೆಯಲ್ಲಿ ಕರೆದುಕೊಂಡು ಕತ್ತಲೆಯಲ್ಲಿ ಕೊನೆ ಅಂತಸ್ತಿನ ಮೇಲ್ಭಾಗವನ್ನು ಸೇರಿ ಸುತ್ತ ಮುತ್ತಲೂನೋಡಿ ಎಲ್ಲವೂ ನಿಶ್ಶಬ್ದವಾಗಿರಲು ಹಿಂತಿರುಗಿ ಇಳಿದು ಮಲಗುವ ಮನೆಗೆ ಬಂದು ದೀವಿಗೆಯನ್ನು ಹಿಡಿದು ತೋರಿಸುತ್ತಿರುವಂತೆ ದುಷ್ಟಬುದ್ಧಿಗೆ ಹೇಳಿ ಬೆಳಗಿನ ಹೊತ್ತಿನಲ್ಲಿಯೂ ಕತ್ತಲೆಯಾಗಿರುವ ಒಂದುಮೂಲೆಯಲ್ಲಿರುವ ತನ್ನ ಹಾಸಿಗೆಯನ್ನು ಮೆಲ್ಲನೆ ಎತ್ತಿ ಸ್ವಲ್ಪಮಣ್ಣನ್ನು ತೆಗೆದುಹಾಕಿ "ಇದೋ! ಈ ಹುರಿಯನ್ನು ನೋಡು" ಎಂದು ಅದನ್ನು ಎತ್ತಿ ದುಷ್ಟಬುದ್ಧಿಯ ಕೈಯಲ್ಲಿ ಕೊಟ್ಟು, "ಇದು ಯಾತರಿಂದ ಮಾಡಿರುವುದು? ಹೇಳಬಲ್ಲೆಯಾ?" ಎಂದು ಕೇಳಲು ಅವನು ಅದನ್ನು ಚೆನ್ನಾಗಿ ನೋಡಿ, "ಇದನ್ನು ರೇಷ್ಮೆಬಟ್ಟೆಯಿಂದ ಹೆಣೆದಿರುವಂತೆ ತೋರುವುದು" ಎಂದು ಉತ್ತರವೀಯಲು ದೇವದತ್ತನು ಅಹುದೆಂದು ತೆಗೆದು ಅದರಸ್ಥಳದಲ್ಲಿ ಇರಿಸಿ ಮಣ್ಣನ್ನು ಮುಚ್ಚಿ ಮೊದಲಿದ್ದಂತೆ ಸರಿಮಾಡಿ ಹಾಸಿಗೆಯನ್ನು ಹಾಸಿ ದುಷ್ಟಬುದ್ಧಿಯನ್ನು ಕುಳ್ಳಿರಿಸಿಕೊಂಡು ಕೆಲವು ಸಂಗತಿಯನ್ನು ಹೇಳಲುಪಕ್ರಮಿಸಿದನು. ಏನೆಂದರೆ :—

“ಉಳಿದ ಸಂಗತಿಯನ್ನು ರಾತ್ರಿಗೆ ತಿಳಿಸುವೆನೆಂದು ಹೇಳಿದ್ದರೂ ಊಟವಾದಮೇಲೆ ನಾನು ಮಲಗಿಕೊಂಡುದನ್ನು ನೋಡಿ! ನಿನಗೆ ನನ್ನಲ್ಲಿ ಅನುಮಾನವೂ ಆಶ್ಚರ್ಯವೂ ಉಂಟಾಗಿರಬಹುದು. ಈ ವಿಷಯದಲ್ಲಿ ಬಹು ಜಾಗರೂಕತೆಯಿಂದ ಇರಬೇಕೆಂಬುದಕ್ಕಾಗಿಯೇ ನಾನು ಆರೀತಿ ಆಚರಿಸಿದ್ದು. ಒಂದುವೇಳೆ ಕಾವಲಿನವನು ಯಾವುದನ್ನಾದರೂ ಮರೆತು ಬಿಟ್ಟುಹೋಗಿ ಆಮೇಲೆ ನೆನಸಿಕೊಂಡು ನಮ್ಮ ಗಮನಕ್ಕೆ ಬೀಳದೆ ಬಂದು ನಾವು ಆಡುವ ಮಾತುಗಳಲ್ಲಿ ಒಂದೆರಡು ಅವನ ಕಿವಿಗೆ ಬೀಳಲು ಅನುಮಾನದಿಂದ ಹೊಂಚಿ ಕೇಳಿದನಾದರೆ ಇದುವರಿಗೂ ನಾನು ಬಹು ಪ್ರಯಾಸದಿಂದ ಜರುಗಿಸಿದ ಪ್ರಯತ್ನಗಳೆಲ್ಲಾ ಕೆಟ್ಟುಹೋಗುವುದಿಲ್ಲವೆ ?. ಆದುದರಿಂದಲೇ ನಾನು ನಿಶಿ ರಾತ್ರಿ ಸಮಯವನ್ನು ಕಾಯುತ್ತಿದ್ದುದು. ಇದಿರಲಿ. ನಾನು ಈ ಪ್ರಾಂತ್ಯಗಳಲ್ಲಿ ಸಂಚರಿಸುತ್ತಿದ್ದ ಕಾಲದಲ್ಲಿ ಕರ್ಚು ವೆಚ್ಚಕ್ಕಾಗಿಯೂ ಸಮಯಬಂದರೆ ಹಣದಾಶೆಗೆ ಒಳಗಾಗಿ ಸ್ವಾಮಿದ್ರೋಹಿಗಳಾಗುವ ಶತೃಗಳ ಅಧಿಕಾರಿಗಳನ್ನು ವಶಪಡಿಸಿಕೊಂಡು ಶತೃಗಳ ಗುಟ್ಟನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅಂಥವರಿಗೆ ಲಂಚವನ್ನು ಕೊಡುವುದಕ್ಕಾಗಿಯೂ ನನ್ನ ನಡುವಿನಲ್ಲಿಯೂ ಕವಚದ ಒಳಭಾಗದಲ್ಲಿಯೂ ಯಾರಿಗೂ ಸ್ವಲ್ಪವೂ ಕುರುಹುಕಾಣದರೀತಿ ಈ ಪ್ರಾಂತ್ಯಗಳಲ್ಲಿ ನಡಿಯುವ ಚಿನ್ನದ ನಾಣ್ಯಗಳನ್ನು ಅನೇಕವಾಗಿ ಇರಿಸಿಕೊಂಡಿದ್ದೆನು. ಆಗಾಗ್ಯೆ ಸಾಮಂತರಾಜರಲ್ಲಿ ಹೋಗಿ ಕರ್ಚಾದ ಹಣವನ್ನು ಜೊತೆಮಾಡಿಕೊಳ್ಳುತ್ತಿದ್ದೆನು. ನಾನು ಕೊಂಕಣಿಯರಲ್ಲಿ ಸಿಕ್ಕಿಬಿದ್ದಕಾಲದಲ್ಲಿ ಆಗತಾನೆ ಸಾಮಂತ ರಾಜ್ಯದಿಂದ ಬಂದವನಾದುದರಿಂದ ನನ್ನಲ್ಲಿ ದ್ರವ್ಯವು ತುಂಬಿತ್ತು. ಕೊಂಕಣಿಯರು ನನ್ನನ್ನು ಶೋಧಿಸದೆ ಇಲ್ಲಿಗೆ ತಳ್ಳಿದರು. ಈ ದ್ರವ್ಯದಿಂದಲೇ ನಿನಗೆ ತೋರಿಸಿ ಹೇಳಿದ ಕೆಲಸಗಳಿಗೆ ಸಹಾಯವಾಯಿತು. ಹೇಗೆಂದರೆ:— ನಾನು ಇಲ್ಲಿಗೆ ಬಂದ ಹೊಸದರಲ್ಲಿ ನಮಗೆ ನೀರೆರೆಯುವ ಮುದುಕಿಯು ಸೆರೆಮನೆಯ ವಿಧಿಗನುಸಾರವಾಗಿ ನನ್ನೊಡನೆ ಮಾತನಾಡದೆ ತನ್ನ ಕೆಲಸಗಳನ್ನು ತೀರಿಸಿಕೊಂಡು ಹೋಗುತ್ತಿದ್ದಳು. ಒಂದು ದಿನ ನಾನು ಬೇಕಾಗಿಯೇ ಒಂದು ವರಹದ ನಾಣ್ಯವನ್ನು ಒಲೆಯಪಕ್ಕದಲ್ಲಿ ಅವಳ ಕಣ್ಣಿಗೆಬೀಳುವಂತೆ ಮೊದಲೇ ಇರಿಸಿದ್ದೆ. ಅದನ್ನು ಅವಳು ನೋಡಿ ನನಗೆ ಕಾಣದಂತೆ ತೆಗೆದು ತನ್ನ ನಡುವಿನಲ್ಲಿ ಭದ್ರಪಡಿಸಿಕೊಂಡ ಕೂಡಲೆ ನಾನು ಅವಳನ್ನು ಕುರಿತು ‘ ಓಹೋ! ನೀನು ಕಳ್ಳಿಯೆಂದುಗೊತ್ತಾಯಿತು. ಆ ನಾಣ್ಯವು ನನ್ನದು. ಕಾವಲಿನವನನ್ನು

ಕೂಗಿ ನಿನ್ನ ಕಳ್ಳತನವನ್ನು ಹೇಳಿಬಿಡುವೆನು' ಎಂದು ಒಗೆಯುತ್ತಿರುವುದನ್ನು ಬಿಟ್ಟು ಹೊರಡಲೆತ್ನಿಸಿದೆನು. ಅವಳು ತನ್ನ ಚಾಕರಿಗೆ ಮೋಸಬಂದೀತೆಂದು ಭಯಪಟ್ಟು 'ಹೇಳ್ಬಾಡ ದಮ್ಮಯ್ಯಾ! ನಿಗ್ ಕಾಲ್ಗಾದ್ರು ಬೀಳ್ತೀನಿ. ಕೊ, ನಿಗ್ ರೂಪಾಯ್ನು!' ಎಂದು ವರಹ ತೆಗೆದುಕೊಂಡು ಬಂದಳು. ನಾನು ಮಾಡಿದ ಉಪಾಯವು ಫಲಪ್ರದವಾಯಿತೆಂದು ಮನಸ್ಸಿನಲ್ಲಿ ಅಂದು ಕೊಂಡು ಹೊರಗೆ 'ಏ ಮುದುಕಿ! ನಿನ್ನ ಕಳ್ಳತನವನ್ನು ಹೇಳದೆಇರಬೇಕಾ ದರೆ ನಾನು ಹೇಳುವಂತೆ ಕೇಳುವಿಯೋ? ಎಂದು ಕೇಳಲು; ಅವಳು 'ಆಗ್ಲಿ ದಮ್ಮಯ್ಯಾ ಎಂದು ಒಪ್ಪಿಕೊಂಡಳು. ನಾನು 'ಹಾಗಾದರೆ, ಇನ್ನುಮೇಲೆ ನೀನು ಬಂದಾಗಲೆಲ್ಲ ನನ್ನ ಕೂಡೆ ಮಾತನಾಡಬೇಕು' ಎಂದು ವಿಧಿಸಲು ಅವಳು ಹೆದರಿ 'ಬುದ್ಧಿಯವ್ರು ಆಗ್ನೆಮಾಡ್ಯಾರಲ್ಕಾಣಪ್ಪ ಅದ್ಕೇಗ್ ಮಾಡ್ಲಿ' ಎಂದು ಚಿಂತಿಸಿದಳು. ಅದಕ್ಕೆ ನಾನು 'ನೀನು ಹೆದರಬೇಡ. ಈ ನಾಣ್ಯ ವನ್ನು ತೆಗೆದುಕೊಂಡು ಹೋಗು. ನಾವು ಮಾತನಾಡುವುದು ಯಾರಿಗೂ ತಿಳಿ ಯದೆ ಇರುವಂತೆ ತಕ್ಕ ಉಪಾಯವನ್ನು ಮಾಡುತ್ತೇನೆ. ನಾನು ಹೇಳಿದಂತೆ ನಡೆದರೆ ಇನ್ನುಮುಂದೆಯೂ ನಿನಗೆ ವಿಶೇಷವಾಗಿ ಬಹುಮಾನ ಕೊಡುತ್ತೇನೆ ಎಂದು ಅವಳ ಭಯವನ್ನು ಹೋಗಲಾಡಿಸಿ ಆಶೆಯನ್ನು ಹುಟ್ಟಿಸಿ ಕಳುಹಿಸಿ ದೆನು. ಅಂದಿನಿಂದಲೂ ಆಗಾಗ್ಯೆ ಅವಳಿಗೆ ವರಹಗಳನ್ನು ಕೊಟ್ಟು ಅವು ಗಳನ್ನು ಕರ್ಚುಮಾಡಿದರೆ ಅವಳ ನೆರೆಹೊರೆಯಲ್ಲಿ ಅನುಮಾನ ಹುಟ್ಟಿ ಅವಳ ನಡೆನುಡಿ ಮೊದಲಾದುದು ಗುಟ್ಟಾಗಿ ಪರೀಕ್ಷಿಸಲ್ಪಟ್ಟರೆ ಆಪತ್ತಿಗೆ ಅವಕಾಶ ವನ್ನು ತಾನಾಗಿಯೇ ಉಂಟುಮಾಡಿಕೊಳ್ಳುವಳೆಂಬ ಅಂಶವನ್ನೂ ಮತ್ತು ಕರ್ಚುಮಾಡುವ ಕಾಲವನ್ನು ಮುಂದೆ ತಿಳಿಸುವೆನೆಂಬುದನ್ನೂ ಹೇಳಿ ಅವಳಿಗೆ ಭಯವನ್ನೂ ಭರವಸೆಯನ್ನೂ ಹುಟ್ಟಿಸಿ ಸಂಪೂರ್ಣವಾಗಿ ಅವಳನ್ನು ನನ್ನ ಅಧೀನದಲ್ಲಿ ಸಿಕ್ಕಿಬಿದ್ದಿರುವಂತೆ ಮಾಡಿಕೊಂಡೆನು. ಅವಳಿಗೆ ಒಬ್ಬ ಮಗನು ಸೊಸೆಯು, ಅವನಿಗೆ ಎಂಟುಮಂದಿ ಸಣ್ಣಪುಟ್ಟ ಮಕ್ಕಳು ಇರುವರು ಅವನು ಈ ದುರ್ಗದ ಸಮೀಪದಲ್ಲಿರುವ ತನ್ನ ಗದ್ದೆಯಲ್ಲಿ ಧಾನ್ಯವನ್ನು ಬೆಳೆಯುವನು. ಅದು ಆ ಸಂಸಾರಕ್ಕೆ ಸಾಕಾಗುವುದಿಲ್ಲ ಆದುದರಿಂದ ನೀರೆರೆಯುವ ಈ ಹೀನ ಕೆಲಸದಲ್ಲಿ ಮುದುಕಿಯು ಇರುವಳು. ಅವನೂ ಅವಳಮೂಲಕ ನನ್ನ ಅಧೀನ ದಲ್ಲಿರುವನು. ನಾವು ತಪ್ಪಿಸಿಕೊಂಡಮೇಲೆ ಕೆಲವು ದಿನಗಳನ್ನು ಬಿಟ್ಟು ಅವರು ಬೇರೆ ಊರನ್ನು ಸೇರಿ ನಾನು ಕೊಟ್ಟ ಹಣದಿಂದ ಸುಖವಾದ ಜೀವನಕ್ಕೆ

ಮಾರ್ಗವನ್ನು ಹುಡುಕಿಕೊಂಡು ಇರುವ ಬಗೆಗೆ ತಕ್ಕ ಉಪಾಯವನ್ನು ಹೇಳಿಕೊಟ್ಟಿರುವೆನು. ಅದಿರಲಿ, ಕ್ರಮೇಣ ಸುರಂಗದ ಸಂಗತಿಯನ್ನು ಮುದುಕಿಯಿಂದ ತಿಳಿದುಕೊಂಡೆನು. ಆಮೇಲೆ ತಪ್ಪಿಸಿಕೊಂಡು ಹೋಗುವುದಕ್ಕೆ ಮಾಡಬೇಕಾದ ಪ್ರಯತ್ನಗಳನ್ನು ಮಾಡಲಾರಂಭಿಸಿದೆನು. ಒಂದು ದಿನ ಆವಳಮೂಲಕ ಒಂದು ಉಳಿಯನ್ನು ತರಿಸಿಕೊಂಡೆನು. ಅಂದಿನಿಂದಲೂ ದಿನವಹಿ ಅರ್ಧರಾತ್ರಿಯಲ್ಲಿ ಎದ್ದು ಹಾಸಿಗೆ ಕೆಳಗೆ ಇರುವ ಗಟ್ಟಿ ನೆಲವನ್ನು ಸ್ವಲ್ಪಸ್ವಲ್ಪವಾಗಿ ತೋಡಿ ಹಳ್ಳವನ್ನು ಮಾಡಿ ತೋಡಿದ ಹುಡಿಮಣ್ಣನ್ನು ಹಳ್ಳಕ್ಕೆ ಹಾಕಿ ಅದನ್ನು ಮುಚ್ಚಿ ಗುರುತರಿಯದಂತೆ ಮಾಡಿ ಮಲಗಿಕೊಳ್ಳುತ್ತಿದ್ದೆನು. ಈ ಪ್ರಕಾರ ಮೂರು ತಿಂಗಳವರಗೂ ಕೆಲಸಮಾಡಿ ಮೂರು ಮೊಳ ಉದ್ದ, ಒಂದು ಮೊಳ ಅಗಲ, ಒಂದು ಮೊಳ ಆಳ ಇರುವ ಗುಣಿಯನ್ನು ತೋಡಿ ಹುಡಿಮಣ್ಣಿನಿಂದ ತುಂಬಿದೆನು. ನಂತರ ತಿಂಗಳಿಗೊ ಹದಿನೈದು ದಿನಕ್ಕೊಂದಾವರ್ತಿಯೊ ಮುದುಕಿಯ ಮಗನನ್ನು ಸಮೀಪದ ಸಾಮಂತರಾಜ್ಯದಲ್ಲಿರುವ ಊರಿಗೆ ಕಳುಹಿಸಿ ಒಂದು ಸಲಕ್ಕೆ ಒಂದು ರೇಷ್ಮೆ ಶೀರೆಯನ್ನು ತರಿಸುತ್ತಿದ್ದೆನು. ಅವನು ಹೋಗುವಾಗ ರಾಜಭಾಟಿ ಮಾರ್ಗದಲ್ಲಿ ಹೋಗಿಬರುವಾಗ ಕಾಡುದಾರಿಯನ್ನು ಹಿಡಿದು ರಾತ್ರಿಕಾಲದಲ್ಲಿ ಎಲ್ಲೆಯನ್ನು ದಾಟಿಬರುವಂತೆ ನೇಮಿಸಿದೆನು. ಸುಂಕವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಈ ಉಪಾಯವನ್ನು ಮಾಡಿದ್ದು. ಹಣವಿದ್ದರೂ ಸುಂಕವನ್ನು ಕೊಡುವುದರಿಂದ ಅನುಮಾನಕ್ಕೆ ಆಸ್ಪದವಾಗಬಹುದೆಂದು ಆ ರೀತಿ ಮಾಡಲಾಯಿತು. ತಂದ ರೇಷ್ಮೆ ಶೀರೆಗಳನ್ನು ಮುದುಕಿಯು ಉದ್ದುದ್ದವಾಗಿ ನಾಲ್ಕಾರು ತುಂಡುಗಳಾಗಿ ಹರಿದು ತಾನುಡುವ ಹರಕಲು ಸೀರೆಯಲ್ಲಿ ಮೇಲ್ಮುಸುಕನ್ನು ಬಿಟ್ಟು ಉಳಿದ ಭಾಗದಲ್ಲಿ ಆ ತುಂಡುಗಳನ್ನು ಇಟ್ಟು ಹೊಲಿದು ಅವು ಒಳಭಾಗದಲ್ಲಿ ಹೊರಗೆ ಕಾಣಬರದಂತೆ ಶೀರೆಯನ್ನು ಉಟ್ಟುಕೊಂಡು ಬಂದು ನಾನು ಮಜ್ಜನಗೃಹದಲ್ಲಿರಲು ಈ ಸ್ಥಳಕ್ಕೆ ಇಳಿದುಬಂದು ಹೊಲಿಗೆಯನ್ನು ಬಿಚ್ಚಿ ರೇಷ್ಮೆ ಸೀರೆಯ ತುಂಡುಗಳನ್ನು ಈ ಕತ್ತಲೆಯ ಮೂಲೆಯಲ್ಲಿ ಇರಿಸಿ ಮಜ್ಜನಗೃಹಕ್ಕೆ ಬಂದು ತನ್ನ ಕೆಲಸವನ್ನು ತೀರಿಸಿಕೊಂಡು ಹೋಗುತ್ತಿದ್ದಳು. ಆ ರೇಷ್ಮೆ ತುಂಡುಗಳನ್ನು ನಾನು ಹಾಸಿಗೆಯ ಕೆಳಗೆ ಹೊರಗೆ ಕಾಣದಂತೆ ಇರಿಸಿ ಯಥಾಪ್ರಕಾರ ಅರ್ಧರಾತ್ರಿಯಲ್ಲಿ ಎದ್ದು ಹುರಿಯಾಗಿ ಹೊಸದು ಹುಡಿಮಣ್ಣಿನಲ್ಲಿ ಹೂಳುತ್ತಿದ್ದೆನು. ಗುಣಿತುಂಬಿ

ಮಿಗುವ ಮಣ್ಣನ್ನು ಕೊನೇಅಂತಸ್ತಿನ ಮೇಲ್ಭಾಗಕ್ಕೆ ತೆಗೆದುಕೊಂಡುಹೋಗಿ ಒಂದೊಂದು ಹಿಡಿಯಾಗಿ ಗಾಳಿಗೆ ಚೆಲ್ಲುತ್ತಿದ್ದೆನು. ನೆಲಸಮದ ಅಂತಸ್ತಿನ ನೆಲದಿಂದ ರಾಟಣದವರಿಗೂ ಇರುವ ಎತ್ತರಕ್ಕೆ ಹೆಚ್ಚಾದ ಉದ್ದಕ್ಕೆ ಬೇಕಾಗುವಷ್ಟು ತುಂಡು ಹುರಿಗಳನ್ನು ಶೇಖರಿಸಿದೆನು. ಆಮೇಲೆ ಬಹು ಮಳೆಯಿಂದ ಕೂಡಿದ ಒಂದು ಅಮಾವಾಸ್ಯೆಯ ದಿನ ನಿಶಿರಾತ್ರಿಯಲ್ಲಿ ಮುದುಕಿಯ ಮಗನಿಂದ ಕೋಟೆಯ ಒಳಗಡೆಗೆ ಇರುವ ಸುರಂಗದ ಬಾಗಿಲಿನ ಮುಚ್ಚಳವನ್ನು ಯಾರಿಗೂ ತಿಳಿಯದಂತೆ ಸರಿಮಾಡಿಸಿರುವೆನು. ಒಳಗಿನಿಂದ ಬಲವಾಗಿ ತಳ್ಳಿದರೆ ದಾರಿ ಬಿಡುವಂತಾಗಿರುವುದು. ಮುಂದೆ ಬರುವ ದೀಪಾವಳಿ ಹಬ್ಬದ ಹಿಂದಿನ ದಿವಸದಲ್ಲಿ ಬರುವ ಅಮಾವಾಸ್ಯೆಯ ನಿಶಿರಾತ್ರಿಯಲ್ಲಿ ಇಲ್ಲಿಂದ ಹೋಗುವುದಕ್ಕೆ ಗೊತ್ತುಮಾಡಿರುವೆನು. ಆ ದಿನ ಸುರಂಗದ ಆಚೆಕಡೆಯ ಬಾಗಲಿನ ಸಮೀಪದಲ್ಲಿ ಒಂದು ಹುಡಿಮಣ್ಣಿನ ಗುಡ್ಡೆಯಲ್ಲಿ ಎರಡು ಸೀರೆಗಳನ್ನು ಇಡಿಸಿರುವಂತೆ ಮುದುಕಿಗೆ ನೇಮಿಸಿರುವೆನು. ಆ ದಿನ ಇಲ್ಲಿಂದ ಅನೇಕ ಸ್ತ್ರೀಯರು ಸುತ್ತುಮುತ್ತಿನ ಹಳ್ಳಿಗಾಡುಗಳಲ್ಲಿರುವ ತಮ್ಮ ತವರು ಮನೆಗಳಿಗೆ ಹೋಗುವರಾದ್ದರಿಂದ ಇಲ್ಲಿಂದ ಹೋಗುವವರಿಗೆ ಕಟ್ಟಳೆಯಂತೆ ರಹದಾರಿಯನ್ನು ಪಡೆಯಲವಶ್ಯಕವಿಲ್ಲವೆಂಬ ರೂಢಿಯುಂಟು. ಸ್ತ್ರೀವೇಷಕ್ಕೆ ಬೇಕಾಗುವ ಎರಡು ತಲೆಕೂದಲಿನ ಟೋಪಿಗಳನ್ನೂ ಮತ್ತು ಗಡ್ಡಮೀಸೆಗಳನ್ನು ಬೋಳಿಸಿಕೊಳ್ಳುವುದಕ್ಕೆ ಕ್ಷೌರದ ಕತ್ತಿಯನ್ನೂ ನಾಳೆ ಬುಧವಾರ ಮುದುಕಿಯು ತಂದುಕೊಡುವಳು. ಮುಂದೆ ಸಮಯಕ್ಕೆ ತಕ್ಕಂತೆ ಬುದ್ಧಿಚಾತುರ್ಯವನ್ನು ಪ್ರಯೋಗಿಸಿಕೊಂಡು ದೇವರಮೇಲೆ ಭಾರವನ್ನಿಟ್ಟು ನಡೆದುಕೊಳ್ಳಬೇಕು ” ಎಂದು ತಾನು ಯುಕ್ತಿಸಾಹಸ ಪ್ರಯದಿಂದ ನಡೆಸಿಕೊಂಡು ಬಂದ ಕಾರ್ಯಸಾಧನೆಯನ್ನು ವಿವರಿಸಿ ಹೇಳಿ ಮಲಗಿಕೊಂಡನು. ದುಷ್ಟಬುದ್ಧಿಯೂ ಮಲಗಿಕೊಂಡನು. ಆದರೆ ಅವನಿಗೆ ಸಂತೋಷಾತಿಶಯದಿಂದ ನಿದ್ರೆ ಹತ್ತಲಿಲ್ಲ.

ಬಳಿಕ ದೀಪಾವಳಿಗೆ ನಾಲ್ಕುದಿವಸವಿರುವಾಗ ಬಂದ ಮಜ್ಜನಸ್ನಾನದ ದಿನ ಮಿತ್ರರಿಬ್ಬರೂ ಸ್ನಾನಮಾಡದೆಯೂ ಬಟ್ಟೆಗಳನ್ನು ಒಗೆಯದೆಯೂ ಮುದುಕಿಯು ತಂದುಕೊಟ್ಟ ನೀರನ್ನು ಆಯಾಯ ಪಾತ್ರೆಗಳಲ್ಲೇ ಇರಿಸಿಕೊಂಡರು. ಆ ದಿನ ನಿಶಿರಾತ್ರಿಯಲ್ಲಿ ಆ ನೀರನ್ನೆಲ್ಲಾ ಸ್ವಲ್ಪಸ್ವಲ್ಪವಾಗಿ ಸಾಗಿಸಿಕೊಂಡು ಹೋಗಿ ಮಲಮೂತ್ರ ವಿಸರ್ಜನೆಯ ದ್ವಾರದಲ್ಲಿ ಸುರಿದರು.

ಸ್ನಾನಮಾಡುವ ನೀರೆಲ್ಲಾ ನೆಲಮಾಳಿಗೆಯಲ್ಲಿ ಮಲಮೂತ್ರಗಳನ್ನು ತೊಳೆದು ಕೊಂಡು ಹೋಗುವುದಕ್ಕೆ ದಾರಿಯಿತ್ತು. ಈಗ ಸುರಿದ ನೀರೆಲ್ಲಾ ಆ ದ್ವಾರದ ಪಕ್ಕಗಳನ್ನು ಮತ್ತು ಬುಡವನ್ನು ಸಹ ಮೇಲಿನಿಂದ ತೊಳೆದಂತಾಯಿತು. ಅಂದಿನಿಂದ ಮಲಮೂತ್ರ ವಿಸರ್ಜನೆಯನ್ನು ಕೊನೆಯ ಅಂತಸ್ತಿನ ಮೇಲ್ಭಾಗ ದಲ್ಲಿ ಮಾಡಲಾರಂಭಿಸಿದರು.

ಅಮಾವಾಸ್ಯೆಯ ರಾತ್ರಿಯೂ ಬಂದು ಒದಗಿತು. ಯಥಾಪ್ರಕಾರ ಕಾವ ಲಿನ ಆಳು ಆಹಾರವನ್ನು ತಂದುಕೊಟ್ಟು ಹೋದನು. ಭೋಜನವು ತೀರಿತು. ರಾತ್ರಿ ಹತ್ತು ಘಂಟೆ ಸಮಯವಾಗಿ ಊರೆಲ್ಲಾ ನಿದ್ರೆಯಲ್ಲಿ ಇದ್ದಿತು. ಮಿತ್ರರಿ ಬ್ಬರೂ ಮೇಲ್ಭಾಗವನ್ನು ಸೇರಿದರು. ಸುತ್ತು ಮುತ್ತಲೂ ನೋಡಿದರು. ಎಲ್ಲೆಲ್ಲಿಯೂ ನಿಶ್ಶಬ್ದವಾಗಿತ್ತು. ಯಾವ ಅಡಚಣೆಯೂ ತೋರಿಬರಲಿಲ್ಲ. ಕೆಳಗೆ ಇಳಿದುಬಂದರು. ರೇಷ್ಮೆ ಹುರಿಗಳನ್ನು ಮೇಲಿನ ಅಂತಸ್ತಿಗೆ ಸಾಗಿಸಿದರು. ಅಲ್ಲಿ ಅವುಗಳನ್ನು ಒಂದಕ್ಕೊಂದು ಗಂಟುಹಾಕಿ ಉದ್ದವಾದ ಹಗ್ಗವನ್ನಾಗಿ ಮಾಡಿದರು. ಉಳಿಯನ್ನು ತೆಗೆದುಕೊಂಡು ಹೋಗಿ ರಾಟಳೆಯ ಕೆಳಗೆ ತೂತುಕೊರೆದರು. ಆ ತೂತಿನಲ್ಲಿ ಹಗ್ಗವನ್ನು ದೂರಿಸಿ ಒಂದು ಕೊನೆಯನ್ನು ರಾಟಳೆಗೆ ಬಿಗಿದರು ಕ್ಷೌರದ ಕತ್ತಿಯಿಂದ ಗಡ್ಡಮೀಸೆಗಳನ್ನು ನಯವಾಗಿ ಬೋಳಿಸಿಕೊಂಡರು. ಕೂದಲನ್ನು ಸ್ವಲ್ಪಸ್ವಲ್ಪವಾಗಿ ಗಾಳಿಗೆ ಎರಚಿದರು. ಕೈದೀವಿಗೆ, ಚಕಮುಕಿ ಕಲ್ಲು, ಹತ್ತಿ ಮುಂತಾದ ಸಲಕರಣೆಗಳನ್ನು ದುಷ್ಟ ಬುದ್ಧಿಯು ತನ್ನ ಕವಚದಲ್ಲಿ ಅಣಿಮಾಡಿ ಇಟ್ಟುಕೊಂಡನು. ಕರ್ಚಾಗಿ ಉಳಿದಿದ್ದ ಚಿನ್ನದ ನಾಣ್ಯಗಳನ್ನು ದೇವದತ್ತನು ತನ್ನ ಕವಚದಲ್ಲಿ ಭದ್ರಪಡಿಸಿ ಕೊಂಡನು.

ನಂತರ ಮಲಮೂತ್ರದ್ವಾರದ ಹಾಸುಗಲ್ಲನ್ನು ಎತ್ತಿ ಪಕ್ಕದಲ್ಲಿ ಇರಿ ಸಿದರು. ಹಗ್ಗದ ಒಂದು ಕೊನೆಯನ್ನು ಆ ದ್ವಾರದಲ್ಲಿ ಉದ್ದಕ್ಕೂ ಬಿಟ್ಟರು. ಒಬ್ಬನ ಕೆಳಗೆ ಮತ್ತೊಬ್ಬನು ಹಗ್ಗವನ್ನು ಹಿಡಿದು ದ್ವಾರದಲ್ಲಿ ಮೆಲ್ಲಮೆಲ್ಲನೆ ಇಳಿದರು. ನೆಲಮಾಳಿಗೆಯಲ್ಲಿರುವ ಕಲ್ಲನ್ನು ಸೇರಿದರು. ಅದನ್ನು ಪಕ್ಕದ ರಂಧ್ರಕ್ಕೆ ಎಳೆದು ನೂಕಿ ಸುರಂಗವನ್ನು ಹೊಕ್ಕರು. ಅಲ್ಲಿ ದೀವಿಗೆಯನ್ನು ಹತ್ತಿಸಿದರು. ಅದರ ಬೆಳಕಿನಲ್ಲಿ ಮುಂದೆ ಹೊರಟರು. ಸ್ವಲ್ಪ ದೂರದಲ್ಲಿ ಸುರಂಗದ ಕವಲು ದಾರಿಗಳನ್ನು ಕಂಡರು. ಎಡಗಡೆಯಲ್ಲಿರುವ ಹತ್ತಿರದ ಮಾರ್ಗದಲ್ಲಿ ಹೊರಟರು. ಅಲ್ಲಿಂದ ಒಂದು ಘಳಿಗೆಯ ಹೊತ್ತಿಗೆ ಸುರಂಗದ

ಕೊನೆಯನ್ನು ಸೇರಿದರು. ವರಹದ ನಾಣ್ಯಗಳನ್ನು ಒಂದು ಗಂಟಾಗಿ ಕಟ್ಟಿ ತೆಗೆದುಕೊಂಡರು. ಕ್ಷೌರದ ಕತ್ತಿಯನ್ನು ಉಳಿಯನ್ನು ಗಂಟಿನ ಜೊತೆಯಲ್ಲಿ ಇರಿಸಿಕೊಂಡರು. ಉಟ್ಟ ಬಟ್ಟೆಗಳನ್ನೆಲ್ಲಾ ಕಳಚಿ ಬಿಸಾಡಿದರು. ತಲೆ ಕೂದಲಿನ ಟೋಪಿಯನ್ನು ತಲೆಗೆ ಧರಿಸಿಕೊಂಡರು. ನಂತರ ದೀವಿಗೆ ಆರಿಸಿ ಬಿಸಾಡಿದರು. ಸುರಂಗದ ಮುಚ್ಚಳವನ್ನು ಜಾಗರೂಕತೆಯಿಂದ ಬಲವಾಗಿ ತಳ್ಳಿದರು. ಅದು ಒಳಗಡೆ ನೇತಾಡುವಂತಾಗಿ ದಾರಿ ತೋರಿತು. ದೇವ ದತ್ತನು ಮೊದಲು ತಲೆಹಾಕಿ ನೋಡಿದನು. ಅಷ್ಟುಹೊತ್ತಿಗೆ ನಿಶಿರಾತ್ರಿ ಯಾಗಿತ್ತು. ಕಗ್ಗತ್ತಲೆಯು ಹೆಪ್ಪುಕಟ್ಟಿದಂತೆ ಇತ್ತು. ಯಾವ ನರಪಿಳ್ಳೆಯೂ ಕಾಣಿಸಲಿಲ್ಲ. ಎಲ್ಲೆಲ್ಲಿಯೂ ನಿಶ್ಶಬ್ದವಾಗಿತ್ತು. ಸ್ವಲ್ಪಹೊತ್ತು ಕಾದು ನೋಡಿದರು. ಯಾವ ಅಸಂಭವ ಸೂಚನೆಯೂ ತೋರಲಿಲ್ಲ.

ನಂತರ ಚೆತ್ತಲೆಯಾಗಿ ಹೊರಗೆ ಬಂದರು ಪೂರ್ವದಿಕ್ಕಿಗೆ ಎರಡು ಮಾರು ದೂರ ಹೋದರು. ಹುಡಿಯುಮಣ್ಣಿನ ರಾಶಿಯು ಕಾಲಿಗೆ ಸಿಕ್ಕಿತು. ಕೈಗಳನ್ನು ಹಾಕಿ ಹುಡುಕಿದರು. ಎರಡುಶೀರೆಗಳು ದೊರಕಿದುವು. ಇಬ್ಬರೂ ಉಟ್ಟುಕೊಂಡು ಉತ್ತರದಿಕ್ಕಿಗೆ ಅಭಿಮುಖವಾಗಿ ಹೊರಟರು. ಸ್ವಲ್ಪ ದೂರದಲ್ಲಿ ಒಂದು ಕೊಳವನ್ನು ಸೇರಿಧರು. ಮೊದಲೇ ಮಾಡಿದ್ದ ಏರ್ಪಾಡಿನಂತೆ ಮೆಟ್ಲುಗಳಮೇಲೆ ಮುದುಕಿಯು ಎರಡು ಚೌರಿಗೆಗಳನ್ನು ಇರಿಸಿದ್ದಳು. ಅವುಗಳಲ್ಲಿ ನೀರನ್ನು ತುಂಬಿದರು. ಮೆಟ್ಲುಗಳಮೇಲೆ ಕುಳಿತು ಸಮಯವನ್ನು ಕಾಯುತ್ತಿದ್ದರು.

ಇಷ್ಟೆಲ್ಲಾ ನಡಿಯುವದರಲ್ಲಿ ರಾತ್ರಿ ಮೂರು ಘಂಟೆಯ ಸಮಯವಾ ಯಿತು. ದೂರದಲ್ಲಿ ನಾಲ್ಕಾರು ಸ್ತ್ರೀಯರು ಕಾಣಿಸಿದರು. ಅವರು ಚೌರಿಗೆಗ ಳನ್ನು ತಲೆಯ ಮೇಲೇರಿಸಿಕೊಂಡು ಕೊಳಕ್ಕೆ ನೀರಿಗಾಗಿ ಬರುತ್ತಿದ್ದರು. ಮಿತ್ರರಿಬ್ಬರು ನೀರಿನಚೌರಿಗೆಗಳನ್ನು ತಲೆಯಮೇಲೆ ಹೊತ್ತುಕೊಂಡರು. ಬರುವ ಸ್ತ್ರೀಯರಿಗೆ ಎದುರಾಗಿ ಹೊರಟರು. ಸ್ವಲ್ಪ ಹೊತ್ತಿನಲ್ಲಿ ಮುದುಕಿಯ ಮನೆಯನ್ನು ಸೇರಿದರು. ಕೆಲವು ಸಂಗಡದ ಸ್ತ್ರೀಯರು ತವರು ಮನೆಗೆ ತೆಗೆದುಕೊಂಡು ಹೋಗುವ ಹಣ್ಣುಹಂಪಲಾದಿ ವಸ್ತುಗಳಿಂದ ತುಂಬಿದ ಒಂದು ಹೊಸ ಬಿದರಿನ ಗೂಡೆಯು ಆ ಮನೆಯಲ್ಲಿ ಇರಿಸಲ್ಪಟ್ಟಿತ್ತು. ಅದನ್ನು ದುಷ್ಟಬುದ್ಧಿಯು ಹೊತ್ತು ಕೊಂಡನು. ಹಾಲುತುಂಬಿದ ಚೌರಿಗೆ ಯನ್ನು ಕೋಣೆಮನೆಯಿಂದ ಮುದುಕಿಯು ತಂದಳು. ಅದರಲ್ಲಿ ಹಣದ ಗಂಟನ್ನು ಹಾಕಿ ದೇವದತ್ತನು ಅದನ್ನು ಹೊತ್ತು ಕೊಂಡನು.

ಮಿತ್ರರಿಬ್ಬರೂ ಮುದುಕಿಯು ಮನೆಯುನ್ನು ಬಿಟ್ಟು ಹೊರಟರು. ಚದುರಗಳನ್ನು ದಾಟಿದರು. ಹೊರಡುವ ಸ್ತ್ರೀಯರ ಗೊಂದಳದಲ್ಲಿ ಸೇರಿದರು. ಸುರಕ್ಷಿತವಾಗಿ ಬೆಟ್ಟವನ್ನಿಳಿದು. ಅಲ್ಲಿಂದ ಎಲ್ಲೆಕಡೆಗೆ ಇರುವ ಸಾಮಂತರಾಜ್ಯಕ್ಕೆ ಅಭಿಮುಖವಾಗಿ ಹೊರಟರು.

ಮಧ್ಯಾನ್ಹದ ಹೊತ್ತಿಗೆ ಎಲ್ಲೆಯುನ್ನು ದಾಟಿ ಸಮೀಪದಲ್ಲಿ ಸಾಮಂತ ರಾಜ್ಯದಲ್ಲಿನ ಒಂದು ಹಳ್ಳಿಯುನ್ನು ಸೇರಿದರು. ಕೆಲವರು ಸ್ತ್ರಿಯರಿಗೆ ಕುಕ್ಕೆಯುಲ್ಲಿದ್ದ ಪದಾರ್ಥಗಳನ್ನೂ ಹಾಲನ್ನೂ ಹಂಚಿಕೊಟ್ಟರು. ಒಂದುವರಹವನ್ನು ಮುರಿಸಿ ತೃಷೆಯುನ್ನು ಅಡಗಿಸಿಕೊಂಡು ಮುಂದೆಹೊರಟರು. ಸಾಯಂಕಾಲಕ್ಕೆ ಒಂದುಊರನ್ನು ಸೇರಿದರು. ಅಲ್ಲಿ ಉಡುಪುಗಳನ್ನು ಕೊಂಡುಕೊಂಡರು. ಮಾರನೇದಿನ ಸೂರ್ಯೋದಯಕ್ಕೆ ಮುಂಚೆ ಪುರುಷವೇಷಧಾರಿಗಳಾಗಿ ಪಶ್ಚಿಮ ಘಟ್ಟಗಳನ್ನು ಕುರಿತುಹೊರಟರು.

ಇತ್ತ ಪ್ರತಾಪಕಂಠೀರವಾದಿಗಳು ಲಕ್ಷ್ಮೀನಿಲಯುವನ್ನು ಪ್ರವೇಶಿಸಿದರೆಂದು ತಿಳಿಸಿದೆವಷ್ಟೆ. ಅಲ್ಲಿ ಅವರು ನೋಡಿ ತಿಳಿದುಕೊಳ್ಳಬೇಕಾದುದನ್ನೆಲ್ಲಾ ತಿಳಿದುಕೊಂಡು ಆ ದಿನವೇ ಹಿಂತಿರುಗಿದರು. ನಾಲ್ಕಾರು ದಿನಗಳಲ್ಲಿ ರಾಧಾಪುರವನ್ನು ಸೇರಿದರು.

ಮಾರನೇದಿನ, ಪದ್ಮರಾಜನು, ಪ್ರತಾಪಕಂಠೀರವನು, ಮಂತ್ರಿಗಳು ಗೂಢವಾಗಿ ಸಭೆಸೇರಿ ಮಂತ್ರಾಲೋಚನೆಯುನ್ನು ಮಾಡಿದರು. ಪ್ರತಾಪಕಂಠೀರವನನ್ನು ಚೇರ ಕೇರಳ ದೇಶಗಳಿಗೆ ಅರಸನೆಂದು ಪಟ್ಟಾಭಿಷೇಕಮಾಡಿದ ನಂತರ ಮನೋರಮೆಗೂ ಅವನಿಗೂ ಮದುವೆಯುನ್ನು ಬೆಳೆಸುವುದು ಪ್ರಶಸ್ತವೆಂದು ತೋರಿತು. ಅದುವರಿಗೂ ಮನೋರಮೆಯು ಚೇರದೇಶದಲ್ಲಿಯೇ ಇರುವುದು ರಾಜಕಾರ್ಯಕ್ಕೆ ಅನುಕೂಲವೆಂದು ಕಂಡುಬಂದಿತು.

ಆ ದಿನವೇ ಹಸ್ತಿನಾವತಿಗೆ ರಾಯಭಾರಿಯು ಕಳುಹಿಸಲ್ಪಟ್ಟನು. ಸಿಂಹಳೇಶನಲ್ಲಿಗೆ ಸಿಂಹಬಲನು ಕೊಂಕಣರಾಜನಲ್ಲಿಗೆ ಒಬ್ಬಮಂತ್ರಿಯೂ ರಾಯಭಾರಿಗಳಾಗಿ ನೇಮಿಸಿ ಕಳುಹಿಸಲ್ಪಟ್ಟರು.

ಊರಿಗೆ ಒಂದುಮೈಲಿ ದೂರದಲ್ಲಿರುವ ಗುಡ್ಡದಮೇಲೆ ಪ್ರಕಾಶಿಸುವ ರಾಜಭೋಗಯೋಗ್ಯವಾದ ವಸಂತಭವನವನ್ನು ಮನೋರಮೆಯ ವಾಸಕ್ಕೆ ಅಣಿಮಾಡಿದರು.

ಕಾಮಿನಿಯು ಮೂರುದಿನ ಪ್ರತಾಪಕಂಠೀರವನ ಆತಿಥ್ಯದಲ್ಲಿ ಇದ್ದು

ವೀರಬಾಹುವಿನ ಜೊತೆಯಲ್ಲಿ ಪಶ್ಚಿಮಘಟ್ಟಗಳ ಪ್ರಾಂತ್ಯವನ್ನು ಕುರಿತು ಹೊರಟಳು. ಕುಮಾರಿದಾರಿಯ ಕೊನೆಯನ್ನು ಸೇರಿ ಅವನನ್ನು ಊರಿಗೆ ಕಳುಹಿಸಿಕೊಟ್ಟು ತಾನು ಮುಂದೆ ಹೊರಟು ಲಕ್ಷ್ಮೀನಿಲಯವನ್ನು ಸೇರಿದಳು.

ಅಲ್ಲಿ ಎರಡು ತಿಂಗಳವರಿಗೂ ವಿಹರಿಸುತ್ತಲಿದ್ದು ಒಂದು ದಿನ ಮನೋರಮೆಯನ್ನು ನೋಡಿಕೊಂಡು ಬರಬೇಕೆಂದು ಎಣಿಸಿ ಅಲ್ಲಿಂದ ಹೊರಟಳು.

ಅತ್ತ ದೇವದತ್ತನು ದುಷ್ಟಬುದ್ಧಿಯು ಸಮಯವನ್ನರಿತು ನಾನಾವೇಷಗಳನ್ನು ಧರಿಸಿ ಶತ್ರುಗಳ ಕೈಗೆ ಸಿಕ್ಕಿಬೀಳದಂತೆ ತಪ್ಪಿಸಿಕೊಂಡು ಬಂದರು. ತ್ರಿಕೋಣದ ಕಲ್ಲಿನ ಪೊದರನ್ನು ಹೊಕ್ಕು ಗುಹೆಯನ್ನು ಪ್ರವೇಶಿಸಿ ಗುಡಿಯೊಳಗೆ ಹೋದರು. ಅಲ್ಲಿ ದೇವದತ್ತನು ಗೋಡೆಗಳನ್ನು ಶೋಧಿಸಿದನು. ಯಾವ ಸೂಚನೆಯೂ ದೊರೆಯಲಿಲ್ಲ. ನಂತರ, ಸ್ವಲ್ಪಹೊತ್ತು ಕುಳಿತು ಹಾಗೆಯೇ ಧ್ಯಾನಿಸಿ ಯಾವುದೊ ಒಂದು ವಿಷಯವು ಹೊಳೆಯಲು ದೇವರ ವಿಗ್ರಹವನ್ನು ಪರೀಕ್ಷಿಸಲಾರಂಭಿಸಿದನು.

ಮೊದಲು ವಿಗ್ರಹದ ಕೈಕಾಲಿನ ಭಾಗಗಳನ್ನು ಬಗೆಬಗೆಯಾಗಿ ತಿರುಗಿಸಲೆತ್ನಿಸಿದನು. ಯಾವುದನ್ನೂ ಕಳಚುವುದಕ್ಕೆ ಸಾಧ್ಯವಾಗಲಿಲ್ಲ. ಅಮೇಲೆ ದುಷ್ಟಬುದ್ಧಿಯನ್ನು ಸಹಾಯಕ್ಕೆ ಕರೆದುಕೊಂಡು ವಿಗ್ರಹದ ಕಿರೀಟವನ್ನು ಆಕಡೆ ಈಕಡೆ ತಿರುಗಿಸಲಾರಂಭಿಸಿದನು. ಅಲ್ಪ ಸ್ವಲ್ಪ ತಿರುಗಿದಂತಾಗಲು ಇಬ್ಬರೂ ಸೇರಿ ಬಲವಾಗಿ ತಿರುಗಿಸಿದರು. ಕಿರೀಟವು ಕಳಚಲ್ಪಟ್ಟಿತು. ವಿಗ್ರಹದ ತಲೆಯಲ್ಲಿ ನಾಲ್ಕು ಅಂಗುಲ ಅಗಲದ ಗುಣಿಯೊಂದು ಕಾಣಿಸಿತು. ಅದರ ಮಧ್ಯದಲ್ಲಿ ಊರ್ಧ್ವಮುಖವಾಗಿ ಒಂದು ಕಬ್ಬಿಣದ ಸಲಾಕೆಯಿತ್ತು. ಅದರ ಅಭಿಪ್ರಾಯವನ್ನು ಅರಿತು ದೇವದತ್ತನು ಸಲಾಕೆಯನ್ನು ಅದುಮಿದನು. ಕೂಡಲೆ ಒಂದು ದೊಡ್ಡ ಶಬ್ದವಾಯಿತು. ಹೊರಗೆ ಬಂದು ನೋಡಲು ಗುಹಾಂತ್ಯದಲ್ಲಿ ದ್ವಾರವು ಕಾಣಿಸಿತು.

ನಂತರ ದೇವದತ್ತನು ಕಿರೀಟವನ್ನು ವಿಗ್ರಹದ ತಲೆಯಮೇಲಿಟ್ಟು ಮೆಲ್ಲಮೆಲ್ಲನೆ ತಿರುಗಿಸಿ ಮೊದಲಿದ್ದಂತೆ ಸರಿಮಾಡಿ ದುಷ್ಟಬುದ್ಧಿಯೊಡನೆ ಹೊರಗೆ ಬಂದು ಗೂಡಿನಲ್ಲಿದ್ದ ದೀವಿಗೆಯನ್ನು ಹತ್ತಿಸಿ ಕೈಯಲ್ಲಿ ಹಿಡಿದುಕೊಂಡನು. ದೇವದತ್ತನು ದಾರಿ ತೋರಿಸುತ್ತಾ ಮುಂದೆ ಹೊರಟನು. ದುಷ್ಟಬುದ್ಧಿಯು ಅವನನ್ನು ಹಿಂಬಾಲಿಸಿದನು. ಗುಹಾಂತ್ಯದ ದ್ವಾರವನ್ನು ಹೊಕ್ಕು ಹೋಗುತ್ತಿದ್ದರು. ಸ್ವಲ್ಪದೂರ ಹೋಗಲು, ದುಷ್ಟಬುದ್ಧಿಯು ಮುಂದೆ ಎಡ

ಗಡೆ ನೋಡಿ, “ಹಾ! ಸರ್ಪ! ಸರ್ಪ! ಕೆಟ್ಟೆನು! ಕೆಟ್ಟೆನು!” ಎಂದು ಭಯಭ್ರಾಂತನಾಗಿ ನಡುಗುತ್ತಿದ್ದನು. ದೇವದತ್ತನಿಗೂ ಭೀತಿಯುಂಟಾಯಿತು. ಆದರೆ ಸರ್ಪವಶ್ಯವನ್ನು ಬಲ್ಲವನಾದುದರಿಂದ ಮಂತ್ರೋಚ್ಚಾರಣೆಯನ್ನು ಮಾಡಲಾರಂಭಿಸಿದನು.

ಸ್ವಲ್ಪ ಹೊತ್ತಾಯಿತು. ಸರ್ಪವು ಚಲಿಸದೇ ಇರುವಂತೆ ತೋರಿತು. ದೇವದತ್ತನು ಮಂತ್ರೋಚ್ಚಾರಣೆಯನ್ನು ಮಾಡಿಕೊಂಡು ಹತ್ತಿರಕ್ಕೆ ಹೋದನು. ಆಗಲೂ ಚಲಿಸಲಿಲ್ಲ. ಮಂತ್ರೋಪಶಮನ ಮಾಡಲಾರಂಭಿಸಿದನು. ಆಗಲೂ ಚಲಿಸಲಿಲ್ಲ. ಇನ್ನೂ ಹತ್ತಿರಕ್ಕೆ ಹೋಗಿ ಚೆನ್ನಾಗಿ ದೃಷ್ಟಿಸಿ ನೋಡಿದನು. ಇಷ್ಟಾದರೂ ಚಲಿಸಲಿಲ್ಲ. ಮಂತ್ರವನ್ನು ಸಂಪೂರ್ಣವಾಗಿ ಉಪಶಮನ ಮಾಡಿದನು. ಆದರೂ ಚಲಿಸಲಿಲ್ಲ. ಕೊನೆಗೆ ಸರ್ಪದ ಕಣ್ಣಿನ ಕಾಂತಿಯನ್ನು ಈಕ್ಷಿಸಿನೋಡಿದನು. ಪ್ರಾಣವಿದ್ದರೆ ತೋರುವ ಕಾಂತಿಯು ತೋರಲಿಲ್ಲ. ಸರ್ಪವು ಅಚೇತನವೆಂದು ತಿಳಿಯಬಂದಿತು. ಕೂಡಲೇ ಅದನ್ನು ಮುಟ್ಟಿನೋಡಿ ಪರಿಶೋಧಿಸಿದನು. ಕಬ್ಬಿಣದಲ್ಲಿ ಮಾಡಿದ ಸರ್ಪದ ಆಕೃತಿಗೆ ಸತ್ತ ಸರ್ಪದ ತೊಗಲನ್ನು ಜೋಡಿಸಿದ್ದರು. ಜೀವಸರ್ಪದ ರೀತಿ ಕಾಣುತ್ತಲಿತ್ತು. ಇಂತಹ ಅಸಾಧ್ಯವಾದ ಶಿಲ್ಪವಿದ್ಯಾಮಾನವನ್ನು ನೋಡಿ ದೇವದತ್ತನು ಸಂತೋಷಾಶ್ಚರ್ಯಭರಿತನಾಗಿ ದುಷ್ಟಬುದ್ಧಿಗೆ ಅದರ ವಿವರವನ್ನು ತಿಳಿಸಿದನು. ಗೂಢವಾದ ಕೀಲುಗಳಿರಬಹುದೆಂದು ಅದರ ನಾನಾಭಾಗಗಳನ್ನು ಅದುಮಿದ ಕೂಡಲೆ ಅದು ನೆಲವ ಕೆಳಗೆ ಅರ್ಧಪ್ರಮಾಣಕ್ಕೆ ಇಳಿಯಿತು. ಅದರ ತಲೆಯು ಸಣ್ಣದಾಯಿತು. ಆಕ್ಷಣವೇ ಒಂದು ದೊಡ್ಡ ಶಬ್ದವುಂಟಾಗಿ ಅವರಿಬ್ಬರೂ ಪ್ರವೇಶಿಸಿದ ಗೂಡಿನ ಗುಹಾಂತ್ಯದ ದ್ವಾರವು ಮುಚ್ಚಿಕೊಂಡಿತು. ಪುನಃ ಸರ್ಪದ ಆಕೃತಿಯನ್ನು ಮೇಲಕ್ಕೆ ಎತ್ತಲು ಮತ್ತೊಂದು ದೊಡ್ಡ ಶಬ್ದವಾಯಿತು. ಸರ್ಪದ ತಲೆಯು ಮೊದಲಿದ್ದಂತೆ ದೊಡ್ಡದಾಯಿತು. ಹಲ್ಲುಗಳು ಹೊರಗೆ ಚಾಚಿದವು. ಗುಹಾಂತ್ಯದ ದ್ವಾರವು ತೆರೆಯಿತು.

ನಂತರ ಸರ್ಪದ ಪ್ರತಿಮೆಯನ್ನು ಕೆಳಗೆ ಇಳಿಸಿ ಗುಹಾಂತ್ಯದ ದ್ವಾರವನ್ನು ಮುಚ್ಚಿ ಇಬ್ಬರೂ ಮುಂದಕ್ಕೆ ನಡೆದರು. ಹತ್ತು ಗಜಗಳ ದೂರ ಹೋಗಲು ಈ ಎರಡನೇ ಗೃಹವು ಅಂತ್ಯವಾಯಿತು. ಅಲ್ಲಿಗೆ ಈಚೆ ಎರಡು ಮಾರು ದೂರ ಪಕ್ಕದಲ್ಲಿ ಒಂದು ಸಣ್ಣ ಗೂಡು ಇತ್ತು. ಮುಂದಿನ ಸೂಚನೆ

ಯನ್ನು ಕಂಡುಹಿಡಿಯುವುದಕ್ಕಾಗಿ ಆ ಗೂಡು ವೊದಲಾದುವನ್ನು ಪರೀಕ್ಷಿಸುತ್ತಿದ್ದನು. ಬಹಳ ಹೊತ್ತಾದರೂ ಯಾವುದೂ ತೋರಲಿಲ್ಲ.

ಆದರೂ ಆ ಗೂಡಿನ ಎದುರಿನಲ್ಲಿಯೇ ದೇವದತ್ತನು ನಿಂತು ಯೋಚಿಸುತ್ತಿದ್ದನು. ಆಗ ಗೂಡಿನ ಎಡಗಡೆಯಿಂದ ಬಲಗಡೆಗೆ ಒಂದು ಹಲಗೆಯು ಹರಿದುಹೋದಂತೆ ಕಾಣಿಸಿತು. ಅದರ ಬಗೆಯೇನಿರಬಹುದೆಂದು ಗೂಡಿನ ಹತ್ತಿರಕ್ಕೆ ಹೋಗಿ ಆ ಹಲಿಗೆಯನ್ನು ನೋಡುತ್ತಿದ್ದನು.

ಅಷ್ಟರಲ್ಲಿ ಶಬ್ದವಿಲ್ಲದೆ ಈ ಎರಡನೇ ಗುಹಾಂತ್ಯದ ದ್ವಾರವು ತೆರೆಯಲ್ಪಟ್ಟು ಹಗಲಿನ ಬೆಳಕು ಕಾಣಿಸಿ ಕಾಮಿನಿಯು ಹೊರಕ್ಕೆಬಂದಳು. ದುಷ್ಟಬುದ್ಧಿಯನ್ನು ನೋಡಿದ ಕೂಡಲೇ "ಎಲ, ದುಷ್ಟ! ನನ್ನನ್ನು ವಂಚಿಸಿದುದಕ್ಕೆ ತಕ್ಕುದನ್ನು ಅನುಭವಿಸು" ಎಂದು ಕ್ಷಣಮಾತ್ರದಲ್ಲಿ ನಡುವಿನಲ್ಲಿದ್ದ ಕೈಕಠಾರಿಯನ್ನು ತೆಗೆದು ಅವನನ್ನು ತಿವಿದು ಕೊಲ್ಲುವುದಕ್ಕಾಗಿ ಎತ್ತಿದಳು. ಆ ಕ್ಷಣವೇ ಅವನು ತನ್ನ ಎರಡು ಕೈಗಳಿಂದಲೂ ಅವಳ ಕಠಾರಿಯನ್ನು ಹಿಡಿದೆಳೆದು ಅವಳ ಎದೆಯಲ್ಲಿ ತಿವಿದುಬಿಟ್ಟು ತೆರೆದಿದ್ದ ದ್ವಾರವನ್ನು ಹೊಕ್ಕು ಓಡಿದನು.

ಇಷ್ಟೆಲ್ಲಾ ಎರಡು ಕ್ಷಣಮಾತ್ರದಲ್ಲಿ ನಡೆಯಿತು. ಕಾಮಿನಿಯು ಮಾತನಾಡಿದ ಕೂಡಲೆ ದೇವದತ್ತನು ತಿರುಗಿ ನೋಡಿದನು ಆಗ ಅವಳು ದುಷ್ಟಬುದ್ಧಿಯನ್ನು ಕೊಲ್ಲುವುದಕ್ಕೆ ಕಠಾರಿಯನ್ನು ಎತ್ತಿದಳು. ಸ್ನೇಹಿತನನ್ನು ಬಿಡಿಸಲೆಂದು ಎರಡು ಹೆಜ್ಜೆಯನ್ನು ಇಡುವಷ್ಟರಲ್ಲಿ ಕಠಾರಿಯು ದುಷ್ಟಬುದ್ಧಿಯಕೈಗೆ ಬಂದಿತ್ತು. ಮೂರನೆ ಹೆಜ್ಜೆಗೆ ದುಷ್ಟಬುದ್ಧಿಯು ದ್ವಾರವನ್ನು ಹೊಕ್ಕಿದ್ದನು. ನಾಲ್ಕನೆ ಹೆಜ್ಜೆಗೆ ಕಾಮಿನಿಯು ಕೆಳಗೆ ಬೀಳುವಷ್ಟರಲ್ಲಿ ಹೋಗಿ ಅವಳನ್ನು ಬೀಳದಂತೆ ಹಿಡಿದನು. ನಂತರ ಮೆಲ್ಲನೆ ನೆಲದಮೇಲೆ ಮಲಗಿಸುವಷ್ಟರಲ್ಲಿ ಎರಡನೇ ಗೃಹದ ದ್ವಾರವು ಮುಚ್ಚಿಕೊಂಡಿತು

ದುಷ್ಟಬುದ್ಧಿಯು ಕಾಮಿನಿಯ ಎದೆಯಲ್ಲಿ ಕಠಾರಿಯನ್ನು ನಾಟಿಬಿಟ್ಟು ಹೋಗಿದ್ದನು. ಜೀವವಿರುವುದೋ ಇಲ್ಲವೋ ಎಂದು ದೇವದತ್ತನು ಕೆಳಗಿರಿಸಿದ್ದ ದೀವಿಗೆಯನ್ನು ಹಿಡಿದುಕೊಂಡು ಕಾಮಿನಿಯ ಶರೀರ ಅವಯವಗಳನ್ನು ಪರೀಕ್ಷಿಸಿ ನೋಡಿದನು. ಕಠಾರಿಯ ಗಾಯವು ಎದೆಯ ಬಲಭಾಗದಲ್ಲಿ ಇದ್ದುದು ಆದುದರಿಂದ ಪ್ರಾಣಾಪಾಯವಾಗಲಿಲ್ಲ. ಉಸುರಾಡುತಿತ್ತು. ಪ್ರಜ್ಞೆಯು ಶೂನ್ಯವಾಗಿತ್ತು. ಕಾರಾಗೃಹದಲ್ಲಿ ದುಷ್ಟಬುದ್ಧಿಯು ತನ್ನೊಡನೆ ಹೇಳಿದ್ದ

ವಿಷಯಗಳನ್ನು ಜ್ಞಾಪಕಕ್ಕೆ ತಂದುಕೊಂಡು ದೇವದತ್ತನು ಮನಸ್ಸಿನಲ್ಲಿ "ಇವಳೇ ಕಾಮಿನಿಯೆಂಬ ಸ್ತ್ರೀಯಾಗಿರಬಹುದು. ಇವಳ ರೂಪು ರೇಖಾದಿಗಳು ಅವನು ಹೇಳಿದಂತೇ ಇರುವವು. ಇವಳಿಗೆ ಚಿಕಿತ್ಸೆಯನ್ನು ಮಾಡುವೆನು. ಬದುಕಿಕೊಂಡರೆ ಹೇಗಾದರೂ ಇವಳಿಂದ ಈ ರಹಸ್ಯಗಳನ್ನು ತಿಳಿದುಕೊಳ್ಳುವೆನು. ಒಂದುವೇಳೆ ಇವಳು ತಿಳಿಸದೆ ಹೋದರೂ ಚಿಂತೆಯಿಲ್ಲ ಮುಂದಿನ ಸ್ವಂತ ಕಾರ್ಯದಲ್ಲಿ ಉದ್ಯೋಗಿಸಿ ಇವಳನ್ನು ಈ ಸ್ಥಿತಿಯಲ್ಲಿಯೇ ಬಿಟ್ಟೆನಾದರೆ ಇವಳು ಮೃತಳಾಗುವಳು ಇದನ್ನು ತಿಳಿದೂ ನಾನೇ ಕೈಯಾರ ಕೊಂದಂತಾಗುವುದು. ಮಿತ್ರನಾಗಲಿ ಶತ್ರುವಾಗಲಿ ಇಂತಹ ಆಪತ್ತಿನ ದೆಶೆಯಲ್ಲಿ ಸಹಾಯಮಾಡದೇ ಬಿಡುವುದು ಪಾತಕ ಹೇತುವು." ಅದರಲ್ಲಿಯೂ ಅಬಲೆಯನ್ನು ಸಾವಿಗೆ ಗುರಿಮಾಡುವುದು ಪರಮ ಪಾತಕವು. ಎಂದು ತನ್ನ ಕೈಯಲ್ಲಾದ ಪ್ರಯತ್ನಗಳನ್ನೆಲ್ಲಾ ಮಾಡಿ ಬದುಕಿಸುಕೊಳ್ಳುವೆನೆಂದು ನಿರ್ಧರಿಸಿಕೊಂಡನು.

ಬಳಿಕ ತನ್ನ ಕವಚದಲ್ಲಿ ಒಂದು ತೋಳನ್ನು ಹರಿದನು. ಅದನ್ನು ಚೆನ್ನಾಗಿ ಸುತ್ತಿ ಕಠಾರಿ ಗಾಯದ ತೂತಿನ ಅಗಲಕ್ಕೆ ಸರಿಯಾದ ದಿಬ್ಬಣ ಮಾಡಿಕೊಂಡನು. ಎಡಗೈಯಿಂದ ಕಠಾರಿಯನ್ನು ಸರಕ್ಕನೆ ಎಳೆದು ಆ ಕ್ಷಣವೇ ರಕ್ತವು ವಿಶೇಷವಾಗಿ ಬಾರದಂತೆ ದಿಬ್ಬಣವನ್ನು ಇಟ್ಟು ಗಾಯದ ತೂತನ್ನು ಮುಚ್ಚಿದನು. ಆಮೇಲೆ ಅವಳನ್ನು ಹೊತ್ತುಕೊಂಡು ಬಂದು ಸರ್ಪದ ಪ್ರತಿಮೆಯ ಮೂಲಕ ಮೊದಲನೇ ಗುಹಾದ್ವಾರವನ್ನು ಹೊಕ್ಕು ದೇವರ ವಿಗ್ರಹದಿಂದ ಆ ದ್ವಾರವನ್ನು ಯಥಾಪ್ರಕಾರವಾಗಿ ಮುಚ್ಚಿ ಹೊರಕ್ಕೆ ಬಂದನು. ಸಮೀಪದಲ್ಲಿರುವ ಗಿಡಗಳ ತೋಪಿಗೆ ಹೋಗಿ ಕಾಮಿನಿಯನ್ನು ಇಳಿಸಿ ಅಲ್ಲಿ ಒಂದು ಗುಡಿಸಲನ್ನು ಹಾಕಿಕೊಂಡು ಅದರಲ್ಲಿ ಅವಳನ್ನು ಇರಿಸಿದನು.

ನಂತರ ರಕ್ತದಿಂದ ನೆನೆದ ಕುಪ್ಪುಸವನ್ನು ಸ್ವಲ್ಪವಾಗಿ ಬಿಚ್ಚಿದ ಕೂಡಲೇ ವಿಸ್ಮಯಾನ್ವಿತನಾದನು. ಅವನ ಆಶ್ಚರ್ಯಕ್ಕೆ ಕಾರಣವೇನು? ಅವನು ಏನನ್ನು ನೋಡಿದನು? ಮುಖವೂ, ಕೈಗಳು ಮೊಳಕೈವರೆಗೂ, ಪಾದಗಳೂ ಕಪ್ಪುವರ್ಣವಾಗಿದ್ದವು. ಎದೆಯು ಹೊಂಬಣ್ಣದಿಂದ ಹೊಳೆಯುತ್ತಿತ್ತು. ಇದು ತೊನ್ನುರೋಗದ ಮಹಿಮೆಯಾಗಿರಬಹುದೆಂದು ಅನುಮಾನದಿಂದ ಕುಪ್ಪುಸವನ್ನೆಲ್ಲಾ ಬಿಚ್ಚಿ ತೆಗೆದನು. ಅನುಮಾನವು ತೊಲಗಿ ಆಶ್ಚರ್ಯವು ಇಮ್ಮಡಿಯಾಯಿತು. ಎದೆ, ಬೆನ್ನು ಮೊದಲಾದದು ಕನಕಲಾವಣ್ಯದಿಂದ

ಕಾಂತಿಯುಕ್ತವಾಗಿದ್ದವು. ಇದಕ್ಕೆ ಸರಿಯಾಗಿ ದೇವದತ್ತನ ಕೈಯಲ್ಲಿದ್ದ ಕುಪ್ಪಸವು ಜಾರಿ ಕಾಮಿನಿಯ ಮುಖದಮೇಲೆ ಬಿದ್ದಿತು. ರಕ್ತವನ್ನು ಸೋಂಕಿದ ಮುಖಭಾಗಗಳು ಎದೆಯ ಬಣ್ಣವನ್ನು ಹೊಂದಿದವು ಅವನ ಆಶ್ಚರ್ಯವು ಮತ್ತಷ್ಟು ಹೆಚ್ಚಿತು. ಆಮೇಲೆ ರಕ್ತದಿಂದ ನೆನೆದ ಕುಪ್ಪಸದಿಂದ ಕಪ್ಪುಬಣ್ಣದ ಭಾಗಗಳನ್ನೆಲ್ಲಾ ಒರಸಿದನು. ಎಲ್ಲಾಭಾಗವೂ ಒಂದೇ ಕನಕ ಕಾಂತಿಯನ್ನು ಹೊಂದಿದವು.

ಆ ಬಳಿಕ ದೇವದತ್ತನು ಅಲ್ಲಲ್ಲಿ ಸುತ್ತಿ ತನಗೆ ತಿಳಿದ ಹಸರು ಮೂಲಿಕೆಗಳನ್ನು ಹುಡುಕಿ ಜೊತೆಮಾಡಿಕೊಂಡು ಬಂದು ಔಷಧಿಗಳನ್ನು ಸಿದ್ಧಪಡಿಸಿಕೊಂಡು ಚಿಕಿತ್ಸೆಯನ್ನು ಮಾಡಲಾರಂಭಿಸಿದನು.

ಒಂದು ತಿಂಗಳು ಕಳೆಯಿತು. ಕಾಮಿನಿಗೆ ಹೋಗಿದ್ದ ಪ್ರಜ್ಞೆಯು ಬಂದಿತು. ಅಲ್ಪಸ್ವಲ್ಪನಡೆಯುವಂತೆ ಆದಳು. ಆಮೇಲೆಮತ್ತೊಂದು ತಿಂಗಳು ಕಳೆಯಿತು. ಸಂಪೂರ್ಣವಾಗಿ ಗುಣಹೊಂದಿದಳು. ಮೊದಲಿನಂತೆ ಆದಳು.

ಈ ಮಧ್ಯೆ ಅವಳಿಗೆ ಪ್ರಜ್ಞೆಬಂದಮೇಲೆ ದೇವದತ್ತನು ಅವಳನ್ನು ಮಗಳಂತೆ ಭಾವಿಸಿ ತನ್ನ ಸಂಗತಿಯನ್ನೆಲ್ಲಾ ತಿಳಿಸಿದನು. ಅವಳೂ ಕೂಡ ತಂದೆಯಂತೆ ಅವನನ್ನು ಭಾವಿಸಿ ತನ್ನ ವೃತ್ತಾಂತವನ್ನೆಲ್ಲಾ ತಿಳಿಸಿದಳು.

ಗುಣವಾದ ಮೇಲೆ ಕಾಮಿನಿಯು ಲಕ್ಷ್ಮೀನಿಲಯವನ್ನು ಪ್ರವೇಶಿಸುವ ವಿಧಾನವನ್ನು ದೇದತ್ತನಿಗೆ ವಿಸ್ತರಿಸಿ ಹೇಳಿ ಅವನನ್ನು ಕರೆದುಕೊಂಡು ಆ ನಿಲಯದ ಕಡೆಗೆ ಹೊರಟಳು.

ಎರಡನೆ ಗುಹೆಯ ಕೊನೆಯಲ್ಲಿ ದುಷ್ಟಬುದ್ಧಿಯು ತನ್ನದುರ್ಮಾರ್ಗಗಳನ್ನೆಲ್ಲಾ ಬಿಟ್ಟವನಂತೆ ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯನಕಡೆ ದೃಷ್ಟಿಯನ್ನು ಇಟ್ಟವನಾಗಿ ಎದೆಯಮೇಲೆ ಬಲಗೈಯನ್ನು ಇರಿಸಿಕೊಂಡು ಎಡಗೈಯನ್ನು ಹೊಟ್ಟೆಯಮೇಲೆ ಇಟ್ಟು-ಸಕಲ ಚರಾಚರ ಚೈತನ್ಯಕಾರಣನಾದ ಪದ್ಮಸಖನೇ ನನಗೆ ಸಖನಾಗು. ಹೃದಯದಲ್ಲಿ ನಾನು ಎಣಿಸಿದ್ದ ಸಕಲ ಭೋಗ, ಐಶ್ವರ್ಯಗಳನ್ನು ಕೊಡದಿದ್ದರೂ ಚೈತನ್ಯಾತ್ಮಕವಾದ ಆಹಾರವನ್ನಾದರೂ ನನ್ನ ಹೊಟ್ಟೆಗೆ ಕೊಟ್ಟು ನನ್ನನ್ನು ಚೇತರಿಸು ಎಂದು ಮೊರೆಯಿಟ್ಟುಕೊಂಡು ಇದ್ದನೋ ಎಂಬಂತೆ ನಿಶ್ಚೇತನನಾಗಿದ್ದನು. ಪದ್ಮಸಖನಾದರೊ ಅವನೊಬ್ಬನಿಗೆ ಸುಖನಾಗಿರುವುದಕ್ಕಿಂತಲೂ ಕೋಟ್ಯಾಂತರ ಚೇತನಾ ಪ್ರಾಣಿಗಳಿಗೆ ಸಖನಾರುವುದು ಸನ್ಮಾರ್ಗವೆಂದು ತಿಳಿದವನಾಗಿ ಅವನನ್ನೇ ಕೋಟ್ಯಾಂತರ

ಕ್ರಿಮಿಗಳಿಗೆ ಆಹಾರವನ್ನಾಗಿ ಅಣಿಮಾಡಿದುದರಿಂದ ಆ ಕ್ರಿಮಿಗಳಿಗೆ ಪರಮ ಸಖನಾದನು. ಪ್ರಾಣಹೋದರೂ ಆ ದುರ್ಮಾರ್ಗಿಯಾದ ದುಷ್ಟಬುದ್ಧಿಯು ಕಮಲಮಿತ್ರನು ತನಗೆ ಮಿತ್ರನಾಗಲಿಲ್ಲವೆಂದು ಕೋಪದಿಂದ ಕುವಲಯಾತ್ಮಕನಾಗಿ ಸೂರ್ಯನಿಗೆ ಶತೃವೆನಿಸಿಕೊಂಡು ಹೊಡೆದು ಹಗೆಯನ್ನು ತೀರಿಸಿಕೊಳ್ಳುವೆನೆಂದು ದುರ್ಗಂಧ ರೂಪದಿಂದ ಆಕಾಶಮಾರ್ಗವನ್ನು ಹತ್ತಿ ಹೊರಟನು ಖರಕಿರಣನು ದೂರದಿಂದಲೇ ದುಷ್ಟ ದುರ್ಗಂಧನನ್ನು ಕಿರಣಾಯುಧದಿಂದ ತುಂಡುತುಂಡಾಗಿ ಛೇದಿಸಿ ತರುಗುಲ್ಮ ಲತಾದಿಗಳೆಂಬ ಭೂತಗಣಕ್ಕೆ ಔತಣಕ್ಕಾಗಿಮಾಡಿ ಆ ದುಷ್ಟನ ವಾಸನೆಯೇ ಇಲ್ಲದಂತೆ ನಿರ್ಮೂಲಮಾಡತೊಡಗಿದನು.

ಸತ್ತು ಬಿದ್ದಿದ್ದ ದುಷ್ಟಬುದ್ಧಿಯನ್ನು ನೋಡಿ ಕಾಮಿನಿಯು, “ಈ ನೀಚನು ತಾನು ಮಾಡಿದ ಪಾಪಕ್ಕೆ ಯಮಲೋಕದಲ್ಲಿ ಹೊಂದುವ ನರಕ ಯಾತನೆಗೆ ಸೂಚನೆಯನ್ನು ಇಹಲೋಕದಲ್ಲಿ ಜೀವವಿರುವಾಗಲೆ ಕಂಡಂತೆ ನರಳಿಪ್ರಾಣವನ್ನು ಬಿಟ್ಟಿರುವನು. ಪಾಪಾತ್ಮರಿಗೆಲ್ಲಾ ಇದೇಗತಿಯು” ಎಂದು ಹೇಳಿ ದೇವದತ್ತನನ್ನು ಕರೆದುಕೊಂಡು ಹೊರಟು ನಾಲ್ಕಾರು ಗುಹೆಗಳನ್ನು ದಾಟಿ ಲಕ್ಷ್ಮೀನಿಲಯವನ್ನು ಸೇರಿದಳು. ಅವನು ಅಲ್ಲಿನ ಆಶ್ಚರ್ಯಗಳನ್ನು ನೋಡಿಕೊಂಡು ತನಗೆ ಬೇಕಾದಷ್ಟು ಅಮೂಲ್ಯವಾದ ನವರತ್ನಾದಿ ವಸ್ತುಗಳನ್ನು ಸಂಗ್ರಹಿಸಿ ಗಂಟುಕಟ್ಟಿಕೊಂಡು ಸಿದ್ಧನಾದನು. ನಂತರ ಇಬ್ಬರು ಹಿಂತಿರುಗಿ ಬಂದು ಪೊದರನ್ನು ದಾಟಿ ಕುದುರೆಯ ಮಾರ್ಗದ ಕೊನೆಯನ್ನು ಸೇರಿ ಹಣ್ಣುಹಂಪಲಗಳನ್ನು ತಿಂದು ತೃಷೆಯನ್ನು ಅಡಗಿಸಿಕೊಂಡರು. ಅಷ್ಟುಹೊತ್ತಿಗೆ ಆಕಾಶ ಮಧ್ಯದಲ್ಲಿ ಸೂರ್ಯನು ಕ್ರೂರಕಿರಣನಾಗಲು ಸ್ವಲ್ಪ ಹೊತ್ತು ವಿಶ್ರಾಂತಿಗೊಂಡರು.

ಸ್ವಲ್ಪ ಬಿಸಿಲು ಕಡಿಮೆಯಾಗಲು ಅಲ್ಲಿಂದ ಹೊರಟು ಗೂಢಮಾರ್ಗಗಳನ್ನು ದಾಟಿ ಕಾಡುದಾರಿಯನ್ನು ಹಿಡಿದರು. ಸೂರ್ಯಾಸ್ತಮಾನವಾದರೂ ಕಾಡುಮಾರ್ಗವು ಮುಗಿಯದಿರಲು ಮರಗಳ ತೋಪಿನಲ್ಲಿ ಮಲಗಿ ಆ ರಾತ್ರಿಯನ್ನು ಕಳೆದರು.

ಬೆಳಿಗ್ಗೆ ಎದ್ದು ಮುಂದಕ್ಕೆ ಪ್ರಯಾಣ ಹೊರಟರು. ಸುಮಾರು ೯ ಘಂಟೆಯ ಹೊತ್ತಿಗೆ ದಾರಿಯು ಕವಲು ಒಡೆಯುವ ಸ್ಥಳಕ್ಕೆ ಬಂದರು.

ಅಲ್ಲಿಂದ ಬೇರೆಬೇರೆ ಮಾರ್ಗಗಳನ್ನು ಹಿಡಿದು ಅವರಿಬ್ಬರು ಹೋಗಬೇಕಾಗಿ ಬಂದಿತು. ಚಾರರ ಮೂಲಕ ಆಗಿಂದಾಗ್ಗೆ ಕ್ಷೇಮಸಮಾಚಾರ

ಗಳನ್ನು ತಿಳಿಸುತ್ತಿರಬೇಕೆಂದು ಒಬ್ಬರನ್ನೊಬ್ಬರು ಕೇಳಿಕೊಂಡರು. ತಂದೆ ಮಗಳಂತೆ ಒಬ್ಬರನ್ನು ಒಬ್ಬರು ಬಿಟ್ಟು ಹೋಗುವುದಕ್ಕೆ ಬಹು ದುಃಖಿಸಿದರು. ಕೊನೆಗೆ ದೇವತ್ತನು ಉತ್ತರಕ್ಕೆ ಇರುವ ದಾರಿಯನ್ನು ಹಿಡಿದು ಹೊರಟನು. ಕಾಮಿನಿಯು ಸಮೀಪದಲ್ಲಿರುವ ಮರದ ನೆರಳಿನಲ್ಲಿ ಕುಳಿತು ತನ್ನ ಯೋಚನೆಯಲ್ಲಿ ಮಗ್ನಳಾಗಿದ್ದಳು.

ದೇವದತ್ತನು ೨೦೦ ಗಜಗಳ ದೂರ ಹೋದನು ಅಷ್ಟರಲ್ಲಿ ಕಾಡಿನ ಅಡ್ಡದಾರಿಯಲ್ಲಿ ಬರುತ್ತಿದ್ದ ಹತ್ತಾರುಮಂದಿ ಕೊಂಕಣಿ ರಾಹುತರು ದೊಡ್ಡ ರಸ್ತೆಯನ್ನು ಸೇರಿ ಅವನನ್ನು ಸಂಧಿಸಿದರು. ಕೂಡಲೇ ಅವರಲ್ಲಿ ಒಬ್ಬನು ದೇವದತ್ತನನ್ನು ನೋಡಿ ಅನುಮಾನಗೊಂಡ ಭಾವವನ್ನು ತೋರ್ಪಡಿಸಿ ಕುದುರೆಯಿಂದ ಇಳಿದು ಅವನನ್ನು ಚೆನ್ನಾಗಿ ದೃಷ್ಟಿಸಿನೋಡಿ ಉಳಿದವರನ್ನು ಕುರಿತು, "ಅಯ್ಯಾ! ಇವನು ನಮ್ಮ ಕೊಂಕಣ ದುರ್ಗದಿಂದ ತಪ್ಪಿಸಿಕೊಂಡುಹೋದ ಆ ಹಸ್ತಿನಾವತಿಯ ಗೂಢಚಾರನು. ಇವನನ್ನು ಮೊದಲು ಹಿಡಿದ ಕಾಲದಲ್ಲಿ ನೊಡಿರುವೆನು" ಎಂದು ಹೇಳಿ ಮುಗಿಸುವಷ್ಟರಲ್ಲಿ ಎಲ್ಲರೂ ಕುದುರೆಗಳಿಂದ ಇಳಿದು ದೇವದತ್ತನನ್ನು ಸೆರೆಹಿಡಿದರು. ಅವನನ್ನು ಸಂಗಡ ಕರೆದುಕೊಂಡು ಹೊರಟರು.

ಇಷ್ಟನ್ನೆಲ್ಲಾ ಕಾಮಿನಿಯು ಮರಗಳ ಮರೆಯಲ್ಲಿ ಅವಿತುಕೊಂಡಿದ್ದು ನೋಡುತ್ತಿದ್ದಳು. ಅವಳು ದೇವದತ್ತನ ಕಡೆಯೇ ದೃಷ್ಟಿಯನ್ನು ಇಟ್ಟು ಯೋಚಿಸುತ್ತ ಕುಳಿತಿದ್ದು ರಾಹುತರು ದೊಡ್ಡರಸ್ತೆಯಲ್ಲಿ ಕಾಣಬಂದ ಕೂಡಲೇ ಮರಗಳ ಮರೆಯಲ್ಲಿ ಅಡಗಿಕೊಂಡಳು. ಆದುದರಿಂದ ಅವರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡಳು.

ದೇವದತ್ತನು ಸೆರೆಸಿಕ್ಕಿ ಬಿದ್ದುದಕ್ಕಾಗಿ ಕಳವಳ ಪಡುತ್ತಿದ್ದಳು. ಹೀಗಿದ್ದ ಎರಡು ನಿಮಿಷಗಳಲ್ಲಿ ಅವಳು ಹೊರಡಬೇಕೆಂದಿದ್ದ ದಕ್ಷಿಣ ದಿಕ್ಕಿನ ರಸ್ತೆಯ ತಿರುವನ್ನು ಬಿಟ್ಟು ಮತ್ತೊಂದು ರಾಹುತಪಡೆಯು ಗೋಚರವಾಯಿತು. ಕ್ಷಣ ಮಾತ್ರದಲ್ಲಿ ತಾನು ಕಾಣಬಾರದಂತೆ ಮರೆಯಾದಳು.

ಆ ಪಡೆಗೆ ಅಧ್ಯಕ್ಷನು ಎತ್ತರವಾದ ಒಂದು ಕುದುರೆಯ ಮೇಲೆ ಕುಳಿತು ಪಡೆಯನ್ನು ನಡೆಸಿಕೊಂಡು ಮುಂಭಾಗದಲ್ಲಿ ಬಹು ಗಂಭೀರವಾದ ಠೀವಿಯಿಂದ ಬರುತ್ತಿದ್ದನು.

ಕಾಮಿನಿಯು ಅಡಗಿರುವ ಸ್ಥಳವನ್ನು ಸಮೀಪಿಸಿ ಪಡೆಯು ಬಂದಿತು.

ಕೂಡಲೆ ಅವಳು ರಸ್ತೆಗೆ ಓಡಿಬಂದಳು. ಪಡಿವಳನು ಅವಳನ್ನು ನೋಡಿದಾಕ್ಷಣವೇ ಕುದುರೆಯಿಂದ ಹಾರಿ ಇಳಿದು ಅವಳಕಡೆಗೆ ಓಡಿದನು. ಇಬ್ಬರೂ ಸಂಧಿಸಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಕಾಮಿನಿಯು ಎರಡು ಕ್ಷಣ ಅವನ ಆಲಿಂಗನದಲ್ಲಿದ್ದು, "ಪ್ರಿಯನೆ, ಪ್ರಿಯನೆ, ನನ್ನ ತಂದೆಯು ಆಪತ್ತಿಗೆ ಗುರಿಯಾಗಿರುವನು. ಅದೋ ಆಕಡೆ ಹತ್ತಾರುಮಂದಿ ಕೊಂಕಣಿಯ ರಾಹು ತರು ಆತನನ್ನು ಹಿಡಿದುಕೊಂಡು ಹೋಗುತ್ತಿರುವರು. ಅತನನ್ನು ಬಿಡಿಸಿ ರಕ್ಷಿಸು ! ರಕ್ಷಿಸು !" ಎಂದು ಗೋಳಾಡಿದಳು. ಆಪನು ದೇವದತ್ತನನ್ನು ಬಿಡಿಸಿ ತರುವಂತೆ ತನ್ನ ಪಡೆಯ ಜನರಿಗೆ ಆಜ್ಞಾಪಿಸಿ ಕಳುಹಿಸಿದನು.

ಇತ್ತ ಆ ದಂಪತಿಗಳ ಆನಂದವೇ ಆನಂದ. ಅವರ ಕಣ್ಣುಗಳಲ್ಲಿ ಆನಂದ ಭಾಷ್ಪವು ಧಾರೆಧಾರೆಯಾಗಿ ಸುರಿಯಿತು. ಒಮ್ಮೆ ಸಂತೋಷಾತಿಶಯದಿಂದ ಕುಣಿಯುವರು. ಒಮ್ಮೆ ನಗುತ್ತಿರುವರು. ಒಮ್ಮೆ ಆಲಂಗಿಸಿಕೊಂಡು ಹಾಗೆಯೇ ಪರವಶರಾಗುವರು. ಅವರ ಸಂತೋಷಕ್ಕೆ ಎಣೆಯೇ ಇರಲಿಲ್ಲ. ಸಂತೋಷವು ತುಂಬಿ ತುಳುಕುತ್ತಿರಲು ಮಾತನಾಡುವುದಕ್ಕೆ ಅವಕಾಶವೇ ಇರಲಿಲ್ಲ.

ಹೀಗೆಯೇ ಒಂದು ಘಳಿಗೆಯಾಗಲು ಸಂತೋಷ ಚೇಷ್ಟೆಗಳಿಂದ ದಣಿದು ಮರಗಳ ಮರೆಯನ್ನು ಹೊಕ್ಕು ಕುಳಿತು ಸ್ವಲ್ಪಹೊತ್ತು ವಿಶ್ರಾಂತಿಗೊಂಡರು.

ಬಳಿಕ ಪಡಿವಳನು ಅವಳನ್ನು ಕುರಿತು, "ಪ್ರಿಯೆ ! ನೀನು ಗತಿಸಿ ಹೋದೆಯೆಂದು ನಂಬಿದ್ದೆನು. ಆದರೆ ಆದಿನ ತೊರೆಯ ದಡದಲ್ಲಿ ನನ್ನನ್ನು ಉಪಚರಿಸಿ ಮಾಯವಾದೆಯಲ್ಲಾ ! ಅಂದಿನಿಂದಲೂ ಕೆಲಸವಿಲ್ಲದ ವೇಳೆಯಲ್ಲಿ ನಿನ್ನ ಉಳಿವುಮರಣಗಳ ಪರವಾಗಿ ಚಂಚಲಚಿತ್ತತೆಯಿಂದ ಯೋಚಿಸುತ್ತಿದ್ದೆನು. ನಿನ್ನನ್ನು ಅನೇಕಸ್ಥಳಗಳಲ್ಲಿ ಹುಡುಕಿರುವೆನು. ಈಗಲೂ ನಿನ್ನ ವಿಚಾರವಾಗಿಯೇ ಯೋಚಿಸುತ್ತಾ ಬರುತ್ತಿದ್ದೆನು. ಬದುಕಿದ್ದರೂ ಮೃತಳಾದೆಯೆಂದು ಏತಕ್ಕೆ ತೋರ್ಪಡಿಸಿದೆ ? ಇಷ್ಟು ದಿನ ನನ್ನನ್ನು ಬಿಟ್ಟಿರುವುದಕ್ಕೆ ಕಾರಣವೇನು ? ಇದನ್ನೆಲ್ಲಾ ಹೇಳುವಳಾಗು." ಎಂದು ಕೇಳಿದನು.

ಅದನ್ನು ಕೇಳಿ ಕಾಮಿನಿಯೆಂಬ ಹೆಸರಿನಿಂದ ಮನೋರಮೆಯನ್ನು ಸಂರಕ್ಷಿಸಿದ ಕರಾಳಕಾಂತೆಯಾದ ಶುಕವಾಣಿಯು ಕಾಂತನನ್ನು ಕುರಿತು ತನ್ನ ವೃತ್ತಾಂತವನ್ನು ತಿಳಿಸಿದಳು. ಹೇಗೆಂದರೆ:—

ಹಿಂದೆ ಹಾವು ಕಚ್ಚಿ ಶುಕವಾಣಿಯು ಮೃತಳಾದಳೆಂದು ತಿಳಿಸಿದೆವಷ್ಟೆ. ಮನೋರಮೆಯು ಬಿಟ್ಟುಹೋಗಿ ಎರಡು ಘಳಿಗೆಯಾದಮೇಲೆ ಶುಕವಾಣಿಗೆ ಕ್ರಮವಾಗಿ ಪ್ರಜ್ಞೆಯು ಹಿಂತಿರುಗಲಾರಂಭಿಸಿತು. ಮಂಗಲೆಯು ಕೊಟ್ಟ ಚೂರ್ಣದಿಂದ ಹಾವಿನ ವಿಷವು ನಾಶವಾದರೂ ಮೃತಿಯನ್ನೈದಿದರೆ ತೋರುವಂಥಹ ಲಕ್ಷಣಗಳನ್ನುಳ್ಳ ಗೂಢಮೂರ್ಛೆಯು ಆವರಿಸಿತ್ತು. ಪ್ರಜ್ಞೆಯು ಚೆನ್ನಾಗಿ ಬಂದಮೇಲೆ ಮಾತನಾಡುವುದಕ್ಕೆ ಆಗದೆ ಎರಡು ಘಳಿಗೆ ಕಾಲ ಸುಮ್ಮನಿರಬೇಕಾಯಿತು.

ಆ ಅವಕಾಶದಲ್ಲಿ ಶುಕವಾಣಿಯು ಮನಸ್ಸಿನಲ್ಲಿ ನಾನಾ ವಿಧವಾಗಿ ಯೋಚಿಸಿದಳು. ಹೇಗೆಂದರೆ:—ಅವಳು ಇದುವರಿಗೂ ದುಷ್ಕಾರ್ಯಕ್ಕೆ ಅನುಕೂಲಳಾಗಿ ಇದ್ದುದಕ್ಕೆ ಫಲಪ್ರದವಾಗಿ ದುಷ್ಟಜಂತುವಿನಿಂದ ಮರಣವು ಸಂಭವಿಸುವ ಗತಿಯು ಪ್ರಾಪ್ತಿಸಿದ್ದುದು. ಆದರೆ ದೇವರು ಉಳಿಸಿ ಕಾಪಾಡಿರುವುದನ್ನು ನೋಡಿದರೆ ಮುಂದೆ ಸನ್ಮಾರ್ಗದಲ್ಲಿ ಪ್ರವರ್ತಿಸಿ ಹಿಂದಿನ ಪಾತಕಗಳನ್ನು ಕಳೆದುಕೊಳ್ಳುವುದಕ್ಕೆಂದು ಅವಳಿಗೆ ತೋರಿತು. ಮನೋರಮೆಯು ಉಂಗುರದೊಡನೆ ಕಳಿಂಗಪಟ್ಟಣವನ್ನು ಸೇರಿರುವಳು. ಅಲ್ಲಿ ದುಷ್ಟಬುದ್ಧಿಯು ಕೆಟ್ಟಯೋಚನೆಗಳಿಗೆ ಒಳಗಾಗಿರುವ ಕರಾಳನು ಅವಳಿಗೆ ಕೆಡಕನ್ನು ಉಂಟುಮಾಡಬಹುದು. ಆ ಸಂಭವವನ್ನು ಹೇಗಾದರೂ ತಪ್ಪಿಸಿ ಮನೋರಮೆಯನ್ನು ಕಾಪಾಡುವುದು ಪರಮ ಧರ್ಮವೆಂದು ಎಣಿಸಿದಳು. ಈ ಕಡೆ ಉಂಗುರವಿಲ್ಲದೆ ಶುಕವಾಣಿಯು ಪತಿಯ ಬಳಿಗೆ ಹೋದರೆ ಅವನು ಆಗ್ರಹಗೊಳ್ಳುವನು. ಅವನನ್ನು ಸಮಾಧಾನ ಪಡಿಸಬಲ್ಲಳು. ಆದರೆ ಅವಳು ಎಣಿಸಿರುವಂತೆ ದುಷ್ಕಾರ್ಯಗಳಿಂದ ಅವನನ್ನು ಬಿಡಿಸುವುದು ಸಾಧ್ಯವಲ್ಲ. ಒಂದು ವೇಳೆ ಅವಳನ್ನು ಮೊದಲಿನಂತೆ ದುಷ್ಪ್ರವರ್ತನೆಗೆ ಎಳೆದು ಕೊಂಡಾನು. ಈ ಕಾರಣಗಳಿಂದ ಅವನನ್ನು ಕೆಲವುಕಾಲ ಬಿಟ್ಟಿರಬೇಕು. ಅವನು ಮಾಡಬಹುದಾದ ಕೆಡಕಿಗೆಲ್ಲಾ ತೊಡಕನ್ನು ತಂದು ಮನೋರಮೆಯನ್ನು ಉಳಿಸಬೇಕು. ಕರಾಳನ ಪತ್ನಿಯು ಪತಿಗೆ ವಿರೋಧವಾಗಿ ಮನೋರಮೆಗೆ ಸಹಾಯ ಮಾಡುವಳೆಂದರೆ ಅನುಮಾನಕ್ಕೆ ಅವಕಾಶವಾಗುವುದು. ಇದರಿಂದ ಮಾಡಿದ ಸಹಾಯವು ನಿರರ್ಥಕವಾಗುವುದು. ಆದುದರಿಂದ ಲೋಕಕ್ಕೆ ಶುಕವಾಣಿಯು ಮೃತಳಾದಳೆಂದು ತೋರ್ಪಡಿಸಿ ಬೇರೆರೂಪದಿಂದ ಮನೋರಮೆಯನ್ನು ರಕ್ಷಿಸಬೇಕೆಂದು ಸಂಕಲ್ಪಿಸಿಕೊಂಡಳು.

ಮತ್ತೆರಡು ಘಳಿಗೆಯಾಗಲು ಶುಕವಾಣಿಗೆ ಮಾತನಾಡುವುದಕ್ಕೆ ಶಕ್ತಿಯುಂಟಾಗಿ ಮಂಗಲೆಯನ್ನು ದಾದಿಯರನ್ನು ತನ್ನ ಅಭಿಪ್ರಾಯಕ್ಕೆ ಒಳಗು ಮಾಡಿಕೊಂಡು ಮುಂದೆ ಹೊರಟು ರಾತ್ರಿವೇಳೆಯಲ್ಲಿ ಕಳಿಂಗಪಟ್ಟಣವನ್ನು ಸೇರಿ ಗೋಪ್ಯವಾಗಿ ಚಿಕ್ಕಮ್ಮನ ಮನೆಯಲ್ಲಿ ಇಳಿದುಕೊಂಡಳು. ಅವಳೂ ಕೂಡ ಶುಕವಾಣಿಯ ತಂತ್ರಕ್ಕೆ ಒಳಗಾದಳು.

ನಂತರ ಮಂಗಲೆಯುಚೂರ್ಣದಿಂದ ಶುಕವಾಣಿಯು ಮೃತಳಾದವಳಂತೆ ಗೂಢಮೂರ್ಛೆಯಲ್ಲಿ ಮಂಚದ ಮೇಲೆ ಮಲಗಿದಳು. ಅವಳು ಸತ್ತುಹೋಗಿರುವಳೆಂಬ 'ಸಂಗತಿಯು ಯಾರುಯಾರಿಗೆ ಮುಖ್ಯವಾಗಿ ತಿಳಿದಿರಬೇಕಾಗಿ ಇದೆಯೋ ಅವರೆಲ್ಲಾ ಬರಮಾಡಲ್ಪಟ್ಟರು.

ಮುಂದೆ ನಡೆದುದೆಲ್ಲಾ ವಾಚಕರಿಗೆ ತಿಳಿದಿರುವುದು.

ದುಷ್ಟಬುದ್ಧಿಯ ವಿಚಾರದಲ್ಲಿ ಶುಕವಾಣಿಗೆ ಕೆಲವು ಅಭಿಪ್ರಾಯಗಳಿದ್ದವು. ಏನೆಂದರೆ:— ಮೊದಲು ದುಷ್ಟಬುದ್ಧಿಯು ಧನಕೋಟಿಯನ್ನು ಕೊಂದವನಲ್ಲವೆಂದು ಕರಾಳನಮೂಲಕ ತೊರೆಯುದಡದಲ್ಲಿ ತಿಳಿಯ ಬಂದಿತು ನಿರಪರಾಧಿಯನ್ನು ಮರಣದಂಡನೆಗೆ ಗುರಿಮಾಡುವುದು ಅವಳ ಮನಸ್ಸಿಗೆ ಒಪ್ಪಲಿಲ್ಲ. ಅವನನ್ನು ಬಿಡಿಸದಿದ್ದರೆ ಆ ನೀಚನು ತಪ್ಪಿಸಿಕೊಳ್ಳುವುದಕ್ಕೆ ದಾರಿತೋರದೆ ಕೊನೆಗೆ ನಡೆದ ಸಂಗತಿಯನ್ನೆಲ್ಲಾ ನಿಜವಾಗಿ ಹೇಳಿಬಿಡುತ್ತಿದ್ದನು. ಆದುದರಿಂದ ಚೋರಾಗ್ರೇಸರನಾದರೂ ಕೀರ್ತಿಕಾಮನಾಗಿ ಶೌರ್ಯ, ಔದಾರ್ಯಾದಿ ಕಾರ್ಯಗಳಲ್ಲಿ ಉತ್ಸಾಹಸಿಯಾದ ಕರಾಳನು ಅಬಲೆಯನ್ನು ಅಪಹರಿಸಿಕೊಂಡು ಹೋಗುವಂತಹ ಅಲ್ಪಕೆಲಸಕ್ಕೆ ಉದ್ಯುಕ್ತನಾದನೆಂದು ಅವನ ಯಶಸ್ಸಿಗೆ ಕುಂದುಕವುಂಟಾಗುವುದು. ಇಂಥಹ ಅಲ್ಪನನ್ನು ಶುಕವಾಣಿಯು ವರಿಸಿರುವಳೆಂಬ ಅಪಮಾನವು ದೊಡ್ಡವಂಶೀಕರಾದ ಅವಳ ಮನೆಯವರಿಗೆ ಬಂದು ತಟ್ಟುವುದು. ಅದಲ್ಲದೆ ಹೇಗಾದರೂ ಪ್ರಯತ್ನಪಟ್ಟು ದುಷ್ಟಬುದ್ಧಿಯು ಮುಂದೆ ಕರಾಳನ ಸಹವಾಸವನ್ನು ಬಿಟ್ಟು ಇರುವಂತೆ ಮಾಡಬೇಕೆಂದು ನಿರ್ಧರಿಸಿದಳು. ಆ ನೀಚನ ದುಷ್ಕಾರ್ಯ ಪ್ರೇರೇಪಣೆಯು ತಪ್ಪಿದರೆ ಕರಾಳನನ್ನು ಸನ್ಮಾರ್ಗಕ್ಕೆ ತಿರಿಗಿಸುವುದು ಸುಲಭವೆಂದು ಎಣಿಸಿದ್ದಳು.

ಬಳಿಕ ಕರಾಳನು ತನ್ನ ಸಂಗತಿಯನ್ನೆಲ್ಲಾ ವಿವರಿಸಿ ತಿಳಿಸಿದನು. ಅಷ್ಟುಹೊತ್ತಿಗೆ ಕಿರಾತರು ದೇವದತ್ತನನ್ನು ಬಿಡಿಸಿತಂದರು. ಮುವ್ವರು ಪ್ರತ್ಯೇಕವಾಗಿ ಕುಳಿತು ಮಾತನಾಡುತ್ತಿದ್ದರು. ರಾಜಕೀಯ ಪ್ರಸ್ತಾಪವು

ಬರಲು ಕರಾಳನು ತನಗೆ ತಿಳಿದುದನ್ನು ಹೇಳಿದನು. ಏನೆಂದರೆ:-ಸಿಂಹ ಬಲನು ಸಿಂಹಳೇಶನನ್ನು ಸಹಾಯಕ್ಕೆ ಒಡಂಬಡಿಸಿ ಮನೋರಮೆಯು ವಿಚಾರವಾಗಿ ಅಲ್ಲಿ ನಡೆದುವನ್ನೆಲ್ಲಾ ತಿಳಿಸಿದನು. ರಾಜನು ರಾಜಮಾತೆಯು ಆಶ್ಚರ್ಯ ಪಶ್ಚಾತ್ತಾಪಯುಕ್ತರಾದರು. ಕುಳಿಂದನು ತಾರಾದೇವಿಯ ಸೌಗುಣ್ಯ ವನ್ನು ಮೆಚ್ಚಿ ಅವಳ ಬಂಧುಜನಗಳ ಪರವಾಗಿ ಇರುವ ಅರಮನೆ ಕಟ್ಟಳೆಯ ನಿರ್ಬಂಧವನ್ನು ಬಿಡಿಸಿದನು. ಮನೋರಮೆಯ ಜ್ಞಾಪಕಾರ್ಥವಾಗಿ ಇಚ್ಛೆ ಯಿಲ್ಲದೆ ಕನ್ಯೆಯನ್ನು ನಿರ್ಬಂಧಪಡಿಸಕೂಡದೆಂಬ ಆಜ್ಞೆಯನ್ನು ವಿಧಿಸಿದನು. ನಂತರ ಸಿಂಹಬಲನು ಹಿಂತಿರುಗಿದನು. ಅವನು ರಾಧಾಪುರಕ್ಕೆ ಬಂದ ಒಂದು ವಾರದಲ್ಲಿ ಉಳಿದ ರಾಯಭಾರಿಗಳು ಬಂದು ಶೂರಸೇನನು ಸಂಧಿಗೆ ಒಳಪಡಲಿಲ್ಲವೆಂಬುದನ್ನು ಕೊಂಕಣ ರಾಜನು ಸಹಾಯಕ್ಕೆ ಸಿದ್ಧನಾಗಿರುವ ನೆಂಬುವನ್ನು ತಿಳಿಸಿದರು.

ಆ ಬಳಿಕ ಮುಂದಿನ ಯೋಚನೆಯನ್ನು ನಿರ್ಧರಿಸಿ ಯುದ್ಧಕ್ಕೆ ಸನ್ನದ್ಧ ರಾಗಿ ಕಾದಿರುವಂತೆ ಕಿರಾತರಿಗೆ ಹೇಳಿ ಕಳುಹಿಸಿಕೊಟ್ಟು ಮೂವ್ವರು ಹೊರಟು ರಾಘಾಪುರವನ್ನು ಸೇರಿದರು.

ಶುಕವಾಣಿಯು ಮಾತ್ರ ಮೊದಲು ಮನೋರಮೆಯನ್ನು ಕಂಡು ನಡೆದ ಸಂಗತಿಯನ್ನೆಲ್ಲಾ ವಿಸ್ತರಿಸಿ ಹೇಳಿ ಅವಳನ್ನು ಕರೆದುಕೊಂಡು ರಾಜ ನಲ್ಲಿಗೆ ಹೋಗಿ ಅವನಲ್ಲಿಯೂ ನಿಜವನ್ನೆಲ್ಲ ತಿಳಿಸಿ ಕರಾಳನು ಕಳಿಂಗಪಟ್ಟಣದ ರಾಜ ವಂಶೀಕನೆಂದು ಅವನ ಪೂರ್ವೀಕರ ಚರಿತ್ರೆಯನ್ನು ವಿವರವಾಗಿ ಹೇಳಿ ಅವನಿಗೆ ಸೈನ್ಯದಲ್ಲಿ ಯೋಗ್ಯವಾದ ಅಧಿಕಾರವನ್ನು ಕೊಟ್ಟು ಇರಿಸಿ ಕೊಳ್ಳಬೇಕೆಂದು ರಾಜನನ್ನು ಕೇಳಿ ಒಡಂಬಡಿಸಿದಳು.

ಬಳಿಕ ಕರಾಳ ದೇವತ್ತರನ್ನು ರಾಜನಲ್ಲಿ ಭೇಟಿ ಮಾಡಿಸಿದಳು. ಕರಾಳನು ಯುದ್ಧಕಾರ್ಯವಿಶಾರದನಾಗಿರುವುದನ್ನು ರಾಜನು ಪರೀಕ್ಷಿಸಿ ನೋಡಿ ಅವನನ್ನು ಸೈನ್ಯಾಧಿಪತಿಯ ಕೈಕೆಳಗೆ ಸೈನ್ಯಕ್ಕೆಲ್ಲಾ ಗೊತ್ತುಗಾರನಾಗಿ ಮಾಡಿದನು.

ಅನಂತರ ಒಂದು ತಿಂಗಳಲ್ಲಿ ಯುದ್ಧಪ್ರಾರಂಭವಾಯಿತು. ಶೂರ ಸೇನನು ತಾನೇ ಹೊರಟು ಬಂದನು. ಉಭಯದಳವು ವಿಂಧ್ಯಾದ್ರಿಗೆ ದಕ್ಷಿಣದಲ್ಲಿ ಸಂಧಿಸಿತು. ಹತ್ತು ದಿನಗಳು ನಡೆದ ಯುದ್ಧವು ಉಭಯತ್ರರಿಗೂ ಸಮವಾಗಿತ್ತು. ಆವರೂ ಮುಂದೆ ಕುರುಸೈನ್ಯವು ಪ್ರಬಲವಾಗುವಂತೆ

ತೋರಿತು. ಆದುದರಿಂದ ಹತ್ತನೇದಿನರಾತ್ರಿ ದಕ್ಷಿಣದೇಶ ಸೈನ್ಯದ ಗೊತ್ತುಗಾರರೆಲ್ಲ ಸಭೆಸೇರಿ ಮಂತ್ರಾಲೋಚನೆಯನ್ನು ಮಾಡಿದರು. ತಮ್ಮ ಸೈನ್ಯದ ಪೂರ್ವಪಶ್ಚಿಮ ಭಾಗಗಳನ್ನು ಪ್ರತಾಪಕಂಠೀರವನು ಕರಾಳನು, ಮಧ್ಯಭಾಗವನ್ನು ಕೊಂಕಣ ರಾಜನನ್ನು ನಡೆಸುವಂತೆ ಸಿದ್ಧರವಾಯಿತು. ಮಾರನೇ ದಿನ ನಡೆದ ಯುದ್ಧದಲ್ಲಿ ಶೂರಸೇನನಿಗೆ ಅಪಜಯವಾಗುವ ಸಂಭವವಿದ್ದುದನ್ನು ಯುಕ್ತಿಯಿಂದ ತಪ್ಪಿಸಿಕೊಂಡು ಮುಂದೆ ಯುದ್ಧವಾದರೆ ಸೋತು ಹೋಗುವೆನೆಂದು ಅವನು ಪೂರ್ವಾಪರಗಳನ್ನು ಯೋಚಿಸಿ ಸಂಧಿಗೆ ಕಳುಹಿಸಿದನು.

ಪ್ರತಾಪ ಕಂಠೀರವಾದಿಗಳು ಸಭೆಸೇರಿ ವಿಷಯಗಳನ್ನು ಚರ್ಚಿಸಿ ಸಂಧಿಗೆ ಒಪ್ಪಿದರು. ಶೂರಸೇನನ ಯುದ್ಧದಕರ್ಚನ್ನು ದಕ್ಷಿಣದೇಶದ ರಾಜರು ಕೊಟ್ಟರು. ಹಸ್ತಿನಾವತಿಯ ಸಾಮಂತರನ್ನು ಕೊಂಕಣ ಸಿಂಹಳ ರಾಜರಿಗೆ ಹಂಚಿದರು.

ಎರಡು ದಿನಗಳು ಕಳೆದಮೇಲೆ ಉಭಯದಳವೂ ಕಲೆತು ಹೊರಟು ಕಳಿಂಗಪಟ್ಟಣದ ಸುತ್ತುಮುತ್ತಿನ ಪ್ರದೇಶಗಳನ್ನು ಒಳಗೊಂಡ ಸಣ್ಣ ರಾಜ್ಯಕ್ಕೆ ಕರಾಳನು ಅರಸನಾಗಿ ಪ್ರತಾಪಕಂಠೀರವನ ಅಧೀನದಲ್ಲಿರುವಂತೆ ಏರ್ಪಡಿಸಿ ಆ ಪಟ್ಟಣದಲ್ಲೇ ಅವನಿಗೆ ಪಟ್ಟಾಭಿಷೇಕಮಾಡಿ ಮುಂದೆ ರಾಜ್ಯವನ್ನು ಕುರಿತು ಹೊರಟರು.

ಭರತಖಂಡದ ರಾಜಾಧಿರಾಜರೆಲ್ಲಾ ಕೇರಳರಾಜಧಾನಿಯನ್ನು ಬಂದು ಸೇರಿ ಮನೋರಮೆ ಪ್ರತಾಪಕಂಠೀರವನಿಗೆ ಬಹು ವಿಜೃಂಭಣೆಯಿಂದ ವಿವಾಹವನ್ನು ಬೆಳಸಿದರು. ನಾಗವಲ್ಲಿಯಾದ ನಾಲ್ಕನೇದಿನ ಚೇರ ಕೇರಳ ರಾಜ್ಯಗಳಿಗೆ ರಾಜನೆನಸಿ ಬಹಳ ವೈಭವದಿಂದ ಪ್ರತಾಪಕಂಠೀರವನು ಪಟ್ಟಾಭಿಷಿಕ್ತನಾದನು.

ಅನಂತರ ಬಹುಕಾಲ ಸುಖ ಸಾಮ್ರಾಜ್ಯದಲ್ಲಿ ಇದ್ದು ಮಕ್ಕಳು ಮೊಮ್ಮಕ್ಕಳನ್ನು ಪಡೆದು ಸ್ವರ್ಗಸೋಪಾನಗಳನ್ನು ಅಡರಿದನು.

— ಸಮಾಪ್ತಿ —

## ಇಲ್ಲಿ ದೊರೆಯುವ ಪುಸ್ತಕಗಳು ---

| | ರೂ. | ಆ. | | ರೂ. | ಆ. |
|---|---|---|---|---|---|
| ಲಾವಣ್ಯತಿಲೋತ್ತಮೆ | ೦ | ೧೨ | ಸೆಲ್ಫ್ ಇಂಗ್ಲೀಷ್ ಸ್ಟಡಿ ಭಾ. ೧ | ೧ | ೮ |
| ವಸಂತಕೋಕಿಲೆ | ೧ | ೦ | ಡಿಟ್ಟೋ ಎರಡನೇಭಾಗ | ೧ | ೮ |
| ಪ್ರತಾಪಕಂಠೀರವ | ೧ | ೮ | ಡಿಟ್ಟೋ ಮೂರನೇಭಾಗ | ೧ | ೮ |
| ಶಕ್ತಿಕಾದಂಬರಿ | ೧ | ೦ | ಸ\| ಕಲಾತರಂಗ ಕೈಗಾರಿಕೆ | | |
| ವಿಚಿತ್ರಕಥಾಪ್ರಪಂಚಂ | ೧ | ೮ | ಪುಸ್ತಕ | ೧ | ೪ |
| ವಿದ್ಯಾಮಂಜರಿ ಕಥೆ | ೨ | ೮ | ಸ\| ಮಹಾಜಾಲ ವಿದ್ಯೆ | | |
| ವಚನರಾಮಾಯಣ | ೧ | ೮ | ಯಕ್ಷಿಣಿ ಪುಸ್ತಕ | ೧ | ೦ |
| ವಚನ ಜೈಮಿನಿಭಾರತ | ೧ | ೮ | ಸಂಸಾರಸುಖಸಾಂಮ್ರಾಜ್ಯ | | |
| ಶ್ರೀಕೃಷ್ಣಬೋಧಾಮೃತ | ೧ | ೦ | ಎಂಬ ಕಾಮಶಾಸ್ತ್ರವು | ೦ | ೮ |
| ವಿನೋದರಸಮಂಜರಿ ಕಥೆ | ೦ | ೮ | ಬಳ್ಳಾರಿತತ್ವಗಳು | ೦ | ೬ |
| ಕಬೀರ್‌ದಾಸುನಾಟಕ | ೧ | ೦ | ಪಿಲಂಸಾಂಗ್ಸ್ | ೦ | ೬ |
| ಪ್ರಹ್ಲಾದಚರಿತ್ರೆನಾಟಕ | ೧ | ೦ | ನಿರ್ಮಲಾನಂದಬೋಧೆ | ೦ | ೬ |
| ಪ್ರಭಾವತಿದರ್ಬಾರ್ ನಾಟಕ | ೦ | ೬ | ನಿಶ್ಚಲಾನಂದಬೋಧೆ | ೦ | ೬ |
| ಶಾಕುಂತಳಾ ನಾಟಕ | ೦ | ೬ | ಮೂಲಿಕಾವೈದ್ಯಪ್ರಕಾಶಿಕೆ | ೩ | ೦ |
| ರಾಜಸೂಯಾಗನಾಟಕ | ೦ | ೧೨ | ದಾತುವೃದ್ಧಿರತ್ನಪ್ರಭೆ | ೩ | ೦ |
| ಭೋಜಕಾಳಿದಾಸನಾಟಕ | ೦ | ೧೨ | ವೈದ್ಯಕಲಾನಿಧಿ | ೫ | ೦ |
| ಜ್ಯೋತಿಷ್ಯಸರ್ವವಿಷಯಾಮೃ | ೧ | ೮ | ವ್ರತರತ್ನಮಾಲ | ೨ | ೦ |
| ಜಾತಕಫಲಚಿಂತಾಮಣಿ [ತ | ೨ | ೦ | ಇಂಡಿಯನ್‌ಪೆನಲ್‌ಕೋಡು | ೨ | ೮ |
| ಮುಹೂರ್ತದರ್ಪಣ | ೦ | ೧೨ | ವ್ಯವಹಾರಲೇಖ್ಯಬೋಧಿನಿ | ೨ | ೮ |
| ಹಲ್ಲಿಶಕುನ | ೦ | ೦ | ಕ್ರಿಮಿನಲ್‌ಪ್ರಸಿಜರ್‌ಕೋಡು | ೨ | ೮ |
| ಶ್ರೀ ಶಿವಮಹಾಪುರಾಣದಕಥೆ | ೨ | ೪ | ಸಿವಿಲ್‌ಪ್ರಸೀಜರ್ ಕೋಡು | ೨ | ೮ |
| ಬ್ರಂಹ್ಮೋತ್ತರಖಂಡ | ೧ | ೦ | ಪ್ರಶ್ನೋತ್ತರಲೇಖ್ಯಬೋಧಿನಿ | ೧ | ೮ |

ನಮ್ಮ ವಿಳಾಸ:

**ಎಂ. ಕೆ. ರಾಜರತ್ನಂ ಶೆಟ್ಟಿ,**

ಶ್ರೀ ವಾಮನಪ್ರೆಸ್ ಬುಕ್ ಡಿಪ್ಪೋ, ಬಳೇಪೇಟೆ, ಬೆಂಗಳೂರು ಸಿಟಿ.